ಪೋಲೀಸರು ಹೊಡೆದಿರುವುದೂ ನಿಜ. ಮಾನ್ಯ ಅಧ್ಯಕ್ಷರೇ ಇದರ ಬಗ್ಗೆ ನಾನು ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇದರ ಬಗ್ಗೆ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ರಾಜೂಗೌಡರು ಮಾತನಾಡಿ ಮೃತರ ಕುಟುಂಬದವರಿಗೆ ಪರಿಹಾರವನ್ನು ಕೊಡಬೇಕೆಂದು ಹೇಳಿದ್ದಾರೆ, ಅವರಿಗೆ ನಾನಾದರೂ ಹೇಳುವುದಿಷ್ಟೆ. ಇಂಥ ದುಷ್ಕೃತ್ಯಗಳನ್ನು ಮಾಡಿದವರಿಗೆ ಪರಿಹಾರವನ್ನು ಕೊಡುವುದಕ್ಕೆ ನಮ್ಮ ರಾಜ್ಯದ ಕಾನೂನಿನಲ್ಲಿ ಅವಕಾಶ ವಿಲ್ಲ.

ಶ್ರೀ ಆರ್. ರಾಜೂಗೌಡ.— ಕಾರಿಗೆ ಹಿಂದಿನಿಂದ ಟೈರ್‌ಗೆ ಹೊಡೆದಾಗ ಅವರಿಗೆ ಏಟು ಹೇಗೆ ತಗುಲಿತು ಎನ್ನುವ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ತಾವು ಮಾನವೀಯತೆಯಿಂದ ಇದನ್ನು ಪರಿಶೀಲಿಸಿ ಸತ್ತವರ ಕುಟುಂಬದವರಿಗೆ ಪರಿಹಾರವನ್ನು ಕೊಡಿ. ಅವರು ಬಹಳ ಕಷ್ಟದಲ್ಲಿದ್ದಾರೆ, ಮಕ್ಕಳು ಬೀದಿ ಪಾಲಾಗಿವೆ.

MOTION FOR ELECTION

SRI R. GUNDU RAO.— Sir, I Beg to move;

"That this Assembly do proceed to elect THREE Members to the Board of Regents of the University of Agricultural Sciences according to the principle of proportional representation by means of signal transferable votes as required under sub-section (2) (b) (iv) of section 25 of the University of Agricultural Sciences Act, 1963."

The question was proposed.

MR. SPEAKER.— Now I will put the motion to vote. The question is :

"That this Assembly do produced to elect THREE members to the Board of Regents of the University of Agricultural Sciences according to the principals of proportional representation by mean of signle transferable vote as required under sub-section (2) (b) (iv) of section 25 of the University of Agricultural Sciences Act, 1963."

The motion was adopted

MR. SPEAKER.— The calenders of evnts will be circulated separately.

FINANCIAL BUSINESS

Discussion on the Voting of demands for Grants for 1981-82

† ಶ್ರೀ ಹೆಚ್. ಡಿ ದೇವೇಗೌಡರು (ಹೊಳೇನರಸೀಪುರ),— ಮಾನ್ಯ ಸಭಾಧ್ಯಕ್ಷರೆ, ಈ ಸಭೆಯು ಮುಂದೆ ಈಗಾಗಲೇ ಕಳೆದ ೨ ದಿವಸದಿಂದ ನೀರಾವರಿ ಬಗ್ಗೆ, ಲೋಕೋಪಯೋಗಿ ಇಲಾಖೆ ಬಗ್ಗೆ, ಹಾಗೂ ಬಂದರು ಕಟ್ಟಡಗಳ ನಿರ್ಮಾಣದ ಬಗ್ಗೆ ಬಹಳ ಪ್ರಮುಖವಾದ ರೀತಿಯಲ್ಲಿ ಚರ್ಚೆಯಾಗಿದೆ. ಈ ದಿವಸ ಮತ್ತೆ ಈ ಚರ್ಚೆಯನ್ನು ಮುಂದುವರೆಸಬೇಕೆಂದು ನಿನ್ನೆಯ ದಿವಸ ನಾನು ತಮ್ಮಲ್ಲಿ ವಿನಂತಿ ಮಾಡಿಕೊಂಡಾಗ ಇವತ್ತು ಇದರ ಬಗ್ಗೆ ಚರ್ಚೆ ಮಾಡಲು ಸ್ವಲ್ಪಕಾಲ ಅವಕಾಶವನ್ನು ಕೊಡಲು ದಾವು ಒಪ್ಪಿದ್ದಕ್ಕೆ ಮೊದಲನೆಯದಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಸ್ವಾಮಿ, ನಮ್ಮ ರಾಜ್ಯದ ಒಟ್ಟು ಅಂದಾಜಿನಲ್ಲಿ ಸುಮಾರು ಅರ್ಧಕ್ಕಿಂತ ಹೆಚ್ಚಿಗೆ ಹಣವನ್ನು ಈ ಸಭೆ ಬೇಡಿಕೆಗಳಿಗನುಸಾರವಾಗಿ ತನ್ನ ಅಂಗೀಕಾರವನ್ನು ಕೊಡಬೇಕಾಗುತ್ತದೆ. ಈ ಹೊಸ ಸರ್ಕಾರ ಅಧಿಕಾರಕ್ಕೆ ಬಂದು ಸುಮಾರು ೧ ವರ್ಷ ೪ ತಿಂಗಳು ಗತಿಸಿ ಹೋಗಿದೆ. ಸರ್ಕಾರದ ಸಾಧನೆಗಳನ್ನು ಮುಂದೆ ಪ್ರತಿಯೊಂದು ಇಲಾಖೆಗೆ ಸಂಬಂಧಪಟ್ಟಂತೆ ಆಯಾ ಇಲಾಖೆಯ ವರದಿಗಳನ್ನು ಸರ್ಕಾರದವರು ಒದಗಿಸಿದ್ದಾರೆ. ಈ ಸದನದ ಮುಂದೆ ಇಂದಿನ ಅರ್ಥಿಕ ಸಚಿವರು ೨ ಬಡ್ಜೆಟ್‌ಗಳನ್ನು ಮಂಡನೆ ಮಾಡಿದ್ದಾರೆ, ೧೯೬೦-೬೧ರ ಸಾಧನೆಗಳನ್ನು ತುಲನಾತ್ಮಕ ದೃಷ್ಟಿಯಿಂದ ನೋಡುವುದಕ್ಕಿಂತ ಮುಂಚೆ ಕೆಲವು ವಿಷಯಗಳನ್ನು ಪ್ರಮುಖವಾದ ಈ ಇಲಾಖೆಯ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ.

ನಾನು ಹಲವಾರು ಸಾರಿ ಈ ಸದನದಲ್ಲಿ ಹೇಳಿದ್ದೇನೆ, ಕಳೆದ ೨೦ ವರ್ಷಗಳಿಂದ ಇಷ್ಟೊಂದು ಪ್ರಮಾಣದಲ್ಲಿ ರಾಜ್ಯದ ಅಭ್ಯುದಯದ ಕೆಲಸವನ್ನು ಮಾಡತಕ್ಕ, ಇಷ್ಟೊಂದು ಹೆಚ್ಚಿನ ಜವಾಬ್ದಾರಿ ನಿರ್ವಹಣೆ ಮಾಡತಕ್ಕ ಇಲಾಖೆಗೆ ಸರಿಯಾದ ಸ್ವರೂಪವನ್ನು ಕೊಡಬೇಕೆಂಬ ದೃಷ್ಟಿಯಿಂದ ಇದನ್ನು ರೀ ಆರ್ಗನೈಸ್ ಮಾಡಬೇಕೆಂದು ಸಲಹೆ ಕೊಟ್ಟೆ. ಈಗಾಗಲೇ ೪ ಜನ ಮುಖ್ಯ ಮಂತ್ರಿಗಳು ಹೋಗಿ ಈಗ ೫ನೇಯವರು ಬಂದಿದ್ದಾರೆ. ಇವತ್ತೂ ಕೂಡ ನಾನು ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇವುಗಳನ್ನು ಎಷ್ಟು ಮಟ್ಟಿಗೆ ಕಾರ್ಯಗತ ಮಾಡುತ್ತಾರೆಂಬುದನ್ನು ೧೯೬೨ರ ಆಯವ್ಯಯವನ್ನು ಪರಿಶೀಲಿಸುವ ಸಂದರ್ಭದಲ್ಲಿ ನಾನು ನೋಡುತ್ತೇನೆ. ಲೋಕೋಪಯೋಗಿ ಇಲಾಖೆ ಬಗ್ಗೆ ಒಬ್ಬೊಬ್ಬ ಮುಖ್ಯ ಮಂತ್ರಿಯೂ ಒಂದೊಂದು ರೀತಿಯಲ್ಲಿ ತಮ್ಮ ಇಚ್ಛೆಗೆ ಅನುಸಾರವಾಗಿ ಮಾರ್ಪಾಡು ಮಾಡುವುದು ಯೋಗ್ಯವಲ್ಲ. ನಾನು ಸೆಕ್ರೆಟರಿಯೇಟ್ ಲೆವೆಲ್‌ನಲ್ಲಿರತಕ್ಕ ಕೆಲವು ಲೋಪ ದೋಷಗಳನ್ನು ಹೇಳಬೇಕಾಗುತ್ತದೆ. ೧೯೫೪ರಲ್ಲಿ ತಾಂತ್ರಿಕ ವಿಭಾಗಕ್ಕೆ ಸಂಬಂಧಪಟ್ಟಂತೆ, ಅಂದರೆ ಅದು ನೀರಾವರಿ ಇರಬಹುದು, ವಿದ್ಯುಚ್ಛಕ್ತಿ ಇರಬಹುದು, ಅಥವಾ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಸಮಸ್ಯೆಗಳೇನಿವೆ ಅವುಗಳನ್ನು ಬಗೆಹರಿಸುವ ದೃಷ್ಟಿಯಿಂದ ಒಬ್ಬ ಹಿರಿಯ ಅಧಿಕಾರಿ ಕಾರ್ಯದರ್ಶಿಯ ಮಟ್ಟದಲ್ಲಿರಬೇಕೆಂಬ ನಿರ್ಣಯವನ್ನು ಸರ್ಕಾರದವರು ಮಾಡಿದರು.

೧೯೫೪ಕ್ಕೆ ಪೂರ್ವದಲ್ಲಿಯೂ ಕೂಡ ಇದೇ ವ್ಯವಸ್ಥೆ ಇತ್ತು. ಆದರೆ ಡಿವಿಜನಲ್ ಸೆಕ್ರೆಟರಿ ಎಂದು ಹೇಳಿ ಆ ಕೆಲಸವನ್ನು ನಿರ್ವಹಣೆ ಮಾಡುತ್ತಿದ್ದುದನ್ನು ೧೯೫೪ ರಲ್ಲಿ ಇಂಜಿನೀಯರಿಂಗ್ ಚೀಫ್ ಆಗಿ ಮಾರ್ಪಾಡು ಮಾಡಿ ಆ ಹುದ್ದೆಯನ್ನು ಮೇಲ್‌ದರ್ಜೆಗೆ ಏರಿಸಿದರು. ಆದಾದಮೇಲೆ ಯಾವ ಅಧಿಕಾರಿ ಗೋಸ್ಕರವಾಗಿ ತಾವು ಆ ಒಂದು ಹುದ್ದೆಯನ್ನು ಮೇಲ್‌ದರ್ಜೆಗೆ ಏರಿಸಿ, ಸಂದರ್ಭಕ್ಕೆ, ಆ ಸನ್ನಿವೇಶಕ್ಕೆ ಇಂಜಿನೀಯರಿಂಗ್ ಚೀಫ್ ಎಂದು ಕೆಲಸ ಮಾಡತಕ್ಕಂಥ ಅಧಿಕಾರಿ ನಿವೃತ್ತಿಯಾದಮೇಲೆ ಮುಂದೆ ಬಂದಂಥ ಅಧಿಕಾರಿ ಯಾರು ಇದ್ದಾರೆ ಅವರು ಬಂದಮೇಲೆ ಆ ಸ್ಥಾನವನ್ನು ಡೌನ್ ಮಾಡಿದ್ದಾರೆ. ಸ್ಪೆಷಲ್ ಸೆಕ್ರೆಟರಿ ಇರಿಗೇಷನ್ ಡಿಪಾರ್ಟ್‌ಮೆಂಟ್ ಎಂದು ಹೇಳಿ ಸರ್ಕಾರ ಮೇಲ್‌ದರ್ಜೆಗೆ ಏರಿಸಿದಂಥ ಆ ಒಂದು ಹುದ್ದೆಯನ್ನು ಮತ್ತೆ ಅದೇ ಹುದ್ದೆಯನ್ನು ಕೆಳದರ್ಜೆಗೆ ಇಳಿಸತಕ್ಕಂಥ ಕೆಲಸ ಮಾಡಿದ್ದಾರೆ. ೧೯೫೧-೫೨ ರಲ್ಲಿ ಶ್ರೀಮಾನ್ ಇಸ್ಮೇಕರ್ ಅಹಮದ್ ಇದ್ದಾಗ ಅವರಿಗೆ ಲೀವ್ ಫೋರ್ಸ್‌ಮಾಡಿ ಅವರನ್ನು ತರತಕ್ಕಂಥ ವಿಚಾರ ಇದ್ದಾಗ, ಅದೆಲ್ಲವನ್ನು ನಾನು ಇಲ್ಲಿ ತಮ್ಮ ನೆನಪಿಗೆ ತರುವುದಕ್ಕೆ ಹೋಗುವುದಿಲ್ಲ, ಯಾರು ಚೀಫ್ ಇಂಜಿನಿಯರ್‌ಆಗಿ ಕೆಲಸ ಮಾಡುತ್ತಿದ್ದರೋ ಅವರು ನಿವೃತ್ತಿಯಾದ ಮೇಲೆ ಮುಂದೆ ಬಂದಂಥ ಅಧಿಕಾರಿಗೆ ಕೊಟ್ಟಿರತಕ್ಕಂಥ ಡೆಸಿಗ್ನೇಷನ್ ಸ್ಪೆಷಲ್ ಸೆಕ್ರೆಟರಿ ಇಂಜಿನಿಯರಿಂಗ್ ಇನ್ ಚೀಫ್ ಎಂದು ಕೆಲಸ ಮಾಡುತ್ತಿದ್ದಾರೆ. ಅವರಿಗಂತೂ ತಾಂತ್ರಿಕ ಜ್ಞಾನವಿಲ್ಲ. ಸಾಕಷ್ಟು ಪ್ರತಿಷ್ಠಿತವಕ್ತಿ ಎನಿಸಿಕೊಂಡಂಥವರು ಆ ಸ್ಥಾನಕ್ಕೆ ಬಂದಾಗ ಅವರಿಗೆ ಸ್ಪೆಷಲ್ ಸೆಕ್ರೆಟರಿ ಎಂದು ಹೇಳಿ ಡಿಸಿಗ್ನೇಷನ್‌ಕೊಟ್ಟು ಗ್ರೇಡ್‌ನ್ನು ಡೌನ್‌ಮಾಡಿದಂಥ ಸನ್ನಿವೇಶವನ್ನು ಈ ಸಂದರ್ಭದಲ್ಲಿ ನೆನಸಿಕೊಳ್ಳಬೇಕಾಗುತ್ತದೆ. ಆದಾದಮೇಲೆ ಬಹುಶಃ ಮೊನ್ನೆ ಮೊನ್ನೆವರೆಗೆ ಈರೀತಿ ಸ್ಪೆಷಲ್ ಸಕ್ರೆಟರಿ ಎಂದು ಹೇಳಿ ನೇಮಕಗೊಂಡಂಥ ಹುದ್ದೆ ಮುಂದುವರೆದು, ಈಗ ಮೊನ್ನೆ ಏನು ನಿರ್ಣಯ ಮಾಡಿದ್ದಾರೆಂದರೆ ಡಿವಿಜನಲ್ ಸೆಕ್ರೆಟರಿ ಆಫ್ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಎಂದು ಹೇಳಿ Who is incharge of Irrigation and Electricty Department ಎಂದು ಈ ಒಂದು ತೀರ್ಮಾನ ಮಾಡಿದ್ದಾರೆ. ಸ್ವಾಮಿ ಡಿವಿಜನಲ್ ಸೆಕ್ರೆಟರಿ ಈ ರಾಜ್ಯದಲ್ಲಿ ಸುಮಾರು ೧೬-೧೯ ಜನರು ಚೀಫ್ ಇಂಜಿನೀಯರ್ಸ್ ಇದ್ದಾರೆ. ಇವತ್ತು ಯಾರು ಡಿವಿಜನಲ್ ಸೆಕ್ರೆಟರಿ ಇದ್ದಾರೆ ಅವರಿಗಿಂತ ಹಿರಿಯ ಅಧಿಕಾರಿಗಳು ಇಂಜಿನೀಯರಿಂಗ್ ಇನ್ ಚೀಫ್ ಎಂದು ಕೆಲಸ ಮಾಡುತ್ತಿದ್ದಾರೋ ಅವರು ಡಿವಿಜನಲ್ ಸೆಕ್ರೆಟರಿ, ಬೋರ್ಡ್ ಆಫ್ ಚೀಫ್ ಇಂಜಿನೀಯರ್ ಮೀಟಿಂಗ್‌ಗೆ ಪ್ರಿಸೈಡ್ ಮಾಡಬೇಕು.

ಒಬ್ಬ ಕಿರಿಯ ಅಧಿಕಾರಿ ಬೋರ್ಡ್ ಆಫ್ ಚೀಫ್ ಇಂಜಿನೀಯರ್ ಮೀಟಿಂಗ್‌ನಲ್ಲಿ ಪ್ರಿಸೈಡ್ ಮಾಡಿ ಒಂದು ನಿರ್ಣಯ, ಒಂದು ತೀರ್ಮಾನವಾದರೆ ಇದು ಎಷ್ಟು ಹಾಸ್ಯಾಸ್ಪದವೆಂದು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಈ ಸಲಹೆಯನ್ನು ಕೊಡುವುದಕ್ಕೆ ಯಾರು ಕಾರಣರು ಎನ್ನುವುದು ಗೊತ್ತಾಗುತ್ತಿಲ್ಲ. ಬೋರ್ಡ್ ಆಫ್ ಇಂಜಿನೀಯರ್ಸ್ ಮೀಟಿಂಗ್‌ನಲ್ಲಿ ಇಲಾಖೆಗೆ ಸಂಬಂಧಪಟ್ಟ ಹಲವಾರು ಮೇಜರ್ ಡಿಸಿಷನ್ ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ಅದು ತಾಂತ್ರಿಕವಾಗಿ ಆಗಬಹುದು ಕ್ಲೈಮ್ ಸೆಟಲ್‌ಮೆಂಟ್ ಆಗಬಹುದು ಹಲವಾರು ಪ್ರಮುಖ ವಿಷಯಗಳ ಈ ಒಂದು ಬೋರ್ಡ್ ಆಫ್ ಚೀಫ್ ಇಂಜಿನೀಯರ್ ಕೂತು ನಿರ್ಣಯ ಮಾಡತಕ್ಕಂಥ ಕಾಲದಲ್ಲಿ ಒಬ್ಬ ಕಿರಿಯ ಅಧಿಕಾರಿ ಈ ಒಂದು ಸಭೆಯ ಅಧ್ಯಕ್ಷತೆಯನ್ನು ವಹಿಸಿ ತೀರ್ಮಾನ ತೆಗೆದುಕೊಳ್ಳತಕ್ಕಂಥದ್ದಕ್ಕೆ ಪ್ರಯತ್ನ ಮಾಡಿದರೆ ಇದು ಎಷ್ಟು ಹಾಸಾಸ್ಪದ ಎನ್ನುವುದನ್ನು ತಾವು ಮನಗಾಣಬೇಕು. ಇದು ಅಷ್ಟೇ ಅಲ್ಲ, ಸಾಮಾನ್ಯವಾಗಿ ಇಲ್ಲಿ ನಿರ್ಣಯ ಮಾಡತಕ್ಕಂಥದ್ದು ಅಂದರೆ ಅದು ಮೇಜರ್ ಪ್ರಾಜೆಕ್ಟ್ ಇರಬಹುದು ಮತ್ತು ಹೈಡ್ರಲ್ ಪ್ರಾಜೆಕ್ಟ್ ಇರಬಹುದು ಇರಿಗೇಷನ್ ಪ್ರಾಜೆಕ್ಟ್ ಇರಬಹುದು ಇದೆಲ್ಲವನ್ನು ಒಬ್ಬ ಹಿರಿಯ ಅಧಿಕಾರಿ ಯಾರು ಚೀಫ್ ಇಂಜಿನೀಯರ್‌ಆಗಿ ಕೆಲಸ ಮಾಡುತ್ತಾರೋ ಅವರು ತೆಗೆದುಕೊಂಡ ನಿರ್ಣಯವನ್ನು ಪುನರ್ ಪರಿಶೀಲನೆ ಮಾಡತಕ್ಕಂಥ ಒಂದು ಕಾಲದಲ್ಲಿ ಕಿರಿಯ ಅಧಿಕಾರಿಯ ಅಧ್ಯಕ್ಷತೆಯಲ್ಲಿ ನಡೆಸತಕ್ಕಂಥದ್ದು ಬಹಳ ಹಾಸ್ಯಾಸ್ಪದ ಮತ್ತು ಲಜ್ಜಾಸ್ಪದವೆಂದು ನಾನು ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಬಹುಶಃ ತಮಗೆ ಕೊಟ್ಟಿರತಕ್ಕಂಥ ಸಲಹೆ ಐ.ಎಸ್. ಅಧಿಕಾರಿಗಳು ಇರಬಹುದು ಅಥವಾ ಯಾರೇ ಈ ರೀತಿಯಾವ ಸಲಹೆಯನ್ನು ಕೊಟ್ಟಿರಲಿ ಇದು ಸರಿಯಾದ ಸಲಹೆಯಲ್ಲವೆನ್ನುವುದನ್ನು ತಾವು ಮನಗಾಣಬೇಕೆಂದು ಇಲ್ಲಿ ತಮಗೆ ಸೂಚನೆ ಕೊಡಲಿಕ್ಕೆ ಇಚ್ಛೆ ಪಡುತ್ತೇನೆ.

ಮಾನ್ಯ ಅಧ್ಯಕ್ಷರೇ ಈ ಇಲಾಖೆಯನ್ನು ರಿ ಆರ್ಗನೈಸೇಷನ್ ಮಾಡುವ ಬಗ್ಗೆ ಹಲವಾರು ವರದಿಗಳನ್ನು ಹಿಂದಿನ ಸರ್ಕಾರ ತರಿಸಿಕೊಂಡಿದ್ದಾರೆ. ನಾವು ಎಲ್ಲ ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಹೋಗದೆ ಕೆಲವು ವಿಷಯಗಳನ್ನು ತೆಗೆದುಕೊಂಡು ಪ್ರಸ್ತಾಪ ಮಾಡಲಿಕ್ಕೆ ಪ್ರಯತ್ನಿಸುತ್ತೇನೆ. ತಮ್ಮ ಅಧಿಕಾರಿಗಳನ್ನು ಕೇಳಿದರೆ ಅವರು ಬಹುಶಃ ಎಲ್ಲ ಮಾಹಿತಿಗಳನ್ನು ತಮಗೆ ಒದಗಿಸುತ್ತಾರೆಂದು ಭಾವಿಸುತ್ತೇನೆ, ಈವತ್ತು ನಿಮ್ಮಲ್ಲಿ ಪ್ರಮುಖವಾಗಿ ರಿ ಆರ್ಗನೈಸೇಷನ್ ಬಗ್ಗೆ ಒಂದೇಒಂದು ಸಲಹೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಈಗಿರತಕ್ಕಂಥ ಪಿ. ಡಬ್ಲ್ಯು. ಡಿ. ರೋಡ್, ಬಿಲ್ಡಿಂಗ್ಸ್ ಇವು ಒಂದು ವಿಭಾಗಕ್ಕೆ ಹೋಗಿದೆ. ಅದನ್ನು ಹಾಗೆಯೇ ಮುಂದುವರಿಸಬೇಕು. ನ್ಯಾಷನಲ್ ಹೈವೇಗೆ ಸಂಬಂಧಪಟಂತೆ ಇರತಕ್ಕಂಥ ವಿಭಾಗವನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗಬೇಕು. ಮೇಜರ್ ಇರಿಗೇಷನ್ ಬಗ್ಗೆ ನೀವು ಏನು ನಿರ್ಣಯವನ್ನು ತೆಗೆದುಕೊಂಡಿರುತ್ತೀರಿ ಅದರ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಆದರೆ ಪಬ್ಲಿಕ್ ಹೆಲ್ತ್ ಇಂಜಿನೀಯರಿಂಗ್ ಬಗ್ಗೆ ತಾವು ಒಂದು ಪ್ರಮುಖವಾದಂಥ ನಿರ್ಣಯವನ್ನು ತೆಗೆದುಕೊಳ್ಳತಕ್ಕಂಥದ್ದು ಸೂಕ್ತವೆಂದು ಈಗಿರತಕ್ಕಂಥ ಅನುಭವದ ಆಧಾರದಮೇಲೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈಗ ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕೋಸ್ಕರವಾಗಿ ಒಂದು ಕಾರ್ಪೊರೇಷನ್ ರಚನೆ ಮಾಡಿದ್ದೀರಿ. ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಸೀವರೇಜ್ ಬೋರ್ಡ್ ಎಂದು ಹೇಳ ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ನೀರು ಸರಬರಾಜು ಮಾಡಲಿಕ್ಕೆ ಅಧಿಕಾರವನ್ನು ಮೈನರ್ ಇರಿಗೇಷನ್ ಚೀಫ್ ಇಂಜಿನೀರ್‌ಗೆ ಕೊಟ್ಟಿರುತ್ತೀರಿ. ಜೊತೆಗೆ ಪಬ್ಲಿಕ್ ಹೆಲ್ತ್‌ಗೆ ಸಂಬಂಧಪಟ್ಟ ಇಲಾಖೆ ಚೀಫ್ ಇಂಜಿನೀಯರ್ ಅಧಿಕಾರಿಯನ್ನು ನೇಮಿಸಿದ್ದೀರಿ. ಸ್ವಾಮಿ ಒಂದು ಡಿವಿಜಷನಲ್ ವ್ಯಾಪ್ತಿಗೆ ಈವತ್ತು ಹಾಸನದಲ್ಲಿ ಇರತಕ್ಕಂಥ ಡಿವಿಷನ್ ಉದಾಹರಣೆಗೆ ಹೇಳುತ್ತೇನೆ, ರೂರಲ್ ವಾಟರ್ ಸಪ್ಲೈ ಸ್ಕೀಮ್ ಸಂಬಂಧಪಟ್ಟಂತೆ ಡಿವಿಷನ್ ವ್ಯಾಪ್ತಿಗೆ ೩–೪ ಜಿಲ್ಲೆಗಳಿಗೆ ಅನ್ವಯವಾಗುತ್ತದೆ. ಇದರಲ್ಲಿ ತಾತ್ರಿಕ ಜ್ಞಾನ, ತಾಂತ್ರಿಕ ಪರಿಶ್ರಮ ಗ್ರಾಮಾಂತರ ಪ್ರದೇಶ ನೀರು ಸರಬರಾಜು ಯೋಜನೆಗೆ ಸಂಬಂಧಪಟ್ಟ ಅಧಿಕಾರಿಗಳು ಯಾರು ಇದ್ದಾರೆ ಅವರು ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ನಲ್ಲಿ ಕೆಲಸ ಮಾಡತಕ್ಕಂಥವರು ಯಾರು ಇದ್ದಾರೆ, ಅದಕ್ಕೂ ಇದಕ್ಕೂ ಯಾವ ವ್ಯತ್ಯಾಸವು ಇಲ್ಲ. ಹಾಸನದಲ್ಲಿರತಕ್ಕಂಥ ಗ್ರಾಮಾತರ ನೀರು ಸರಬರಾಜು ಯೋಜನೆ ಅವಧಿಕಾರಿಗಳು ಮಂಗಳೂರಿಗೂ ಹೋಗಬೇಕು, ಚಿಕ್ಕಮಗಳೂರಿಗೂ ಹೋಗಬೇಕು. ಶಿವಮೊಗ್ಗಕ್ಕೂ ಹೋಗಬೇಕು. ಹೀಗೆ ಡ್ಯೂಪ್ಲಿಕೇಷನ್ ಆಫ್ ವರ್ಕ್ ಆಗುತ್ತಿರುವುದರಿಂದ ಬಹುಶಃ ಇವೆಲ್ಲನ್ನು ಸೇರಿಸಿ ನಿಮ್ಮ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಸೀವರೇಜ್ ಬೋರ್ಡ್‌ಗೆ ಸಂಬಂಧಪಟ್ಟಂತೆ ಏನು ಇದೆ ಅದನ್ನು ಗ್ರಾಮಾಂತರ ಪ್ರದೇಶ ನೀರು ಸರಬರಾಜು ಮತ್ತು ನಗರಗಳಿಗೆ ಕೊಡತಕ್ಕಂಥ ನೀರಿನ ಸವಲತ್ತುಗಳು ಏನು ಇವೆ ಈ ಎರಡು ಇಲಾಖೆಗಳನ್ನು ಒಂದಗೂಡಿಸಿ ಒಂದೇ

ಒಂದು ಏಜೆನ್ಸಿ ಮೂಲಕ ಕೆಲಸ ಮಾಡತಕ್ಕಂಥ ಪ್ರಯತ್ನ ಮಾಡಿದರೆ ಒಳ್ಳೆಯದು. ಪ್ರತ್ಯೇಕವಾಗಿ ಡಿವಿಷನ್ ಮಾಡಿದಾರೆ ಒಂದೊಂದು ಜಿಲ್ಲೆಗೂ ಒಂದೊಂದು ಡಿವಿಷನ್ ಪ್ರಾರಂಭ ಮಾಡಬೇಕು. ಮೊದಲನೆಯದಾಗಿ ತಾಲ್ಲೋಕ್ ಹೆಡ್‌ಕ್ವಾರ್ಟರ್ಸ್ ಸಬ್ ಡಿವಿಷನ್ ಮಾಡತಕ್ಕಂಥ ಸಂದರ್ಭದಲ್ಲಿ ಇದರ ವರ್ಕ್‌ಲೋಡ್ ಏನು ಇದೆ ಅವನ್ನು ತೆಗೆದುಕೊಂಡು ಮಾರ್ಪಾಡು ಮಾಡತಕ್ಕಂಥದ್ದು, ರಿ ಆರ್ಗನೈಸ್ ಮಾಡತಕ್ಕಂಥ ಸೂಕ್ತವೆಂದು ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಅದೇ ರೀತಿಯಲ್ಲಿ ಒಂದು ಸೆಂಟ್ರಲ್ ಮೆಕ್ಯಾನಿಕಲ್ ಆರ್ಗನೈಸೇಷನ್ ತೆಗೆಯಬೇಕೆಂದು ಕೂಡ ಸಲಹೆ ಕೊಟ್ಟಿರುತ್ತೇವೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ನಾವು ಎಲ್ಲ ಕೂತು ಅಧ್ಯಾಯನ ಮಾಡಿದ್ದೇವೆ. ಈ ರಾಜ್ಯದಲ್ಲಿ ಕೋಟ್ಯಾಂತರ ರೂಪಾಯಿಗಳು ಈವತ್ತು ಮೆಷಿನರೀಸ್‌ಗಳಿಗಾಗಿ ಖರ್ಚು ಮಾಡಿರುತ್ತೇವೆ. ನೀರಾವರಿ ಇಲಾಖೆ ಮತ್ತು ಸಣ್ಣ ನೀರಾವರಿ ಇಲಾಖೆಯ ಎಲ್ಲ ಹಂತದಲ್ಲಿಯೂ ಸಾಕಷ್ಟು ಮೆಷಿನರಿ ಈವತ್ತು ನಮ್ಮಲ್ಲಿ ಇದೆ. ಕೋಆರ್ಡಿನೇಷನ್ ಮಾಡತಕ್ಕಂಥದ್ದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಈವತ್ತು ಯಾವುದೇ ಡಿವಿಷನ್‌ನಲ್ಲಿ ಕೆಲಸ ಇಲ್ಲದೆ ಸಾಕಷ್ಟು ಮೆಷಿನರಿ ನಿಂತುಹೋಗಿದೆ ಅವುಗಳ ಉಪಯುಕ್ತತೆಯನ್ನು ಪಡೆಯುವ ಸನ್ನಿವೇಶದಲ್ಲಿ ಇನ್ನೊಂದು ಡಿವಿಜನ್‌ಗೆ ಉಪಯುಕ್ತತೆ ಇದ್ದ ಪಕ್ಷದಲ್ಲಿ, ಆ ಒಂದು ಡಿವಿಷನ್ ಪರ್ಚೇಸ್ ಮಾಡುವುದಕ್ಕೆ ಸಾಮರ್ಥ್ಯ ಇರಲಿ ಇಲ್ಲದೆ ಇರಲಿ ಅಲ್ಲಿಗೆ ಉಪಯೋಗಿಸಿಕೊಳ್ಳತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಬೇಕು. ಈಗ ಅಪ್ಪರ್ ಕೃಷ್ಣಾ ಸರ್‌ಪ್ಲಸ್ ಇದೆ ಎಂದು ಮನಗಂಡಿದ್ದೇವೆ. ಕೋಟ್ಯಾಂತರ ರೂಪಾಯಿಗಳ ಮೆಷಿನರಿಯ ಉಪಯುಕ್ತತೆಯನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ.

ಎಲ್ಲಿ ಸಿಕ್ ಮೆಷಿನರಿ ಇದೆ, ಎಲ್ಲಿ ಉಪಯುಕ್ತವಾಗತಕ್ಕಂತಹ ಮೆಷಿನರಿ ಇವೆ ಅವುಗಳ ಎಲ್ಲಾ ವಿಷಯವನ್ನು ಒಂದು ಕೇಂದ್ರ ಸ್ಥಾನದಲ್ಲಿ ತಂದು ಸೆಂಟ್ರಲ್ ಮೆಕ್ಯಾನಿಕಲ್ ಆರ್ಗನೈಸೇಷನ್ ಮಾಡತಕ್ಕ ಬಗ್ಗೆ ನಾನು ಸಲಹೆ ಕೊಟ್ಟು ಅಲ್ಲಿಗೆ ಒಬ್ಬ ಚೀಫ್ ಎಂಜಿನಿಯರ್‌ ಇಟ್ಟು ಇಡೀ ರಾಜ್ಯಕ್ಕೆ ಅನ್ವಯ ಆಗತಕ್ಕ ರೀತಿಯಲ್ಲಿ ಪ್ರತಿಯೊಂದು ಮಿಷಿನರಿಯ ಲೆಕ್ಕಪತ್ರಗಳು ಇರಬೇಕಾದ ಉಪಯುಕ್ತತೆ ಇರಬೇಕೆಂದು ಹೇಳುತ್ತೇನೆ. ಇದರಿಂದ ಹೆಚ್ಚಿನ ಉಪಯುಕ್ತತೆಯನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆನ್ನುವ ಮಾತನ್ನು ಹೇಳಿ ಈ ಬಗ್ಗೆ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ನಾನು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಲ್ಲಿ ಅಧ್ಯಕ್ಷನಾಗಿ ಕೆಲಸ ಮಾಡತಕ್ಕ ಕಾಲದಲ್ಲಿ ಮಾನ್ಯ ಲೋಕೋಪಯೋಗಿ ಮಂತ್ರಿಗಳೂ ಸಹಾ ಒಬ್ಬರು ಸದಸ್ಯರಾಗಿದ್ದರು. ಬೋರ್ಡ್ ಆಫ್ ಚೀಫ್ ಇಂಜಿನಿಯರ್ಸ್ ಯಾರಿದ್ದಾರೆ ಅವರೂ ಕೂಡಾ ಇದಕ್ಕೆ ಸಮ್ಮತಿಯನ್ನು ಕೊಟ್ಟಿದ್ದಾರೆ. ಆದರೆ ಸರ್ಕಾರ ಇಂತಹ ಕೆಲಸವನ್ನು ಮಾಡತಕ್ಕ ಬಗ್ಗೆ ಏಕೆ ತನ್ನ ಆಸಕ್ತಿಯನ್ನು ತೋರಿಸಿಲ್ಲ ಎನ್ನುವುದು ನನಗೆ ಗೊತ್ತಾಗುತ್ತಾ ಇಲ್ಲ. ಆದ್ದರಿಂದ ಏನು ಈ ಎರಡು ಸಲಹೆಗಳು ಇವೆ ಆ ಬಗ್ಗೆ ಸರ್ಕಾರ ಗಮನ ಕೊಡಬೇಕೆಂದು ನಾನು ಹೇಳುತ್ತೇನೆ. ಗ್ರಾಮಾಂತರ ನೀರು ಸರಬರಾಯಿ ಯೋಜನೆಯಲ್ಲಿ ಏನು ಅನಾವಶ್ಯಕ ಓಡಾಟ ಇದೆ ಹಾಗೂ ತಾಂತ್ರಿಕ ಪರಿಜ್ಞಾನದಲ್ಲಿ ಆಗತಕ್ಕ ಪರಿಶ್ರಮವನ್ನು ಹೋಗಲಾಡಿಸಲು ಎರಡನ್ನೂ ಅಮಾಲ್ಗಮೇಟ್ ಮೆಕ್ಯಾನಿಕಲ್ ಆರ್ಗನೈಸೇಷನ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಲು ಇಷ್ಟಪಡುತ್ತೇನೆ, ಹಾಗೂ ಮೆಕ್ಯಾನಿಕಲ್ ರೋಡ್ಸ್ ಬಗ್ಗೆ ಸರ್ಕಾರ ತೀವ್ರವಾದ ಪರಿಶೀಲನೆ ಮಾಡಿ ಪ್ರತ್ಯೇಕ ವಿಭಾಗವನ್ನು ತೆಗೆಯಬೇಕೆಂದು ನಾನು ಸೂಚನೆ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ, ನಾನು ಈ ಆರ್ಗನೈಸೇಷನ್ ಬಗ್ಗೆ ಒಂದೆರಡು ವಿಷಯಗಳನ್ನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಈ ಇಲಾಖೆಯನ್ನು ರೀಆರ್ಗನೈಸೇಷನ್ ಮಾಡುವ ಬಗ್ಗೆ ನನಗೆ ತಿಳಿದ ಮಟ್ಟಿಗೆ ಈ ಸದನದಲ್ಲಿ ೧೯೬೮ನೇ ಇಸವಿಗಿಂತ ಮುಂಚಿನಿಂದ ಇರುವ ಪ್ರಶ್ನೆ. ೧೯೬೮ರಿಂದ ಇಲ್ಲಿಯವರೆಗೆ ಈ ವರ್ಕ್ ಚಾರ್ಜ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ ಕೆಲಸ ಮಾಡತಕ್ಕ ನೌಕರರು ಏನಿದ್ದಾರೆ ಅವರನ್ನು ಖಾಯಂ ಮಾಡಬೇಕೆಂದು ಮನವಿಗಳು ಹಲವಾರು ಸಾರಿ ಬಂದಿವೆ. ಅಲ್ಲಿಂದ ಇಲ್ಲಿಯವರೆಗೆ ಹಲವಾರು ಜನ ಲೋಕೋಪಯೋಗಿ ಮಂತ್ರಿಗಳು ಅಧಿಕಾರವನ್ನು ಬಿಟ್ಟು ಹೋಗಿದ್ದಾರೆ. ಆ ಹೋದ ಮಂತ್ರಿಗಳೆಲ್ಲರೂ ಈ ಬಗ್ಗೆ ಸರ್ಕಾರ ಮಾನ್ಯತೆ ಮಾಡುತ್ತದೆ ಎಂದು ಹೇಳಿ ಹೊರಟು ಹೋದರು. ನಮ್ಮ ರಾಜ್ಯದಲ್ಲಿ ಸುಮಾರು ೧೩ ಸಾವಿರ ಜನ ವರ್ಕ್ ಚಾರ್ಜ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ ಕೆಲಸ ಮಾಡತಕ್ಕ ಕೆಲಸಗಾರರು ಇದ್ದಾರೆ. ಇವರು ತಿಂಗಳ ಸಂಬಳದ ಬೇಸಿಸ್‌ಮೇಲೆ ಕೆಲಸ ಮಾಡುತ್ತಿದ್ದಾರೆ. ಹಿಂದೆ ಮಾನ್ಯ ಬಂಗಾರಪ್ಪನವರು ಲೋಕೋಪಯೋಗಿ ಇಲಾಖೆಯ ಮಂತ್ರಿಯವರಾಗಿದ್ದಾಗ ನಮ್ಮ ಸರ್ಕಾರ ಈ ಬಗ್ಗೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಳ್ಳುವುದರಲ್ಲಿ ಅಗ್ರಸ್ಥಾನ ಪಡೆದಿದೆ ಎಂದು ಭಾಷಣ ಮಾಡಿ ಹೊರಟುಹೋದರು. ನನಗೆ ಗೊತ್ತಿದೆ, ಈ ೧೩ ಸಾವಿರ

ಅಧಿಕಾರಿಗಳ ಬಗ್ಗೆ ಇಲ್ಲಿಯವರೆಗೆ ೨ ಸಾವಿರ ಜನ ಅಧಿಕಾರಿಗಳಿಗೆ ಕೂಡಾ ಇನ್ನೂ ಖಾಯಂ ಮಾಡತಕ್ಕ ಬಗ್ಗೆ ಯಶಸ್ವಿಯಾಗಿಲ್ಲ ಎಂಬುದು. ಈ ಬಗ್ಗೆ ಇರತಕ್ಕ ಅತಂಕ ಏನು? ಸರ್ಕಾರಕ್ಕೆ ಏನಾದರೂ ಅಡ್ಮಿನಿಸ್ಟ್ರೇಟಿವ್ ಫೈನಾನ್ಸಿಯಲ್ ಬರ್ಡನ್ ಬರುತ್ತದೆಂದು ಹೇಳಿದರೆ, ಅದಕ್ಕೆ ಇಲ್ಲ ಎಂದು ನಾನು ಹೇಳುತ್ತೇನೆ. ಈ ಎಲ್ಲಾ ಅಧಿಕಾರಿಗಳು ಇವತ್ತು ಮಂತ್ರಿ ಸ್ಯಾಲರಿಯನ್ನು ಡ್ರಾ ಮಾಡತಕ್ಕ ಸನ್ನಿವೇಶದಲ್ಲಿದ್ದಾರೆ. ಇದರಲ್ಲಿ ಡ್ರೈವರ್ಸ್ ಇರಬಹುದು, ಕ್ಲೀನರ್ಸ್ ಇರಬಹುದು, ಮೆಕ್ಯಾನಿಕ್ಸ್ ಇರಬಹುದು, ವರ್ಕ್ ಇನ್ಸ್‌ಪೆಕ್ಟರ್ ಇರಬಹುದು, ಎಲ್ಲರೂ ಸಹಾ ಮಾಸಿಕ ವೇತನವನ್ನು ಪಡೆಯುತ್ತಿದ್ದಾರ, ಈ ೧೩ ಸಾವಿರ ಜನರನ್ನು ಖಾಯಂ ಮಾಡತಕ್ಕ ವ್ಯವಸ್ಥೆ ಮಾಡಿದರೆ ಅವರಿಗೆ ದೊರೆಯತಕ್ಕ ಸೌಕರ್ಯಗಳು ಎಂದರೆ ಅದು ನಿವೃತ್ತಿ ವೇತನ ಸಿಗಬಹುದು, ಗ್ರ್ಯಾಚ್ಯುಟಿ ಬರಬಹುದು, ಹಾಗೂ ರಜಾ ಸೌಲಭ್ಯ ಸಿಕ್ಕಬಹುದು. ಇದು ಬಿಟ್ಟರೆ ಸರ್ಕಾರಕ್ಕೆ ಈ ಬಗ್ಗೆ ಯಾವ ಆರ್ಥಿಕ ಹೊರೆ ಬೀಳುವುದಿಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊನ್ನೆ ಸ್ಟೈಪೆಂಡರಿಯ ನೌಕರರನ್ನು ಖಾಯಂಗೊಳಿಸುವುದರ ಬಗ್ಗೆ ಏಕ ಸದಸ್ಯ ಆಯೋಗವನ್ನು ನೇಮಕ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅಂತಹ ಒಂದು ಆಯೋಗ ಬೇಕಾಗಿರಲಿಲ್ಲವೆಂದು ನಾನು ಹೇಳುತ್ತೇನೆ, ಸುಮಾರು ೨೦-೨೫ ವರ್ಷಗಳಿಂದ ಈ ಜನರು ದುಡಿದಿದ್ದಾರೆ. ಈ ಒಂದು ನೌಕರರನ್ನು ಖಾಯಂ ಮಾಡುವ ಸನ್ನಿವೇಶದಲ್ಲಿ ಅವರ ವಯಸ್ಸಿನ ಬಗ್ಗೆ ಸಮಸ್ಯೆ ಬರಬಹುದು ಎಂಬ ದೂರು ಇದೆ, ಅದು ಏನೂ ದೊಡ್ಡ ವಿಷಯವಲ್ಲ. ಅಂತಹ ಸನ್ನಿವೇಶ ಬಂದಾಗ ಅದನ್ನು ಪರಿಶೀಲನೆ ಮಾಡುವುದಕ್ಕೆ ಸರ್ಕಾರ ಸಮಿತಿಯನ್ನು ನೇಮಕ ಮಾಡಬಹುದು ಸರ್ಕಾರ ಒಂದು ಆಜ್ಞೆ ಹೊರಡಿಸಿ ಈ ೧೩ ಸಾವಿರ ನಾಲ್ಕನೇ ದರ್ಜೆಯ ಅಧಿಕಾರಿಗಳನ್ನು ಖಾಯಂಗೊಳಿಸಿ ಅವರಿಗೆ ಮಾನ್ಯತೆ ಕೊಡುವುದರಲ್ಲಿ ಒಂದು ನಿರ್ಧಾರ ತೆಗೆದುಕೊಂಡು ಒಂದು ಗೌರವಕ್ಕೆ ಪಾತ್ರವಾಗುವ ಬಗ್ಗೆ ಒಂದು ಸೂಚನೆಯನ್ನು ಕೊಡುತ್ತದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇನ್ನು ಇಲ್ಲಿನ ದಿನಗೂಲಿ ನೌಕರರು ಏನಿದ್ದಾರೆ ಅವರನ್ನು ಖಾಯಂ ಮಾಡತಕ್ಕದ್ದರ ಬಗ್ಗೆ ಬಹಳ ಕಷ್ಟ ಇದೆ ಹಾಗೂ ಸರ್ಕಾರಕ್ಕೆ ಆರ್ಥಿಕ ಹೊರೆ ಬೀಳುತ್ತದೆ ಹಾಗೂ ರೆಕ್ರೂಟ್‌ಮೆಂಟ್ ಪಾಲಿಸಿ ಅಡ್ಡ ಬರುತ್ತದೆ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಈ ಬಗ್ಗೆ ಒಂದು ಮಾತನ್ನು ಹೇಳಲು ನಾನು ಇಷ್ಟಪಡುತ್ತೇನೆ. ಏನು ವರ್ಕ್ ಚಾರ್ಜ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿನ ನೌಕರರು ನಿವೃತ್ತಿಹೊಂದಿದಾಗ ಅಲ್ಲಿನ ಜಾಗಗಳು ಖಾಲಿ ಬೀಳುತ್ತವೆ ಆ ಜಾಗಗಳಿಗೆ ನೇಮಕ ಮಾಡುವಾಗ ಈ ದಿನಗೂಲಿ ನೌಕರರಿಗೂ ಆದ್ಯತೆಯನ್ನು ಕೊಡುವುದು ಅವಶ್ಯಕವೆಂದು ನಾನು ಹೇಳುತ್ತೇನೆ. ಹಾಗೂ ದಿನಗೂಲಿಯಲ್ಲಿ ಯಾರು ೫ ವರ್ಷಗಳ ಕಾಲ ಎಡೆಬಿಡದೆ ಕೆಲಸ ಮಾಡಿಕೊಂಡು ಬಂದಿರುತ್ತಾರೆಯೋ ಅವರನ್ನು ಹಂತಹಂತವಾಗಿ ಖಾಯಂಗೊಳಿಸಿ ವರ್ಕ್‌ಚಾರ್ಜ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ ಕೆಲಸ ಕೊಡುವ ನಿರ್ಣಯವನ್ನು ಸರ್ಕಾರ ತೆಗೆದುಕೊಂಡರೆ ಇವರಿಗೆ ಅನುಕೂಲವಾಗುತ್ತದೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಹಾಗೂ ಇನ್ನೊಂದು ವಿಷಯ ಎಂದರೆ, ಅಸಿಸ್ಟೆಂಟ್ ಎಂಜಿನಿಯರ್ಸ್ ಬಗ್ಗೆ ಏನು ಒಂದು ವೇತನದಲ್ಲಿ ತಾರತಮ್ಯ ಇದೆ ಆ ಬಗ್ಗೆ ಹೇಳಲು ಇಷ್ಟಪಡುತ್ತೇನೆ. ನಾರಾಯಣ ಪೈ ಪೇ ಕಮಿಷನ್‌ನವರು ಏನು ಶಿಫಾರಸ್ಸು ಮಾಡಿದ್ದಾರೆ ಅದಕ್ಕೂ ಅಫಿಶಿಯಲ್ ಪೇ ಕಮಿಟಿಯವರು ತೆಗೆದುಕೊಂಡಿರತಕ್ಕ ನಿರ್ಣಯಕ್ಕೂ ತುಂಬಾ ವ್ಯತ್ಯಾಸ ಇದೆ. ಅಸಿಸ್ಟೆಂಟ್ ಸರ್ಜನ್ಸ್‌ಗೆ. ಡೆಂಟಲ್ ಸರ್ಜನ್ಸ್‌ಗೆ ಹಾಗೂ ಬೇರೆ ಬೇರೆ ಇಲಾಖೆಯಲ್ಲಿ ಕೊಟ್ಟಿರತಕ್ಕದು ನಾರಾಯಣ್ ಪೈಯವರದ್ದು ರೂ. ೬೦೦ ರಿಂದ ೧,೩೦೦ ಇದ್ದು ಅಫಿಶಿಯಲ್ ಪೇ ಕಮಿಷನ್‌ದೂ ಸಹಾ ರೂ. ೬೦೦ ರಿಂದ ೧,೩೦೦ ಇದೆ. ಇವನ್ನೆ ಮುಂದುವರಿಸಬೇಕು ಎಂಬ ನಿರ್ಣಯವನ್ನು ಇವರೂ ಮಾಡಿದ್ದಾರೆ. ಬಹುಶ; ಇದು ಸರಿಯಾದ ನಿರ್ಣಯ ಅಲ್ಲವೆಂದು ನಾನು ತಮಗೆ ಸೂಚಿಸುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ಪುನರ್‌ಪರಿಶೀಲನೆ ಮಾಡಬೇಕೆಂದು ನಾನು ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಸ್ವಾಮಿ ರಾಜ್ಯದ ಒಂದು ವರ್ಷದ ಆಡಳಿತದಲ್ಲಿ ನಡೆದಿರತಕ್ಕ ಸಾಧನೆಗಳ ವಿಹಂಗಮ ನೋಟವನ್ನು ಮಾನ್ಯ ಸರ್ಕಾರದವರು ಒದಗಿಸಿರತಕ್ಕ ಮಾಹಿತಿಗಳ ಆಧಾರದ ಮೇಲೆ ಪರಿಶೀಲನೆ ಮಾಡಬೇಕಾಗುತ್ತದೆ. ೧೯೮೦ರಲ್ಲಿ ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಅರ್ಥ ಸಚಿವರೂ ಸಹಾ ಭಾಷಣವನ್ನು ಮಾಡಿದ್ದಾರೆ. ೧೯೮೧ರಲ್ಲಿ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದು. ಮಾನ್ಯ ಅರ್ಥ ಸಚಿವರೂ ಸಹಾ ಭಾಷಣವನ್ನು ಮಾಡಿದ್ದಾರೆ ಇದರ ಜೊತೆಯಲ್ಲಿ ೧೯೮೦-೮೧ರ ವಾರ್ಷಿಕ ವರದಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ವರಧಿಯ ಆಧಾರದ ಮೇಲೆ ಸರ್ಕಾರದ ಸಾಧನೆಯನ್ನು ಕೂಡಾ ಪರಿಶೀಲನೆ ಮಾಡತಕ್ಕದ್ದರ ಬಗ್ಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಸ್ವಾಮಿ, ೧೯೮೦ರ ಮಾನ್ಯ ಅರ್ಥ ಮಂತ್ರಿಗಳ ಬಡ್ಜೆಟ್ ಭಾಷಣದ ೬ನೇ ಪುಟದಲ್ಲಿ ಈ ರೀತಿ ಇದೆ.

(SRI BHASKAR NAIDU—in the Chair)

"ಈ ಕೆಳಕಂಡ ಸ್ಥೂಲ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಈ ಬಜೆಟ್‌ನ್ನು ಮಂಡಿಸಲಾಗಿದೆ, ಇದರಲ್ಲಿ ಹಿನೆಯದು ಉದ್ದೇಶ ಗ್ರಾಮೀಣ ಸಂಪರ್ಕವನ್ನು ಉತ್ತಮ ಪಡಿಸುವುದು. ಅದರಲ್ಲೂ ರಸ್ತೆ ಸಂಪರ್ಕವೇ ಇಲ್ಲದ ಹಳ್ಳಿಗಳಿಗೆ ರಸ್ತೆ ಸಂಪರ್ಕವನ್ನು ಕಲ್ಪಿಸಿಕೊಡುವುದು."

ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದೇ ೧೯೮೦-೮೨ನೇ ವಾರ್ಷಿಕ ವರದಿಯನ್ನು ಹೇಳತಕ್ಕ ಆ ಕಾಲದಲ್ಲಿ ಗ್ರಾಮಾಂತರ ರಸ್ತೆ ಸಂಪರ್ಕದ ಬಗ್ಗೆ ಎಲ್ಲೂ ಉಲ್ಲೇಖ ಮಾಡಿಲ್ಲ. ನಾನು ಎಲ್ಲಾ ಪುಟಗಳನ್ನು ತಿರುಗಿಸಿ ನೋಡಿದ್ದೇನೆ, ಅದರ ಬಗ್ಗೆ ಮೌನ ತಾಳಿದ್ದಾರೆ. ನಮ್ಮ ಅರ್ಥ ಸಚಿವರು ೧೯೮೦-೮೧ರ ವಾರ್ಷಿಕ ವರದಿಯಲ್ಲಿ ಪ್ಯಾರ ೧೮ ಪುಟ ೧೧ ರಲ್ಲಿ ಸಮಾಜದ ಅಭಿವೃದ್ಧಿಯಲ್ಲಿ ಸಂಪರ್ಕವು ಪ್ರಮುಖ ಪಾತ್ರ ವಹಿಸುತ್ತದೆ. ಇಂದಿಗೂ ನಮ್ಮ ರಾಜ್ಯದಲ್ಲಿ ನೂರಾರು ಗ್ರಾಮಗಳಿಗೆ ರಸ್ತೆ ಸಂಪರ್ಕವೇ ಇಲ್ಲ ಈ ಅಧುನಿಕ ಜಗತ್ತಿನ ಅಭಿವೃದ್ಧಿ ಪಥದಿಂದ ದೂರ ಉಳಿದಿರುವುದೇ ಅಲ್ಲದೆ ಅಭಿವೃದ್ಧಿ ಪ್ರಯತ್ನಗಳ ವಿಷಯದಲ್ಲಿ ಬಹಳಷ್ಟು ಮಟ್ಟಿಗೆ ಏನನ್ನೂ ತಿಳಿದುಕೊಂಡಿಲ್ಲ. ಗೊತ್ತಿಲ್ಲ ಎಂದು ಹೇಳಿಕೊಂಡು ಹೋಗಿದ್ದಾರೆ. ಈ ವರ್ಷ ಸಾಧನೆಗೆ ಕೊಟ್ಟಿರತಕ್ಕ ಅರ್ಥ ಸಚಿವರ ಭಾಷಣದಲ್ಲಿ ಇದರ ಬಗ್ಗೆ ಉವಾಚ ಇದೆ. ಪುಟ ೧೬ ಪ್ಯಾರ ೧೮ ರಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಸಂಪರ್ಕ ಸಾಧನಗಳನ್ನು ಅಭಿವೃದ್ಧಿ ಗೊಳಿಸುವ ಮತ್ತು ತಪ್ಪಿಹೋದ ಸಂಪರ್ಕಗಳನ್ನು ಹಂತಹಂತವಾಗಿ ಪೂರ್ಣಗೊಳಿಸುವುದರ ಜೊತೆಗೆ, ಮಲೆನಾಡು ಪ್ರದೇಶಗಳಲ್ಲಿರುವ ಹೆಚ್ಚಿನ ಸಣ್ಣ ತೊರೆಗಳಿಗೆ ಸಣ್ಣ ಸೇತುವೆಗಳನ್ನು ನಿರ್ಮಿಸುವುದು ಮತ್ತು ಗ್ರಾಮಗಳೊಳಗೆ ಮತ್ತು ಗ್ರಾಮದಿಂದ ಗ್ರಾಮಕ್ಕೆ ಸಂಪರ್ಕ ಸಾಧನಗಳನ್ನು ಸುಧಾರಿಸುವುದು ಇವೇ ಮುಂತಾದ ಕಾರ್ಯಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಇಲ್ಲಿ ಹೇಳಿರುವುದರಲ್ಲಿ ಪದ ಪ್ರಯೋಗದಲ್ಲಿ ಸ್ವಲ್ಪ ಬದಲಾವಣೆ ಇದೆ. ಮುಂದೆ ಇದೇ ಮಾತನ್ನು ರಾಜ್ಯಪಾಲರ ಬಾಯಿಯಿಂದ ಹೇಳಿಸಿದ್ದಾರೆ. ಈ ದಿಶೆಯಲ್ಲಿ ನಾವೇ ಪರಿಶೀಲನೆ ಮಾಡೋಣ ಈ ಸದನದಲ್ಲಿ, ವಾರ್ಷಿಕವರದಿಯನ್ನು ನಮ್ಮಮುಂದಿಟ್ಟಿದ್ದೀರಿ. ಪುಟ ಮೂರರಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ನಾನು ಗ್ರಾಮಾಂತರ ರಸ್ತೆಗಳಿಗೆ ಅನ್ವಯ ಮಾಡುವುದಿಲ್ಲ. ಗ್ರಾಮ ರಸ್ತೆಗಳ ಅನ್ವಯದ ಬಗ್ಗೆ ಸ್ಟೇಟ್ ಹೈ ವೇ ೩೧-೩-೧೯೮೦ ರಲ್ಲಿ ೭,೮೦೨ ಕಿಲೋಮೀಟರ್ ಇದ್ದರೆ, ೩೧-೩-೧೯೮೧ ರಲ್ಲೂ ೭,೮೦೨ ಕಿಲೋಮೀಟರ್ ಇದೆ ಪ್ರೋಗ್ರೆಸ್ ಮುಂದೆ ಶೂನ್ಯ. ತಾವು ಕೊಟ್ಟಿರತಕ್ಕ ಅಂಕಿಅಂಶಗಳನ್ನು ಹೇಳುತ್ತಿದ್ದೇನೆ. ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್ ೧೯೮೦ರ ಮಾರ್ಚಿ ೩೧ಕ್ಕೆ ೧೨,೯೧೨ ಕಿಲೋಮೀಟರ್ ಇದ್ದರೆ ೧೯೮೧ರ ಮಾರ್ಚ್ ೩೧ಕ್ಕೆ ೧೩,೦೦೦ ಕಿಲೋಮೀಟರ್‌ಗೆ ಹೋಗಿದೆ ಅಂದರೆ ೮೮ ಕಿಲೋಮೀಟರ್ ಜಾಸ್ತಿ ಯಾಗಿದೆ. ಇನ್ನು ಗ್ರಾಮಾಂತರ ಪ್ರದೇಶ ರಸ್ತೆಯ ಬಗ್ಗೆ ಹೇಳುವುದಾದರೆ ೧೯೮೦ರ ಮಾರ್ಚಿ ೩೧ಕ್ಕೆ ಟಾರ್ಜಟ್ ಆಗಿ ಮಾಡಬೇಕಾದ್ದು ೩೭,೭೭೩ ಇದ್ದರೆ ಇವರು ಮಾಡಿರುವುದು ೩೩,೬೩೦ ಕಿಲೋಮಾಟರ್ಸ್, This is a physical achievement. ಇನ್ನು ಫೈನಾನ್ಸಿಯಲ್ ಪ್ರೋಗ್ರೆಸ್ ತೆಗೆದುಕೊಳ್ಳುವುದಾದರೆ, ಪುಟ ೮ರಲ್ಲಿ ಅರ್ಥ ಸಚಿವರು ಹೇಳಿದ್ದಾರೆ, ಅವರು ಈ ಸಭೆಯಲ್ಲಿದ್ದರೆ ಚೆನ್ನಾಗಿತ್ತು ನಾನು ಸಂತೋಷ ಪಡುತ್ತಿದೆ. ಫೈನಾನ್ಷಿಯಲ್ ಅಚೀವ್‌ಮೆಂಟ್ಸ್ ಮೊದಲನೆಯ ಕಾಲಂನಲ್ಲಿ ಫಾರ್‌ಮೇಷನ್ ಅಂಡ್ ಇಂಪ್ರೂವ್‌ಮೆಂಟ್ ಆಫ್ ರೋಡ್ಸ್‌ಗೆ ೧೯೮೧ ರಲ್ಲಿ ೨೦೦ ಲಕ್ಷಕ್ಕೆ ಹೋಯಿತು. ೧೯೮೧_೮೨ರಲ್ಲಿ ೧೭೭ ಲಕ್ಷ ಆಯಿತು. ಅನ್‌ಪಾಲ್ಟಿಂಗ್ ಆಫ್ ರೋಡ್ಸ್ ಇದು ೪೪ ಲಕ್ಷದ ೯೮ ಸಾವಿರ ಇದ್ದರೆ ಒಂದು ಸರಿ ೩೮ ಲಕ್ಷಕ್ಕೆ ಬರುತ್ತದೆ. ಆ ಮೇಲೆ ೪೦ ಲಕ್ಷಕ್ಕೆ ಬರುತ್ತದೆ. ಬ್ರಿಡ್ಜಸ್ ಕೂಡ ಅದೇರೀತಿ ಇದೆ. ಫಿಜಿಕಲ್ ಪರ್‌ಫಾರ್ಮೆನ್ಸ್ ಬಗ್ಗೆ ಮಾತನಾಡುತ್ತಿದ್ದೇನೆ. ಯಾವ ಉದ್ದೇಶ ಕ್ಕೋಸ್ಕರವಾಗಿ ೧೯೮೦-೮೧ರ ಆಯುವ್ಯಯ ಪತ್ರವನ್ನು ಸಭೆಯ ಮುಂದಿಡತಕ್ಕ ಕಾಲದಲ್ಲಿ ಈ ಸಭೆಯಲ್ಲಿ ಆಶ್ವಾಸನೆಯನ್ನು ಅರ್ಥ ಸಚಿವರು ಕೊಟ್ಟರು ಆ ಉದ್ದೇಶ ನೆರವೇರಿಲ್ಲ ಅನ್ನತಕ್ಕದ್ದು ತಾವೇ ಒದಗಿಸಿ ಕೊಟ್ಟಿರತಕ್ಕ ವಾರ್ಷಿಕ ವರದಿಯ ಆಧಾರದ ಮೇಲೆ ಈ ಸಭೆ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಇನ್ನು ರಾಷ್ಟ್ರೀಯ ಪೆದ್ದಾರೆ ಇದರ ಬಗ್ಗೆ ಕೆಲವು ವಿಷಯಗಳನ್ನು ಈ ಸಂದರ್ಭದಲ್ಲಿ ಸಭೆಯ ಗಮನಕ್ಕೆ ತಮ್ಮ ಮುಖೇನ ತರಬೇಕಾಗಿದೆ. ಈ ವಿಷಯದಲ್ಲಿ ಆಶಾದಾಯಕವಾಗಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ೧೯೮೧ರ ರಾಜ್ಯಪಾಲರ ಭಾಷಣದಲ್ಲಿ, ಅಭಿವೃದ್ಧಿ ಯೋಜನೆಯಲ್ಲಿ ಮಾರ್ಚಿ ಕೊನೆಯ ವೇಳೆಗೆ ಹೇಳಿರುವುದನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ೧೯೫೮ರ ಅಖಿಲಭಾರತ ರಸ್ತೆ ಅಭಿವೃದ್ಧಿ ಯೋಜನೆಯಲ್ಲಿ ೧೯೮೧ರ ಮಾರ್ಚಿ ಕೊನೆಯ ವೇಳೆಗೆ ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರೀಯ

ಕರ್ನಾಟಕ ವಿಧಾನಮಂಡಲ ಗ್ರಂಥಾಲಯ ಬೆಂಗಳೂರು

ಹೆದ್ದಾರಿ ಒಟ್ಟು ಉದ್ದ ೩,೮೯೨ ಕಿಲೋಮೀಟರ್ ಇರಬೇಕೆಂದು ನಿಗದಿ ಪಡಿಸಿದ್ದರು. ಆದರೆ ಇವತ್ತು ಇರತಕ್ಕ ರಾಷ್ಟ್ರೀಯ ಹೆದ್ದಾರಿಯ ಒಟ್ಟು ವಿಸ್ತೀರ್ಣ ೧೯೭೮ ಕಿಲೋಮೀಟರ್ ಮಾತ್ರ. ಇದು ಹಾಗೆಯೇ ಕಂಟಿನ್ಯೂ ಆಗಿ ಹೋಗುತ್ತಿದೆ. ಆದರ ವಿವರಣೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಪುಟ ಮೂರರ ವಾರ್ಷಿಕ ವರದಿಯಲ್ಲಿ ರಾಷ್ಟ್ರೀಯ ಹೆದ್ದಾರಿಯ ಉದ್ದ ಕಿಲೋಮೀಟರ್‌ಗಳಲ್ಲಿ ೧೯೭೮ರ ಮಾರ್ಚಿಗೆ ೧೯೭೮ ಕಿಲೋಮೀಟರ್ಸ್ ಇದ್ದರೆ, ೧೯೭೮-೭೯, ೧೯೭೯-೮೦ಕ್ಕೂ ಕೂಡ ೧೯೭೮ ಕಿಲೋಮೀಟರ್ಸ್ ಇದೆ. ೧೯೮೧-೮೨ ರಲ್ಲೂ ಕೂಡ ಇದು ಹಾಗೆಯೇ ಕಂಟಿನ್ಯೂ ಆಗಿದೆ. ಇದರಿಂದ ರಾಜ್ಯಕ್ಕೆ ಅನಾಹುತ ಏನು ಎನ್ನತಕ್ಕದ್ದನ್ನು ನಾವು ಪರಿಶೀಲನೆ ಮಾಡ ಬೇಕಾಗಿದೆ. ಈ ವರ್ಷ ನಮ್ಮ ಪಾಲಿಗೆ ಕೇಂದ್ರಸರ್ಕಾರ ೬.೪೨ ಕೋಟಿ ರೂಪಾಯಿಗಳನ್ನು ರಾಷ್ಟ್ರೀಯ ಹೆದ್ದಾರಿಗೆ ಕೊಡಲಾಗಿದೆ ಪುಟ ೧೫ ವಾರ್ಷಿಕ ವರದಿಯಲ್ಲಿ ಇಂಡಿಪೆಂಡ್‌ಂಡ್ ಜೋನ್ ಕ್ರಿಯೇಟ್ ಮಾಡತಕ್ಕ ವಿಚಾರ ೧೯೮೦-೮೧ ರಿಂದ ಇರಬೇಕು ಆದರ ಉದ್ದೇಶ ಇಂದು ಕೇಂದ್ರಸರ್ಕಾರ ಕೊಟ್ಟಂತಹ ಹಣವನ್ನು ಖರ್ಚುಮಾಡ ಬೇಕಾಗಿರುವುದಕ್ಕೆ ಸರಿಯಾದ ಪ್ಲಾನ್ ಇಲ್ಲ, ಡಿಸೈನ್ ಮತ್ತು ಅಂದಾಜು ತಯಾರು ಮಾಡಿಲ್ಲ. ಸಿಬ್ಬಂಧಿ ಕೊರತೆಯನ್ನು ನೀಗಿಸುವುದಕ್ಕೋಸ್ಕರ ಇಲ್ಲಿ ಬದಲಾವಣೆ ಮಾಡತಕ್ಕ ಉದ್ದೇಶದಿಂದ ಒಂದು ಪ್ರತ್ಯೇಕ ವಿಭಾಗವನ್ನು ತೆಗೆಯತಕ್ಕ ನಿರ್ಣಯ ಮಾಡಿದ್ದೇವೆ.

೨-೩೦ ಪಿ.ಎಂ.

ಅದಕ್ಕೆ ಒಬ್ಬ ಪ್ರತ್ಯೇಕ ಚೀಫ್ ಇಂಜನೀಯರ್ ಇರಬೇಕು, ಎರಡು ಸರ್ಕಲ್ ಇರಬೇಕು ಅಂತ ಮಾಡಿದೆವು. ೧೯೫೮ ರಲ್ಲಿ ಆಲ್ ಇಂಡಿಯಾ ಕಾಂಗ್ರೆಸ್‌ನಲ್ಲಿ ಈ ಬಗ್ಗೆ ಏನು ಒಂದು ನಿರ್ಣಯವಾಗಿತ್ತು ಆದರೆ ದುರ್ದೈವವಶಾತ್ ಈ ಬಗ್ಗೆ ಕೇಂದ್ರದಿಂದ ಸರಿಯಾದಂಥಾ ಆರ್ಥಿಕ ನೀತಿಯನ್ನು ಪಡೆಯತಕ್ಕಂಥಾ ಎಲ್ಲಾ ಸರ್ಕಾರಗಳೂ ಕೂಡ ವಿಫಲಗೊಂಡವು. ಈ ಒಂದು ಹೊಣೆಯನ್ನು ಕೇವಲ ಈ ಒಂದು ಸರ್ಕಾರದ ಮೇಲೆ ಹೊರಿಸುವುದಕ್ಕೆ ನಾನು ಪ್ರಯತ್ನ ಮಾಡುವುದಿಲ್ಲ. ರಾಷ್ಟ್ರದಲ್ಲಿರತಕ್ಕಂಥಾ ಎಷ್ಟು ರಾಷ್ಟ್ರೀಯ ಹೆದ್ದಾರಿಗಳು ಇವೆ ಅವುಗಳ ಉದ್ದಳತೆ ಏನು ಇದೆ ಅದರ ಪ್ರಮಾಣಕ್ಕನುಗುಣವಾಗಿ, ಜನ ಸಂಖ್ಯೆಗನುಗುಣವಾಗಿ ಆ ಹಣವನ್ನು ಪಡೆಯಬೇಕಾಗಿತ್ತು. ಈ ದಿಶೆಯಲ್ಲಿ ನಮ್ಮ ರಾಜ್ಯಕ್ಕೆ ದೊರೆಯ ಬೇಕಾದಂಥಾ ಹಣ ಏನು ಇದೆ ಅದೂ ಬಂದಿಲ್ಲಾ. ತಮಗೆ ಹೇಳಬೇಕಾದರೆ ೧೯೫೮ ರ ರೋಡ್ ಕಾಂಗ್ರೆಸ್‌ನಲ್ಲಿ ಈ ಹಣವನ್ನು ಪಡೆದುಕೊಳ್ಳುವುದಕ್ಕೆ ಒಂದು ನಿರ್ಣಯವೂ ಕೂಡ ಆಗಿದೆ. ಆದರೆ ಆ ಹಣವನ್ನು ಪಡೆಯುವುದಕ್ಕೆ ಯಾರೂ ಸಮರ್ಥರಾಗಲಿಲ್ಲಾ. ಈಗ ೧೭೮೯ ಕಿಲೋಮೀಟರ್ ರಸ್ತೆಗಳು ಆಗಿವೆ, ಇನ್ನು ಉಳಿದವು ಆಗಿಲ್ಲಾ. ೧೪ ರಸ್ತೆಗಳನ್ನು ಅಂತರ ರಾಷ್ಟ್ರಿಯ ಹೆದ್ದಾರಿಯನ್ನಾಗಿ ಪರಿವರ್ತನೆ ಮಾಡಬೇಕಾಗಿತ್ತು. ಇನ್ನೂ ಮಾಡಿಲ್ಲಾ. ಈ ಬಗ್ಗೆ ಭಾರತ ಸರ್ಕಾರದವರು ಒಂದು ನಿರ್ಣಯ ತೆಗೆದು ಕೊಂಡಿದ್ದರೂ ಕೂಡ ಇದನ್ನು ಇನ್ನೂ ಮಾಡಿಲ್ಲಾ. ಈ ರಸ್ತೆ ಮಾಡದೇ ಹೋದರೆ ಭಾರತ ಸರ್ಕಾರ ದಿಂದ ಬರತಕ್ಕಂಥಾ ಹಣವನ್ನು ಕಳೆದುಕೊಳ್ಳುತ್ತೀರಿ. ಈಗ ಈ ರೋಡ್ಸ್‌ಗಳನ್ನು ಅಂತರ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡುವ ಕೆಲಸ ಎಷ್ಟರಮಟ್ಟಿಗೆ ಬಂದಿದೆ ಅನ್ನುವುದನ್ನು ತಮ್ಮ ಉತ್ತರದಲ್ಲಿ ತಿಳಿಸ ಬೇಕು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಸುದೈವದಿಂದ ನಮ್ಮ ರಾಜ್ಯದವರೊಬ್ಬ ರನ್ನು ಅಲ್ಲಿ ಕ್ಯಾಬಿನೆಟ್ ಮಂತ್ರಿಯನ್ನಾಗಿ ಮಾಡಿಕೊಂಡಿದ್ದಾರೆ. ಅವರು ಕೇಂದ್ರ ಸರ್ಕಾರದಲ್ಲಿ ಟ್ರಾನ್ಸ್ ಪೋರ್ಟ್ ಮಂತ್ರಿಯಾಗಿದ್ದಾರೆ. ಅವರು ಹಿಂದೆ ನಮ್ಮ ರಾಜ್ಯದಲ್ಲಿ ಲೋಕೋಪಯೋಗಿ ಇಲಾಖಾ ಮಂತ್ರಿಯಾಗಿದ್ದರು, ಮುಖ್ಯ ಮಂತ್ರಿಯಾಗಿದ್ದರು, ಅವರಿಗೆ ಸಾಕಷ್ಟು ಈ ಬಗ್ಗೆ ಅನುಭವವೂ ಇದೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಕೇಳುವುದೇನೆಂದರೆ ನಮಗೆ ಈ ರೋಡ್ಸ್ ಬಗ್ಗೆ ಏನು ಕೊರತೆ ಇದೆ ಅದನ್ನು ತುಂಬಿಕೊಡುವ ಸಾಮರ್ಥ್ಯ ಇವರಿಗೆ ಇದೆ ಎಂದು ಅವರನ್ನು ಕಳುಹಿಸಿಕೊಟ್ಟಿದ್ದೇವೆ, ನಮ್ಮ ರಾಜ್ಯ ಸರ್ಕಾರದವರ ಅವರನ್ನು ಕೇಂದ್ರಕ್ಕೆ ಕಳುಹಿಸಿಕೊಟ್ಟಿದ್ದಾರೆ. ನಮಗೆ ೧೪ ರೋಡ್ಸ್‌ಗಳ ರಾಷ್ಟ್ರೀಯ ಹೆದ್ದಾರಿಯಾಗಿ ಏನು ಆಗಬೇಕಾಗಿದೆ, ರಾಜ್ಯ ಸರ್ಕಾರದವರು ಈ ೧೪ ರೋಡ್ಸ್‌ಗಳ ಪಟ್ಟಿ ಯನ್ನು ಏನು ಕಳುಹಿಸಿಕೊಟ್ಟಿದ್ದಾರೆ, ಈ ೧೪ ರೋಡ್ಸ್‌ಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿ ವರ್ತನೆ ಮಾಡಬೇಕೆನ್ನುವ ಒಂದು ನಿರ್ಣಯ ಏನು ಕಳುಹಿಸಿಕೊಟ್ಟಿದ್ದಾರೆ ನಮಗೆ ಬರಬೇಕಾದಂಥಾ ಈ ಕೊರತೆಯನ್ನು ತುಂಬುವುದಕ್ಕೆ ಅವರು ಸಾಮರ್ಥ್ಯ ಉಳ್ಳವರಾಗಿದ್ದಾರೆ. ಅವರು ಈ ಬಗ್ಗೆ ಪ್ರಯತ್ನ ಮಾಡಿ ಇದಕ್ಕೆ ಸಂಬಂಧಪಟ್ಟಂತೆ ಈ ರಸ್ತೆಗಳಿಗೆ ಆಡಳಿತಾತ್ಮಕವಾಗಿ ಮಂಜೂರು ಮಾಡಿಸಿ ಕೊಡುವುದಾದರೆ ಅವರ ಬಗ್ಗೆ ರಾಜಕೀಯ ಭಿನ್ನಾಭಿಪ್ರಾಯ ಇರಬಹುದು, ಅದೇನೇ ಇರಲಿ ಅವರಿಗೆ ಪ್ರಶಂಸೆ ಮಾಡುವುದಲ್ಲದೆ, ಅವರನ್ನು ಮೆಚ್ಚುಕೊಳ್ಳುತ್ತೇನೆ. ಹಿಂದೆ ಕೆಲವರು ಈ ರಾಜ್ಯದಲ್ಲಿ ಕೆಲವು

ನೆನೆಸಿಕೊಳ್ಳಬೇಕಾದಂಥಾ ಕೆಲಸವನ್ನು ಮಾಡಿ ಹೋಗಿದ್ದಾರೆ, ಅದರಿಂದ ಹೇಳುತ್ತೇನೆ. ತಮಗೆ ಹೇಳಬೇಕಾದರೆ ಅವರು ಈ ರಾಜ್ಯದಲ್ಲಿ ಮಂತ್ರಿಗಳು ಆಗಿದ್ದರು, ಅವರು ಯಾರೆಂದರೆ ಶ್ರೀಮಾನ್ ದಿವಂಗತ ದಾಸಪ್ಪನವರು. ಅವರು ಕೇಂದ್ರ ರೈಲ್ವೆ ಮಂತ್ರಿಯಾಗಿದ್ದಾಗ ಈ ಸಂದರ್ಭದಲ್ಲಿ ನಾವು ಅವರನ್ನು ನೆನೆಸಿಕೊಳ್ಳಬೇಕಾಗುತ್ತದೆ, ನಮ್ಮ ಕರ್ನಾಟಕ ರಾಜ್ಯಕ್ಕೆ ಯಾವುದೇರೀತಿಯಾ ರೈಲ್ವೆ ಆಗಬೇಕಾಗಲಿ, ಇನ್ನು ಯಾವುದೇ ಕೆಲಸವಾಗಲಿ ಉಪಯುಕ್ತವಾದಂಥಾ ಕೆಲಸವನ್ನು ಮಾಡಿ ಹೋಗಿದ್ದಾರೆ. ಅವರು ಈವೊತ್ತು ನಮ್ಮ ಕಣ್ಣು ಮುಂದೆ ಇಲ್ಲ, ನೆನೆಸಿಕೊಳ್ಳಬೇಕಾಗಿದೆ. ಇಷ್ಟು ಅನುಭವ ಇರತಕ್ಕಂಥಾ ಮಂತ್ರಿ ಮತ್ತು ಆಡಳಿತ ನಿರ್ವಹಣೆಯಲ್ಲೂ ಕೂಡ ಚೆನ್ನಾಗಿ ತಿಳಿದಿರತಕ್ಕಂಥಾವರು ಎಲ್ಲಾ ಕಾಲದಲ್ಲೂ ಬರುವುದಿಲ್ಲ. ಈವೊತ್ತು ನಮ್ಮ ರಾಜ್ಯದಿಂದ ಕಳುಹಿಸಿದಂಥಾ ಆ ಟ್ರಾನ್ಸ್‌ಪೋರ್ಟ್ ಮಂತ್ರಿಯವರು ನಮ್ಮ ರಾಜ್ಯದಲ್ಲಿ ಇರತಕ್ಕಂಥಾ ರೋಡ್ಸ್ ಕೊರತೆಯನ್ನು ತುಂಬುವುದಕ್ಕೆ ಯಾವ ರೀತಿಯಾಗಿ ಅವರು ಪ್ರಯೋಗ ಮಾಡುತ್ತಾರೆ ಅನ್ನುವುದನ್ನು ನಾವು ಕಾದು ನೋಡಬೇಕಾಗಿದೆ. ನಾವು ಹೇಳಿದಂತೆ ಉಪಯುಕ್ತವಾದ ಕೆಲಸ ಅವರಿಂದ ದೊರೆತರೆ ಈ ಸದನದ ಮುಖಾಂತರ ಅವರನ್ನು ಪ್ರಶಂಸೆ ಮಾಡಲು ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ತಮಗೆ ಇನ್ನೊಂದು ಸಲಹೆಯನ್ನು ಈ ಲೋಕೋಪಯೋಗಿ ಇಲಾಖೆಯ ವಿಷಯದ ಬಗ್ಗೆ ಕೊಡಲು ಬಯಸುತ್ತೇನೆ. ಈವೊತ್ತು ಇರತಕ್ಕಂಥಾ ಎರಡು ಸರ್ಕಲ್ಸ್‌ನ್ನು ವಿಭಾಗ ಮಾಡಿದ್ದೀರಿ. ಅದರಲ್ಲಿ ಒಂದು ಇನ್‌ವೆಸ್ಟ್‌ಗೇಷನ್ ಸರ್ಕಲ್ ಇನ್ನೊಂದು ಕನ್‌ಸ್ಟ್ರಕ್ಷನ್ ಸರ್ಕಲ್ ಅಂತ ಮಾಡಿದ್ದೀರಿ. ಈಗ ಇನ್ನೊಂದು ಇನ್‌ವೆಸ್ಟಿಗೇಷನ್ ಸರ್ಕಲ್ ಅನ್ನುವುದಕ್ಕೆ ಮಂಜೂರಾತಿ ಏನು ಕೊಟ್ಟಿದ್ದೀರೋ ಅದರ ಕೈಯ್ಯಲ್ಲಿ ಹಾಲಿ ಇರತಕ್ಕಂಥಾ ರಸ್ತೆಗಳ ಅಂದಾಜನ್ನು ತಯಾರು ಮಾಡಲಿಕ್ಕೆ ಇನ್ನೂ ಆಗಿಲ್ಲಾ; ಇನ್ನೂ ಪ್ಲಾನ್ ತಯಾರು ಮಾಡಲಿಕ್ಕೆ ಆಗಿಲ್ಲಾ, ಇನ್ನೂ ಅದರ ಡಿಸೈನ್ ಅನ್ನು ತಯಾರು ಮಾಡಲಿಕ್ಕೆ ಆಗಿಲ್ಲಾ. ಇನ್ನು ಇದರ ಜೊತೆಗೆ ಕನ್‌ಸ್ಟ್ರಕ್ಷನ್ ಸರ್ಕಲ್ ಬೇರೆ ಇದೆ. ಕೇಂದ್ರ ಸರ್ಕಾರಕ್ಕೆ ಹೊಸದಾಗಿ ಪ್ಲಾನ್, ಒಂದು ಅಂದಾಜು ಮಾಡಿಕೊಡುವುದಕ್ಕೆ ಅದರ ಕೈಯ್ಯಲ್ಲಿ ಇನ್ನೂ ಆಗಿಲ್ಲಾ. ಯಾರಾದರೂ ಒಬ್ಬರು ಜೂನಿಯರ್ ಇಂಜನೀಯರ್ ಪ್ಲಾನ್, ಅಂದಾಜು, ಡಿಸೈನ್ ಏನಾದರೂ ತಯಾರು ಮಾಡಿದರೆ ಅದನ್ನು ಅವರು ಒಪ್ಪಿಕೊಳ್ಳುತ್ತಾರೆಯೇ. ಸಾಮಾನ್ಯವಾಗಿ, ಆ ಬಗ್ಗೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ಪಡೆಯಬೇಕಾದರೆ ಕೆಲವು ನಾರ್ಮ್ಸ್‌ಗಳು ಇವೆ, ಅದನ್ನೆಲ್ಲಾ ಅಳವಡಿಸಿ ಪ್ಲಾನ್ ಅಂದಾಜು ಡಿಸೈನ್ ತಯಾರು ಮಾಡಬೇಕು. ಅದಕ್ಕೆ ಒಳ್ಳೆಯ ಅನುಭವವೂ ಇರಬೇಕು. ಅವರು ಹೇಳಿದ ಹಾಗೆ ತಯಾರು ಮಾಡದೇ ಹೋದದ್ದರಿಂದ ನಮಗೆ ಕೇಂದ್ರ ಸರ್ಕಾರದವರು ಇನ್ನೂ ಹಣ ಕೊಟ್ಟಿಲ್ಲಾ. ಪ್ರತಿ ವರ್ಷವೂ ನಮ್ಮ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಇದರ ಬಗ್ಗೆ ಬರಬೇಕಾದ ೫ ಕೋಟಿ ರೂಪಾಯಿಯನ್ನು ಪಡೆಯಲಿಕ್ಕೆ ನಾವು ವಿಫಲರಾಗಿದ್ದೇವೆ, ನಮ್ಮ ಕರ್ತವ್ಯ ಲೋಪದಲ್ಲಿ ಚ್ಯುತಿಯಾಗಿದೆ ಅನ್ನುವ ಮಾತನ್ನು ಹೇಳುತ್ತೇನೆ. ನಾನು ಈ ಸಂದರ್ಭದಲ್ಲಿ ಎಲ್ಲವನ್ನೂ ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಈ ಒಂದು ವಿಷಯವನ್ನು ತಿಳಿಸುವುದಕ್ಕೆ ಮಾತ್ರ ಇಷ್ಟಪಡುತ್ತೇನೆ. ಅದೇನೆಂದರೆ ಸ್ವಾಮಿ, ನಾವು ಪ್ರತಿವರ್ಷವೂ ಈ ಒಂದು ಅನುತ್ಪಾದಕ ವೆಚ್ಚವನ್ನು ಮಾಡಿಕೊಂಡು ಬಂದಿದ್ದೇವೆ. ಇದಕ್ಕೆ ನನ್ನ ಒಂದು ಸಲಹೆ ಏನೆಂದರೆ ಈ ಅನುತ್ಪಾದಕ ವೆಚ್ಚಕ್ಕೆ ನೀವು ಇನ್ನೂ ಸ್ವಲ್ಪ ಭಾರ ಹೊರಬೇಕಾಗಿದೆ. ಆದರೂ ಪರವಾಗಿಲ್ಲಾ. ಈ ಬಗ್ಗೆ ನಾನು ಒಂದು ಸಲಹೆ ಕೊಡುತ್ತೇನೆ. ಅದೇನೆಂದರೆ ತಮಿಳ್‌ನಾಡಿನ ಸರ್ಕಾರದವರು ಇದಕ್ಕಾಗಿಯೇ ಡೆಲ್ಲಿಯಲ್ಲಿ ಒಬ್ಬ ಕ್ಯಾಬಿನೆಟ್ಸ್ ದರ್ಜೆಯ ಸಚಿವರೊಬ್ಬರನ್ನು ನೇಮಕ ಮಾಡಿ ಇಟ್ಟಿದ್ದಾರೆ. ಶ್ರೀಮಾನ್ ಎಂ.ಜಿ. ರಾಮಚಂದ್ರನ್‌ರವರು ಈ ಬಗ್ಗೆ ಒಂದು ನಿರ್ಣಯ ಮಾಡಿದ್ದಾರೆ, ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಹೋಗತಕ್ಕಂಥಾ ಎಲ್ಲಾ ಪ್ರಮುಖ ಯೋಜನೆಗಳ ಬಗ್ಗೆ ಅಲ್ಲಿ ಆಡಳಿತಾತ್ಮಕ ಮಂಜೂರಾತಿ ದೊರಕಿಸಿ ಕೊಳ್ಳುವುದಕ್ಕೆ ಒಬ್ಬ ಕ್ಯಾಬಿನೆಟ್ ದರ್ಜೆಯ ಸಚಿವರನ್ನು ನೇಮಕ ಮಾಡಿದ್ದಾರೆ, ಅದನ್ನು ನಾವು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕಾಗುತ್ತದೆ. ನಮ್ಮ ರಾಜ್ಯ ಸರ್ಕಾರದಲ್ಲಿ ಈ ಬಗ್ಗೆ ಹಲವಾರು ಯೋಜನೆಗಳು ಏನು ಇವೆ ಅವರು ಈ ಬಗ್ಗೆ ಸರಿಯಾದ ಪ್ರಯತ್ನ ಮಾಡದೇ ಇದ್ದುದರಿಂದ ಅದರ ಮಂಜೂರಾತಿ ಪಡೆಯುವುದಕ್ಕೆ ಇನ್ನೂ ಸಾಧ್ಯವಾಗಿಲ್ಲಾ. ತಮಿಳುನಾಡಿನವರು ಮಾಡಿದ ಹಾಗೆ ನೀವು ಮಾಡಬೇಕು. ಇದುವರೆಗೆ ನೋಡಿದ್ದಲ್ಲಿ ನಿಮ್ಮ ಉದ್ದೇಶ ಇದುವರೆಗೂ ಸಫಲಗೊಂಡಿಲ್ಲ ಅನ್ನುವುದನ್ನು ಮನಗಂಡು ನಾನು ಈ ಮಾತನ್ನು ಹೇಳುತ್ತಿದ್ದೇನೆ. ನೀವು ತಮಿಳ್‌ನಾಡಿನವರ ರೀತಿ ಒಬ್ಬ ಕ್ಯಾಬಿನೆಟ್ ದರ್ಜೆ ಸಚಿವರನ್ನು ಅಲ್ಲೇ ಇಟ್ಟರೆ ಈ ಬಗ್ಗೆ ಸ್ವಲ್ಪ ಅನುತ್ಪಾದಕ ವೆಚ್ಚವಾದರೂ ಪರವಾಯಿಲ್ಲಾ. ಇದರಿಂದ ಸಾಕಷ್ಟು ಫಲಪ್ರದವಾಗುವ ಹಾಗೆ ನನಗೆ ತೋರುತ್ತದೆ. ಈಗ ನಿಮಗೆ

ಸಾಕಷ್ಟು ಫಲಪ್ರದ ಸನ್ನಿವೇಶ ದೊರಕಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ರೀತಿ ಮಾಡುವುದು ಸೂಕ್ತ ಎಂದು ನಾನು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ಛೇರ್ಮನ್.—ತಮಗೆ ಇನ್ನೆಷ್ಟು ಸಮಯ ಬೇಕಾಗಬಹುದು.

ಶ್ರೀ ಹೆಚ್.ಡಿ. ದೇವೇಗೌಡ.—ನನಗೆ ಕೊನೇಪಕ್ಷ ೧೫ ನಿಮಿಷ ಬೇಕಾಗಬಹುದು.

ಛೇರ್ಮನ್.—ಆದಷ್ಟು ಬೇಗನೆ ಮುಗಿಸಿ.

ಶ್ರೀ ಹೆಚ್.ಡಿ. ದೇವೇಗೌಡ.—ನಾನು ಈ ಸಭೆಯ ಕಾಲಾವಕಾಶವನ್ನು ಅನಾವಶ್ಯಕವಾಗಿ ತೆಗದುಕೊಂಡು ಮಾತನಾಡುವುದಕ್ಕೆ ಹೋಗುವುದಿಲ್ಲ. ಸುಮಾರು ೧೯೭೨ ರ ಚುನಾವಣೆಯಾದ ಮೇಲೆ ಮಾತನಾಡುವುದಕ್ಕೆ ಪ್ರಯತ್ನ ಪಟ್ಟಿರತಕ್ಕಂಥಾದ್ದು ಬಹುಶಃ ಲೋಕೋಪಯೋಗಿ ಇಲಾಖೆ ಮೇಲೆ ಇದೇ ಪ್ರಥಮ ಎನ್ನಬಹುದು. ನನಗೆ ಮಾತನಾಡುವ ಅಭ್ಯಾಸವೂ ಇಲ್ಲ. ಆದರೆ ನನ್ನ ಸಲಹೆಯಿಂದ ಏನಾದರೂ ಸರ್ಕಾರಕ್ಕೆ ಸೂಕ್ತ ಎನಿಸಿದರೆ ಆ ಬಗ್ಗೆ ನನ್ನ ಕೆಲವು ಕರ್ತವ್ಯಗಳನ್ನು ಮಾಡುವುದಕ್ಕೆ ಈ ಸದನದ ಕಾಲವನ್ನು ಸ್ವಲ್ಪ ವ್ಯರ್ಥ ಮಾಡಿದರೆ ಅದಕ್ಕೇನೂ ಚಿಂತನೆ ಮಾಡಬೇಕಾದ್ದಿಲ್ಲಾ. ಅದರಿಂದ ನಾನು ಈ ಸದನದ ಸ್ವಲ್ಪ ಕಾಲವನ್ನು ಉಪಯೋಗಿಸಿಕೊಳ್ಳುತ್ತೇನೆ.

ಛೇರ್ಮನ್.—ತಾವು ಮಾತನಾಡಿ, ತಮ್ಮ ಭಾಷಣವನ್ನು ಮುಂದುವರೆಸಿ.

ಶ್ರೀ ಹೆಚ್.ಡಿ. ದೇವೇಗೌಡ.—ಇನ್ನು ರಸ್ತೆಗಳ ಕ್ವಾಲಿಟಿ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ. ನಂತರ ಇರ್ರಿಗೇಷನ್ ಬಗ್ಗೆ ಹೇಳುವುದಕ್ಕೆ ಹೋಗುತ್ತೇನೆ. ಈವೊತ್ತು ನಮ್ಮ ರಾಜ್ಯದಲ್ಲಿ ಎಷ್ಟು ನ್ಯಾಷನಲ್ ಹೈವೇ ರೋಡ್ಸ್ ಇದೆ. ಎಷ್ಟು ಪಿ.ಡಬ್ಲ್ಯು.ಡಿ. ರೋಡ್ಸ್ ಇದೆ? ಎಷ್ಟು ರೆಗ್ಯುಲರ್ ಪಿ.ಡಬ್ಲ್ಯು.ಡಿ. ರೋಡ್ಸ್ ಇದೆ. ಎಷ್ಟು ಅಸ್ಫಾಲ್ಟಿಂಗ್ ರೋಡ್ಸ್ ಇದೆ. ಎಷ್ಟು ಕಾಂಕ್ರೀಟ್ ರೋಡ್ಸ್ ಇದೆ, ಎಷ್ಟು ಚಿಪ್‌ಕಾರ್ಪೆಟಿಂಗ್ ರೋಡ್ಸ್ ಇದೆ, ಎಷ್ಟು ಜೆಲ್ಲಿ ರೋಡ್ಸ್ ಇದೆ, ಇವುಗಳೆಲ್ಲ ದರ ಲೈಫ್ ಎಷ್ಟು ಇರಬಹುದು. ಇದರ ಬಗ್ಗೆ ಬಹುಷಃ ಯಾರೂ ಗಮನ ಹರಿಸುವುದಕ್ಕೆ ಹೋಗಿಲ್ಲ. ಹೋಗುವುದೂ ಇಲ್ಲ ಎಂದು ನನಗೆ ಕಾಣುತ್ತದೆ. ಈ ಅಸ್ಫಾಲ್ಟಿಂಗ್ ರೋಡ್ಸ್ ಏನು ಇದೆ ಇದನ್ನು ಮಾಡುವುದರಿಂದ ಒಂದು ವರ್ಷಕ್ಕೇನೇ ರಸ್ತೆಯೆಲ್ಲಾ ಹಾಳಾಗಿರುತ್ತದೆ. ಈ ಬಗ್ಗೆ ಅಧಿಕಾರಿಗಳದ್ದೇ ದೋಷ ಇದೆ ಅಂತ ಹೇಳುವುದಿಲ್ಲ. ಇಸಕ್ಕೆ ಪ್ರಾಪರ್ ಫೌಂಡೇಷನ್ ಸಹ ಸರಿಯಾಗಿ ಇರುವುದಿಲ್ಲ. ಇದಕ್ಕೆ ನಾನಾ ಕಾರಣಗಳು ಇದ್ದಾವೆ. ಇದನ್ನು ಅಸ್ಫಾಲ್ಟಿಕ್ ರೋಡ್ಸ್ ಮಾಡುವಾಗ ಏನು ನಿರ್ಣಯ ತೆಗೆದುಕೊಳ್ಳುತ್ತಾರೋ, ಏನು ಪ್ರಾಪರ್ ಫೌಂಡೇಷನ್ ತೆಗೆದುಕೊಳ್ಳುತ್ತಾರೋ ಅದಕ್ಕೆ ಒಂದು ಸಬ್‌ಗ್ರೇಡ್ ಮಾಡಿರುವುದಿಲ್ಲ. ಈ ರಸ್ತೆಯ ಉದ್ದಣ್ಣಳ ಅಳತೆ ಒಂದೊಂದು ಭಾಗದಲ್ಲಿ ಒಂದೊಂದು ತರಹ ಇದೆ. ಈ ಆಸ್ಫಾಲ್ಟಿಂಗ್ ರೋಡ್ಸ್‌ಗಳು ಉತ್ತರ ಕರ್ನಾಟಕದಲ್ಲಿ ಒಂದು ತರಹ ಇದೆ, ಅಲ್ಲ ಬ್ಲಾಕ್ ಸಾಯಿಲ್ ಇದೆ, ಹೀಗೆ ಕೆಲವು ಭಾಗಗಳಲ್ಲಿ ಬೇರೆ ಬೇರೆ ಹವಾಗುಣಕ್ಕೆ ತಕ್ಕಂತೆ ಬೇರೆ ಬೇರೆ ತರಹ ಸಾಯಿಲ್ ಇರುತ್ತದೆ. ಮೈದಾನದಲ್ಲಿ ಒಂದು ತರಹ ಹವಾಗುಣ, ಮಲೆನಾಡಿನಲ್ಲೇ ಒಂದು ತರಹೆ ಹವಾಗುಣ, ಮತ್ತೇ ಬೇರೆ ಬೇರೆ ತರಹ ಸಾಯಿಲ್ಸ್ ಇರುತ್ತವೆ. ಇದರಿಂದ ಕೆಲವು ಭಾಗಗಳಲ್ಲಿರುವ ರಸ್ತೆಗಳು ಸರಿಯಾದ ಡ್ಯೂರಬಿಲಿಟಿ ಬರುವುದಿಲ್ಲ. ಆದುದರಿಂದ ಅಂಥಾ ಕಡೆಗಳಲ್ಲಿ ಸರಿಯಾಗಿ ಮೇಂಟೇನ್ ಮಾಡುವುದಕ್ಕೆ ಮುಂಜಾಗರೂಗಕತೆ ಕ್ರಮ ತೆಗೆದುಕೊಳ್ಳಬೇಕು. ಇದರ ಬಗ್ಗೆ ತಾಂತ್ರಿಕವಾಗಿ ಒಂದು ನಿರ್ಣಯ ತೆಗೆದುಕೊಳ್ಳುವುದು ಅತ್ಯಂತ ಆವಶ್ಯಕ ಎಂದು ನನಗೆ ಅನಿಸುತ್ತದೆ. ಆದರ ಬಗ್ಗೆ ಆಗಿರತಕ್ಕಂಥ ಡಿಸೈನ್ ವಿಂಗ್ ಏನಿದೆ ಅದನ್ನು ಹೆಚ್ಚು ಶಕ್ತಿಯುತವಾಗಿ ಕೆಲಸ ನಿರ್ವಹಣೆ ಮಾಡುವಂತೆ ಭದ್ರಗೊಳಿಸಬೇಕಾಗುತ್ತದೆ; ಆ ಆರ ನೈಸೇಷನ್ ಅನ್ನು ಹೆಚ್ಚು ಸ್ಟ್ರೆಂತನ್ ಮಾಡಿ ಎಂದು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ. ಇನ್ನೊಂದು ವಿಷಯವನ್ನು ಜನರಲ್ಲಾಗಿ ಎಲ್ಲಾ ಇಲಾಖೆಗಳಿಗೂ ಸಂಬಂಧಪಟ್ಟಂತೆ ಹೇಳಬೇಕಾಗುತ್ತದೆ. ರಾಜ್ಯದಲ್ಲಿ ವಿವಿಧ ಇಲಾಖೆಗಳಲ್ಲಿ ಇರತಕ್ಕಂಥ ಮಿಷನರಿಗಳನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಲು ಅನುಕೂಲವಾಗುವಂತೆ ಸೆಂಟ್ರಲ್ ಮೆಕಾನಿಕಲ್ ಆರ್ಗನೈಸೇಷನ್ ಅನ್ನು ನೇಮಕ ಮಾಡಬೇಕೆಂದು ನಾನು ಮೊದಲೇ ಹೇಳಿದ್ದೇನೆ. ಅದೇ ರೀತಿಯಲ್ಲಿ ಒಂದು ಸೆಂಟ್ರಲ್ ಆರ್ಗನೈಸೇಷನ್ ಫಾರ್ ಪರ್ಚೇಸಸ್ ಎಂದು ಮಾಡಬೇಕು. ನಾವು ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಇದ್ದುಕೊಂಡು ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ನೋಡಿದ್ದೇವೆ. ಯಾವುದೋ ಒಂದು ಊರಿಗೆ ಟಿ.ಬಿ. ಕೊಡಬೇಕೆಂದು ನಿರ್ಣಯ ಮಾಡಿದರೆ ಟಿ.ಬಿ. ಕೆಲಸ ಫೌಂಡೇಷನ್ ಹಂತದಲ್ಲೇ ಇರುತ್ತದೆ. ಅದಕ್ಕೆ ಬೇಕಾದಂತಹ ಎಲ್ಲಾ ಸಾಮಗ್ರಿಗಳನ್ನು ತೆಗೆದುಕೊಂಡಿರುತ್ತಾರೆ; ತೆಗೆದುಕೊಂಡಿರತಕ್ಕಂಥ ಖರ್ಚುಗಳು

ಸ್ಪೋಫಾಸೆಟ್‌ಗಳನ್ನು ಎಲ್ಲಿ ಇಡಬೇಕೆಂದು ಗೊತ್ತಿರುವುದಿಲ್ಲ. ಅವರ ಆಫೀಸಿನಲ್ಲಿ ಎಲ್ಲೋ ಒಂದು ರೂಮಿನಲ್ಲಿ ತಂದಿಡುತ್ತಾರೆ. ಯಾವುದೋ ಡಿವಿಜನ್‌ನಲ್ಲಿ ೨ ಲಾರಿಗೆ ಬ್ಯಾಟರಿಗಳು ಬೇಕಾದರೆ ೫೦ ಬ್ಯಾಟರಿಗಳನ್ನು ಪರ್ಚೇಸ್ ಮಾಡುತ್ತಾರೆ. ಇದನ್ನು ತುಂಬಾ ಆಳವಾಗಿ ನಾವು ನೋಡಬೇಕಾಗುತ್ತದೆ. ನಮ್ಮ ಮಾನ್ಯ ಮುಖ್ಯ ಮಂತ್ರಿಯವರಿಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಕೆಲಸ ಮಾಡಿದ ಅನುಭವ ಇದೆ. ಅವರಿಗೆಲ್ಲಾ ಗೊತ್ತಿದೆ. ಈ ಇಲಾಖೆಯಲ್ಲಿ ಯಾವ ಯಾವ ಪದಾರ್ಥಗಳ ಅವಶ್ಯಕತೆ ಇದೆ, ಯಾವ ಯಾವ ಸಾಮಾನುಗಳು ಬೇಕು ಎನ್ನುವ ಬಗ್ಗೆ ಒಂದು ಇಂಡೆಂಟ್ ಹಾಕುವುದಕ್ಕೆ ಪರಿಶ್ರಮ ಇರಬೇಕು ಮತ್ತು ಅದಕ್ಕೆ ಒಂದು ವ್ಯವಸ್ಥೆ ಇರಬೇಕು. ಕೆಲವು ಕಡೆಗಳಲ್ಲಿ ಸ್ಪೇರ್ ಪಾರ್ಟ್ಸನ್ನು ೧೫ ಲಕ್ಷ ೨೦ ಲಕ್ಷ ರೂಪಾಯಿಗಳಿಗೆ, ಆರ್ಡರ್ ಮಾಡಿ ತೆಗೆದುಕೊಳ್ಳುತ್ತಾರೆ. ಏತಕ್ಕೆ ಬೇಕು, ಎಷ್ಟು ಬೇಕು ಎನುವುದೇ ಗೊತ್ತಿರುವುದಿಲ್ಲ. ಅವರಿಗೆ ಎಷ್ಟು ಬೇಕೋ ಅಷ್ಟನ್ನು ಇಂಡೆಂಟ್ ಹಾಕಿ ತೆಗೆದುಕೊಳ್ಳಬಹುದು ಮತ್ತು ಅದನ್ನು ಅವರ ಲೆಡ್ಜರ್‌ನಲ್ಲಿ ಮೈನ್‌ಟೈನ್ ಮಾಡಿಕೊಳ್ಳಬಹುದು. ಆ ರೀತಿ ಮಾಡುವುದಿಲ್ಲ. ಈ ಇಲಾಖೆಯಲ್ಲಿ ಏನಾಗಿದೆ ಎನ್ನತಕ್ಕಂಥಾದ್ದನ್ನು ಇನ್ನು ಮುಂದೆ ಹೇಳುತ್ತೇನೆ. ಈ ಒಂದು ಇರಿಗೇಷನ್ ಪ್ರಾಜೆಕ್ಟ್‌ನಲ್ಲಿ ಡೆವೆಲಪ್‌ಮೆಂಟ್ ವರ್ಕ್ಸ್‌ಗೆ ಹಣ ಇಲ್ಲ. ಆದರೆ ಪರ್ಚೇಸ್ ಆಫ್ ಸ್ಪೇರ್ ಪಾರ್ಟ್ಸ್‌ಗೆ ೫-೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದನ್ನೆಲ್ಲಾ ತಹಬಂದಿಗೆ ತರಬೇಕಾದರೆ ಸೆಂಟ್ರಲ್ ಪರ್ಚೇಸಸ್ ಆರ್ಗನೈಸೇಷನ್ ಇರತಕ್ಕಂಥಾದ್ದು ಅತಿ ಅವಶ್ಯಕವೆಂದು ನಾನು ತಮಗೆ ಸೂಚಿಸಬಯಸುತ್ತೇನೆ. ಸ್ವಾಮಿ, ಈ ರಾಜ್ಯದ ಮಧ್ಯಮ ಮತ್ತು ಬೃಹತ್ ನೀರಾವರಿ ಯೋಜನೆಗಳ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಮಾಡತಕ್ಕಂಥ ಕಾಲದಲ್ಲಿ ಸರ್ಕಾರಕ್ಕೆ ಒಂದು ಎಚ್ಚರಿಕೆಯ ಮಾತನ್ನು ಹೇಳಬೇಕಾಗುತ್ತದೆ. ಮೊನ್ನೆ ದಿವಸ ತಮಿಳುನಾಡಿನಲ್ಲಿ ಕಾವೇರಿ ಜಲವಿವಾದಕ್ಕೆ ಸಂಬಂಧಪಟ್ಟಂಥ ಒಂದು ಸಭೆ ಆಯಿತು. ಅದರಲ್ಲಿ ಕೇಂದ್ರದ ವ್ಯವಸಾಯ ಸಚಿವರು ಮತ್ತು ಕೇಂದ್ರದಲ್ಲಿ ನೀರಾವರಿ ಖಾತೆಯನ್ನು ಹೊಂದಿರತಕ್ಕಂಥ ಸಚಿವರಾದ ಶ್ರೀ ರಾವ್ ಬೀರೇಂದ್ರಸಿಂಗ್‌ರವರು ಒಂದು ಮಾತನ್ನು ಹೇಳಿದ್ದಾರೆ. ಈ ರಾಜ್ಯದ ನದಿಗಳ ಜಲಸಂಪತ್ತನ್ನು ವಿತರಣೆ ಮಾಡಿಕೊಳ್ಳತಕ್ಕಂಥಾದಕ್ಕೆ ನಾವು ಕೇಂದ್ರ ಸರ್ಕಾರದ ಒಂದು ಕಾಯಿದೆಯನ್ನು ತರುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಸ್ವಾಮಿ, ನಾವು ಇದನ್ನು ಒಪ್ಪಿಕೊಳ್ಳುವುದಾದರೆ it is a suicidal policy to the Karnataka State. ತಾವು ಯಾವುದೇ ಕಾರಣದಿಂದ, ಕೇಂದ್ರ ಸರ್ಕಾರ ಇವತ್ತು ಈ ನದಿಗಳ ಜಲಸಂಪತ್ತನ್ನು ಹಂಚಿಕೊಳ್ಳತಕ್ಕಂಥಾದಕ್ಕೆ ಅವರು ಒಂದು ಅಧಿಕಾರವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಕೂಡದು. It is a concurrent subject: and State subject. ಅವರು ಈ ವಿಷಯದಲ್ಲಿ ಒಂದು ಮಾತನ್ನು ಹೇಳಬಹುದು; ಕೆಲವು ಇಂಟರ್‌ಸ್ಟೇಟ್ ರಿವರ್ಸ್ ಡಿಸ್ಪ್ಯೂಟನ್ನು ಸೆಟ್ಲ್ ಮಾಡುವುದಕ್ಕೆ ಆಗದೇ ಇರುವುದರಿಂದ ಈ ಜಗಳವನ್ನು ಮುಂದುವರಿಸುವುದಕ್ಕೆ ಸಾಧ್ಯವಾಗುವುದಿಲ್ಲ, ಇದಕ್ಕೋಸ್ಕರವಾಗಿ ನಮ್ಮ ಕೈಯಲ್ಲಿ ಈ ಅಧಿಕಾರವನ್ನು ಇಟ್ಟುಕೊಳ್ಳುವ ಮುಖೇನ, ೩೦ ವರ್ಷದಿಂದ ಈ ಒಂದು ಜಲವಿವಾದಗಳನ್ನು ನಾವೇನು ಪರಿಹರಿಸುವುದಕ್ಕೆ ಸಾಧ್ಯವಾಗಲಿಲ್ಲವೋ ಅದನ್ನು ಪರಿಹರಿಸತಕ್ಕಂಥ ಅಸ್ತ್ರ ನಮ್ಮ ಕೈಯಲ್ಲಿ ಇರುತ್ತದೆ ಎಂದು ಅವರು ಹೇಳಬಹುದು. ಮತ್ತು ಅವರು ಹಾಗೆ ಭಾವಿಸಿಕೊಂಡಿರಬಹುದು. ಆದರೆ ನಮ್ಮಲ್ಲಿರತಕ್ಕಂಥ ಈ ಒಂದು ಹೈಡ್ರಾಸ್ಟ್ರಕ್ಚರ್‌ನಲ್ಲಿ ಪಕ್ಷ ರಾಜಕಾರಣಗಳು ಬೇಗ ಆಗಬಹುದು. ಇವತ್ತು ಇಲ್ಲಿ ಒಂದು ಪಕ್ಷ ಅಧಿಕಾರದಲ್ಲಿರಬಹುದು. ಕೇಂದ್ರದಲ್ಲಿ ಒಂದು ಪಕ್ಷ ಅಧಿಕಾರಕ್ಕೆ ಬರಬಹುದು. ಆದರೆ ರಾಜಕೀಯ ಉದ್ದೇಶಕ್ಕೋಸ್ಕರ ಕತ್ತು ಹಿಸುಕತಕ್ಕಂಥ ಪರಿಸ್ಥಿತಿ ಇದರಿಂದ ಒದಗುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇವತ್ತು ಕರ್ನಾಟಕದಲ್ಲಿ ಒಂದೇ ಪಕ್ಷ ಮತ್ತು ಕೇಂದ್ರದಲ್ಲಿ ಒಂದೇ ಪಕ್ಷ ಅಧಿಕಾರದಲ್ಲಿರಬಹುದು. ಆದರೆ ಇವತ್ತು ಇದು ಕಾನ್‌ಸ್ಟಾಂಟ್ ಅಲ್ಲ. ಯಾವ ಸನ್ನಿವೇಶದಲ್ಲಿ ಏನು ಬೇಕಾದರೂ ಆಗಬಹುದು. ಆದ್ದರಿಂದ ಇವತ್ತು ಈ ಒಂದು ಧೋರಣೆ ಏನಿದೆ ಇದನ್ನು ರಾಜ್ಯ ಸರ್ಕಾರ ತನ್ನ ಎಲ್ಲಾ ಶಕ್ತಿಯನ್ನೂ ಉಪಯೋಗ ಮಾಡಿಕೊಂಡು ವಿರೋಧ ಮಾಡಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸ್ವಾಮಿ, ಒಂದೆ ಗತಿಸಿ ಹೋಗಿರತಕ್ಕಂಥ ಹಳೆಯ ಅನುಭವದ ಆಧಾರದ ಮೇಲೆ ಹೇಳುವುದಾದರೆ ಅವಿಭಾಜ್ಯ ಕಾಂಗ್ರೆಸ್ ಪಾರ್ಟಿ ಅಥವಾ ಕಾಂಗ್ರೆಸ್ (ಐ) ಪಾರ್ಟಿ ಅಥವಾ ಜನತಾ ಪಾರ್ಟಿ ಅಂತ ನಾನು ಹೇಳುವುದಿಲ್ಲ; ನಡೆದುಹೋಗಿರತಕ್ಕಂಥ ೩೫ ವರ್ಷದ ಇತಿಹಾಸವನ್ನು ನಾವು ನೋಡಿದಾಗ ಕೇಂದ್ರದಲ್ಲಿ ಈ ಅಂತರರಾಜ್ಯ ನದಿಗಳ ನೀರನ್ನು ಹಂಚತಕ್ಕಂಥ ಒಂದು ಸನ್ನಿವೇಶದಲ್ಲಿ ಈ ಸೆಂಟ್ರಲ್ ವಾಟರ್ ಕಮಿಷನ್‌ನಲ್ಲಿ ಕೆಲಸ ಮಾಡತಕ್ಕಂಥವರು ಒಳ್ಳೆಯ ಅಧಿಕಾರಿಗಳೇ

ಆಗಿರಬಹುದು ಅಥವಾ ಕೇಂದ್ರ ಸರ್ಕಾರದ ಸಚಿವಸ್ಥಾನದಲ್ಲೇ ಇರಬಹುದು; ಅಲ್ಲಿ ನಮ್ಮ ನಿಲುವಿಗೆ ಸಾಕಷ್ಟು ಬೆಂಬಲ ದೊರೆತಿಲ್ಲವೆಂದು ಹೇಳಬೇಕಾಗಿದೆ. ಶ್ರೀಮಾನ್ ಕೆ.ಎನ್. ರಾವ್ ರವರು ಅಧಿಕಾರದಲ್ಲಿ ಇದ್ದರು, ೧೦ ವರ್ಷಗಳ ಕಾಲ ಮಂತ್ರಿಗಳಾಗಿದ್ದರು ಮತ್ತು ಈ ಸೆಂಟ್ರಲ್ ವಾಟರ್ ಕಮಿಷನ್‌ನ ಚೇರ್ಮನ್ ಕೂಡ ಆಗಿದ್ದರು. ಇವತ್ತು ಅಲ್ಲಿ ಶ್ರೀಮಾನ್ ಪಟೇಲ್‌ರವರು ಇದ್ದಾರೆ. ಅಲ್ಲಿ ಜನತಾ ಸರ್ಕಾರ ಇದ್ದಾಗ ಇವರನ್ನು ನೇಮಕ ಮಾಡಿದ್ದರು. ಈ ಎಲ್ಲಾ ವ್ಯಕ್ತಿಗಳು ಲೋಯರ್ ಸ್ಟೇಟ್ ಇಂಟರ್‌ಸ್ಟನ್ನು ಸೇಫ್‌ಗಾರ್ಡ್ ಮಾಡತಕ್ಕಂಥ ಮನೋಭಾವನೆಯನ್ನು ತಾಳಿರತಕ್ಕಂಥ ವ್ಯಕ್ತಿಗಳೇ? ಈ ಕೃಷ್ಣಾ ವಾಟರ್ ಡಿಸ್ಪ್ಯೂಟನ್ನು ಟ್ರಿಬ್ಯುನಲ್‌ಗೆ ರೆಫರ್ ಆಗುವುದಕ್ಕೆ ಈ ಸದನದಲ್ಲಿ ನಾವು ಅದಕ್ಕೆ ಎಷ್ಟೇ ಒತ್ತಾಯವನ್ನು ತಂದರೂ ಕೂಡ ನಾಗಾರ್ಜುನ ಸಾಗರಕ್ಕೆ ಕ್ರಸ್ಟ್ ಗೇಟ್ ಹಾಕಿದ ಮೇಲೆ ಅದನ್ನು ಟ್ರಿಬ್ಯುನಲ್‌ಗೆ ರೆಫರ್ ಮಾಡತಕ್ಕಂಥ ನಿರ್ಣಯವನ್ನು ಶ್ರೀಮಾನ್ ಕೆ.ಎನ್. ರಾವ್‌ರವರು ಮಾಡಿದರು. ಅವರ ಸಮಸ್ಯೆಯೂ ಬಗೆಹರಿಯಿತು. ಇವತ್ತು ಈ ಕೃಷ್ಣ ನೀರಿನ ಮೇಲೆ ಸಂಪೂರ್ಣ ಹಕ್ಕು ನಮ್ಮದು ಇದೆ. ಇವತ್ತು ಅಲ್ಲಿ ಪಟೇಲರವರು ಇದ್ದಾರೆ; ಅವರದೂ ಅದೇ ಅಭಿಪ್ರಾಯ ಗುಜರಾತಿನ ನರ್ಮದಾ ವ್ಯಾಲಿ ಅಥವಾ ಮಹಾನದಿಯ ನೀರಿನ ಹಂಚಿಕೆ ಪ್ರಶ್ನೆ ಬಂದಾಗ ಅವರು ತಳಗಡೆ ಇರತಕ್ಕಂಥ ಒಂದು ರಾಜ್ಯಕ್ಕೆ ಸಂಬಂಧಪಟ್ಟಂಥ ವ್ಯಕ್ತಿ; ಎಷ್ಟೇ ಆದರೂ ಸ್ವಾರ್ಥದ ಹಿತಾಸಕ್ತಿ ಇದೆ ಅವರಿಗೆ. ಅವರ ನಿಲುವು ನಮ್ಮ ಕರ್ನಾಟಕ ರಾಜ್ಯದ ನಿಲುವಿಗೆ ಹೊಂದಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ನಾವು ಇದನ್ನು ಮನಗಾಣಬೇಕಾಗುತ್ತದೆ. ಆದ್ದರಿಂದ ನಾನು ಈ ರಾಜ್ಯ ಸರ್ಕಾರಕ್ಕೆ ಒಂದು ಸೂಚನೆಯನ್ನು ಕೊಡುವುದಕ್ಕೆ ಬಯಸುತ್ತೇನೆ; ಅದು ಏನೇ ಆಗಬಹುದು, ಯಾವುದೇ ಕಾರಣದಿಂದ ನಾವು ಕೇಂದ್ರ ಸರ್ಕಾರಕ್ಕೆ ಈ ಒಂದು ಅಧಿಕಾರವನ್ನು ಕೊಡತಕ್ಕಂಥಾದಕ್ಕೆ ಈ ಮನೆ ಮತ್ತು ಈ ಸರ್ಕಾರ ಒಪ್ಪಕೂಡದು ಎನ್ನತಕ್ಕಂಥ ಮಾತನ್ನು ನಾನು ಖಂಡತುಂಡವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸ್ವಾಮಿ, ತಾವೇನೋ ಕೆಲವು ಉದ್ದೇಶದಿಂದ ಕೆಲಸ ಮಾಡಿದಿರಿ. ಆದರೆ ನಿಮ್ಮ ಉದ್ದೇಶಗಳನ್ನು ಒಂದೊಂದು ಸಾರಿ ದುರುಪಯೋಗ ಮಾಡಿಕೊಳ್ಳತಕ್ಕಂಥ ಸನ್ನಿವೇಶ ಕೂಡ ಬರುತ್ತದೆ. ತಾವು ೧೯೮೧ ರ ಜನವರಿಯಲ್ಲಿ ವಿಧಾನ ಮಂಡಲದಲ್ಲಿ ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದಲ್ಲಿ ಅವರ ಬಾಯಿಂದ ಒಂದು ಮಾತನ್ನು ಹೇಳಿಸಿದ್ದೀರಿ. ಅದು ಈ ರೀತಿ ಇದೆ.

> "ರಾಜ್ಯದಲ್ಲಿ ಹೊಸ ನೀರಾವರಿ ಯೋಜನೆಗಳನ್ನು ಕೈಗೊಳ್ಳುವಲ್ಲಿ ಸರ್ಕಾರಕ್ಕೆ ನೆರವು ನೀಡಲು ಮತ್ತು ಈಗಿರುವ ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿ ಕೊಳ್ಳುವ ದೃಷ್ಟಿಯಿಂದ ಸರ್ಕಾರ ಒಂದು ನೀರಾವರಿ ಸಲಹಾ ಮಂಡಲಿಯನ್ನು ರಚಿಸಿದೆ. ಧೀರ್ಘಕಾಲದಿಂದ ಮುಂದುವರಿದುಕೊಂಡು ಬಂದಿರುವ ಕಾವೇರಿ ಜಲವಿವಾದ ಮತ್ತು ಈ ಜಲಾನಯನ ಪ್ರದೇಶಗಳಿರುವ ರಾಜ್ಯಗಳಿಗೆ ನ್ಯಾಯ ದೊರೆಯುವಂತೆ ಮಾಡಲು ಈ ಮಂಡಲಿಯ ಸೇವೆ ನನ್ನ ಸರ್ಕಾರಕ್ಕೆ ದೊರೆಯಲಿದೆ"

ಅವರ ಬಾಯಿಂದ ನೀವು ಈ ಮಾತನ್ನು ಹೇಳಿಸಿದ್ದೀರಿ. ಇದರ ಬಗ್ಗೆ ನಿನ್ನೆಯ ದಿವಸ ಡಾಕ್ಟರ್ ತಿಮ್ಮೇಗೌಡರು ಬಹಳ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದರು.

ನಾನು ಈ ಬಗ್ಗೆ ಸೂಕ್ಷ್ಮವಾಗಿ ಪ್ರಸ್ತಾಪ ಮಾಡುತ್ತೇನೆ. ರಾಜ್ಯದ ನೀರಾವರಿ ಸಲಹಾ ಸಮಿತಿಯ ಅಧ್ಯಕ್ಷರು ಟ್ರಿಬ್ಯೂನಲ್‌ಗೆ ಹೋಗಬೇಕೆಂದು ಹೇಳಿದ್ದಾರೆ. ಅವರಿಗೆ ಅಧಿಕಾರವನ್ನು ಕೊಟ್ಟವರು ಯಾರು ? ಹಿಂದೊಮ್ಮೆ ಇದೇ ರೀತಿಯ ನೀರಾವರಿ ಸಲಹಾ ಮಂಡಲಿ ಅಧ್ಯಕ್ಷರು ವ್ಯಾಪ್ತಿ ಮೀರಿ ಹೇಳಿಕೆ ಗೊಂದಲ ಮಾಡಿದ್ದರು. ಮತ್ತು ಹಿಂದೆ ಇದ್ದಂತಹ ಮಾನ್ಯ ಮುಖ್ಯಮಂತ್ರಿಗಳು ೧೯೭೭ರಲ್ಲಿ ದುರ್ದೈವವಶಾತ ತೆಗೆದುಕೊಂಡಂತಹ ನಿಲುವನ್ನು ಎಂದರೆ the entire Opposition stood with the then Government ಆದ್ದರಿಂದ ನಾನು ಈಗ ಅದರ ಕ್ರೆಡಿಟ್ ತೆಗೆದುಕೊಳುವುದಕ್ಕೆ ಹೋಗುತ್ತಿಲ್ಲ. ದುರಾದೃಷ್ಟವಶಾತ್ ಇದರ ಬಗ್ಗೆ ಈ ನಿರ್ಣಯವನ್ನು ನಮ್ಮ ರಾಜ್ಯ ತೆಗೆದುಕೊಂಡಿದ್ದರೆ ಅದನ್ನು ಸವಿಸ್ತಾರವಾಗಿ ನಡೆಸಿಕೊಂಡು ಬರುತ್ತಿದ್ದಂತಹ ಘಟನೆಯನ್ನು ನಾವು ನೋಡುತ್ತಿಲ್ಲ ಎನ್ನುವ ನಾನು ಮಾತನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ಆದರೆ ನಾನು ಒಂದು ಮಾತನ್ನು ತಿಳಿಸಲು ಇಷ್ಟಪಡುತ್ತೇನೆ ಅದು ಏನೆಂದರೆ ಎಲ್ಲಾ ವಿರೋಧಪಕ್ಷಗಳ ನಾಯಕರನ್ನು ಬರಮಾಡಿಕೊಂಡು ಹಿಂದೆ ಇದ್ದಂತಹ ಮುಖ್ಯಮಂತ್ರಿಗಳು ಒಂದು ಸಭೆಯನ್ನು ನಡೆಸಿ ಆಗುತ್ತಿದ್ದ ಅನಾಹುತವನ್ನು ಸರ್ಕಾರದ ಗಮನಕ್ಕೆ ತಿಳಿಸಿದ್ದೇವೆ. ಆಗ ಈ ಅನಾಹುತಗಳಿಂದ ಪಾರಾಗುವುದಕ್ಕೆ ಸಾಧ್ಯವಾಯಿತು. ಇದಕ್ಕೆ ಏನಾದರೂ ತಮಿಳುನಾಡಿನಲ್ಲಿ ಚುನಾಯಿತ ಪ್ರತಿನಿಧಿಗಳೋ ಅಥವಾ ಯಾವುದೇ ಚುನಾಯಿತ

ಪಕ್ಷದ ನಾಯಕರುಗಳು ಚುನಾಯಿತ ಸರ್ಕಾರ ಇದ್ದಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಒಪ್ಪಿ ರುಜು ಮಾಡಿದ್ದರೆ ಪರಿಣಾಮ ಬೇರೆಯಾಗುತ್ತಿತ್ತು. ಆದರೆ ರಾಜ್ಯಪಾಲರು ಈ ನಿರ್ಣಯಕ್ಕೆ ಒಪ್ಪದೆ ತಮ್ಮ ಮುದ್ರೆಯನ್ನು ಹಾಕಲು ಹಿಂದೆ ಸರಿಸರು. ಆಗ ಅವರು ರುಜು ಮಾಡಲಿಲ್ಲ. I do not want to take the responsibility. Let the elected Government take the responsibility. ಆದ್ದರಿಂದ ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಸ್ವಲ್ಪ ಗುಟುಕು ಉಳಿದು ಕೊಂಡಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಚರ್ಚೆಯನ್ನು ಮಾಡಿದ್ದಾರೆ. ಮತ್ತು ಈ ಒಂದು ವಿವಾದನ್ನು ಕೇಂದ್ರಸರ್ಕಾರದ ತೀರ್ಮಾನಕ್ಕೆ ಕಳುಹಿಸಿಕೊಟ್ಟಿದ್ದಾರೆ ತಾವು ಈಗಾಗಲೇ ೧೦ ಅಂಶಗಳನ್ನು ಕೇಂದ್ರ ಸರ್ಕಾರದ ಮುಂದೆ ಇಟ್ಟಿದ್ದೀರಿ ಪಾರ್ಲಿಮೆಂಟ್ ಸದಸ್ಯರು ಸಹಾ ಕರ್ನಾಟಕದಿಂದ ೧೦ ಅಂಶಗಳನ್ನು ಕೇಂದ್ರ ಸರ್ಕಾರದ ಮುಂದೆ ಇಟ್ಟಿದ್ದಾರೆ ಈ ಸನ್ನಿವೇಶದಲ್ಲಿ ರಾಜ್ಯಪಾಲರು ಮಾಡ ಬೇಕಾದಂತಹ ಸನ್ನಿವೇಶವಾದರು ಏನಿತ್ತು ? ಆದರೂ ರಾಜ್ಯಪಾಲರಿಗೆ ಇಂತಹ ಒಂದು ಸನ್ನಿವೇಶ ಇದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಮ್ಮ ಅಂತಿಮ ತೀರ್ಮಾನವನ್ನು ಮಾಡ ಬೇಕಾದರೆ ಎಲ್ಲಾ ವಿರೋಧಪಕ್ಷಗಳ ನಾಯಕರ ಆಶ್ವಾಸವನ್ನು ತೆಗೆದುಕೊಂಡು ವಿರೋಧಪಕ್ಷಗಳ ನಾಯಕರ ಜೊತೆಯಲ್ಲಿ ಚರ್ಚೆ ಮಾಡಿ ಕೇಂದ್ರ ಸರ್ಕಾರಕ್ಕೆ ಒಂದು ನಿರ್ಣಯವನ್ನು ಕಳುಹಿಸಿಕೊಡುವ ಪ್ರಯತ್ನ ಇದುವರಿವಿಗೂ ಸಹಾ ಸಾಧ್ಯವಾಗುತ್ತಿಲ್ಲ. ಈ ನೀರಾವರಿ ಮಂಡಲಿ ಟ್ರಿಬ್ಯೂನಲ್‌ಗೆ ಹೋಗಬೇಕೆಂದು ಆದೇಶವನ್ನು ಕೊಟ್ಟವರು ಯಾರು? ಅಂತಹ ಪರಿಣತರಿಗೆ ಇದರ ಬಗ್ಗೆ ಹೆಚ್ಚು ಪರಿಶ್ರಮವಿರಬೇಕು ? ಅವರು ತಿಳಿವಳಿಕೆಯುಳ್ಳ ಮಂತ್ರಿಗಳ ಜೊತೆಯಲ್ಲಿ ಕೆಲಸ ಮಾಡಿರುತ್ತಾರೆ. ನೀರಾವರಿ ಇಲಾಖೆಯಲ್ಲಿ ಕೆಲಸಮಾಡಿರುತ್ತಾರೆ? ಆದ್ದರಿಂದ ಅವರ ಒಪ್ಪಿಗೆಯನ್ನು ಪಡೆದುಕೊಳ್ಳುವುದಕ್ಕೆ ವ್ಯಾಪ್ತಿಯಲ್ಲಿ ಬರುವು ದಿಲ್ಲವೇನು? ಆದ್ದರಿಂದ ಆಗಿರತಕ್ಕಂತಹ ಸಾಧಕಭಾಧಕಗಳನ್ನು ಯೋಚನೆ ಮಾಡುವುದಕ್ಕೆ ಈ ನಿರ್ಣಯದ ಬಗ್ಗೆ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು. ಎಂದು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಇನ್ನು ಬಹುಶಃ ಈ ವಿಷಯದ ಮೇಲೆ ಸುಮಾರು ೧ ಗಂಟೆ ಚರ್ಚೆಯಾಗಿದೆ. ಆದ್ದರಿಂದ ಇದನ್ನು ಮಾನ್ಯ ಮಂತ್ರಿಗಳು ಅರ್ಥಮಾಡಿಕೊಳ್ಳಬೇಕು. ಈ ೧೦ ಅಂಶಗಳ ಕಾರ್ಯಕ್ರಮವನ್ನು ರಾಜ್ಯಸರ್ಕಾರ ಏನು ಇಟ್ಟುಕೊಂಡಿದೆ ಇದನ್ನು ಕೇಂದ್ರ ಸರ್ಕಾರ ಇವತ್ತಿನ ದಿವಸ ತಿರಸ್ಕಾರ ಮಾಡಿ ದಂತಹ ಪ್ರಶ್ನೆ ಇಲ್ಲಿ ಉದ್ಭವವಾಗುತ್ತಿದೆ. ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಂತಹ ೧೦ ಅಂಶ ಗಳ ಮೇಲೆ ಕೇಂದ್ರಸರ್ಕಾರದವರು ಏನಾದರೂ ಅಂತಿಮ ತೀರ್ಮಾನವನ್ನು ತೆಗೆದುಕೊಂಡಿದ್ದಾರೆಯೇ? ಎಂಬುದನ್ನು ಸರ್ಕಾರ ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ? ಇದನ್ನು ಕೇಂದ್ರ ಸರ್ಕಾರ ಮಾಡದಿದ್ದರೆ ನಾವು ರಾಷ್ಟ್ರಮಟ್ಟದಲ್ಲಿ ಕರ್ನಾಟಕ ರಾಜ್ಯದಿಂದ ನಮ್ಮ ಎಲ್ಲಾ ಬೇಡಿಕೆಗಳು ಕಾರ್ಯಗತವಾಗುವ ತನಕ ಲಾಭ ಮಾಡಬೇಕಾಗುತ್ತದೆ. ಈ ಘಟನೆಯನ್ನು ಸುಮಾರು ೩೦ ವರ್ಷಗಳಿಂದ ಯಾರು ಮಾಡಿರಲಿಲ್ಲ. ಬಹುಶಃ ಕೇಂದ್ರ ಸರ್ಕಾರದಲ್ಲಿರತಕ್ಕಂತ ಪ್ರಧಾನಮಂತ್ರಿಗಳಿಗೆ ಕರ್ನಾಟಕ ರಾಜ್ಯದ ಜನತೆಯ ಮೇಲೆ ವಿಶ್ವಾಸವಿಲ್ಲವೇನು. ಈ ಕರ್ನಾಟಕ ರಾಜ್ಯದ ಇಡೀ ಜನತೆ ಒಂದು ಹೊಸದಾದ ಆಂದೋಳನವಾಗಿ ಪರಿವರ್ತನೆಯಾಗಬಹುದು. ಇಡೀ ಕರ್ನಾಟಕದ ಮಹಾ ಜನತೆ ಒಬ್ಬ ಮುಖಂಡನನ್ನು ನಂಬಿದೆ. ಎನ್ನುವ ಒಂದು ಮಾತನ್ನು ಹೇಳಬೇಕು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳು ತ್ತೇನೆ. ಇವತ್ತು ತಮಿಳುನಾಡು ಮತ್ತು ಆಂದ್ರಪ್ರದೇಶ ಇದರಲ್ಲಿ ಬಹು ಪಾಲು ಲಾಭವನ್ನು ಪಡೆ ಯುತ್ತಿವೆ. ಇವತ್ತು ಕಾವೇರಿ ನದಿಗಳ ನೀರಿನಿಂದ ಕೇರಳ ರಾಜ್ಯ ಮತ್ತು ತಮಿಳುನಾಡು ಹೆಚ್ಚು ಲಾಭ ಪಡೆಯುತ್ತಿದೆ. ಎಂದು ನಾನು ಸುಮಾರು ೩೦ ವರ್ಷಗಳಿಂದ ಹೇಳಿಕೊಂಡು ಬರುತ್ತಿದ್ದೇನೆ. ಸುಮಾರು 56% unutilised potential ಇದೆ. ಗಂಗಾನದಿಯ ನೀರನ್ನು ಕಾವೇರಿ ಕಣಿವೆಗೆ ಬರತಕ್ಕಂತಹ ಒಂದು ಯೋಜನೆಯನ್ನು perspective planning ನಲ್ಲಿ ಈಗಾಗಲೇ ಮಾರ್ಪಾಡು ಮಾಡುವ ನಿರ್ಣಯವನ್ನು ಮಾಡಿದ್ದಾರೆ. ಗಂಗಾನದಿ ನೀರನ್ನು ಲಿಫ್ಟ್ ಮಾಡುವ ಮೂಲಕ ಮಾಡ ಬೇಕು ಎಂದು ಹೇಳಿದರು. ಇದರಿಂದ ಗೋದಾವರಿ ನದಿಗೂ ಕಾವೇರಿ ನದಿಗೂ ಲಿಂಕ್ ಮಾಡಬೇಕೆಂದು ಇತ್ತು. ಮತ್ತು ಗಂಗಾನದಿಯ ನೀರು ಗೋದಾವರಿಗೆ ಹೋಗುವ ಒಂದು ಹೊಸ ಸ್ವರೂಪವನ್ನು ಕೊಡತಕ್ಕಂತಹ ಯೋಜನೆಯನ್ನು ಮಾಡಿ ಗಂಗಾ ನದಿಯ ನೀರನ್ನು ಮಹಾನದಿಯಾದ ಕೃಷ್ಣಾ ನದಿಗೆ ಬಿಟ್ಟು ಅಲ್ಲಿ ಒಂದು ಅಣೆಕಟ್ಟು ಕಟ್ಟಬೇಕು. ಇಲ್ಲದಿದ್ದರೆ ಕರ್ನಾಟಕದಲ್ಲಿ ಅಭಿವೃದ್ಧಿಯಾಗುವುದಿಲ್ಲ. ಇವತ್ತು ತಾವು ಈ ನಿಯಮವನ್ನು ಪಾಲಿಸಿ ಕೊಂಡು ಪ್ರಯತ್ನ ಮಾಡುವುದಾದರೆ ತಾವು ಒಳ್ಳೆಯ ಕೆಲಸವನ್ನು ಮಾಡುವಂತಹ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ ಎಂದು ಹೇಳಬಹುದು. ಇನ್ನೊಂದು ಜಟಿಲವಾದ ವಿಷಯವೆಂದರೆ ಇವತ್ತು ನಿಮ್ಮ ಎಲ್ಲಾ ಸಲಹೆಗಾರರನ್ನು ಖಾಸಗಿಯವರನ್ನು

ನೇಮಕ ಮಾಡಿದ್ದೀರಿ. ಆದರೆ ಇಲ್ಲಿ ಎಲ್ಲಾ ಮಂಡಲಿಗಳಲ್ಲಿ ಖಾಸಗೀ ಸಲಹಾ ಮಂಡಲಿಯ ಅಧ್ಯಕ್ಷರನ್ನು ಇಟ್ಟುಕೊಂಡಿದ್ದೀರಿ. ಹೆಚ್ಚು ಶ್ರಮಪಡುವಂತಹ ಮತ್ತು ಹೆಚ್ಚು ಪರಿಶ್ರಮ ಹೊಂದಿರುವಂತಹ ಅಧಿಕಾರಿಗಳು ಇರುತ್ತಾರೆ ಅವರನ್ನು ನೇಮಿಸಿಕೊಳ್ಳಿ. ಅವರಲ್ಲಿಯೂ ಹೆಚ್ಚು ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡುವವರಿದ್ದಾರೆ. ಅವರ ಚಾರಿತ್ರವನ್ನು ಯಾರೂ ಪ್ರಶ್ನೆ ಮಾಡುವುದಿಲ್ಲ. ಅವರು ಕಾನೂನು ಮನಗಂಡು ಪರಿಶ್ರಮ ಬಾಳ್ವೆಯನ್ನು ನಡೆಸುತ್ತಾರೆ. even the worst enemy of this country cannot question his bonafides. ಅವರಿಗೆ ಯೋಚನೆ ಮಾಡುವ ಶಕ್ತಿ ಇಲ್ಲವೇನು. ಅಂತಹ ಜನರ ಬಗ್ಗೆ ತಾವು ಸ್ವಲ್ಪ ಜಾಗರೂಕತೆಯನ್ನು ವಹಿಸಬೇಕು. ಎಂದು ನಾನು ಈ ಸಂದರ್ಭದಲ್ಲಿ ಸೂಚನೆಯನ್ನು ಕೊಡಬಯಸುತ್ತೇನೆ. ಕೇಂದ್ರ ಸರ್ಕಾರದ ಮೇಲುನೋಟಕ್ಕೆ ಈ ವಿಷಯ ಹೋಗಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ವಿರೋಧಪಕ್ಷಗಳ ಮುಖಂಡರನ್ನು ಕರೆಯಿಸಿ ಅವರ ಜೊತೆಯಲ್ಲಿ ಚರ್ಚೆ ಮಾಡಿ ಎಲ್ಲಾ ವಿರೋಧ ಪಕ್ಷಗಳ ನಾಯಕರ ವಿಶ್ವಾಸವನ್ನು ತೆಗೆದುಕೊಂಡು ಮಾಡಿದರೆ ಒಳ್ಳೆಯದೆಂದು ನಾನು ಈ ಸಂದರ್ಭದಲ್ಲಿ ಸೂಚನೆ ಕೊಟ್ಟು ಈವಿಷಯವನ್ನು ಇಲ್ಲಿಗೆ ನಿಲ್ಲಿಸುತ್ತೇನೆ.

೩–೦೦ ಪಿ.ಎಂ.

ಸ್ವಾಮಿ, ಈಗ ನಮ್ಮ ರಾಜ್ಯದಲ್ಲಿ ನಡೆಯುತ್ತಿರುವ ಕೆಲಸಗಳನ್ನೆಲ್ಲಾ ಮುಗಿಸಲು ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದರೆ ೧೯೮೦–೮೧ರಲ್ಲಿ ಏನು ಹಣ ಇಟ್ಟಿದ್ದರು ಅದಕ್ಕಿಂತ ಕಡಿಮೆ ಹಣವನ್ನು ಈ ಸಲ ನಮ್ಮ ಅರ್ಥಸಚಿವರು ಈ ನಮ್ಮ ಯೋಜನೆಗಳಿಗೆ ಇಟ್ಟಿದ್ದಾರೆ. ಅವರು ಮಂಗಳೂರು ಕಡೆಯವರು. ಆದಕಾರಣ ಅವರಿಗೆ ಕನ್ನಡ ಭಾಷೆ ಚೆನ್ನಾಗಿ ಬರುವುದಿಲ್ಲ, ತುಳು ಮಿಶ್ರ ಮಾಡಿ ಮಾತನಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಅವರ ಆಯವ್ಯಯ ಭಾಷಣವನ್ನು ನೋಡಿದರೆ ಬಾಷೆಯ ಮೇಲೆ ನಮ್ಮೆಲ್ಲರಿಗಿಂತ ಹೆಚ್ಚಿನ ಹಿಡಿತ ಇರುವುದು ಕಂಡುಬರುತ್ತದೆ. ಅವರು ನೀರಾವರಿ ವಿಷಯದಲ್ಲಿ ೧೯೮೦ರಲ್ಲಿ ಈ ರೀತಿ ಹೇಳಿದ್ದಾರೆ.—

"...... ನೀರಾವರಿಯಾಗುವ ಹೊಸ ಪ್ರದೇಶಗಳಲ್ಲಿ ಅತಿ ಕಡಿಮೆ ಸಮಯದಲ್ಲಿ ಶೀಘ್ರ ಹಾಗೂ ಹೆಚ್ಚಿನ ಪ್ರಯೋಜನೆಗಳನ್ನು ಪಡೆಯಲು ಹಣ ವಿನಿಯೋಗದ ಕಾರ್ಯಕ್ರಮವನ್ನು ಹಾಕಿ ಕೊಳ್ಳಲಾಗದೆ................"

ಎಂದು ಹೇಳಿದ್ದಾರೆ. ಸಂತೋಷ. ಇದೇ ಅವಧಿಯಲ್ಲಿ ಏನು ಕಾರ್ಯಸಾಧನೆ ಮಾಡಲಾಯಿತು ಎಂದು ಹೇಳುವುದಕ್ಕೆ ಮಾನ್ಯ ಚಿಮ್ಮನಕಟ್ಟಿಯವರಿಗೆ ಸ್ವಲ್ಪ ಕಷ್ಟವಾಗಬಹುದು. ಅವರ ಬಗ್ಗೆ ನಾನೇನು ಹೇಳುವುದಿಲ್ಲ. ಆದಕಾರಣ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೇ ಉತ್ತರ ಕೊಡಬೇಕೆಂದು ಅಪೇಕ್ಷೆ ಮಾಡುತ್ತೇನೆ. ಅದೇ ೧೯೮೧ರ ಆಯವ್ಯಯ ಭಾಷಣದಲ್ಲಿ ಮಾನ್ಯ ಆರ್ಥಿಕ ಮತ್ರಿಗಳು ಈ ರೀತಿ ಹೇಳಿದ್ದಾರೆ.—

" ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಯೋಗಾವಕಾಶ ಮತ್ತು ವರಮಾನವನ್ನು ಅಧಿಕಗೊಳಿಸಲು ರಾಜ್ಯದಲ್ಲಿ ನೀರಾವರಿ ಮತ್ತು ವಿದ್ಯುಚ್ಛಕ್ತಿ ಅಭಿವೃದ್ಧಿ ಕಾರ್ಯಕ್ರಮಕ್ಕೆ ನಮ್ಮ ಸರ್ಕಾರವು ಆದ್ಯತೆ ನೀಡುವುದನ್ನು ಮುಂದುವರಿಸಲಾಗುತ್ತದೆ."

ಎಂದು ಹೇಳಿದ್ದಾರೆ. ಇದರ ಜೊತೆಗೆ ನಿಮ್ಮ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ೧.೫ ಲಕ್ಷ ಹೆಕ್ಟಾರ್ ಪ್ರದೇಶವನ್ನು ಹೊಸದಾಗಿ ನೀರಾವರಿಗೆ ಒಳಪಡಿಸಲಾಗುತ್ತದೆಂದು ಹೇಳಿದ್ದೀರಿ. ಮತ್ತು ೧೯೮೧–೮೨ರಲ್ಲಿ ಮತ್ತೆ ಒಂದು ಲಕ್ಷ ಹೆಕ್ಟಾರ್ ಪ್ರದೇಶವನ್ನು ನೀರಾವರಿಗೆ ಒಳಪಡಿಸಲಾಗುವುದು ಎಂದು ಹೇಳಿದ್ದೀರಿ. ತಮ್ಮ ಒಂದು ವಾರ್ಷಿಕ ವರದಿಯಲ್ಲಿ ಇದನ್ನೆಲ್ಲಾ ಹೇಳಿದ್ದೀರಿ. ನಮ್ಮ ಯೋಜನೆಗಳನ್ನು ಜಾಗ್ರತೆ ಮುಗಿಸಲು ರಾಜ್ಯಸರ್ಕಾರಕ್ಕೆ ಸಾಕಷ್ಟು ಹಣ ಇದೆ ಎಂದು ನಾನು ಹೇಳುವುದಿಲ್ಲ. ಮತ್ತು ಸುಳ್ಳು ನೋಟ್‌ಗಳನ್ನು ಪ್ರಿಂಟ್ ಮಾಡಿಸಿ ಹಂಚುವುದಕ್ಕೂ ಸಹ ಸಾಧ್ಯವಾಗುವುದಿಲ್ಲ. ಈ ಹಿಂದಿನ ಮುಖ್ಯಮಂತ್ರಿಗಳು ನೋಟ್ ಪ್ರಿಂಟ್ ಮಾಡುವ ಅಧಿಕಾರ ನನ್ನ ಕೈಗೆ ಬಂದರೆ ೪೦೦–೫೦೦ ಕೋಟಿ ರೂ.ಗಳನ್ನು ಪ್ರಿಂಟ್ ಮಾಡಿಸಿ ಎಲ್ಲ ಪ್ರಾಜೆಕ್ಟ್‌ಗಳಿಗೂ ಹಣ ಕೊಡುತ್ತೇನೆಂದು ಹೇಳಿದರು, ಆದರೆ ಅವರಿಗೆ ಅಧಿಕಾರ ಕೊಡಲಿಲ್ಲ. ನೀವು ಆ ಒಂದು ಅಧಿಕಾರವನ್ನು ಏನೂ ಅಪೇಕ್ಷೆ ಮಾಡಲಿಲ್ಲ. ಆದರೆ ನಿಮ್ಮ ವಾರ್ಷಿಕ ವರದಿ ಏನಿದೆ, ಇದರಲ್ಲಿ ನಮ್ಮ ರಾಜ್ಯದ ಯೋಜನೆಗಳ ಬಗ್ಗೆ ತಾವು ಏನು ಒಂದು ಉದ್ದೇಶ

ಇಟ್ಟುಕೊಂಡಿದ್ದೀರಿ, ಅದನ್ನು ಯಾವ ರೀತಿ ಸಾಧನೆ ಮಾಡುತ್ತೀರಿ ಎಂದು ನಾನು ತಮ್ಮಲ್ಲಿ ಕೇಳಬಯಸುತ್ತೇನೆ? ಈಗ ಎಕ್ಸೈಜ್ ಬಾಬಿನಲ್ಲಿ ಸುಮಾರು ೪೦ ಕೋಟಿ ರೂ.ಗಳಷ್ಟು ಹೆಚ್ಚಿನ ಉತ್ಪಾದನೆ ಆಗಿದೆ. ಕಳೆದ ವರ್ಷ ಕೂಡ ೧೮ ರಿಂದ ೨೦ ಕೋಟಿ ರೂ.ಗಳಷ್ಟು ಅಧಿಕ ವರಮಾನ ಈ ಬಾಬಿನಿಂದ ಬಂದಿತ್ತು. ಇದಕ್ಕೂ ಮೊದಲು ಅಂದರೆ ೧೯೭೨ ರಿಂದ ೧೯೭೮ರವರೆಗೆ ಈ ಬಾಬಿನಿಂದ ಬರುವ ಹಣವೆಲ್ಲಾ ಸೋರಿ ಹೋಗುತ್ತಿದೆ ಎಂದು ನಾನು ಇದೇ ಸಭೆಯಲ್ಲಿ ಆಪಾದನೆ ಮಾಡಿದ್ದೇನೆ. ಆದರೆ ಇವೊತ್ತು ಈ ಬಾಬಿನಿಂದ ಏನು ಅಧಿಕ ವರಮಾನ ಬಂದಿದೆ, ಅದನ್ನು ಈ ಯೋಜನೆಗಳಿಗೆ ಖರ್ಚು ಮಾಡಿದ್ದೇ ಆದರೆ ಆದರಿಂದ ಈ ರಾಜ್ಯದ ಅಭ್ಯುದಯವಾಗುವುದಿಲ್ಲವೆ? ಏಕೆಂದರೆ, ಗ್ರಾಮಾಂತರ ಪ್ರದೇಶದ ಜನತೆಯ ಆರ್ಥಿಕ ಪ್ರಗತಿಯೇ ಈ ದೇಶದ ಜೀವನಾಡಿ ಎಂದು ನಿಮ್ಮ ಭಾಷಣದಲ್ಲಿ ಹೇಳಿದ್ದೀರಿ. ಆದರೆ ಅದನ್ನು ಕಾರ್ಯಗತಗೊಳಿಸುವಾಗ ಕಳೆದವರ್ಷಕ್ಕಿಂತ ಹೆಚ್ಚಿನ ಹಣ ತೊಡಗಿಸುವುದಕ್ಕೆ ಬದಲು ಕಡಿಮೆ ತೊಡಗಿಸಲು ಕಾರಣವೇನು ಇದರಿಂದ ನಿಮ್ಮ ಮಾತಿಗೂ ಮತ್ತು ಕೃತಿಗೂ ವ್ಯತ್ಯಾಸವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಆರ್ಥಿಕ ಮಂತ್ರಿಗಳು ಕಳೆದ ವರ್ಷ ತಮ್ಮ ಆಯುವ್ಯಯ ಭಾಷಣದಲ್ಲಿ ಏನು ಹೇಳಿದ್ದಾರೆಂಬುದನ್ನು ನಾನು ಈ ಮೊದಲೇ ಹೇಳಿದ್ದೇನೆ. ಅದರ ಜೊತೆಗೆ ಕಳೆದ ವರ್ಷ ಒಂದು ಯೋಜನೆಗೂ ಇವರು ಎಷ್ಟೆಷ್ಟು ಹಣ ಇಟ್ಟಿದ್ದರು ಎಂಬ ಬಗ್ಗೆ ಮಾನ್ಯ ಬೊಮ್ಮಾಯಿ ಅವರ ಪ್ರಶ್ನೆಗೆ ಉತ್ತರವಾಗಿ ಇವೊತ್ತು ತಿಳಿಸಿದ್ದಾರೆ. ಈ ರೀತಿ ಕೊಟ್ಟ ಹಣ ಯಾವ ರೀತಿ ವಿನಿಯೋಗವಾಗುತ್ತಿದೆ ಎಂಬುದನ್ನು ನೋಡಿದಾಗ ತಾವು ತಮ್ಮ ಇಲಾಖೆಯಲ್ಲಿರುವಂತಹ ಕೆಲವು ದೋಷಗಳನ್ನು ತಿದ್ದುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಈ ದಿಶೆಯಲ್ಲಿ ಕೆಲವು ಅಧಿಕಾರಿಗಳ ಮೇಲೆ ರೈಡ್ ನಡೆದಿದೆ. ಆದರೆ ನಾನು ತಮ್ಮಲ್ಲಿ ನೇರವಾಗಿ ನಾನು ಒಂದು ಪ್ರಶ್ನೆ ಕೇಳುವುದೇನೆಂದರೆ, ಪ್ರತಿಯೊಂದು ಯೋಜನೆಗೂ ಸಹ ಆದರ ಒಂದು ಗಾತ್ರಕ್ಕೆ ತಕ್ಕಂತೆ ಹಣ ಕೊಟ್ಟಿದ್ದೀರಾ ಎಂದು ಈ ವಿಚಾರದಲ್ಲಿ ಯಾವ ರೀತಿ ಪ್ಲಾನಿಂಗ್ ಮಾಡಬೇಕು ಎಂಬ ಬಗ್ಗೆ ನಿಮ್ಮ ಅಧಿಕಾರಿಗಳು ಅಯಶಸ್ವಿಯಾಗಿದ್ದಾರೆಂದರೆ ತಪ್ಪಾಗಲಾರದು, ಮಾನ್ಯ ಆರ್ಥಿಕ ಮಂತ್ರಿಗಳು ಎಲ್ಲಾ ಪ್ರಾಜೆಕ್ಟ್‌ಗಳನ್ನೂ ನೋಡಿಕೊಂಡು ಬಂದರು ಎಂದು ಪತ್ರಿಕೆಗಳಲ್ಲಿ ವರದಿ ಬಂದಿದೆ. ಅದರ ನಂತರ ಏನು ಕ್ರಮ ತೆಗೆದುಕೊಂಡರೆಂಬದು ತಿಳಿದುಬರಲಿಲ್ಲ. ಯಾವ ಯಾವ ಪ್ರಾಜೆಕ್ಟ್‌ಗಳ ಹಿಂದೆ ಕಳೆದವರ್ಷ ಎಷ್ಟು ಎಕರೆ ಜಮೀನನ್ನು ನೀರಾವರಿಗೆ ಒಳಪಡಿಸಿದಿರಿ ಎಂಬುದನ್ನು ತಾವು ತಮ್ಮ ಉತ್ತರದಲ್ಲಿ ತಿಳಿಸಬೇಕಾಗುತ್ತದೆ. ತಾವು ಈ ರಾಜ್ಯದಲ್ಲಿ ಹಲವಾರು ನೀರಾವರಿ ಯೋಜನೆಗಳನ್ನು ಉದ್ಘಾಟನೆ ಮಾಡುವುದರ ಮೂಲಕ ಈ ರಾಜ್ಯದ ಜನತೆಗೆ ನೀರಾವರಿ ಸೌಲಭ್ಯ ಒದಗಿಸಿಕೊಡುವ ಒಂದು ನಿರ್ಣಯ ಮಾಡಿದ್ದೀರಿ. ಕಳೆದವರ್ಷ ಹೇಮಾವತಿಗೆ ೧೦ ಕೋಟಿ ರೂ.ಗಳನ್ನು ಖರ್ಚು ಮಾಡಿದಿರಿ. ಈ ಯೋಜನೆ ಕೆಳಗೆ ಎಷ್ಟು ಎಕರೆ ಜಮೀನನ್ನು ಹೊಸದಾಗಿ ನೀರಾವರಿಗೆ ತರಲಾಯಿತೆಂಬುದನ್ನು ತಾವು ತಿಳಿಸಬೇಕು. ಇದೇ ವಿಚಾರದಲ್ಲಿ ನಾನು ಟೀಕೆ ಮಾಡುವುದಿಲ್ಲ, ಆದರೆ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ನಮ್ಮ ಸರ್ಕಾರದ ಮೇಲೆಯೇ ಧಾಳಿ ಮಾಡುವ ಪ್ರಶ್ನೆ ಇಲ್ಲಿ ಬರುವುದಿಲ್ಲ. ಮಾನ್ಯ ದೇವೇಗೌಡರು ೨೫ ಸಾವಿರ ಎಕರೆಗೆ ನೀರು ಬರುವುದಕ್ಕೆ ತಡೆ ಹಾಕಿದರು ಎಂಬ ಸುದ್ದಿ ಪತ್ರಿಕೆಗಳಲ್ಲಿ ಬಂತು. ಅದಕ್ಕೆ ಅವರು ಕೊಟ್ಟ ಕಾರಣವೆಂದರೆ, ಮಾನ್ಯ ದೇವೇಗೌಡರ ಅಭಿಮಾನಿಯೊಬ್ಬರಿಗೆ ಕಂಟ್ರಾಕ್ಟ್ ಕೆಲಸ ಕೊಡಲಿಲ್ಲವೆಂಬ ಕಾರಣದಿಂದ ಮಾನ್ಯ ದೇವೇಗೌಡರು ಆ ಕೆಲಸವನ್ನು ತಡೆಹಿಡಿಸಿದರು ಎಂದು ಪತ್ರಿಕೆಗಳಲ್ಲಿ ಬರೆದಿದ್ದಾರೆ. ಈ ಒಂದು ಅಂಶವನ್ನು ತುಂಬಾ ಹಾಸ್ಯಾಸ್ಪದ ರೀತಿಯಿಂದ ಬರೆದಿದ್ದಾರೆ. ಬರೆಯಲಿ, ಸಂತೋಷ. ಆದರೆ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಕೆಲವು ಸೀಮಿತ ಪ್ರದೇಶಗಳಿಗೆ ಸಂಬಂಧಪಟ್ಟಂತೆ ೧೮ ಟೆಂಡರ್‌ಗಳನ್ನು ಸಂಶಯಾಸ್ಪದ ರೀತಿಯಲ್ಲಿ ಕೊಡತಕ್ಕಂಥ ಒಂದು ಪ್ರಯತ್ನ ನಡೆದಾಗ ನಾನು ಮುಖ್ಯಮಂತ್ರಿಗಳಿಗೆ ಕಾಗದ ಬರೆದಿದ್ದು ನಿಜ ಮತ್ತು ಅವರನ್ನು ಖುದ್ದಾಗಿ ಭೇಟಿ ಮಾಡಿ ಹೇಳಿದ್ದೂ ನಿಜ. ಈ ಬಗ್ಗೆ ವಿಚಾರ ಮಾಡಿ ಎಂದು ಅವರಿಗೆ ಹೇಳಿದ್ದು ನಿಜ. ಏಕೆಂದರೆ, ನಾನು ಆ ಕ್ಷೇತ್ರದ ಪ್ರತಿನಿಧಿಯಾಗಿ ಹೇಳಿದ್ದೇನೆ. ಆದ್ದರಿಂದ ಪತ್ರಿಕೆಗಳಿಗೆ ಹೇಳಿ ಕೊಡುವವರು ಸರಿಯಾಗಿ ಅರ್ಥ ಮಾಡಿಕೊಂಡು, ಮಾಹಿತಿಗಳನ್ನು ಸರಿಯಾಗಿ ಸಂಗ್ರಹ ಮಾಡಿಕೊಂಡು ನಂತರ ಪ್ರಚಾರ ಮಾಡುವುದು ಸೂಕ್ತವೇ ಹೊರತು ಈ ರೀತಿ ಕುಚೋದ್ಯ ಮಾಡುವುದು ಸರಿಯಲ್ಲ. ತಾವೇನೋ ಹತ್ತು ಕೋಟಿ ರೂ.ಗಳನ್ನು ಈ ಯೋಜನೆಗಾಗಿ ಖರ್ಚು ಮಾಡಿದಿರಿ. ಆದರೆ ಇದರಿಂದ ಎಷ್ಟು ಎಕರೆ ಪ್ರದೇಶಗಳಿಗೆ ನೀರು ಸಿಕ್ಕಿತು ಎಂದು ನೋಡಿದಾಗ, ಆದಕ್ಕೆ ಉತ್ತರ

ಶೂನ್ಯ ಎಂದು ಹೇಳಬೇಕಾಗುತ್ತದೆ. ಮೊನ್ನೆತಾನೆ ಮುಖ್ಯಮಂತ್ರಿಗಳು ಒಂದು ನಿರ್ಣಯ ತೆಗೆದು ಕೊಂಡರು ಅದೇನೆಂದರೆ, ಕೇವಲ ಒಂದು ತಿಂಗಳ ಅವಧಿಯಲ್ಲಿ ಎರಡು ಸಾವಿರ ಎಕರೆಗಳಿಗೆ ಟ್ರಿಯಲ್ ಬೇಸಿಸ್ ಮೇಲೆ ನೀರು ಕೊಡುವ ಒಂದು ಪ್ರಯತ್ನ ನಡೆದಿದೆ. ಇದರಿಂದ ಆ ಭಾಗದ ಜನರಿಗಿದ್ದ ಅಸಂತೋಷವೆಲ್ಲಾ ಹೋಗಿ ಆ ನೀರಿನ ಒಂದು ಅನುಕೂಲವನ್ನು ಉಣ್ಣುವ ಹಂತದಲ್ಲಿದ್ದಾರೆ. ಇವೊತ್ತು ತಾವು ಪ್ರತಿಯೊಂದು ಪ್ರಾಜೆಕ್ಟ್‌ಗೂ ಇಟ್ಟಿರುವ ಹಣವಾದರು ಎಷ್ಟು ?

ಸ್ವಾಮಿ. ದುರ್ದೈವ ಅದು ನಿಮ್ಮ ತಪ್ಪಲ್ಲ. ನಾನು ಹೇಳುವಾಗ ಜವಾಬ್ದಾರಿಯಿಂದ ಹೇಳು ತ್ತೇನೆ. ನನ್ನನ್ನು ಯಾರಾದರೂ ಅಲ್ಲಿ ಕೂತಿರತಕ್ಕ ಮಾನ್ಯ ಸ್ನೇಹಿತರು ನಮ್ಮ ಕಡೆಗೆ ನೀರು ಹರಿಯು ತ್ತದೆ ಎಂದರೆ ದೇವೇಗೌಡರಿಗೆ ಸಹನೆ ಇಲ್ಲ ಎನ್ನುವ ಭಾವನೆ ಅವರಲ್ಲಿ ಬರಬಾರದು. ಈ ಯೋಜನೆಯ ಪ್ರಥಮ ಹಂತದಲ್ಲಿ ಅಂದರೆ ಮೊದಲನೇ ಭಾಗದಲ್ಲಿ, ಫಸ್ಟ್ ರೀಚ್‌ನಲ್ಲಿ ಕೆಲಸ ಆಗಿಲ್ಲ. ೧೯೭೭–೭೮ರಲ್ಲಿ ಚುನಾವಣೆ ಬಂತು. ಆಗ ಟೆಂಡರುಗಳನ್ನು ಫಿಕ್ಸ್ ಮಾಡಬೇಕು. ಸ್ವಾಮಿ, ಇದರ ಅನಾಹುತ ಎಷ್ಟು ರಾಜ್ಯಕ್ಕೆ. ಇದರ ಬಗ್ಗೆ ತಾವು ಆಳವಾಗಿ ಯೋಚನೆ ಮಾಡಬೇಕು. ಇದರಲ್ಲಿ ತುಂಬ ಜವಾಬ್ದಾರಿ ಇದೆ. ಒಂದು ಟೆಂಡರನ್ನು ಫಿಕ್ಸ್ ಮಾಡತಕ್ಕ ಕಾಲದಲ್ಲಿ, ಈ ಯೋಜನೆಗೆ ಕೊಡತಕ್ಕ ಜನ ಆ ಕೆಲಸ ಮಾಡಲಿಕ್ಕೆ ಸಾಧ್ಯವೇ ಎನ್ನುವುದನ್ನು ವಿಮರ್ಶೆಮಾಡದೆ, ಮೊದಲನೇ ರೀಚಸ್‌ನಲ್ಲಿ ಡಿಸ್ಟ್ರಿಬ್ಯೂಟರಿ ಗಳನ್ನು ತೆಗೆಯಲಿಕ್ಕೆ ಆಗಲಿಲ್ಲ, ಟನಲ್‌ಗಳನ್ನು ತೆಗೆಯಲಿಕ್ಕೆ ಆಗಲಿಲ್ಲ. ೧೯೭೭–೭೮ರ ಚುನಾವಣ ಸಂದರ್ಭದಲ್ಲಿ ಟೆಂಡರುಗಳನ್ನು ತೀರ್ಮಾನ ಮಾಡಿದರು. ಉದಾಹರಣೆಗೆ ಹೇಳುವುದಾದರೆ ಬಾಗೂರು ಟನಲ್ ನಡೆಯುತ್ತಾ ಇದೆ, ಅದಕ್ಕೆ ೩೦ ಕೋಟಿ ರೂಪಾಯಿ ಬೇಕು. ೧೫ ಕೋಟಿ ಕೆಲಸ ೩ ವರ್ಷ ಗಳಲ್ಲಿ ನಡೆದಿದೆ. ಕಂಟ್ರಾಕ್ಟರು ಹೇಳುತ್ತಾರೆ, ನಮಗೆ ಸಹಜವಾಗಿ ಸಫಿಷಿಯಂಟ್ ಫೈನಾನ್ಸ್ ಫ್ಲೋ ಆಗುತ್ತಾ ಇಲ್ಲ. ಆದುದರಿಂದ ಸ್ಟಿಪುಲೇಟೆಡ್ ಟೈಮಿನಲ್ಲಿ ಪ್ರೊಗ್ರೆಸ್ ಆಗುತ್ತಾ ಇಲ್ಲ, ಆದುದ ರಿಂದ ನಮಗೆ ಕ್ಲೈಮ್ಸ್ ಕೊಡಿ. ಈ ರೀತಿ ವಿಳಂಬವಾದರೆ, ೩೦ ಕೋಟಿ ಇದ್ದದ್ದು ೬೦ ಕೋಟಿ ಆಗು ತ್ತದೆ ಎಂದು ಹೇಳುತ್ತಾರೆ. ನಾವು ಹಣ ಇಲ್ಲದೇ ಇದ್ದಾಗ ಇಂತಹ ಕಂಟ್ರಾಕ್ಟಗಳನ್ನು ಕೊಡತಕ್ಕ ನಿರ್ಣಯಮಾಡಿದ್ದು ಏನಿದೆ ಅದು ರಾಜ್ಯದ ಬೊಕ್ಕಸದ ಮೇಲೆ ಭೀಕರವಾದಂಥ ಹಾನಿಯಾಗುತ್ತದೆ. ಇದು ಕೇವಲ ಒಂದು ಪ್ರಾಜೆಕ್ಟ್ ವಿಷಯದಲ್ಲಿ ಅಲ್ಲ, ಎಲ್ಲಾ ಪ್ರಾಜೆಕ್ಟ್‌ಗಳಲ್ಲೂ ಈ ರೀತಿ ನಿರ್ಣಯ ಗಳನ್ನು ತೆಗೆದುಕೊಂಡಿದ್ದಾರೆ. ತಾವು ಒಂದು ವರ್ಷದ ಅಧಿಕಾರ ನಡೆಸಿದಂಥ ಕಾಲದಲ್ಲಿ ನಿಮ್ಮ ಅನು ಭವದಲ್ಲಿ ಏನು ಹೇಳಿದ್ದೀರಿ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಾ, ಕೊಟ್ಟಂಥ ಹಣ ಅತ್ಯಂತ ಕಡಿಮೆ ಕಾಲದಲ್ಲಿ ಹೆಚ್ಚು ಉಪಯುಕ್ತತೆ ಪಡೆಯುವುದಕ್ಕೆ ಅನ್ಯುವಲ್ ಪ್ಲಾನ್‌ನಲ್ಲಿ ಪ್ರಾಜೆಕ್ಟ್‌ವೈಸ್ ಮಾಡಿಸಿದೆ ಎಂದು ದಯಮಾಡಿ ಹೇಳುವುದಾದರೆ ನಾನು ಒಪ್ಪಿಕೊಳ್ಳು ತ್ತೇನೆ. ಯಾವುದೋ ಪ್ರಥಮ ಹಂತದಲ್ಲಿ ದುಡ್ಡಿಲ್ಲ ಅಂದರೆ ಕಂಟ್ರಾಕ್ಟರ್ ಆಬ್ಲಿಗೇಷನಿಂದ ಮೂವ್ ಮಾಡಬೇಕಾಗುತ್ತದೆ, ಕೊನೆಯಲ್ಲಿ ಕೆಲಸ ಮಾಡತಕ್ಕದ್ದು, ಆ ಕೆಲಸ ಆಗುವುದಿಲ್ಲ. ನೀರು ಬರುವ ಹಾಗಿಲ್ಲ, ಇದು ನಡೆದು ಹೋಗಿರತಕ್ಕ ದುರ್ದೈವಿ ಘಟನೆ. ಇದನ್ನು ಬಹಳ ಜಾಗರೂಕತೆಯಿಂದ ಪುನರ್ಪರಿಶೀಲನೆ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ಮಾನ್ಯ ಅರ್ಥ ಸಚಿವರು ಪ್ರತಿಯೊಂದು ಪ್ರಾಜೆಕ್ಟನ್ನೂ ರಿವ್ಯೂ ಮಾಡುವುದು ಅತ್ಯಾವಶ್ಯಕ. ತಮಗೆ ಮಾಡುವುದಕ್ಕೆ ಆಗದೇ ಹೋದರೆ ಪೂರ್ಣ ಪ್ರಮಾಣದ ನೀರಾವರಿ ಸಚಿವರನ್ನು ನೇಮಕಮಾಡಿ ಅವರಿಗೆ ಜವಾಬ್ದಾರಿ ಕೊಡಿ. ಇಲ್ಲದೇ ಹೋದರೆ ಅದಕ್ಕೆ ಕೊಟ್ಟಿರತಕ್ಕ ಹಣ ಏನಿದೆ ಅದು ಸರಿಯಾಗಿ ವಿನಿಯೋಗವಾಗು ವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಕಾವೇರಿ ಕಣಿವೆಯಲ್ಲಿರ ತಕ್ಕ ಯೋಜನೆಗಳ ಬಗ್ಗೆ ಹೇಳುವುದಾರೆ. ನಾವು ಎಲ್ಲಾ ಡ್ಯಾಂನಲ್ಲಿ ನೀರನ್ನು ಶೇಖರಣೆ ಮಾಡಿದ್ದೇವೆ. ಇವತ್ತು ನಮ್ಮ ಡ್ಯಾಮುಗಳು, they are going to function only as a balancing res rvoir to Tamil Nadu Government. ಕನಿಷ್ಟವಾಗಿ ಇವತ್ತು ಶೇಖರಣೆ ಮಾಡಿ ಕೊಂಡಿರತಕ್ಕ ಎಲ್ಲಾ ನೀರನ್ನು ಉಪಯೋಗ ಮಾಡಿಕೊಳ್ಳುತ್ತೇವೆ ಅಂದರೆ ೫೦೦ ಕೋಟಿ ರೂಪಾಯಿ ಗಳು ಕಾವೇರಿ ಕಣಿವೆಗೆ ಬೇಕಾಗುತ್ತದೆ. ಇದಕ್ಕೆ ಪ್ಲಾನಿಂಗ್ ಕಮಿಷನ್‌ನವರು ಅಪ್ರೂವಲ್ ಕೊಟ್ಟಿಲ್ಲ. ಆದ್ದರಿಂದ ನಾನ್ ಪ್ಲಾನ್‌ನಿಂದ ಹೊರೆ ಹೊರಬೇಕು. ವಿಶ್ವಬ್ಯಾಂಕ್‌ನಿಂದ ಇದಕ್ಕೆ ಹಣ ತರಲಿಕ್ಕೆ ಸಾಧ್ಯವೇ ಎಂದು ಹೇಳುವುದಾರೆ, ಇದು ಅನ್‌ಕ್ಲಿಯರ್ಡ್ ಪ್ರಾಜೆಕ್ಟ್ ಇದೆ ಅದಕ್ಕೆ ಹಣ ಕೇಳುವುದಕ್ಕೆ ಹಿಂಜರಿಯುತ್ತೀರಿ. ಅದಕ್ಕೆ ಯಾವುದೋ ರೂಪದಲ್ಲಿ ಹಣವನ್ನು ಶೇಖರಣೆ ಮಾಡುತ್ತೇವೆ ಎಂದು ಎಲ್ಲಾ ವಿರೋಧ ಪಕ್ಷದವರು ಕೂತಿದ್ದ ಸಭೆಯಲ್ಲಿ ಹೇಳಿದಿರಿ. ಆ ದಿಶೆಯಲ್ಲಿ ಎಷ್ಟರ ಮಟ್ಟಿಗೆ ಪ್ರಗತಿ

ಯನ್ನು ಸಾಧಿಸಿದ್ದೀರೋ ನನಗೆ ಗೊತ್ತಿಲ್ಲ. ವಿಶ್ವ ಬ್ಯಾಂಕಿನ ಬಗ್ಗೆ ಮಾತನಾಡುವ ಸನ್ನಿವೇಶ ಬಂದಾಗ ಹೇಳುತ್ತೇನೆ. ಇವತ್ತು ಅಪ್ಪರ್‌ಕೃಷ್ಣ ಪ್ರಾಜೆಕ್ಟ್ ಇದೆ, ೧೯೮೦ಕ್ಕೆ ಸುಮಾರು ೭೫ ಸಾವಿರ ಎಕರೆಗೆ ಹುಣಸೆ ಬ್ರಾಂಚ್‌ನಿಂದ ನೀರು ಕೊಡತಕ್ಕ ಅಗ್ರಿಮೆಂಟ್ ಆಗಿದೆ. ೧೯೭೭ ರಲ್ಲಿ ಅಗ್ರಿಮೆಂಟ್ ಆದಾಗ ೧೯೮೧ನೇ ಮಾರ್ಚಿ ಒಳಗೆ ೭೫ ಸಾವಿರ ಎಕರೆಗೆ ನೀರು ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ ಎಂದು ನಿರ್ಣಯ ಮಾಡಿದ್ದು ಇವತ್ತು ಏನಾಗಿದೆ ? ೧೯೮೫ನೇ ಇಸವಿ ಬಂದರೂ ಸಾಧ್ಯವಿಲ್ಲ ಇವತ್ತು ವಿಶ್ವ ಬ್ಯಾಂಕಿನ ಪ್ರತಿನಿಧಿಗಳಿದ್ದಾರೆ, ಅವರಿಗೂ ರಾಜ್ಯ ಸರ್ಕಾರಕ್ಕೂ ತಿಕ್ಕಾಟ ಪ್ರಾರಂಭವಾಗಿದೆ. ಕಾರಣವೇನೆಂದರೆ, ಅವರು ಏನೇನು ಷರತ್ತುಗಳನ್ನು ಹಾಕಿದ್ದರು ಅದಕ್ಕನುಗುಣವಾಗಿ ಇವತ್ತು ರಾಜ್ಯ ಸರ್ಕಾರ ನಡೆದುಕೊಂಡಿಲ್ಲ. ಆದುದರಿಂದ ಕೆಲವು ಭಾಗಗಳಿಗೆ ಹಣ ಕೊಡಲಿಕ್ಕೆ ನಿರಾಕರಣೆ ಮಾಡಿದ್ದಾರೆ, ಹಣ ಕೊಟ್ಟಿಲ್ಲ. ಫಸ್ಟ್ ಸ್ಟೇಜ್ ಆಫ್ ಅಪ್ಪರ್‌ಕೃಷ್ಣ ಅದರಲ್ಲಿ ಫಸ್ಟ್ ಫೇಸ್ ಸುಮಾರು ೨೫೦ ಕೋಟಿ ರೂಪಾಯಿಗಳ ಯೋಜನೆ ಅದು. ನಿಯರ್ಲಿ ಎರಡೂವರೆ ಲಕ್ಷ ಹೆಕ್ಟೇರ್‌ಗೆ ನೀರು ಕೊಡತಕ್ಕ ಯೋಜನೆ ಇದು. ಇದಕ್ಕೆ ವಿಶ್ವ ಬ್ಯಾಂಕಿನ ನೆರವನ್ನು ಪಡೆದು ಮಾಡಬೇಕು ಎಂದು ನಿರ್ಣಯ ಮಾಡಿದೆವು. ಆದರೆ ಕಂಟ್ರಾಕ್ಟರ್ಸನ್ನು ನಿಗದಿ ಮಾಡತಕ್ಕ ಕಾಲದಲ್ಲಿ ಒಂದು ಟರ್ಮ್ಸ್ ಅಂಡ್ ಕಂಡೀಷನ್ ಪ್ರಕಾರ ಲೋಯಸ್ಟ್ ಟೆಂಡರ್ ಯಾರಿದ್ದಾರೆ ಅವರ ಟೆಂಡರನ್ನು ಮಾನ್ಯತೆ ಮಾಡತಕ್ಕ ಷರತ್ತನ್ನು ಅವರು ಹಾಕಿದ್ದರು. ಅದನ್ನು ನೀವು ಉಲ್ಲಂಘನೆ ಮಾಡಿದಿರಿ, ಅಂದರೆ ನಿಮ್ಮ ಕಾಲದಲ್ಲಿ ಉಲ್ಲಂಘನೆ ಆಯಿತೋ, ಮತ್ತೊಬ್ಬರ ಕಾಲದಲ್ಲಿ ಉಲ್ಲಂಘನೆ ಆಯಿತೊ, ಒಟ್ಟಿನಲ್ಲಿ ಸರ್ಕಾರ ಯಾರು ನಡೆಸುತ್ತಾ ಇದ್ದರು ಆಗ ಉಲ್ಲಂಘನೆ ಮಾಡಿದರು. ಒಂದು ಟನಲ್ ವರ್ಕ್‌ಗೆ ಸುಮಾರು ೧೫ ಕೋಟಿ ರೂಪಾಯಿ ಹಿಡಿಯುತ್ತದೆ. ರಾಜನ ಕಲ್ಲುಗೆ ಟೆಂಡರ್ ಕರೆಯಬೇಕು ಎಂದು ವಿಶ್ವಬ್ಯಾಂಕಿನ ಪ್ರತಿನಿಧಿ ತಿಳಿಸಿದರು. ಆದರೆ ಮೊದಲನೇ ಟೆಂಡರ್ ಕರೆದರು. ಡೆಲ್ಲಿ ಫರ್ಮ್‌ನವರು ಲೋಯಸ್ಟ್ ಟೆಂಡರ್ ಹಾಕಿದಾಗ ಅವರಿಗೆ ಕೊಡಲಿಲ್ಲ. ಮತ್ತೆ ಸೆಕೆಂಡ್ ಕಾಲ್ ಮಾಡಿ ಯಾವನೋ ಒಬ್ಬ ಕಂಟ್ರಾಕ್ಟರಿಗೆ ಕೊಟ್ಟರು. ಆದುದರಿಂದ ನಾವು ಇದಕ್ಕೆ ಸಂಬಂಧಪಟ್ಟ ಹಣ ಕೊಡಲಿಕ್ಕೆ ಸಿದ್ಧರಿಲ್ಲ ಎಂದು ವಿಶ್ವ ಬ್ಯಾಂಕ್‌ನವರು ನಿರಾಕರಿಸಿದ್ದಾರೆ. ಮತ್ತೆ ಕ್ರಸ್ಟ್ ಗೇಟ್ ಮಾಡುವುದಕ್ಕೆ ಇವತ್ತು ಏನು ಗವರ್ನಮೆಂಟ್ ಏಜನ್ಸಿ ಇವೆ, ತುಂಗಭದ್ರ ಸ್ಟೀಲ್ ಕಾರ್ಪೊರೇಷನ್ ಅದಕ್ಕೆ ಕೊಡುವುದು ಬಿಟ್ಟು ಮತ್ತೆ ಇನ್ಯಾವುದೋ ಸಂಸ್ಥೆಗೆ ಕೊಟ್ಟರು. ಅವರಿಗೆ ಅದರಲ್ಲಿ ಪರಿಶ್ರಮ ಇಲ್ಲ. ಅದರ ಪರಿಣಾಮವಾಗಿ ಇವತ್ತು ಕ್ರಸ್ಟ್ ಗೇಟನ್ನು ಫಿಕ್ಸ್ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ೧೯೮೦ಕ್ಕೆ ೭೫ ಸಾವಿರ ಎಕರೆಗೆ ನೀರು ಕೊಡತಕ್ಕ ನಿರ್ಣಯ ಆಗಿದ್ದು ಅದು ಸಾಧ್ಯವಾಗದೇ ಇರತಕ್ಕ ಪರಿಣಾಮ ಇವತ್ತು ಕಾಸ್ಟ್ ಆಫ್ ಎಸ್ಕಲೇಷನ್ ಹೆಚ್ಚಾದಂಥ ಸನ್ನಿವೇಶದಲ್ಲಿ ಅವರು ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ.

3-30 P.M.

ಮತ್ತೊಂದು ಉಪಯುಕ್ತವಾದ ಕೆಲಸವನ್ನು ಮಾಡಲಾಗಿದೆ. ನಾನು ತಾಂತ್ರಿಕ ಮಾಹಿತಿಯನ್ನು ಹೊಂದಿರತಕ್ಕವನು. ಮಲಪ್ರಭಾ ಬಲದಂಡೆ ಕಾಲುವೆಯನ್ನು ತೆಗೆಯತಕ್ಕ ಸಂದರ್ಭದಲ್ಲಿ ವಿವಾದ ಬಂದಾಗ ಶ್ರೀಮಾನ್ ಬಾಳೆಕುಂದರಗಿಯವರು ಬಹಳ ಧೈರ್ಯವಾಗಿ ನಿರ್ಣಯ ತೆಗೆದುಕೊಂಡರು. ಅದು ಹೆಚ್ಚೂ ಕಡಿಮೆ ಡ್ಯಾಂ ಭಾಗದಲ್ಲೇ ಬರುತ್ತದೆ. ಅವರು ತುಂಬ ಧೈರ್ಯದಿಂದ ಜವಾಬ್ದಾರಿಯುತವಾಗಿ ನಿರ್ಣಯ ತೆಗೆದುಕೊಂಡಿರುವುದನ್ನು ನಾನು ಮೆಚ್ಚುತ್ತೇನೆ. ಆದರಿಂದ ಇವತ್ತು ಬರಗಾಲಕ್ಕೆ ತುತ್ತಾದ ಹಲವಾರು ತಾಲ್ಲೂಕುಗಳ ಆರ್ಥಿಕ ಮುನ್ನಡೆಗೆ ಸಹಾಯವಾಗುತ್ತದೆ. ಆ ಕಾಲುವೆಗೆ ಅವರ ಹೆಸರನ್ನೇ ಇಟ್ಟಿದ್ದೀರಿ, ಅದನ್ನು ಕೂಡ ನಾನು ಮೆಚ್ಚುತ್ತೇನೆ. ಏಕೆಂದರೆ, ಅವರು ತೆಗೆದುಕೊಂಡಿದ್ದು ಅಂಥ ಒಂದು ಅದ್ಭುತ ನಿರ್ಣಯ. ನಮ್ಮಲ್ಲಿ ತುಂಬಾ ಜನ ಅಂಥ ಪ್ರಾಮಾಣಿಕ ಅಧಿಕಾರಿಗಳು ಇದ್ದಾರೆ. ಇತ್ತೀಚೆಗೆ ಕೆಲವು ಮನೆಗಳ ಮೇಲೆ ಧಾಳಿ ಮಾಡಿದರು. ಅವರ ದೃಷ್ಟಿಕೋನದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಮಾತ್ರ ಭ್ರಷ್ಟಾಚಾರ ಇದೆ ಎಂದು ತಿಳಿದುಕೊಂಡಿದ್ದರೆ, ಅವರು ಬಹಳ ತಪ್ಪು ಕಲ್ಪನೆ ಯಲ್ಲಿದ್ದಾರೆಂದು ಹೇಳಬೇಕಾಗುತ್ತದೆ. ದುಡ್ಡಿಗೆ ಏನು ಜಾತಿ ಇಲ್ಲ, ಲಂಚ ತೆಗೆದುಕೊಳ್ಳುವವರು ಎಲ್ಲ ಜಾತಿಯಲ್ಲೂ ಇದ್ದಾರೆ. ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಕೂಡ ಒಪ್ಪುತ್ತಾರೆ. ಕೆಲವರ ಮನೆ ಯಲ್ಲಿ ಒಂದೆರಡು ಕೆ.ಜಿ. ಚಿನ್ನ ಸಿಕ್ಕಿತು ಎಂಬುದನ್ನು ಕೇಳಿದ್ದೇನೆ. ಬಹುತೇಕ ಮನೆಗಳಲ್ಲಿ ಬೆಳ್ಳಿ ತಂಬಿಗೆ ಮತ್ತು ಚಿನ್ನದ ತಟ್ಟೆಗಳನ್ನು ಪೂಜೆಗಾಗಿ ಇಟ್ಟುಕೊಳ್ಳುವುದನ್ನು ನೋಡಿದ್ದೇನೆ. ಚಿನ್ನದ ತಟ್ಟೆಗಳಲ್ಲಿ ವಿಗ್ರಹಗಳನ್ನು ಇಟ್ಟು ಪೂಜಿಸುತ್ತಿರುತ್ತಾರೆ. ಲಂಚ ಎಂಬುದು ಯಾವುದೇ ಜಾತಿಗೆ ಸೀಮಿತವಲ್ಲ. ಯಾವುದೇ ಇಲಾಖೆಗೆ ಸೀಮಿತವಲ್ಲ. ಇವತ್ತಿನ ದಿವಸ ಪತ್ರಿಕೆಗಳಲ್ಲಿ ಬರತಕ್ಕದ್ದನ್ನು ನೋಡಿದರೆ

ಎಲ್ಲವನ್ನು ನಂಬುವುದಕ್ಕೆ ಸಾಧ್ಯವಿಲ್ಲ. ಸುಲ್ತಾನ್ ಹತ್ತಿರ ೪೦ ಸಾವಿರ ರೂಪಾಯಿಗಳ ಆಸ್ತಿ ಇದೆ ಎಂದು ಬರೆದಿದ್ದಾರೆ. ಅದು ಏನೇ ಇರಲಿ. ಲೋಕೋಪಯೋಗಿ ಇಲಾಖೆಗಿಂತ ಬೇರೆ ಬೇರೆ ಇಲಾಖೆಗಳು ಅನ್ ಅಕೌಂಟೆಡ್ ಹಣವನ್ನು ಶೇಖರಣೆ ಮಾಡುವುದರಲ್ಲಿ ಹೆಚ್ಚು ಶಕ್ತಿಯುತವಾಗಿವೆ ಎಂಬುದನ್ನು ಮನಗಾಣಬೇಕು. ಬರೀ ಲೋಕೋಪಯೋಗಿ ಇಲಾಖಾಧಿಕಾರಿಗಳು ಮನೆಗೆ ಹೋದರು ಎಂಬುದು ಸರಿಯಲ್ಲ. ಯಾವನೋ ಒಬ್ಬ ಅಧಿಕಾರಿ ಮಧ್ಯಾಹ್ನ ಚಾರ್ಜ್ ಕೊಡಬೇಕಾಗಿದ್ದರೆ ರಾತ್ರಿ ಆತನ ಮನೆಯ ಮೇಲೆ ಧಾಳಿ ನಡೆಸಿದ್ದಾರೆ. ಅಷ್ಟು ಆತುರವಾಗಿ ಒಂದು ವೇಳೆ ಧಾಳಿ ಮಾಡದಿದ್ದರೆ ಯಾವ ಪ್ರಪಂಚ ಮುಳುಗಿ ಹೋಗುತ್ತಿತ್ತು ? ಅಲ್ಲಿ ಯಾವುದೋ ಒಂದು ಶಕ್ತಿ ಕುಳಿತು ಕೆಲಸ ಮಾಡುತ್ತಿದೆ ಎಂದು ಹೇಳಬೇಕಾಗುತ್ತದೆ. ನಾಳೆ ಚಾರ್ಜ್ ಕೊಡಬೇಕೆಂದಿದ್ದರೆ, ಎಲ್ಲೋ ರಾಜ್ಯ ಬಿಟ್ಟು ಓಡಿ ಹೋಗುತ್ತಾನೆಂದು ರಾತ್ರಿ ಹೋಗಿ ಧಾಳಿ ಮಾಡುವುದು. ಹೀಗೆ ಧಾಳಿ ಮಾಡಿಸತಕ್ಕವರೆಲ್ಲ ಸತ್ಯ ಹರಿಶ್ಚಂದ್ರನ ಮೊಮ್ಮಕ್ಕಳು. ಕೆಲವು ಅಧಿಕಾರಿಗಳು ಇಂಥ ನಿರ್ಣಯ ತೆಗೆದುಕೊಳ್ಳತಕ್ಕ ಸಂದರ್ಭದಲ್ಲಿ ನಿಮ್ಮ ಮೇಲೆ ಗೂಬೆ ಕೂರಿಸತಕ್ಕ ಸನ್ನಿವೇಶ ಬರುತ್ತಿದೆ. ಇದನ್ನು ಶೋಚನೀಯವಾಗಿ ಹೇಳುತ್ತಿದ್ದೇನೆ. ಭ್ರಷ್ಟಾಚಾರ ಎಂಬುದು ಲೋಕೋಪಯೋಗಿ ಇಲಾಖೆಯಲ್ಲಿ ಮಾತ್ರವಲ್ಲ, ಬೇರೆ ಇಲಾಖೆಗಳಲ್ಲೂ ಇದೆ. ಅದನ್ನು ಮನಗಾಣತಕ್ಕ ಪರಿಸ್ಥಿತಿಯನ್ನು ನಾವು ಕಂಡುಕೊಳ್ಳಬೇಕು. ಏಕೆಂದರೆ, ಒಂದು ಕಡೆ ಭ್ರಷ್ಟಾಚಾರವನ್ನು ತಡೆಗಟ್ಟಬೇಕೆಂಬುದನ್ನು ಹೇಳುವುದಕ್ಕೆ ಪ್ರಯತ್ನ ಮಾಡಿದಾಗ ಮತ್ತೊಂದು ಕಡೆ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳು ಹೆದರತಕ್ಕ ಸನ್ನಿವೇಶ ಬರುತ್ತದೆ. ನಮಗೆ ಏತಕ್ಕೆ ಆ ಜವಾಬ್ದಾರಿ ಬೇಕು, ನಾವು ಬರೀ ಫೈಲುಗಳನ್ನು ನೋಡಿ ಕಳುಹಿಸತಕ್ಕವರು ಎಂದು ಹೇಳುವ ಸ್ಥಿತಿಗೆ ಬರುತ್ತಾರೆ. ಇವತ್ತಿನ ದಿವಸ, ನೀವು ಯಾವುದೇ ಒಂದು ಒತ್ತಾಯಕ್ಕೂ ಮಣಿಯದೆ ಕೆಲವು ಉಗ್ರ ಕ್ರಮಗಳನ್ನು ತೆಗೆದುಕೊಂಡಿದ್ದೀರಿ. ಹಿರಿಯ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದು ಅಷ್ಟು ಸುಲಭವಲ್ಲ. ಅದಕ್ಕೆ ಎಷ್ಟು ಒತ್ತಡ ಬರುತ್ತವೆಂಬುದನ್ನು ನಾನು ಬಲ್ಲೆ. ಈ ಸದನಕ್ಕೆ ಸಂಬಂಧಪಟ್ಟ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯವರು ಲಕ್ಷಾಂತರ ರೂಪಾಯಿ ಹಣ ದುರುಪಯೋಗವಾಗಿದೆ ಎಂದು ನಿರ್ಣಯ ಕೊಟ್ಟರೂ ಯಾವ ಅಧಿಕಾರಿಯನ್ನು ಸಸ್ಪೆಂಡ್ ಮಾಡಲಿಲ್ಲ. ಅದಕ್ಕೆ ಪರ್ಯಾಯವಾಗಿ ಈ ಸದನದ ಸಮಿತಿಗೆ ಕಪಾಲಮೋಕ್ಷ ಮಾಡಿದಂತಹ ಸನ್ನಿವೇಶ ಈ ರಾಜ್ಯದಲ್ಲಿ ಉಂಟು. ತಾವು ಉಗ್ರ ನಿರ್ಣಯ ತೆಗೆದುಕೊಂಡಿರುವುದನ್ನು ಒಪ್ಪುತ್ತೇನೆ. ಆದರೆ ಆ ನಿರ್ಣಯ ಜನತೆಯ ದೃಷ್ಟಿಯಲ್ಲಿ ಯಾವುದೋ ಒಂದು ಕಡೆ ಹೋಗುತ್ತಿದೆ. ಈ ಲಂಚ, ಭ್ರಷ್ಟಾಚಾರ ಎನ್ನತಕ್ಕದ್ದು ವಾಣಿಜ್ಯ, ಅಬ್ಕಾರಿ, ವಿದ್ಯಾ ಇಲಾಖೆ ಹೀಗೆ ಎಲ್ಲ ಇಲಾಖೆಗಳಲ್ಲೂ ತುಂಬಿದೆ. ಮಾನ್ಯ ಮಳ್ಳೂರು ಆನಂದರಾಯರು ವಿದ್ಯಾ ಇಲಾಖೆಯ ಬೇಡಿಕೆಗಳ ಮೇಲೆ ಮಾತನಾಡುತ್ತಿದ್ದುದನ್ನು ನಾನು ಕಾರ್ಯದರ್ಶಿಯವರ ಕೊಠಡಿಯಲ್ಲಿ ಕುಳಿತು ಕೇಳುತ್ತಿದ್ದೆ. ಅವರು ತುಂಬ ಚೆನ್ನಾಗಿ ಹೇಳುತ್ತಿದ್ದರು, ಆದ್ದರಿಂದ. ಸರ್ಕಾರ ಹೋಗತಕ್ಕ ದಾರಿಯಲ್ಲಿ ಮಾರ್ಪಾಡು ಆಗಬೇಕೆಂದು ಸೂಚಿಸಬಯಸುತ್ತೇನೆ.

ಯಾವುದೇ ಕಾರಣದಿಂದ ಇವತ್ತು ಏನು ಹೆಚ್ಚು ಆದಂಥ ವೆಚ್ಚ ಇದೆ ಅದನ್ನು ತುಂಬುವುದಕ್ಕೆ ಸಾಧ್ಯವಿಲ್ಲ. ತಮ್ಮ ಮನಸ್ಸಿಗೆ ಬಂದ ಹಾಗೆ ಕಂಟ್ರ್ಯಾಕ್ಟರ್‌ಗಳಿಗೆ ಕೊಡುವುದಕ್ಕೆ ನಿರ್ಣಯ ಮಾಡಿದುದರಿಂದಲೇ ಈ ಒಂದು ಕೆಲಸಕ್ಕೆ ನಮ್ಮ ವಿಶ್ವ ಬ್ಯಾಂಕ್ ನೆರವು ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಸ್ವಾಮಿ ಒಂದೇ ಒಂದು ಕೆಲಸ ಅದರಲ್ಲೂ ನಮ್ಮ ಕರ್ನಾಟಕ ರಾಜ್ಯದ ಉತ್ತರ ಭಾಗದಲ್ಲಿರತಕ್ಕ ಬೊಂಬಾಯಿ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದಲ್ಲಿ ಸುಮಾರು ೨೧ ಲಕ್ಷ ಎಕರೆಗೆ ನೀರು ಕೊಡತಕ್ಕ ಮಹಾ ನದಿ ಏನಿದೆ ಅದರ ನೀರನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ನಮ್ಮಲ್ಲಿ ಸಂಪನ್ಮೂಲನದ ಕೊರತೆ ಇದೆ ಎನ್ನುವ ಹಿನ್ನೆಲೆಯಲ್ಲಿ ಹಿಂದೆ ಈ ಸದನದಲ್ಲಿ ಏಕ ಕಂಠದಿಂದ ನಿರ್ಣಯ ಮಾಡಿದರು ಇದಕ್ಕೆ ವಿಶ್ವ ಬ್ಯಾಂಕ್‌ನಿಂದ ನೆರವನ್ನು ಪಡೆಯಲಿಕ್ಕೆ ಪ್ರಯತ್ನ ಮಾಡಿ ಅದರಿಂದ ಪ್ರತಿಫಲ ಬಂದಿದೆಯೋ ? ಅದನ್ನು ಪಡೆಯತಕ್ಕದರಲ್ಲಿ ಕೆಲವು ಕ್ಷುಲ್ಲಕ ಕಾರಣಗಳಿಗೋಸ್ಕರ ಇವತ್ತು ಆ ಒಂದು ವಿಶ್ವಬ್ಯಾಂಕ್‌ನಿಂದ ನೆರವು ಏನು ಈ ಒಂದು ಪ್ರಾಜೆಕ್ಟ್‌ಗಳಿಗೆ ಬರತಕ್ಕಂಥದ್ದು ಇತ್ತು ಅದಕ್ಕೆ ಕೊಡಲಿ ಪೆಟ್ಟು ಬೀಳತಕ್ಕ ರೀತಿಯಲ್ಲಿ ನಡೆದುಕೊಂಡುದುದರಿಂದ ಇದು ಸರ್ಕಾರಕ್ಕೆ ಗೌರವತರತಕ್ಕದ್ದು ಅಲ್ಲ. ಯಾರು ಇದರ ಬಗ್ಗೆ ನಿರ್ಣಯ ಮಾಡಿದ್ದರೋ ಅವರು ಇದರ ಬಗ್ಗೆ ಆತ್ಮಶೋಧನೆ ಮಾಡಿಕೊಳ್ಳಬೇಕಾಗುತ್ತದೆ. ಸ್ವಾಮಿ ಮತ್ತೊಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಲೋಕೋಪಯೋಗಿ ಸಚಿವರು ಹೇಳುತ್ತಿದ್ದರು. ನಮಗೆ ದುಡ್ಡು ಕೂಡಿಸಿ ಎಂದು ಹೇಳಿದರು. ಆದಕ್ಕೆ ಈ ಎಲ್ಲಾ ವಿಷಯಗಳ ಬಗ್ಗೆ ಪರಿಶೀಲನೆ ಮಾಡಲಿಕ್ಕೆ ಒಂದು ಎಕಾನಮಿ ಅಂಡ್ ರಿಸೋರ್ಸ್‌ಸ್ ಕಮಿಟಿ ಸ್ಥಾಪನೆ ಮಾಡಿ ಎಂದು ಸಲಹೆ ಕೊಟ್ಟಿದ್ದೇನೆ.

ನಾನು ಮತ್ತೊಂದು ಮಾತನ್ನು ಸಹ ಹೇಳಿದ್ದೇನೆ ನಿಮಗೆ ಇದಕ್ಕೆ ಟಿ.ಪಿ.ಡಿ.ಪಿ ಏನೂ ಬೇಡ ನಾವು ಬಂದು ತಮಗೆ ಬೇಕಾದರೆ ಸಲಹೆ ಕೊಡುತ್ತೇನೆಂದು ತಿಳಿಸಿದ್ದೇನೆ. ನೀವು ಕೊಟ್ಟಂಥ ಕೆಲವು ಕಮಿಟಿಗಳಲ್ಲೇ ಕೆಲಸ ಮಾಡುವುದಕ್ಕೆ ನಿರಾಕರಣೆ ಮಾಡಿದ್ದೇನೆ. ನಾವು ಇಲ್ಲಿ ಬಂದು ಕೂತಿರತಕ್ಕಂತದ್ದು ಕೆಲಸ ಮಾಡಲು. ನಾನು ಇವತ್ತು ಕೂಡ ಹೇಳುತ್ತೇನೆ ಇಂಥಾ ಜಟಿಲ ಸಮಸ್ಯೆಗಳೇನಿವೆ ಅವುಗಳನ್ನು ಬಗೆ ಹರಿಸಬೇಕು ಎನ್ನತಕ್ಕದ್ದು ಇದ್ದರೆ ಮತ್ತೆ ನಿಮಗೆ ಅನುಕೂಲವಾಗಬೇಕು ಎನ್ನುವ ಹಾಗಿದ್ದರೆ ನಾವು ನೀವು ಇಲ್ಲಿ ಕೂತು ಯೋಚನೆ ಮಾಡೋಣ. ಎಕಾನಮಿ ಅಂಡ್ ರಿಸೋರ್ಸ್‌ಸ್ ಕಮಿಟಿ ಎಂದು ಮಾಡುವುದಾದರೆ ಹೇಗೆ ಇದನ್ನು ಬಗೆಹರಿಸುವುದಕ್ಕೆ ಸಾಧ್ಯ ಎನ್ನುವ ಬಗ್ಗೆ ಯೋಚನೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆಂದು ಸೂಚನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಇವತ್ತು ನಿಮಗೆ ಕೇಂದ್ರದಲ್ಲಿ ರಾಜಕೀಯವಾಗಿ ಒಳ್ಳೆಯ ಶಕ್ತಿ ಇದೆ ಮತ್ತು ಒಂದು ಬಾಂಧವ್ಯವಿದೆಯೆಂದು ಈ ಸದನದಲ್ಲಿ ಪದೇ ಪದೇ ಹೇಳಿದ್ದೀರಿ, ಹೊರಗಡೆ ಕೂಡ ಹೇಳಿದ್ದೀರಿ. ಕಾವೇರಿ ಕಣಿವೆ ಯೋಜನೆಗಳಿಗೆ ವಿಶ್ವಸಂಸ್ಥೆಯಿಂದ ನೆರವನ್ನು ಪಡೆಯುವುದಕ್ಕೆ ಸಾಧ್ಯವಾಗಿಲ್ಲದಿದ್ದರೆ, ಈ ಕಾವೇರಿ ಯೋಜನೆಗಳೇನಿವೆ ಅದು ಘಟಪ್ರಭಾ, ಮಲಪ್ರಭಾ ಮತ್ತು ಅಪ್ಪರ್ ಕೃಷ್ಣಾ ಈ ಒಂದು ನದಿಗಳನ್ನು ಇಂಪ್ಲಿಮೆಂಟ್ ಮಾಡತಕ್ಕಂಥ ಆನ್ ಗೋಯಿಂಗ್ ಪ್ರಾಜೆಕ್ಟ್ ಏನಿವೆ ಇವುಗಳ ಬ್ಯಾಲೆನ್ಸ್ ವರ್ಕ್ಸ್‌ಗಳಿಗೆ ವಿಶ್ವಬ್ಯಾಂಕ್‌ನಿಂದ ನೆರವನ್ನು ಪಡೆಯುವುದಕ್ಕೆ ಸಾಧ್ಯವೇ ಎನ್ನುವುದನ್ನು ತಾವು ಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ ಏತಕ್ಕೆಂದರೆ ನೀವು ಈಗ ವಿಶ್ವಬ್ಯಾಂಕ್‌ನಿಂದ ಮೈನರ್ ಇರಿಗೇಷನ್ನಿಗೆ ಸುಮಾರು ೪೫ ಲಕ್ಷ ರೂ ಕೊಟ್ಟಿದ್ದೀರಿ. ಈ ಹಣವನ್ನು ಪಡೆಯತಕ್ಕದರ ಬಗ್ಗೆ ಯಾವ ಯೋಜನೆಯಿಂದ ಅಂಗೀಕಾರವನ್ನು ಪಡೆಯುವುದಕ್ಕೆ ಸಫಲರಾಗಿದ್ದೀರಿ ಅದರ ಹಿನ್ನೆಲೆಯಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಏನು ಪ್ರಾಮುಖ್ಯವಾದ ೩ ನದಿಗಳು ಇವೆ ಘಟಪ್ರಭಾ ಮತ್ತು ಮಲಪ್ರಭಾ ಮತ್ತು ಅಪ್ಪರ್ ಕೃಷ್ಣಾ ಈ ನದಿಗಳ ಒಂದು ಪರಿಮಿತಿಗೆ ಸಂಬಂಧಪಟ್ಟಿರತಕ್ಕಂಥ ಎಲ್ಲಾ ಆನ್ ಗೋಯಿಂಗ್ ಪ್ರಾಜೆಕ್ಟ್‌ಗಳೇನಿವೆ ಇದಕ್ಕೆಲ್ಲಾ ತಾವು ಹಣವನ್ನು ಪಡೆಯುವುದಕ್ಕೆ ಸಫಲವಾಗುವುದಾದರೆ ಬಹುಶಃ ಈ ಸಭೆ ತಮಗೆ ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ ನಾನು ಮೊದಲೇ ಹೇಳಿದೆ ಈ ಕಂಟ್ರ್ಯಾಕ್ಟರ್‌ಗಳನ್ನು ನಿಗದಿ ಮಾಡತಕ್ಕ ಕಾಲದಲ್ಲಿ ನಡೆದುಹೋಗಿರತಕ್ಕ ಕೆಲವು ಅಚಾತುರ್ಯಗಳನ್ನು ಮೊದಲೇ ಪ್ರಸ್ತಾಪ ಮಾಡಿದೆ. ಈ ಕಂಟ್ರ್ಯಾಕ್ಟರ್‌ಗಳ ಒಂದು ಒತ್ತಡವನ್ನು ರಾಜ್ಯದಲ್ಲಿ ಕಡಿಮೆ ಮಾಡಬೇಕು ಎನ್ನುವ ದೃಷ್ಟಿಯಿಂದ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನ್ನು ಅಸ್ತಿತ್ವಕ್ಕೆ ತೆಗೆದುಕೊಂಡು ಬಂದಿದ್ದೇವೆ. ಆದರೆ ಇವತ್ತು ಮೆಚ್ಚತಕ್ಕಂಥ State owned organisationನ್ನು ಮಾಡಬೇಕು ಎನ್ನತಕ್ಕ ನಿರ್ಣಯಕ್ಕೆ ಸರ್ಕಾರ ಬಂದಿದೆ ಎಂದು ಕೇಳಿದ್ದೇನೆ. ಅದು ಅಷ್ಟೊಂದು ಯಶಸ್ವಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕೋಸ್ಕರ ಇದನ್ನು ಸರಿಯಾದ ರೀತಿಯಲ್ಲಿ ಬೆಳೆಸುವುದಕ್ಕೆ ಸಾಧ್ಯವಾಗುತ್ತಿಲ್ಲ ಎನ್ನುವ ಕಾರಣಕ್ಕೋಸ್ಕರ ಲ್ಯಾಂಡ್ ಆರ್ಮಿ ಮತ್ತು ಇದನ್ನು ಸೇರಿಸಿ ಒಂದುಗೂಡಿಸತಕ್ಕಂಥ ನಿರ್ಣಯ ಮಾಡುತ್ತಿದ್ದೀರಿ ಎಂದು ಕೇಳಿದ್ದೇನೆ ಆದರೆ ಸ್ವಾಮಿ ಅದನ್ನು ಸ್ಟ್ರೆಂತನ್ ಮಾಡುವುದಕ್ಕೆ ಏತಕ್ಕೆ ಸಾಧ್ಯವಿಲ್ಲ ? ಈಗಿರತಕ್ಕಂಥ ಅಡಚಣೆಯಾದರೂ ಏನು ? ಇವತ್ತು ಕಂಟ್ರ್ಯಾಕ್ಟರ್‌ಗಳ ಹಾವಳಿಯನ್ನು ಈ ರಾಜ್ಯದಲ್ಲಿ ತಪ್ಪಿಸಬೇಕು ಎನ್ನತಕ್ಕಂಥ ಒಂದೇ ಒಂದು ದೃಷ್ಟಿಯಿಂದ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ರಿಜಿಸ್ಟ್ರರ್ ಆಗಿ ಅಸ್ತಿತ್ವಕ್ಕೆ ತಂದ ಮೇಲೆ ಆಗಿರತಕ್ಕ ಅಡ್ಡಿ ಏನು ? ಈ ಸಂಸ್ಥೆಯನ್ನು ಏತಕ್ಕೆ ಸ್ಟ್ರೆಂತನ್ ಮಾಡುವುದಕ್ಕೆ ಆಗಲಿಲ್ಲ ? ಸ್ವಾಮಿ ಇವರ ಹತ್ತಿರ ಬಿಲ್ ಪೇಮೆಂಟ್ ಮಾಡುವುದಕ್ಕೆ ಹಣವಿಲ್ಲ ಎನ್ನತಕ್ಕಂಥ ಕಾಲದಲ್ಲಿ ನಾನು ಪಿ ಎ.ಸಿ ಕಮಿಟಿಯ ಚೇರ್ಮನ್ ಆಗಿದ್ದಂಥ ಕಾಲದಲ್ಲಿ ನೋಡಿದ್ದೇನೆ. ನಾರಾಯಣಪುರದಲ್ಲಿ ಕೆಲಸ ತೆಗೆದುಕೊಂಡು ಮಾಡುತ್ತಿದ್ದರು. ಆ ಕಂಟ್ರ್ಯಾಕ್ಟರ್‌ರವರಿಗೆ ಅಗ್ರಿಮೆಂಟ್ ಆಗುವುದಕ್ಕಿಂತ ಮುಂಚಿತವಾಗಿಯೇ ೧ ಕೋಟಿ ೧¼ ಕೋಟಿ ಹಣವನ್ನು ಹುಜೂರ್ ಟ್ರಜರಿಯಿಂದ ತೆಗೆದುಕೊಡತಕ್ಕಂಥ ಪರಿಪಾಠ ಬೆಳೆದುಕೊಂಡು ಬಂದಿದೆ. ೯೦,೫೦ ಲಕ್ಷ ೧ ಕೋಟಿಯವರೆಗೆ ಕೊಡತಕ್ಕಂಥ ಪರಿಪಾಠ ಬೆಳೆದು ಬಂದಿದೆ. ನಾನು ಇದರ ಬಗ್ಗೆ ಒಂದು ಪ್ರಶ್ನೆ ಕಳುಹಿಸಿದ್ದೆ. ಮಾನ್ಯ ಮುಖ್ಯಮಂತ್ರಿಗಳವರೂ ಸಹ ಸಭೆಯಲ್ಲಿದ್ದಾರೆ ಅದಕ್ಕೆ ಅವರ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ಈ ರಾಜ್ಯದಲ್ಲಿ ಯಾವ ಯಾವ ಯೋಜನೆಗಳ ಕೆಳಗಡೆ ಖಾಸಗಿ ಕಂಟ್ರ್ಯಾಕ್ಟರ್‌ಗಳವರಿಗೆ ಎಷ್ಟೆಷ್ಟು ಹಣವನ್ನು ಅದು ಕಾಳಿ ನದಿ ಇರಬಹುದು. ಹೇಮಾವತಿ ಇರಬಹುದು ಹಾರಂಗಿ ಇರಬಹುದು ಕಬಿನಿ ಇರಬಹುದು ಯಾವುದೇ ಇರಬಹುದು. ಕಂಟ್ರ್ಯಾಕ್ಟರ್‌ರವರಿಗೆ ಅಗ್ರಿಮೆಂಟ್ ಸೈನ್ ಆಗುವುದಕ್ಕಿಂತ ಮುಂಚಿತವಾಗಿ ಅವರಲ್ಲಿ ಮಿಷನರಿ ಪರ್ಚೇಜ್ ಮಾಡುವುದಕ್ಕಿಂತ ಮುಂಚೆ

ತವಾಗಿ, ಮಿಷನರಿ ಪರ್ಚೇಜ್ ಆದ ಮೇಲೆ ೮೦,೯೦ ಪರ್ಸೆಂಟ್ ಕೊಡುವುದು ಬೇರೆ ವಿಚಾರ. ಮಿಷನರಿ
ಗಳನ್ನು ಕೊಂಡುಕೊಳ್ಳುವುದಕ್ಕಿಂತ ಮುಂಚಿತವಾಗಿ ಹಣವನ್ನು ಕೊಟ್ಟಿದ್ದೀರಿ ಎನ್ನುವ ಬಗ್ಗೆ ವಿವರಣೆ
ಯನ್ನು ಕೇಳಿದ್ದೆ. ದೇವೇಗೌಡರವರು ಏನಾದರೂ ಮಾತನಾಡಿದರೆ ಬರೀ ನಡೆದು ಹೋಗಿರುವ ವಿಚಾರದ
ಬಗ್ಗೆ ಚಿಂತೆ ಇದೆ, ಕಾಳಜಿ ಇದೆ ಅಂತ ಹೇಳುತ್ತಾರೆ. ಈ ಜಾಗದಲ್ಲಿ ಕುಳಿತು ಹೇಳುತ್ತೇನೆ. ನನಗೆ ಯಾರ
ಭಯವೂ ಇಲ್ಲ ಯಾರ ಹಂಗೂ ಇಲ್ಲ, ಒಳ್ಳೆಯ ಕೆಲಸ ಮಾಡಿದ್ದರೆ ಮಾಡಿದ್ದೀರಿ ಎಂದು ಹೇಳುತ್ತೇನೆ
ಆದರೆ ಆ ರೀತಿಯ ಕೆಲಸ ನಿಮ್ಮಿಂದಲೂ ಆಗಿಲ್ಲ. ಆ ರೀತಿಯ ಘಟನೆಗಳು ನಡೆದುಹೋಯಿತು. ಆದುದ
ರಿಂದ ವಿಶ್ವಸಂಸ್ಥೆಯಿಂದ ನೀವು ೧ ಕೋಟಿ ಒಂದೂವರೆ ಕೋಟಿ ಬಂಡವಾಳವನ್ನು ತಂದು ಈ ರಾಜ್ಯದಲ್ಲಿ
ರತಕ್ಕ ಕಂಟ್ರಾಕ್ಟರ್‌ಗಳ ಹಾವಳಿಯನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲವೇ? Why do they want
to close this organisation being their own baby? ಸ್ವಾಮಿ ಆ ಒಂದು ದುರಂತ
ನಡೆದುಹೋಗಿದೆ. ಆದರೆ ಕೆಲವು ವಿಷಯಗಳ ಬಗ್ಗೆ ನಾನು ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತೇನೆ. ಮೇಜರ್
ಇರಿಗೇಷನ್ ಕಂಟ್ರೋಲ್ ಬೋರ್ಡನ್ನು ಅಬಾಲಿಶ್ ಮಾಡಬೇಕೆಂದು ಈ ಸಭೆಯಲ್ಲಿ ಈ ಮಾತನ್ನು ಹೇಳಿ
ದ್ದೇನೆ ಮತ್ತು ಪಿ.ಎ.ಸಿ ಕಮಿಟಿಯಲ್ಲಿ ಚೇರ್ಮನ್ ಆಗಿದ್ದಾಗ ಕೂಡ ಹೇಳಿದ್ದೇನೆ. ಮುಖ್ಯಮಂತ್ರಿಗಳವರು
ಆ ಜಾಗದಲ್ಲಿ ಕೂತು ನಿರ್ಣಯ ಮಾಡಬೇಕಾದಂತ ಜಾಗದಲ್ಲಿ ಫಿನಾನ್ಸ್ ಸೆಕ್ರೆಟರಿಯವರು ಆಗಲಿ ಅಥವಾ
ಪಿ.ಡಬ್ಲ್ಯು.ಡಿ. ಸೆಕ್ರೆಟರಿಯವರಾಗಲಿ ಯಾರೇ ಅಧಿಕಾರದಲ್ಲಿ ಇರಬಹುದು ಮುಖ್ಯಮಂತ್ರಿಗಳವರ ಪ್ರಭಾ
ವವನ್ನು ಧಿಕ್ಕರಿಸತಕ್ಕ ಶಕ್ತಿ ಸಾಮಾನ್ಯವಾಗಿ ಇರಲಿಕ್ಕೆ ಸಾಧ್ಯವಿಲ್ಲ. ಈ ಸೂಚನೆಯನ್ನು ಕೊಟ್ಟ ಮೇಲೂ
ಸರ್ಕಾರ ನಿರ್ಣಯ ಮಾಡಿ ಅಲ್ಲಿಗೆ ಒಬ್ಬ ಪ್ರಮುಖವಾದಂಥ ಹೆಸರಾಂತ ವ್ಯಕ್ತಿಯನ್ನು ಆ ಜಾಗದಲ್ಲಿ
ನೇಮಕಮಾಡಿದ್ದಾರೆ. ತಾಂತ್ರಿಕ ವಿಭಾಗದಲ್ಲಿ ಪರಿಶ್ರಮ ಹೊಂದಿರತಕ್ಕವರು ಮತ್ತು ಪ್ರಮುಖವಾಗಿ ಹೆಸ
ರಾಂತ ವ್ಯಕ್ತಿಯಾದವರನ್ನೇ ನೇಮಕ ಮಾಡಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಮೆಚ್ಚಿಗೆಯನ್ನು ವ್ಯಕ್ತ
ಪಡಿಸುತ್ತೇನೆ. ಇದು ಬಹಳ ಒಳ್ಳೆಯ ಜವಾಬ್ದಾರಿ ಸ್ಥಾನದಲ್ಲಿ ಮುಖ್ಯಮಂತ್ರಿಗಳವರ ಸ್ಥಾನದಲ್ಲಿ ಕೂತು
ಡಿಸಿಷನ್ ತೆಗೆದುಕೊಳ್ಳತಕ್ಕ ಸ್ಥಾನದಲ್ಲಿ ಒಬ್ಬ ತಾಂತ್ರಿಕ ಪರಿಶ್ರಮ ಇರತಕ್ಕಂಥ ಹಿರಿಯ ಅಧಿಕಾರಿಯಾಗಿ
ನಿವೃತ್ತರಾಗಿರತಕ್ಕಂಥವರಿಗೆ ಆ ಜಾಗವನ್ನು ಏನು ಬಿಟ್ಟುಕೊಟ್ಟಿದ್ದಾರೆ ಅದಕ್ಕಾಗಿ ನಾನು ನಿಜವಾಗಿಯೂ
ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಆದರೆ ನಾನು ಕೇಳಿದ್ದೇನೆ ಅವರು ಕೂತುಕೊಂಡು ಕೆಲಸ
ಮಾಡುವುದಕ್ಕೆ ಒಂದು ಕಚೇರಿ ಕೊಡುವುದಕ್ಕೆ ಇಲ್ಲಿಯವರೆಗೂ ಆಗಿಲ್ಲವೆಂದು. ಅದೇ ಸಲಹಾಗಾರರಿಗೆ
ಕಚೇರಿ ಕೊಟ್ಟಿದ್ದಾರೆ, ಮನೆ ಕೊಟ್ಟಿದ್ದಾರೆ, ಅದೇ ಇವರಿಗೊಂದು ಕಚೇರಿ ಕೊಡುವುದಕ್ಕಾಗುವುದಿಲ್ಲವೇ?
ಅದೇ ನಾಳೆ ಮಂತ್ರಿಗಳ ವಿಸ್ತರಣೆಯಾದರೆ ಇನ್ನು ೪೦ ಜನ ಮಂತ್ರಿಗಳಾದರು ಎಂದರೆ ವಿಧಾನ ಸೌಧದಲ್ಲಿ
ಹುಡುಕಿ ಜಾಗ ಕೊಡುತ್ತೀರಾ. ಇವರಿಗೆ ಒಂದು ಆಫೀಸ್, ಕೆಲವು ಕ್ಲರ್ಕ್, ಟೈಪಿಸ್ಟ್‌ಗಳನ್ನು ಕೊಡು
ವುದು ಒಂದು ದೊಡ್ಡ ಸಮಸ್ಯೆಯೇ? ಇದು ಮುಖ್ಯಮಂತ್ರಿಗಳವರ ಗಮನಕ್ಕೆ ಹೋಗದೇ ಇರ
ಬಹುದು, ಆದುದರಿಂದ ಇದರ ಬಗ್ಗೆ ವ್ಯವಸ್ಥೆ ಮಾಡಿ ಎಂದು ತಮ್ಮ ಮುಖಾಂತರ ತಿಳಿಸುವುದಕ್ಕೆ ಇಷ್ಟ
ಪಡುತ್ತೇನೆ. ತಮ್ಮ ನಿರ್ಣಯ ಏನು ಇದೆ ಅದು ಅತ್ಯುತ್ತಮವಾಗಿ ಆಗಬೇಕಾದರೆ ಅವರಿಗೆ ಒಳ್ಳೆಯ
ಪರಿಸರವನ್ನು ಒದಗಿಸಿಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮಗೆ ಸೂಚನೆ ನೀಡಬಯಸು
ತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—೩-೪ ವರ್ಷಗಳಿಂದ ಅಧಿಕಾರಿಗಳು ಕೆಲಸ ಮಾಡುತ್ತಿರುವಾಗ ಯಾರಾ
ದರೂ ಲಂಚವನ್ನು ತಂದು ಕೊಟ್ಟಿರುತ್ತಾರೆ. ಆತ ಚಾರ್ಜ್ ಕೊಟ್ಟು ಹೋಗುವಾಗ ಅದನ್ನು ಜೇಬಿನಲ್ಲಿ
ಹಾಕಿಕೊಂಡು ಹೋಗುತ್ತಾನೆ. ಆದ್ದರಿಂದ ಅಂಥವರ ಮನೆಯನ್ನು ಧಾಳಿ ಮಾಡಲೇಬೇಕಾಗುತ್ತದೆ.
ಅಂತೆಯೇ ಮಾಡುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ನಿಮಗೆ ಅದರ ಅನುಭವ ಇಲ್ಲವೆಂದು ಕಾಣುತ್ತದೆ. ನೀವು ಅಧಿ
ಕಾರಿಗಳಾಗಿ ಕೆಲಸ ಮಾಡಿದ್ದರೆ ಹೇಳುತ್ತಿದ್ದೀರಿ. ಮೊದಲೇ ಧಾಳಿ ಮಾಡುತ್ತಾರೆಂದು ಗೊತ್ತಾದರೆ
ಇದ್ದ ಹಣ ಮತ್ತು ಒಡವೆ ವಸ್ತುಗಳನ್ನೆಲ್ಲ ತಮ್ಮನ ಮನೆಗೋ, ತಂಗಿ ಮನೆಗೋ ಸಾಗಿಸುತ್ತಾನೆ.
ಅಂಥ ಸಂದರ್ಭಗಳಲ್ಲಿ ಅಧಿಕಾರಿಗಳು ತುಂಬಾ ಓಡಾಡುತ್ತಾರೆ. ಸಾಮಾನ್ಯವಾಗಿ ಎಲ್ಲ ಇಲಾಖೆಗಳಲ್ಲೂ
ಅಂಥ ಅಧಿಕಾರಿಗಳು ಇದ್ದಾರೆ. ಅಷ್ಟೇ ಏಕೆ, ರಾಜಕಾರಣಿಗಳು ಭ್ರಷ್ಟರು ಇಲ್ಲವೆ? ಎಲ್ಲಿಯವರೆಗೆ ಈ
ದೇಶದಲ್ಲಿ ರಾಜಕೀಯ ಭ್ರಷ್ಟಾಚಾರ ಇರುತ್ತದೆ ಅಲ್ಲಿಯವರೆಗೆ ದೇಶ ಉದ್ಧಾರವಾಗಲಿಕ್ಕೆ ಸಾಧ್ಯವಿಲ್ಲ.
ಪಾಪ, ಬರೀ ಅಧಿಕಾರಿಗಳನ್ನು ಏಕೆ ದೂಷಿಸಬೇಕು? ಅವರೂ ಕೂಡ ಸಮಾಜದ ಒಂದು ಅಂಗ.
Day in and day out from 1962, the politicians who were in office

have they not utilised the services of the officers during elections? ಇವತ್ತು ಹೇಳಬೇಕೆಂದರೆ, ೧೯೬೦ರಲ್ಲಿ ಇದ್ದ ಮುಖ್ಯ ಇಂಜಿನಿಯರು ಇಲ್ಲ ಮತ್ತು ಲೋಕೋಪಯೋಗಿ ಇಲಾಖಾ ಮಂತ್ರಿಗಳೂ ಇಲ್ಲ ಅದು ಪ್ರಥಮವಾಗಿ ಪ್ರಾರಂಭವಾದದ್ದು ಅಧಿಕಾರಿಗಳ ಮುಖಾಂತರ ವೇನಲ್ಲ, ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಇತ್ತೀಚೆಗೆ ಸ್ವಲ್ಪ ವ್ಯಾಪಕವಾಯಿತು. ಈ ಬಗ್ಗೆ ವಿಚಾರ ಮಾಡುವಾಗ ಮೊದಲು ತಮ್ಮ ಮನೆಯನ್ನು ಸರಿ ಮಾಡಿಕೊಂಡು ನಂತರ ಬೇರೆ ಯವರನ್ನು ನೋಡಬೇಕಾಗುತ್ತದೆ. ಎಲ್ಲಿಯವರೆಗೆ ಪೊಲಿಟಿಕಲ್ ಕರಪ್‌ಷನ್ ಇರುತ್ತದೋ ಅಲ್ಲಿಯ ವರೆಗೆ ಈ ಗೋಳು ತಪ್ಪುವುದಿಲ್ಲ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುವುದೇನೆಂದರೆ, ನೀವು ತನಿಖೆ ಮಾಡುವುದಾದರೆ ಮೊದಲು ರಾಜಕೀಯ ಮುಖಂಡರುಗಳ ಆಸ್ತಿಗಳ ಬಗ್ಗೆ ತನಿಖೆ ಮಾಡ ಬೇಕು. ಆ ಒಂದು ದೊಡ್ಡ ಪ್ರಚಾರ ಈ ದೇಶದಲ್ಲಿ ನಡೆಯುತ್ತಿದೆ, ಅದಕ್ಕೆ ಒಂದೊಂದು ಸಾರಿ ಬೆಲೆ ಇರುತ್ತದೆ, ಒಂದೊಂದು ಸಾರಿ ಇರುವುದಿಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ಬರೀ ಅಧಿಕಾರಿಗಳ ಮನೆ ಮಾತ್ರವಲ್ಲ, ರಾಜಕೀಯ ಪುಡಾರಿಗಳ ಮನೆ ಮಂತ್ರಿಗಳ ಮನೆ ಹೀಗೆ ಪ್ರತಿಯೊಬ್ಬರ ಮನೆಯ ಮೇಲೂ ಧಾಳಿ ನಡೆಸಬೇಕು. ಆಗ ಮಾತ್ರ..

ಶ್ರೀ ಹೆಚ್. ಡಿ. ದೇವೇಗೌಡ.—ಅದನ್ನೆ ನಾನು ಹೇಳಿದ್ದು ನಾನು ಕನ್ನಡ ಭಾಷೆಯಲ್ಲಿ ಸರಳವಾಗಿ ಹೇಳಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರ ಭಾಷೆ ನಿಮಗೆ ಅರ್ಥವಾಗುವುದಿಲ್ಲ. ನಿಮ್ಮ ಭಾಷೆ ಅವರಿಗೆ ಅರ್ಥವಾಗುವುದಿಲ್ಲ. ಉದ್ದೇಶ ಎಲ್ಲ ಒಂದೇ.

ಶ್ರೀ ಹೆಚ್. ಡಿ. ದೇವೇಗೌಡ.—ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಹಣ ಸಂಗ್ರಹಣೆ ಮಾಡುವುದಕ್ಕೆ ಪ್ರಯತ್ನ ಮಾಡಿದಾಗ......

ಶ್ರೀ ಭೀಮಣ್ಣ ಖಂಡ್ರೆ.—ಯಾರ್ಯಾರು ಆಸ್ತಿಗಳನ್ನು ಮಾಡಿಕೊಂಡಿದ್ದಾರೆಂಬುದನ್ನು ಪತ್ತೆ ಮಾಡ ಬೇಕಾಗುತ್ತದಲ್ಲ.

ಶ್ರೀ ಹೆಚ್. ಡಿ. ದೇವೇಗೌಡ. ಕರಪ್‌ಷನ್ನಿಗೆ ಉಗಮ ಸ್ಥಾನವಾದದ್ದನ್ನು ಇವತ್ತು ಸ್ಥಗಿತ ಗೊಳಿಸಿದ್ದೀರಿ. ಅದನ್ನು ನಾನು ಒಪ್ಪುತ್ತೇನೆ. ಇದರಿಂದ ರಾತ್ರಿ ೧೧ ಗಂಟೆಯಲ್ಲಿ ಸಿನೀಮಾದಿಂದ ಕರೆದುಕೊಂಡು ಬಂದು ಅಧಿಕಾರಿಗಳಿಗೆ ಬಡ್ತಿ, ವರ್ಗಾವಣೆ ಇತ್ಯಾದಿಗಳನ್ನು ಮಾಡತಕ್ಕದ್ದು ನಿಲ್ಲುತ್ತದೆ. ಇದನ್ನು ನೀವು ನಿಮ್ಮ ಸಾಧನೆ ಪಟ್ಟಿಯಲ್ಲಿ ಸೇರಿಸಿಕೊಳ್ಳಬಹುದು. ಯಾವಾಗಲೂ ನಾನು. ಒಳ್ಳೆಯ ದನ್ನು ಮಾಡಿದಾಗ ಮೆಚ್ಚಿಗೆ ವ್ಯಕ್ತಪಡಿಸುತ್ತೇನೆ, ಮತ್ತು ತಪ್ಪು ಮಾಡಿದಾಗ ನಿರ್ಭಯದಿಂದ ಬಿಚ್ಚಿ ಹೇಳುತ್ತೇನೆ. ಅದನ್ನು ಹೇಳುವುಧಕ್ಕೆ ನನಗೇನು ಭಯ ಇಲ್ಲ.

ಒಳ್ಳೆಯದನ್ನು ಮಾಡಿದಾಗಿ ಏತಕ್ಕೆ ಇಲ್ಲ ಎಂದು ಹೇಳಬೇಕು ? ಕೆಟ್ಟದ್ದು ಮಾಡಿದಾಗ ಅದನ್ನು ಹೇಳಬೇಕಾಗುತ್ತದೆ. ಸರ್ಕಾರದ ದೋಷವನ್ನು ಎತ್ತಿ ತೋರಿಸುವುದಕ್ಕೆ ಹಿಂದೆ ಹೋಗಬೇಕಾಗಿಲ್ಲ. ಅವರೆ ಒಳ್ಳೆಯ ಕೆಲಸ ಮಾಡಿದಾಗ ಮೆಚ್ಚಿಕೊಳ್ಳಬೇಕಾಗುತ್ತದೆ. ಮೂರು ತಿಂಗಳು, ನಾಲ್ಕು ತಿಂಗಳು ಗಳ ಸರ್ವೀಸ್ ಎಕ್ಸ್‌ಟೆನ್‌ಷನ್‌ಗೆ ಎರಡು ಲಕ್ಷ, ಮೂರು ಲಕ್ಷ ರೂಪಾಯಿ ಬಟವಾಡೆ ಆಗುತ್ತಾ ಇದ್ದ ಕಾಲವೂ ಇತ್ತು. ಆ ವಿಚಾರ ಬೇರೆ.

ಇನ್ನು ಕೊನೆಯದಾಗಿ ವಿದ್ಯುಚ್ಛಕ್ತಿ ಬಗ್ಗೆ ಕೆಲವು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ಸಣ್ಣ ನೀರಾವರಿ ಮತ್ತು ಸಾರ್ವಜನಿಕ ಆರೋಗ್ಯ ಹಾಗೂ ತಾಂತ್ರಿಕ ಇಲಾಖೆ, ನೀರು ಸರಬರಾಜು ಮುಂತಾದ ವಿಷಯಗಳ ಬಗ್ಗೆ ತುಂಬಾ ಪ್ರಸ್ತಾಪ ಮಾಡುತ್ತಾ ಹೋದರೆ ತುಂಬಾ ಕಾಲ ಕಡಿಮೆ ಇರುವು ದರಿಂದ ಆಗುವುದಿಲ್ಲ. ಆದ್ದರಿಂದ ವಿದ್ಯುಚ್ಛಕ್ತಿ ಬಗ್ಗೆ ಒಂದೇ ಒಂದು ವಿಚಾರವನ್ನು ಪ್ರಮುಖವಾಗಿ ಪ್ರಸ್ತಾಪ ಮಾಡುತ್ತೇನೆ.

ಶ್ರೀ ಆರ್. ಗುಂಡೂರಾವ್.— ಮೊದಲೇ ನೀವು ಇಲ್ಲಿ ಇದ್ದಿದ್ದರೆ ಎಷ್ಟೋ ಸಮಯ ಸಿಗುತ್ತಿತ್ತು. ಎಲ್ಲಾ ಕಳೆದುಕೊಂಡಿರಿ.

ಶ್ರೀ ಹೆಚ್.ಡಿ. ದೇವೇಗೌಡ.—ಅದರ ಬಗ್ಗೆ ಚರ್ಚೆ ಬೇಡ.

ಶ್ರೀ ಆರ್. ಗುಂಡೂರಾವ್.—ಹೇಳುವುದಕ್ಕೆ ಸಾಕಷ್ಟು ಅವಕಾಶ ಇತ್ತು. ಬೇಕಾದರೆ ಈಗ ನಾವು ಕಡಿಮೆ ಮಾಡುತ್ತೇವೆ, ನೀವೇ ಜಾಸ್ತಿ ಹೇಳಿ.

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ನೀವು ಮೊದಲೇ ಕರೆಸಿಕೊಂಡಿದ್ದರೆ ನಾವು ಬರುತ್ತಿದ್ದೆವು.

ಶ್ರೀ ಆರ್. ಗುಂಡೂರಾವ್.—ಕೊನೆಗೂ ಒಳ್ಳೆಯ ನಿರ್ಣಯ ಮಾಡಿದ್ದೀರಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ನೀವೂ ಒಳ್ಳೆಯ ಕೆಲಸ ಮಾಡಿದ್ದೀರಿ. ರೆಸಲ್ಯೂಷನ್ ಮಾಡಿ ವಾಪಸ್ ಕರೆಸುವ ಬುದ್ಧಿ ನಿಮಗೆ ಮೊದಲೇ ಬಂದಿದ್ದರೆ ನಮಗೂ ಬರುವುದಕ್ಕೆ ಅನುಕೂಲ ವಾಗುತ್ತಿತ್ತು.

ಶ್ರೀ ಹೆಚ್ ಡಿ. ದೇವೇಗೌಡ.—ಇರಲಿ, ನಾನು ಆ ವಾದವಿವಾದಕ್ಕೆ ಇಳಿಯುವುದಕ್ಕೆ ಈಗ ಹೋಗುವುದಿಲ್ಲ. ಸಭೆಯ ನಿರ್ಣಯಕ್ಕೆ ತಲೆಬಾಗಿ ನಾವು ಕೆಲಸ ಮಾಡುತ್ತಿದ್ದೇವೆ. ಆದ್ದರಿಂದ ಅದರ ಬಗ್ಗೆ ವಾದವಿವಾದಕ್ಕೆ ಈ ಸಂದರ್ಭದಲ್ಲಿ ಹೋಗುವುದಿಲ್ಲ. ಆ ಸನ್ನಿವೇಶಕ್ಕೆ ತಕ್ಕಂತೆ ನಮ್ಮ ಪಕ್ಷದ ಅಧ್ಯಕ್ಷರು ಸಾರ್ವಜನಿಕವಾಗಿ ಕೆಲವು ವಿವರಣೆಗಳನ್ನು ಕೊಡಬೇಕಾಗಿ ಬರಬಹುದು. ಆದ್ದರಿಂದ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇತ್ತೀಚೆಗೆ ನಡೆದು ಹೋಗಿರುವ ಘಟನೆ ಬಗ್ಗೆ ಈ ಸದನದಲ್ಲಾ ಗಲೀ, ಹೊರಗಡೆಯಾಗಲೀ ವಿವರಣೆಯನ್ನು ಕೊಡಬೇಕಾದ ಅವಶ್ಯಕತೆ ಇದೆ. ಅದನ್ನು ನಮ್ಮ ಅಧ್ಯಕ್ಷರಿಗೆ ಬಿಡುತ್ತೇನೆ. ಈಗ ನಾನು ವಿದ್ಯುಚ್ಛಕ್ತಿ ಬಗ್ಗೆ ಹೇಳುತ್ತೇನೆ. ರಾಜ್ಯದಲ್ಲಿ ವಿದ್ಯುಚ್ಛಕ್ತಿ ಕೊರತೆ ಇದೆ. ಇದನ್ನು ಹೇಳುವುದಕ್ಕಿಂತ ಮುಂಚೆ ಇನ್ನೊಂದು ಮಾತನ್ನು ಹೇಳುತ್ತೇನೆ. ಜನತೆಯ ಮ್ಯಾಂಡೇಟ್ ನಾವು ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡಬೇಕು ಎಂಬುದು. ಅದನ್ನು ಮೊದಲು ನೀವು ಕಸಿದುಕೊಂಡಿರಿ. ಆ ಕಡೆಯಿಂದ ಇಲ್ಲಿ ಕುಳಿತುಕೊಂಡಿರಿ ನಮ್ಮ ಜಾಗವನ್ನು ನೀವು ಕಿತ್ತು ಕೊಂಡಿರಿ. ಆಮೇಲೆ ನೀವು ಅಲ್ಲಿ ಹೋದಿರಿ. ಅಲ್ಲಿ ಇದ್ದವರು ಇಲ್ಲಿ ಬಂದು ಕುಳಿತುಕೊಂಡರು. ಒಟ್ಟಿನಲ್ಲಿ ಹೊಡೆತ ಬಿದ್ದದ್ದು ನಮಗೆ.

ಶ್ರೀ ಸಿ.ಎ. ಚಂದೇಗೌಡ.— ಇದು ಸೆಂಟ್ರಲ್‌ನಲ್ಲಾಯಿತು, ಇಲ್ಲಿ ಆಗಲಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ಕುಳಿತುಕೊಂಡು ನಾನು ಹೇಳುವುದನ್ನು ಕೇಳಿ ಚಂದ್ರೇಗೌಡರೆ, ನೀವು ಹೇಳುವುದನ್ನು ಆಮೇಲೆ ಹೇಳಿ. ಈ ಸದನದಲ್ಲಿ ಸ್ಥಾನಪಲ್ಲಟ ಆಗಿರಬಹುದು. ರಾಜ್ಯದಲ್ಲಿ ವಿರೋಧಿಪಕ್ಷದಲ್ಲಿ ಕುಳಿತು ಮಾಡುವುದಕ್ಕೆ ಜನತೆಯ ಮ್ಯಾಂಡೇಟ್ ಇನ್ನೂ ಇದೆ. ಅಧಿಕಾರಕ್ಕೆ ಬರುವುದಕ್ಕೆ ಮ್ಯಾಂಡೇಟ್ ಇಲ್ಲ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. That, I will confess. ಅದರ ಬಗ್ಗೆ ಭಾರಿ ಆಕಾಂಕ್ಷೆ, ವ್ಯಾಮೋಹ ಇಲ್ಲ. ಏಕೆಂದರೆ ವಿರೋಧಿಪಕ್ಷದಲ್ಲಿ ಕುಳಿತು ಕೆಲಸ ಮಾಡ್ಯುವುದೂ ಅಷ್ಟೇ ಜವಾಬ್ದಾರಿಯುತವಾದುದು. ಜನತಂತ್ರದಲ್ಲಿ ಇದಕ್ಕೆ ಅವಕಾಶ ಇದೆ. ಇಲ್ಲಿ ನಮ್ಮಗೆ ಸ್ಥಾನಪಲ್ಲಟವಾಯಿತು. ಆ ಕಡೆ (ವಿರೋಧಪಕ್ಷದ ನಾಯಕರ ಸ್ಥಾನದಲ್ಲಿ) ಕುಳಿತಿದ್ದ ಬೊಮ್ಮಾಯಿಯ್ಯವರು ಪಕ್ಕಕ್ಕೆ ಹೋಗಿದ್ದಾರೆ. ಅಷ್ಟೇ ಸ್ಥಾನಪಲ್ಲಟದಿಂದ ಆದ ವ್ಯತ್ಯಾಸವೇ ಹೊರತು ಬೇರೆನೂ ಇಲ್ಲ. ಜನತೆಯ ಹೃದಯದಲ್ಲಿ ಜನತಾಪಕ್ಷಕ್ಕೆ ಅಧಿಕೃತ ಮನ್ನಣೆ ಇದೆ. ಜನತೆಯಿಂದ ಮನ್ನಣೆ ಪಡೆದ ವಿರೋಧಪಕ್ಷದ ಸ್ಥಾನ ಇದೆಯಲ್ಲ. ಮಾನ್ಯ ಮುಖ್ಯಮಂತ್ರಿಗಳು ಇತ್ತೀಚೆಗೆ ಹೇಳುತ್ತಿದ್ದರು. ಚುನಾವಣೆಯಲ್ಲಿ ನಾವು ಗೆದ್ದಿದ್ದೇವೆ. ಇಲ್ಲಿ ನೀವು (ವಿರೋಧಪಕ್ಷದವರು) ಕುಳಿತು ಕೆಲಸ ಮಾಡಲು ಅಧಿಕಾರ ಇಲ್ಲ ಎಂದು. ಪಶ್ಚಿಮ ಬಂಗಾಳದಲ್ಲಿ ಮೂರು ಸೀಟನ್ನು ಕಾಗ್ರೇಸ್ (ಐ)ನಲ್ಲಿ ಕಳೆದು ಕೊಂಡಿದ್ದಾರೆ. ಪಶ್ಚಿಮಬಂಗಾಳದಲ್ಲಿ ಅಧಿಕೃತ ಮನ್ನಣೆ ಪಡೆದಂಥ ವಿರೋಧಿ ಪಕ್ಷಕಾಂಗ್ರೆಸ್ (ಐ). ಹಾಗಾದರೆ ಜ್ಯೋತಿಬಸು ಅವರು ನೀವು ಹೇಳಿದ ಮಾತನ್ನೇ ಹೇಳಿದರೆ ನೀವು ಎಲ್ಲಿ ಹೋಗ ಬೇಕು ? Election defeat is not going to decide the future of a political party. ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ (ಐ) ನವರು ಅಸೆಂಬ್ಲಿಗೆ ಹೋಗಬೇಡಿ ಎಂದು ಹೇಳುವುದಕ್ಕಾಗುತ್ತದೆಯೇ ? ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಇದರ ಬಗ್ಗೆ ನಾನು ಹೆಚ್ಚಿನ ಚರ್ಚೆ ಮಾಡುವುದಿಲ್ಲ. ಅವಕಾಶ ಬಂದಾಗ ಹೇಳೋಣ, ಆದರೆ ಇವತ್ತು ಜನತೆಯ ನಿರೀಕ್ಷಣೆ ಯಂತೆ ಕೆಲಸ ಆಗಲಿಲ್ಲ. ಸ್ವಲ್ಪ ಕರ್ತವ್ಯ ಲೋಪ ಆಗಿದೆ, ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಏತಕ್ಕೆಂದರೆ ಸ್ಥಾನಪಲ್ಲಟವಾಯಿತಲ್ಲ. ಆದರೂ ನಮ್ಮ ಕರ್ತವ್ಯವನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಆರ್. ಗುಂಡೂರಾವ್.—ಇದು ದೇಶದ ದೌರ್ಭಾಗ್ಯ.

ಶ್ರೀ ಹೆಚ್. ಡಿ. ದೇವೇಗೌಡ.—ಏನು ಮಾಡುವುದು ಹೇಳಿ. ಏನೇನೋ ದೌರ್ಭಾಗ್ಯಗಳು ನಡೆದುಹೋಗುತ್ತವೆ.

ಶ್ರೀ ಆರ್. ಗುಂಡೂರಾವ್.—ನೀವು, ಬೊಮ್ಮಾಯಿಯವರು, ಜನತಾಪಾರ್ಟಿಯವರು ಇದನ್ನು ತಿಳಿದುಕೊಳ್ಳಿ.

ಶ್ರೀ ಹೆಚ್.ಡಿ. ದೇವೇಗೌಡ. ಅದು ಜನತೆಯ ಕೈಯಲ್ಲಿದೆ. ನಿಮ್ಮ ಕೈಯಲ್ಲೂ ಇಲ್ಲ. ನಮ್ಮ ಕೈಯಲ್ಲೂ ಇಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ. ನಾವು ಎಲ್ಲಾ ತಿಳಿದುಕೊಂಡೇ ಕೆಲಸ ಮಾಡುತ್ತಿದ್ದೇವೆ. ಇಲ್ಲಿ ಸ್ಥಾನಪಲ್ಲಟವಾದರೂ ಜನರ ಮನಸ್ಸಿನಲ್ಲಿ ಸ್ಥಾನಪಲ್ಲಟ ಆಗಿಲ್ಲ.

ಶ್ರೀ ಆರ್. ಗುಂಡೂರಾವ್.—ಜನತಾ ಪಾರ್ಟಿಗೆ ಸ್ಥಾನಪಲ್ಲಟವಾಗಬಾರದು ಎಂಬುದೇ ನನ್ನ ಉದ್ದೇಶ. ನೀವು ಪಲ್ಲಟ ಮಾಡಿಕೊಳ್ಳುವುದಕ್ಕೆ ಹೋಗುತ್ತೀರಲ್ಲ ಎಂಬುದೇ ಬೇಜಾರು, ಅಷ್ಟೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸಂದರ್ಭ ಬಂದಾಗ ಹಾಗೆ ಮಾಡಬೇಕಾಗುತ್ತದೆ. ದೇವರಾಜ ಅರಸರ ತರಹ ನೀವು ಈ ಕಡೆ ಬಂದರೆ ನಿಮ್ಮ ಜೊತೆ ಕೂಡ ಕುಳಿತು ಕೆಲಸ ಮಾಡಬೇಕಾಗುತ್ತದೆ. ಅಂಥ ಪರಿಸ್ಥಿತಿ ಬಂದರೆ ವಿರೋಧ ಪಕ್ಷದಲ್ಲಿ ಕುಳಿತು ಹಾಗೆ ಕೆಲಸ ಮಾಡಬೇಕಾಗುತ್ತದೆ.

ಶ್ರೀ ಆರ್. ಗುಂಡೂರಾವ್.—ನಿಲಿಸಿ ಕಳೆಯಲಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ತಾವು ಅವರ ಸ್ಥಾನದಲ್ಲಿ ಬಂದು ಕುಳಿತರೆ ತಮ್ಮ ಜೊತೆಯೂ ಮಾಜಿ ಮುಖ್ಯಮಂತ್ರಿಗಳು ಎಂದು ಕೆಲಸ ಮಾಡಬೇಕಾಗುತ್ತದೆ.

ಶ್ರೀ ಆರ್. ಗುಂಡೂರಾವ್. ಜೊತೆ ಕೆಲಸ ಮಾಡಬಹುದು. ಆದರೆ ನನ್ನ ಜೊತೆ ಕೆಲಸ ಮಾಡುವುದಕ್ಕೂ ದೇವರಾಜ ಅರಸರ ಜೊತೆ ಕೆಲಸ ಮಾಡುವುದಕ್ಕೂ ಬಹಳ ವ್ಯತ್ಯಾಸ ಉಂಟು. ಏಕೆಂದರೆ ಜನತಾ ಪಾರ್ಟಿಯವರು ನನ್ನನ್ನು ಯಾವಾಗಲೂ ದೂರಿಲ್ಲ. ಆದರೆ ಅವರ ವಿಚಾರದಲ್ಲಿ ಸಾಕಷ್ಟು ದೂರಿನ ಮಳೆಗರೆದಿದ್ದೀರಿ. ನನಗೂ ದೇವರಾಜ ಅರಸರಿಗೂ ವ್ಯತ್ಯಾಸ ಇದೊಂದೆ. ತಾವು ನನ್ನನ್ನು ಯಾವ ಕಮಿಷನ್ ಮುಂದೆಯೂ ಕಳುಹಿಸಿಲ್ಲ. ಅವರನ್ನು ಬೇಕಾದಷ್ಟು ಕಮಿಷನ್‌ಗಳ ಮುಂದೆ ಕಳುಹಿಸಿದ್ದೀರಿ. ಅಷ್ಟೇ ವ್ಯತ್ಯಾಸ ನನಗೂ ಅವರಿಗೂ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವೂ ಒಂದು ಬಾರಿ ವಿರೋಧಪಕ್ಷದ ನಾಯಕರಾಗಿದ್ದಾಗ ಅವಿಶ್ವಾಸ ನಿರ್ಣಯ ತೆಗೆದುಕೊಂಡಿರಿ. ಆಗ ನಿಮ್ಮ ಜೊತೆ ಕೂಡ ದೇವರಾಜ ಅರಸರ ವಿರುದ್ಧ ಎದ್ದು ನಿಂತು ಸಹಕಾರ ಕೊಟ್ಟಿದ್ದೇವೆ. ವಿರೋಧಪಕ್ಷದಲ್ಲಿ ಈ ರೀತಿ ಸಹಕಾರದಿಂದ ಕೆಲಸ ಮಾಡಬೇಕಾಗುತ್ತದೆ. ವಿರೋಧಪಕ್ಷಗಳ ನಡವಳಿಕೆ ಈ ಮನೆಯಲ್ಲಿ ಆ ರೀತಿ ನಡೆಸಿಕೊಂಡು ಹೋಗಬೇಕಾಗುತ್ತದೆ.

ಶ್ರೀ ಆರ್. ಗುಂಡೂರಾವ್.—ಒಂದು ವರುಷಗಳ ಕಾಲ ದೇವೇಗೌಡರು ನೀವು ಕರ್ನಾಟಕ ರಾಜ್ಯದಲ್ಲಿ ದೇವರಾಜ ಅರಸರ ಬಗ್ಗೆ ಮಾಡಿರುವಂಥ ಭಾಷಣ. ವೇದಿಕೆಗಳು ಇಡೀ ದೇಶಾದ್ಯಂತ್ಯ ಆಡಿರುವ ಮಾತುಗಳನ್ನು ನೋಡಿದರೆ ಏನಪ್ಪಾ ಗ್ರಹಚಾರ, ಇವರ ಜೊತೆ ಸೇರಿದರಲ್ಲ ಎಂದು ನಮಗೂ ಬೇಜಾರಾಗಿ ಹೋಗಿತ್ತು. ಆದರೆ ನನ್ನ ಜೊತೆ ಸೇರಿದರೆ ಯಾರೂ ಏನೂ ಅಪಾದನೆ ಮಾಡುವುದಕ್ಕಾಗುವುದಿಲ್ಲ. ಏತಕ್ಕೆಂದರೆ ನಾನೆಲ್ಲೂ ಸಿಕ್ಕಿಹಾಕಿಕೊಂಡಿಲ್ಲ. ಆದರೆ ನೀವು ದೇವರಾಜ ಅರಸರ ವಿರುದ್ಧ ಪ್ರಮಾಣ ಪತ್ರ ಸ್ವೀಕಾರ ಮಾಡಿ ಗ್ರೋವರ್ ಕಮಿಷನ್ ಮುಂದೆ ಒಂದೆರಡು ಅಪಾದನೆಗಳನ್ನೇ ಮಾಡಿದ್ದು, ತಾವು ಮಾಡಿದ್ದು ಎಷ್ಟು ಅಪಾದನೆಗಳಿವೆ ? What do you say Mr. Arumugham ? ನಾನು ಅವರ ಮಂತ್ರಿಮಂಡಲದಲ್ಲಿದ್ದರೂ ಸಹ ನನ್ನ ಮೇಲೆ ಯಾವುದೇ ಅಪಾದನೆಯನ್ನೂ ಮಾಡಿಲ್ಲ. ಅದನ್ನು ಕರ್ನಾಟಕ ಜನತೆ ಒಪ್ಪಿಕೊಂಡಿದೆ. ಮೊನ್ನೆ ಯಾರೋ ಒಬ್ಬರು ಹೇಳಿದರು, ಟೋಟಲ್ ರೆವಲ್ಯೂಷನ್ ಮಾಡುವುದಕ್ಕೆ ನೀವೂ ಬನ್ನಿ ರಾಜೀನಾಮೆ ಕೊಟ್ಟು ಎಂದು. ವಿರೋಧಪಕ್ಷದವರು ಏನಾದರೂ ಆ ಮಾತನ್ನು ಕೇಳುವುದಕ್ಕೆ ಹೋದರೆ ಟೋಟಲ್ ಸಬ್‌ಮರ್ಷನ್ ಆಗಿ ಹೋಗುತ್ತಾರೆ. ಆದ್ದರಿಂದ ವಿರೋಧಪಕ್ಷದವರು ಎಚ್ಚರಿಕೆಯಿಂದಿರಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ದೇವರಾಜ ಅರಸರ ಬಗ್ಗೆ ಅವರಿದ್ದಾಗ ಹೇಳಿಕೊಳ್ಳಿ, ಅವರ ಬಗ್ಗೆ ನಾನೇನೂ ಹೇಳುವುದಿಲ್ಲ. ರಾಜಕೀಯ ನೀತಿ ಬಗ್ಗೆ ತಾವು ಹೇಳುತ್ತಿದ್ದೀರಲ್ಲ. ಮೊನ್ನೆ ನಾನು ಹೇಳಿದೆ, ಶ್ರೀಮತಿ ಇಂದಿರಾಗಾಂಧಿಯವರು ಯಾರ ಯಾರ ಮೇಲೆ ಎನ್‌ಕ್ವೈರಿ ಮಾಡಿಸಿದರೋ ಅವ

ರನ್ನೇ ಪಕ್ಕದಲ್ಲಿ ಕೂರಿಸಿಕೊಂಡು ರಾಜಕೀಯದಲ್ಲಿ ಏನೇನು ಮಾಡಿದರು ಎಂದು. ಇದೆಲ್ಲಾ ನಿಮ್ಮ ನಾಯಕರಿಗೆ ಗೊತ್ತಿದೆ. ಇತಿಹಾಸ ಇದೆ. ಕರುಣಾನಿಧಿಯವರನ್ನು ಭ್ರಷ್ಟಾಚಾರದ ಆಪಾದನೆ ಮೇಲೆ ವಜಾ ಮಾಡಿ ಸರ್ಕಾರಿಯಾ ಆಯೋಗವನ್ನು ನೇಮಿಸಿ ನಂತರ ಅವರ ಜೊತೆಯೇ ಚುನಾವಣಾ ಸಂಧಾನ ಮಾಡಿಕೊಳ್ಳುವ ಪರಿಸ್ಥಿತಿ ಬಂತು. ತಾವೂ ಹೋಗಿದ್ದೀರಿ ಕರುಣಾನಿಧಿಯವರ ಜೊತೆ. ಅದಕ್ಕೆ ಏನು ವಿವರಣೆ ಕೊಡುತ್ತೀರಿ ?

SRI R. GUNDU RAO.—That is discharge case,

ಶ್ರೀ ಎಸ್. ಆರ್. ಬೊಮ್ಮಾಯಿ.—ಡಿಸ್‌ಚಾರ್ಜ್ ಆಗಿಲ್ಲ. ಅಂಥ ಉದಾಹರಣೆಗಳು ಬೇಕಾದಷ್ಟಿವೆ. ರಾಜಕೀಯವಾಗಿ ಕೆಲವೊಂದು ವಿಚಾರದಲ್ಲಿ ಹೊಂದಾಣಿಕೆಯಾದರೆ ಆದಕ್ಕೆ ಅಪಾರ್ಥ ಮಾಡಬಾರದು. ನಮ್ಮ ನಿಲುವು ನಮಗೆ: ಅವರ ನಿಲುವು ಅವರಿಗೆ.

ಶ್ರೀ ಆರ್. ಗುಂಡೂರಾವ್.—ಆ ಪಾಪದ ಕೊಡಕ್ಕೆ ತಾವು ಏತಕ್ಕೆ ಪಾಲುದಾರರಾಗುತ್ತೀರಿ?

ಶ್ರೀ ಎಸ್.ಆರ್. ಬೊಮ್ಮಾಯಿ.—ನಾವಾಗುವುದಿಲ್ಲ. ಅದರ ಪಾಲುದಾರರು ನೀವಿದ್ದೀರಿ.

ಶ್ರೀ ಹೆಚ್. ಡಿ. ದೇವೇಗೌಡ.—ರಾಜಕೀಯದ ಬಗ್ಗೆ ವಿಶ್ಲೇಷಣೆಯನ್ನು ಬೇರೆ ಕಾಲದಲ್ಲಿ ಮಾಡೋಣ. ಈ ರಾಷ್ಟ್ರದ ರಾಜಕಾರಣದಲ್ಲಿ ಯಾವುದು ನೈತಿಕತೆ, ಯಾವುದು ಅನೈತಿಕತೆ ಎಂಬ ಬಗ್ಗೆ ಸಭೆಯಲ್ಲಿ ಚರ್ಚೆ ಮಾಡಬಹುದು. ನಮ್ಮ ರಾಜ್ಯದಲ್ಲಿ ರಾಜಕೀಯದಲ್ಲಿ ಏನೇನು ನಡೆದಿದೆ ಅದರ ಬಗ್ಗೆ ವಿಶ್ಲೇಷಣೆ ನಡೆದಿದೆ. ಅದರ ಬಗ್ಗೆ ಈ ಚರ್ಚೆ ಬೇಡ. ನಾವು ಈಗ ಬಹಳ ಗಹನವಾದ ವಿಚಾರವನ್ನು ವಿಚಾರ ಮಾಡುತ್ತಿದ್ದೇವೆ. ರಾಜ್ಯದ ಜನತೆಯ ಅಭ್ಯುದಯಕ್ಕೆ ಸಂಬಂಧಿಸಿದ ವಿಷಯದ ಬಗ್ಗೆ ಚರ್ಚೆ ಮಾಡುವಾಗ ಬೇರೆ ಚರ್ಚೆ ಬೇಡ. ರಾಜಕೀಯ ನೈತಿಕತೆ ಬಗ್ಗೆ ಮಾತನಾಡುವುದು ತುಂಬ ಇದೆ. ೧೯೪೭ರಿಂದ ಈಚೆಗೆ ನಡೆದುಹೋಗಿರತಕ್ಕ ಇಡೀ ರಾಷ್ಟ್ರದ ರಾಜಕಾರಣ ಇಲ್ಲಿಯವರೆಗೂ ತುಂಬಾ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗಬೇಕಾಗುತ್ತದೆ. ಆದ್ದರಿಂದ ಆ ಬಗ್ಗೆ ಚರ್ಚೆ ಈಗ ಬೇಡ. ನಾನು ವಿದ್ಯುಚ್ಛಕ್ತಿ ಬಗ್ಗೆ ಹೇಳುತ್ತಿದೆ. ನಮ್ಮಲ್ಲಿ ೩೦-೪೦ ಪರ್ಸೆಂಟ್ ವಿದ್ಯುಚ್ಛಕ್ತಿ ಕೊರತೆ ಇದೆ.

ಇವತ್ತು ಕಾಳಿಯಲ್ಲಿ ಕೆಲಸ ಮಾಡುತ್ತಿರುವ ಎರಡು ಯೂನಿಟ್ಟುಗಳನ್ನು ಅಳವಡಿಸಿಕೊಂಡು ಸುಮಾರು ೧೪೧೫ ಮೆಗೋವಾಟ್ ವಿದ್ಯುಚ್ಛಕ್ತಿಯನ್ನು ಉತ್ಪನ್ನ ಮಾಡಬಹುದು. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು. Forecast of energy supply & demand ಎಂಬ ಬಗ್ಗೆ ಸಾಹಿತ್ಯವನ್ನು ಕೊಟ್ಟಿದ್ದಾರೆ. ಅದರಲ್ಲಿ Over all shortfall for the year 1981-82 is minus 2.633; 1982-83 minus 2·687; 1983-84 minus 2·206 and 1984-85 minus 3,459 ಎಂದು ಅಲ್ಲಿಯವರೆಗೆ ಅಂಕಿ-ಅಂಶಗಳನ್ನು ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು ೬,೦೦೦ ಮೆಗೋವಾಟ್ ಜಲವಿದ್ಯುತ್‌ನ್ನು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಿದೆ. ಆದರೆ, ಮುಂಗಾರು ಮಳೆಯ ಏರುಪೇರಿನಿಂದ ಜಲವಿದ್ಯುತ್ ಉತ್ಪಾದನೆಗೆ ಸ್ವಲ್ಪ ಧಕ್ಕೆಯಾಗಬಹುದು. ಜಲಾಶಯ ತುಂಬದೆ ಹೋದರೆ ನಿಗದಿಯಾದ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ, ಇದನ್ನು ತುಂಬಿಕೊಡುವುದಕ್ಕೆ ನಾವು ಪರ್ಯಾಯ ವ್ಯವಸ್ಥೆಯಾದ ಥರ್ಮಲ್ ಅಥವಾ ನ್ಯೂಕ್ಲಿಯರ್ ವಿದ್ಯುಚ್ಛಕ್ತಿ ಕಡೆಗೆ ಹೋದರೆ ಅಲ್ಲೂ ಕೂಡ ಇಷ್ಟೇ ಸಮಸ್ಯೆಗಳಿವೆ ಎನ್ನುವುದನ್ನು ಮನಗಾಣಬೇಕಾಗುತ್ತದೆ. ರಾಯಚೂರಿನ ಥರ್ಮಲ್ ವಿದ್ಯುತ್ ಉತ್ಪಾದನಾ ಘಟಕದ ಕೆಲಸವು ಪ್ರಗತಿಯಲ್ಲಿದೆ. ೧೯೮೪ರ ಹೊತ್ತಿಗೆ ಎರಡು ಯೂನಿಟ್ಟುಗಳಿಂದ ೪೨೦ ಮೆಗೋವಾಟ್ ವಿದ್ಯುಚ್ಛಕ್ತಿ ಉತ್ಪನ್ನವಾಗುತ್ತದೆಂದು ಹೇಳಿದ್ದಾರೆ. ಮತ್ತೆ ಇದು ಕಲ್ಲಿದ್ದಲಿನ ಸರಬರಾಜಿನ ಮೇಲೆ ಅವಲಂಬಿತವಾಗಿರುತ್ತದೆ. ನಮ್ಮ ರಾಷ್ಟ್ರದಲ್ಲಿ ಕಲ್ಲಿದ್ದಲು ಯಾವ ರೀತಿ ಸಿಗುತ್ತಿದೆ ಎನ್ನುವುದನ್ನು ನಾವೀಗಾಗಲಿ ಮನಗಂಡಿದ್ದೇವೆ. ಶ್ರೀಮಾನ್ ಜಾಫರ್ ಸಾಹೇಬರು ಅನೇಕ ರೈಲುಗಳನ್ನು ನಿಲ್ಲಿಸಿದ್ದಾರೆ. Super thermal station-ಮಾಡಬೇಕೆಂದು ಕೇಂದ್ರ ಸರ್ಕಾರದವರು ಈಗಾಗಲೇ ಪ್ಲಾನ್ ಮಾಡುತ್ತಿದ್ದಾರೆ. ನಾವೇನೂ ಥರ್ಮಲ್ ಅಥವಾ ನ್ಯೂಕ್ಲಿಯರ್ ವಿದ್ಯುಚ್ಛಕ್ತಿ ಉತ್ಪಾದನೆಗೆ ಹೆಚ್ಚು ವಿರೋಧವಿಲ್ಲ. ಆದರೆ, ೬,೦೦೦ ಮೆಗೊವಾಟ್ ಜಲ ವಿದ್ಯುತ್‌ನ್ನು ಉತ್ಪಾದನೆ ಮಾಡುವುದಕ್ಕೆ ಜಲಸಂಪತ್ತನ್ನು ಉಪಯೋಗ ಮಾಡಿಕೊಳ್ಳುವುದರಲ್ಲಿ ನಮ್ಮ ರಾಜ್ಯ ಸರ್ಕಾರವು ಆಸಕ್ತಿ ವಹಿಸಬೇಕೆಂದು

ಹೇಳುತ್ತೇನೆ. ೧೯೮೪ಕ್ಕೆ ರಾಯಚೂರಿನಲ್ಲಿ ಥರ್ಮಲ್ ವಿದ್ಯುಚ್ಛಕ್ತಿ ಘಟಕದಿಂದ ಉತ್ಪಾದನೆಯಾಗುವ ವಿದ್ಯುಚ್ಛಕ್ತಿ ಪ್ರಮಾಣದ ಲೆಕ್ಕ ಹಿಡಿದು, ಕಾಳಿಯ ಆರು ಯೂನಿಟ್ಟುಗಳೂ ಕೆಲಸ ಮಾಡತಕ್ಕ ಸನ್ನಿವೇಶಕ್ಕೆ ಬರುವುದಾದರೆ, ಅದೊಂದು ವರ್ಷ, ನಮಗಿರುವ ವಿದ್ಯುಚ್ಛಕ್ತಿ ಕೊರತೆಯನ್ನು ತುಂಬಿ ಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ, ಮುಂದಕ್ಕೂ ಕೂಡ ನಮ್ಮ ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆ ನಿರೀಕ್ಷಿಸಿದ ಪ್ರಮಾಣದಲ್ಲಿ plan target ಪ್ರಕಾರ ಆಗುವುದಾದರೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೆ ಆ ಕಡೆ ಗಮನವಿದ್ದರೆ, ನಮ್ಮ ರಾಜ್ಯದಲ್ಲಿ ಮತ್ತೆ ವಿದ್ಯುಚ್ಛಕ್ತಿಯ ಕೊರತೆ ತಲೆ ಎತ್ತುತ್ತ ದೆಂದು ಹೇಳುತ್ತೇನೆ. ಆದ ಕಾರಣ ನಮ್ಮಲ್ಲಿರತಕ್ಕ hydel power potential ಅನ್ನು ಸಂಪೂರ್ಣ ವಾಗಿ ಪಡೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇವತ್ತು ಪತ್ರಿಕೆಯಲ್ಲಿ ಒಂದು ಸುದ್ದಿಯನ್ನು ನೋಡಿದೆ. ಅದರಲ್ಲಿ ಈ ಸರ್ಕಾರದ ಸಾಧನೆಗಳ ಬಗ್ಗೆ ಉಲ್ಲೇಖ ಮಾಡಲಾಗಿದೆ. ಮತ್ತು ಕಾಳಿ ನದಿ ಯೋಜನೆ ವಿಳಂಬವಾಗಿರುವುದಕ್ಕೆ ನೀವು ಕಾರಣ ರೆಂದೂ ಹೇಳಲಾಗಿದೆ. ಇದರ ಬಗ್ಗೆ ಒಂದು ತನಿಖಾ ಆಯೋಗವನ್ನು ನೇಮಕ ಮಾಡಿದಿರಿ. ಅದು ಈಗ ಎಲ್ಲಿಗೆ ಬಂದಿದೆ ? ಅದೇನಾಯಿತು ? ಎಷ್ಟು ದಿವಸದಲ್ಲಿ ವರದಿ ಕೊಡಬೇಕೆಂದು ಹೇಳಲಾಗಿದೆ ? ಅಲ್ಲಿ ನಿಗದಿಯಾದ ಕಾಲದಲ್ಲಿ ಕೆಲಸಗಳಾಗದೆ ಇರುವುದಕ್ಕೆ ನೀವೂ ಹೊಣೆಗಾರರೆಂದು ಪತ್ರಿಕೆಯಲ್ಲಿ ಬಂದಿದೆ. ನೀವು ಹೊಣೆಗಾರರಲ್ಲ, ಬೇರೆಯವರು ಹೊಣೆಗಾರರೆಂದು ಈ ಸಭೆ ನಿರ್ಣಯಕ್ಕೆ ಬರಬೇಕಾದರೆ, ಬಹುಶಃ ಈ ಆಯೋಗದ ತೀರ್ಪು ಬರದೆ ಸಾಧ್ಯವಾಗುವುದಿಲ್ಲ. ಆದುದರಿಂದ, ದಯಮಾಡಿ, ಅದರ ಕಾಲವನ್ನು ವಿಸ್ತರಣೆ ಮಾಡದೆ ಆದಷ್ಟು ಬೇಗ ಆಯೋಗದಿಂದ ಪೂರ್ತ ಕೆಲಸ ಮಾಡಿಸಬೇಕೆಂದು ವಿನಂತಿ ಮಾಡುತ್ತೇನೆ.

ಇನ್ನು, ಚಕ್ರಾ ಅಣೆಕಟ್ಟಿನ ಕೆಲಸಗಳಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದಿವೆ ಎಂದು ಕೇಳಿದ್ದೇನೆ. ಅದನ್ನೂ ಕೂಡ ಈ ಆಯೋಗದ ವ್ಯಾಪ್ತಿಗೆ ತಂದು ವಿಚಾರಣೆ ನಡೆಸಿ ಒಂದು ನಿರ್ಣಯ ತೆಗೆದು ಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಇದು ಬಹಳ ಪ್ರಾಮುಖ್ಯವಾದ ಇಲಾಖೆ. ಈ ಇಲಾಖೆಯ ಕಾರ್ಯನಿರ್ವಹಣೆ ಮಾಡುವುದರಲ್ಲಿ ತುಂಬಾ ಶ್ರಮಪಡಬೇಕಾಗುತ್ತದೆಂದು ಮಾತ್ರ ಹೇಳಬಲ್ಲೆ. ಕೇವಲ ಅಧಿಕಾರಿಗಳ ಮೇಲೆ ಅವಲಂಬನೆ ಯಾಗುವುದಲ್ಲ. ಒಳಹೊಕ್ಕಿ ನೋಡಬೇಕಾಗುತ್ತದೆ. ಕೊಡತಕ್ಕ ಹಣದ ಉಪಯುಕ್ತತೆ ನಾಡಿನ ಜನತೆಗೆ ದೊರೆಯಬೇಕಾದರೆ ಖರ್ಚು ಮಾಡತಕ್ಕ ಹಣದಲ್ಲಿ ಶೇಕಡ ೮೦ ರಷ್ಟಾದರೂ ನ್ಯಾಯವಾಗಿ ವೆಚ್ಚ ವಾಗಬೇಕು. ಆದರೆ, ಶೇಕಡ ೭೫ ರಷ್ಟಾದರೂ ನ್ಯಾಯವಾಗಿ ವೆಚ್ಚವಾದರೆ ನಾನು ಇಡೀ ಇಲಾಖೆಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಅತ್ತ ಕಡೆ ಮಾನ್ಯ ಸಚಿವರು ಗಮನಿಸಬೇಕು. ಈ ದಿಸೆಯಲ್ಲಿ ಸರ್ಕಾರ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಮಾತ್ರ, ಈ ಸಭೆ ಮಂಜೂರಾತಿ ಕೊಡುವ ಹಣಕ್ಕೆ ಉತ್ತಮ ಫಲ ದೊರೆಯುತ್ತದೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಮಾನ್ಯ ಉಪಾಧ್ಯಕ್ಷರೇ, ಐವರು ಮಾನ್ಯ ಸಚಿವರುಗಳು ಮಂಡಿಸಿರುವ ಬೇಡಿಕೆಗಳನ್ನು ಸ್ವಾಗತಿಸುತ್ತಾ ಒಂದೆರಡು ವಿಚಾರಗಳನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಈ ಬೇಡಿಕೆಗಳ ಮೇಲೆ ಹಿರಿಯ ಸದಸ್ಯರಾದ ಶ್ರೀಮಾನ್ ದೇವೇಗೌಡರು ಮತ್ತು ಶ್ರೀಮಾನ್ ಆರ್ಮುಗಂ ಅವರು ಬಹಳ ಪರಿಣಾಮಕಾರಿಯಾಗಿ ಸುಮಾರು ಎರಡು ಗಂಟೆಗಳ ಕಾಲ ಮಾತನಾಡಿದ್ದಾರೆ. ಬಹುಶಃ ನನಗೆ ಆ ಅವಕಾಶವಿಲ್ಲದೆ ಇರುವುದರಿಂದ "touch me not" ಧಾಟಿಯಲ್ಲೇ ಹೋಗಬೇಕಾಗಿದೆ. ಮತ್ತು ಒಂದೊಂದು ವಿಷಯದಲ್ಲಿ ಒಂದೊಂದೇ ಅಂಶವನ್ನು ಹೇಳಬಯಸುತ್ತೇನೆ.

ಕೃಷ್ಣ ಮೇಲ್ದಂಡೆ ಮೊದಲನೆ ಹಂತದ ಯೋಜನೆಯನ್ನು ವಿಶ್ವಬ್ಯಾಂಕಿನ ಮತ್ತು ಕೇಂದ್ರ ಸರ್ಕಾರದ ಸುಮಾರು ೨೮೫ ಕೋಟಿ ರೂಪಾಯಿಗಳ ನೆರವಿನಿಂದ ಪ್ರಾರಂಭಿಸಲಾಯಿತು. ಮೊದಲನೆ ಹಂತ ಮುಗಿದಾಗ ಸುಮಾರು ಹತ್ತು ಲಕ್ಷ ಎಕರೆಗೆ ನೀರಾವರಿಯಾಗುತ್ತದೆಂದು ಯೋಜನೆ ಹಾಕಿಕೊಳ್ಳ

† Indicates that remarks or speeches have not been revised by the member concerned.

ಲಾಗಿದೆ. ವಿಜಾಪುರ ಸದಾ ಬರಗಾಲ ಪೀಡಿತ ಪ್ರದೇಶ. ಗೋಲಗುಮ್ಮಟ ಎಷ್ಟು ಜಗತಪ್ರಸಿದ್ಧವೋ ಅಷ್ಟೇ ವಿಜಾಪುರ ಜಿಲ್ಲೆಯೂ ಶಾಶ್ವತ ಬರಗಾಲಕ್ಕೆ ಪ್ರಸಿದ್ಧ. ಆಲಮಟ್ಟಿ ಯೋಜನೆ ನಮ್ಮ ಜಿಲ್ಲೆಗೊಂದು ಕಾಮಧೇನು ಆಗುತ್ತದೆಂದು ನಾವು ತಿಳಿದುಕೊಂಡಿದ್ದೆವು. ಆದರೆ, ಹತ್ತು ವರ್ಷಗಳ ನಂತರ, ಆಲಮಟ್ಟಿ ಯೋಜನೆಯಾಗಲೀ, ನಾರಾಯಣಪುರ ಯೋಜನೆಯಾಗಲೀ ವಿಜಾಪುರ ಜಿಲ್ಲೆಗೆ ಕಾಮಧೇನುವಲ್ಲ; ಅದೇನಿದ್ದರೂ ಗುಲ್ಬರ್ಗ ಜಿಲ್ಲೆಗೆ ಎಂದು ಸ್ಪಷ್ಟವಾಗಿ ನಾನು ಈ ಸಭೆಗೆ ತಿಳಿಸ ಬಯಸುತ್ತೇನೆ. ಕೃಷ್ಣ ಮೇಲ್ದಂಡೆಯ ಮೊದಲನೆ ಹಂತ ಮುಗಿದಾಗ ಮೂಲಗುರಿಯ ಸುಮಾರು ಹತ್ತು ಪರ್ಸೆಂಟ್ ಎಕರೆಗೆ ನೀರಾವರಿಯಾಗುತ್ತದೆ ಮತ್ತು ಮೊದಲನೆ ಹಾಗೂ ಎರಡನೆ ಹಂತ ಮುಗಿದಾಗ ಸುಮಾರು ಇಪ್ಪತ್ತು ಲಕ್ಷ ಎಕರೆಗೆ ನೀರಾವರಿಯಾಗುತ್ತದೆ. ಆದರೆ, ಇದು ಯಾವಾಗ ಮುಗಿಯುವುದು ? ೧೯೭೮ ರಿಂದ ೧೯೮೩ ರವರೆಗಿನ ಐದು ವರ್ಷದೊಳಗೆ ವಿಶ್ವಬ್ಯಾಂಕಿನ ನೆರವಿನಿಂದ ನಾರಾಯಣಪುರ ಮತ್ತು ಆಲಮಟ್ಟಿ (ಮೊದಲನೆ ಘಟ್ಟದಲ್ಲಿ ಮೊದಲನೆ ಹಂತ) ಮುಗಿದರೆ ಎರಡನೆ ಘಟ್ಟ ೧೯೮೩ಕ್ಕೆ ಮುಗಿಯುತ್ತದೆ.

೪.೦೦ ಪಿ. ಎಂ.

ಅದು ಮುಗಿಯುವುದಿಲ್ಲವೆನ್ನುವುದು ನನಗೆ ಗೊತ್ತಿದೆ. ಅದು ೮೬ ಆಗುತ್ತೋ ೮೮ ಆಗುತ್ತೋ ನನಗೆ ಗೊತ್ತಿಲ್ಲ. ಇಲ್ಲ, ೨೦೦೦ ಇಸವಿಗೆ ಮುಗಿಯುತ್ತೋ ಗೊತ್ತಿಲ್ಲ. ಆಗ ಸುಮಾರು ೨೦ ಲಕ್ಷ ಎಕರೆ ನೀರಾವರಿಯಾಗುತ್ತೆ. ಬಿಜಾಪುರವಾಗಲಿ, ಇಂಡಿಗಿ, ಸಿಂದಗಿಯಾಗಲೀ ಸುಮಾರು ೪೦-೫೦ ಸಾವಿರ ಎಕರೆ ನೀರಾವರಿಯಾಗುತ್ತೆ. ಮೊದಲನೇ ಹಂತ ಮುಗಿದಾಗ, ಸುಮಾರು ಒಂದೂವರೆ ಎರಡು ಲಕ್ಷ ಎಕರೆ ? ಉಳಿದದ್ದು ೮ ಲಕ್ಷ ಎಕರೆ ಗುಲ್ಬರ್ಗಾ ಜಿಲ್ಲೆಯಲ್ಲಿ ನೀರಾವರಿಯಾಗುತ್ತದೆ. ನಾವು ಇದನ್ನು ಕಾಮಧೇನೂ ಎಂದು ಏನು ತಿಳಿದು ಕೊಂಡಿದ್ದೆವೋ ಅದರ ಆಸೆಯನ್ನು ಕೈಬಿಟ್ಟಿದ್ದೇವೆ. ಬಾಗಲಕೋಟೆಯಾಗಲಿ, ಅದರ ಸುತ್ತಮುತ್ತಲಿನ ಪ್ರದೇಶಗಳಾಗಲೀ, ಬಳ್ಳೊಳ್ಳಿಯಾಗಲೀ ಈ ಯೋಜನೆ ಗಾಗಿ ಜಮೀನುಗಳನ್ನು ಬಲಿದಾನ ಕೊಡುವಂತ ಕೆಲಸ ಮಾಡಿದ್ದರೂ, ನಮಗೆ ಉಪಯೋಗವಾಗಿಲ್ಲ. ನಮಗೆ ಬೇರೆ ಪರ್ಯಾಯ ವ್ಯವಸ್ಥೆ ಏನು ಎಂಬುದನ್ನು ಮಾನ್ಯ ಮಂತ್ರಿಗಳೂ ತಿಳಿಸಬೇಕು. ಇದನ್ನು ನೋಡಿದಾಗ, ಬಿಜಾಪುರ, ಜಿಲ್ಲೆಯ ಇತರೇ ಭಾಗಗಳಲ್ಲಿ ಬಾಗೇವಾಡಿ, ಮುದ್ದೇ ಬಿಹಾಳ, ಇಡಂಗಿ ಮತ್ತು ಸಿಂದಿಗಿ ಭಾಗಗಳಲ್ಲಿ ಮೈನರ್ ಇರಿಗೇಷನ್ ಕಡೆ ನೋಡಬೇಕಾಗುತ್ತೆ. ಇವತ್ತು ಮಹಾರಾಷ್ಟ್ರ ದಲ್ಲಿ ವಕ್ಕಲುತನಕ್ಕೆ ಅನುಕೂಲವಾಗುವಂತೆ. ಆದ್ಯತೆ ಮೇಲೆ ನೀರಾವರಿ ಸೌಕರ್ಯಗಳನ್ನು ಕೊಡುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಕಳೆದ ಮೂವತ್ತು ವರ್ಷಗಳಿಂದಲೂ ನಮ್ಮ ಕರ್ನಾಟಕ ರಾಜ್ಯ, ನೀರಾವರಿ ಸೌಕರ್ಯ ಒದಗಿಸುವುದಕ್ಕೆ ಆದ್ಯತೆ ಕೊಟ್ಟಿಲ್ಲದಿರುವುದು ಕಂಡು ಬರುತ್ತೆ. ಆಲಮಟ್ಟಿ ಮತ್ತು ನಾರಾಯಣಪುರ ಅಣೆಕಟ್ಟುಗಳಿಂದ ಬಿಜಾಪುರ ಜಿಲ್ಲೆಯ ಉತ್ತರ ಭಾಗಕ್ಕೆ ನೀರು ಬರುವುದಿಲ್ಲವೆಂದು ತಿಳಿದುಕೊಂಡಾಗ, ನಮಗೆ ಉಳಿದಿರುವಂತ ಮಾರ್ಗ ಕೆರೆಗಳು ಮಾತ್ರ. ಈ ದಿಸೆ ಯಲ್ಲಿ ಸರ್ಕಾರದ ಪ್ರಕಟಣೆಯನ್ನು ನೋಡಿದಾಗ, ಕೇವಲ ೭ ನದಿಗಳ ಹೆಸರುಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಭೀಮಾ ನದಿಯ ಹೆಸರೇ ಇಲ್ಲ. ಬಹುಶಃ ಮಹರಾಷ್ಟ್ರ ಸರ್ಕಾರಕ್ಕೆ ಮಾರಿಕೊಂಡಿದ್ದೀರಾ ಎಂದು ಕೇಳುತ್ತಿದ್ದೇನೆ. ಭೀಮಾ ನದಿಯನ್ನು ಇದರಲ್ಲಿ ಏತಕ್ಕೆ ಸೇರಿಸಿಲ್ಲ ? ನಮ್ಮ ಇಂಜಿನಿಯರ್ ಗಳು ಭೀಮಾ ನದಿಯನ್ನು ನೋಡಿಲ್ಲವೆ ? ನಮ್ಮ ಇಂಜಿನಿಯರುಗಳಿಗೆ ಭೀಮಾನದಿ ಎಲ್ಲಿದೆ ಎನ್ನುವುದು ಗೊತ್ತಿಲ್ಲವೇನೋ ಎನ್ನುವ ಸಂಶಯ ಬರುತ್ತೆ. ಇವತ್ತು ನಾನು ತಮ್ಮ ಮುಖಾಂತರ ಸರ್ಕಾರದವ ವನ್ನು ಕೇಳಿಕೊಳ್ಳುವುದು, ನನ್ನ ಮತದಾರರ ಕ್ಷೇತ್ರದಲ್ಲಿ ನೀರಾವರಿ ಅಗತ್ಯ ಬಹಳ ಇದೆ. ನನ್ನ ಕ್ಷೇತ್ರ ದಲ್ಲಿರತಕ್ಕ ೨-೩ ಕೆರೆಗಳಾದ ಗಿರಿಜಾಹಳ್ಳಿ ಗುಂಡಪಾರದಂತ ೨-೩ ಕೆರೆಗಳಿಂದ ಸಾಕಷ್ಟು ನೀರಾವರಿ ಯಾಗುವುದಿಲ್ಲ. ಮುಖ್ಯವಾಗಿ ನಮಗೆ ಬೇಕಾಗಿರುವಂತಾದ್ದು. ಗೆಜ್ಜೇಹಳ್ಳಿ ಗ್ಯಾರೇಜ್ ಆಗಬೇಕಾಗಿದೆ ಬಳ್ಳೊಳ್ಳಿ ಮತದಾರರ ಕ್ಷೇತ್ರಕ್ಕೆ ಗೆಜ್ಜಹಳ್ಳಿ ಗ್ಯಾರೇಜನ್ನು ಮಂಜೂರು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇದರಿಂದ ಸುಮಾರು ೧೦,೦೦೦ ಎಕರೆ ನೀರಾವರಿಯಾಗುತ್ತದೆ. ಎರಡನೆಯದಾಗಿ, ಅಲಸಂಗಿ ಗ್ಯಾರೇಜ್ ಕಟ್ಟಿಸುವುದರಿಂದ ಸುಮಾರು ೫,೦೦೦ ಎಕರೆ ನೀರಾವರಿಯಾಗುತ್ತದೆ. ಈ ವಿ ಯವನ್ನು ನಮ್ಮ ಲೋಕೋಪಯೋಗಿ ಸಚಿವರ ಗಮನಕ್ಕೆ ಕೂಡ ತಂದಿದ್ದೇನೆ. ವಿಚಾರ ಮಾಡೋಣ ವೆಂದು ಅವರು ಕೂಡ ಹೇಳಿದ್ದಾರೆ. ಈ ಎರಡು ಗ್ಯಾರೇಜ್‌ಗಳನ್ನು ನಮ್ಮ ಮತದಾರರ ಕ್ಷೇತ್ರದಲ್ಲಿ ಮಾಡುವುದರಿಂದ ನಮ್ಮ ಭಾಗದಲ್ಲಿರತಕ್ಕ ರೈತರ ತೊಂದರೆಗಳು ನೀರಾವರಿ ದೃಷ್ಟಿಯಿಂದ ಬಗೆಹರಿಯು ತ್ತವೆ.

ಇನ್ನು ಕೆರೆಗಳು ಮತ್ತು ಸಣ್ಣ ಕೆರೆಗಳ ಬಗ್ಗೆ ಒಂದು ಮಾತು ಹೇಳುತ್ತೇನೆ. ನಮ್ಮಲ್ಲಿ ಬೇಡಾಳ ಕೆರೆ. ಬಡಜನ ಕೆರೆ ಆಗಬೇಕಾಗುತ್ತದೆ. ಮತ್ತೆ ? ತುಳಸಭಾವಿ ಲಿಫ್ಟ್ ಇರಿಗೇಷನ್ ಕೆಲಸ ಆಗಬೇಕಾಗಿದೆ. ಚನ್ನಗಾವಿ ಲಿಫ್ಟ್ ಇರಿಗೇಷನ್, ಮರಗೂರು ಲಿಫ್ಟ್ ಇರಿಗೇಷನ್ ಕೆಲಸಗಳು ಬಹಳ ಮುಖ್ಯವಾದವು. ಭೀಮಾ ನದಿಯ ರೈಟ್ ಬ್ಯಾಂಕಿನಲ್ಲಿ ಈ ಲಿಫ್ಟ್ ಇರಿಗೇಷನ್‌ಗಳನ್ನು ಮಾಡಲಿಕ್ಕೆ ಸಾಧ್ಯವಿದೆ. ಯಾವಾಗಲೂ ಭೀಮಾ ನದಿಯಲ್ಲಿ ನೀರು ಹರಿಯುತ್ತೇ. ಕೃಷ್ಣ ನದಿಯಲ್ಲಿ ಯಾವಾಗಲೂ ನೀರು ಹರಿಯುವುದಿಲ್ಲ. ಬರಗಾಲ ಜಿಲ್ಲೆಯಾದ ಬಿಜಾಪುರದಿಂದ ಬಂದತವರೇ ಮುಖ್ಯಮಂತ್ರಿಗಳಾಗಿದ್ದರು. ಕೊಹ್ನಿ ಯೋಜನೆಯನ್ನು ಬರಗಾಲ ಪೀಡಿತವಾದ ಬಿಜಾಪುರ ಜಿಲ್ಲೆಗೆ ನೀರನ್ನು ಒದಗಿಸುವ ದೃಷ್ಟಿಯಿಂದ ನಮ್ಮ ಕಾಣಿಕೆಯನ್ನು ಕೊಡುವುದರ ಮೂಲಕ ನಮ್ಮ ಷೇರಿನ ಹಣವನ್ನು ಕಟ್ಟಿದ್ದರೆ, ನಿರಂತರವಾಗಿ ನೀರು ಕೃಷ್ಣ ನದಿಯಲ್ಲಿ ಹರಿಯುತ್ತಿತ್ತು. ಇವತ್ತು ಮಹಾರಾಷ್ಟ್ರದವರು ಮಳೆಗಾಲ ಕಡಿಮೆ ಆಯಿತೆಂದರೆ, ಉದ್ದೇಶಪೂರ್ವಕವಾಗಿಯೇ ನೀರಿನ ಪ್ರಮಾಣ ಕಡಿಮೆ ಮಾಡುತ್ತಾರೆ. ಅರೇಬಿಯನ್ ಸಮುದ್ರಕ್ಕೆ ನೀರು ಬಿಡುತ್ತಾರೆ. ಹೀಗೆ ಡೈವರ್ಟ್ ಮಾಡುವುದರಿಂದ ಕೃಷ್ಣಾನದಿ ಒಣಗಿ ಹೋಗುತ್ತದೆ. ಯಾವುದೋ ಒಂದು ಕಾಲದಲ್ಲಿ ಚಿಕ್ಕ ಹಳ್ಳ ಇತ್ತು ಎಂದು ಕಾಣುತ್ತೆ, ಆಗಿನ ಸರ್ಕಾರದ ಒಂದು ತಪ್ಪು ಧೋರಣೆಯಿಂದ ಇವತ್ತು ನಾವು ಪರಿತಪಿಸುತ್ತಿದ್ದೇವೆ. ಇವತ್ತಿಗೂ ಕೂಡ ಮಹಾರಾಷ್ಟ್ರದ ಜೊತೆ ನಮ್ಮ ಇಂಜಿನಿಯರುಗಳು, ನಮ್ಮ ಸರ್ಕಾರ ನೆಗೋಷಿಯೇಷನ್ ಮಾಡಿ, ಸಾಧ್ಯವಿದ್ದರೆ ಪರಿಶೀಲನೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಒತ್ತಾಯ ಮಾಡುತ್ತೇನೆ. ಕೊಹ್ನಾ ನದಿ ನೀರು ಬಿಜಾಪುರಕ್ಕೆ ಬಂದರೆ, ಬಿಜಾಪುರ ಜಿಲ್ಲೆ ನಂದನವನವಾಗುತ್ತಿತ್ತು ? ಕಲ್ಪವೃಕ್ಷವಾಗುತ್ತಿತ್ತು ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ರಸ್ತೆಗಳ ಬಗ್ಗೆ ಹೇಳುವುದಾದರೆ, ೩೦ ವರ್ಷಗಳ ಹಿಂದೆ ರಸ್ತೆಗಳು ಹೇಗಿದ್ದವೋ ಸ್ವಾತಂತ್ರ್ಯ ಪೂರ್ವದಲ್ಲಿ ಕೂಡ ಬೀದಿಗಳು ಹಾಗೇ ಇವೆ. ವೈಯಕ್ತಿಕವಾಗಿ ನನ್ನ ಮತದಾರರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಪರ್‌ಫಾರ್ಮೆನ್ಸ್ ಬಡ್ಜೆಟ್ ನೋಡಿದಾಗ ಏನೂ ಇಲ್ಲ. ಕೇವಲ ಶಿವಮೊಗ್ಗ ಮತ್ತು ಮಂಗಳೂರಿಗೆ ಬಡ್ಜೆಟ್ ಹೋಗಿದೆಯೆಂದು ಭಾಸವಾಗುತ್ತದೆ. ದಯಮಾಡಿ ಮಾನ್ಯ ಮಂತ್ರಿಗಳು. ಯಾವ ಯಾವ ಜಿಲ್ಲೆಗಳಿಗೆ ಸರಿಯಾದಂತಹ ಪ್ರಾತಿನಿಧ್ಯ ಇಲ್ಲ, ಅಂತಹ ಕಡೆ ಹೆಚ್ಚು ಗಮನಕೊಡಬೇಕು. ಪ್ರಾತಿನಿಧ್ಯ ಇಲ್ಲದೇ ಇರತಕ್ಕ ಜಿಲ್ಲೆಯ ಜನ ಯಾರನ್ನು ಕೇಳಬೇಕು ? ಬಡ್ಜೆಟ್ ಹಣವನ್ನು ಕೊಡುವಾಗ ತಾರತಮ್ಯ ಮಾಡದೇ ಎಲ್ಲಾ ಜಿಲ್ಲೆಗಳಿಗೂ ಸಮಾನವಾಗಿ ಹಂಚುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ಇಂಡಿಗಿ, ಸಿಂದಿಗಿ. ಮತ್ತು ಕೂಡಲಗಿ ಹಾಗೂ ಸಾದಲಗಿ ಮಹತ್ವದ ರಸ್ತೆಗಳು, ಇದು ಗಿರಿಜೆಹಳ್ಳಿ ಮೇಲೆ ಹಾದು ಹೋಗುವಂತಹ ರಸ್ತೆಗಳು. ನಾನು ಕಳೆದ ಎರಡು ಮೂರು ವರ್ಷಗಳಿಂದ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ, ಇವತ್ತಿಗೂ ತೆಗೆದುಕೊಂಡಿಲ್ಲ, ಕೇವಲ ಕಚ್ಚಾ ರಸ್ತೆಗಳಾಗಿಯೇ ನಿಂತಿವೆ, ಕೂಡಲೇ ಈ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಸೇತುವೆಗಳ ಬಗ್ಗೆ ಮಾನ್ಯ ಮಂತ್ರಿಯವರು ಒಪ್ಪಿಕೊಂಡಿದ್ದರು. ನಮ್ಮ ಭಾಗದಲ್ಲಿ ಆಲಸಂಗಿ, ಕಲ್ಲಹಳ್ಳಿ ಮತ್ತು ಸಿರಕಳ್ಳಿ ಸೇತುವೆಗಳು ಬಹಳ ಮುಖ್ಯವಾದವು. ಸಾರಿಗೆ ಸಂಪರ್ಕದ ದೃಷ್ಟಿಯಿಂದ ಇವುಗಳು ಬಹಳ ಮುಖ್ಯವಾದವು ? ಇವುಗಳನ್ನು ಕೂಡಲೇ ಮಾಡುವುದರಿಂದ ಜನತೆಗೆ ಬಹಳ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ನ್ಯಾಯಾಲಯದ ಕಟ್ಟಡಗಳ ಬಗ್ಗೆ ಹೇಳುವುದಾದರೆ. ಇದುವರೆವಿಗೂ ಎಸ್ಟಿಮೇಟ್ ಮಂಜೂರಾಗಿಲ್ಲ. ಬಿಜಾಪುರ ಜಿಲ್ಲೆಯ ೬೦೦ ವರ್ಷಗಳ ಹಳೇ ಕಟ್ಟಡದಲ್ಲಿಯೇ ನ್ಯಾಯಾಲಯಗಳು ನಡೆಯುತ್ತಿವೆ. ಈ ಕಟ್ಟಡಗಳಲ್ಲಿ ಕುರಿ ಹಿಂಡು ತುಂಬಿದಂತೆ ಜನ ಇರುತ್ತಾರೆ, ಸಣ್ಣ ಸಣ್ಣ ರೂಮುಗಳಿಂದ ಕೂಡಿದ ಕಟ್ಟಡಗಳು. ತಮ್ಮ ಕಾನೂನು ಮಂತ್ರಿಗಳು ನ್ಯಾಯಾಲಯಗಳಿಗೆ ಉತ್ತಮವಾದಂತ ಕಟ್ಟಡವನ್ನು ಒದಗಿಸುವ ಬಗ್ಗೆ ಒಂದೆರಡು ಕೋಟಿ ರೂಪಾಯಿಗಳು ಖರ್ಚಾದರೂ ಚಿಂತೆಯಿಲ್ಲ. ಉತ್ತಮವಾದ ಕಟ್ಟಡಗಳನ್ನು ಕಟ್ಟಿಸಿ, ಒಂದೇ ಕಟ್ಟಡದಲ್ಲಿ ನ್ಯಾಯಾಲಯಗಳು ಕೆಲಸ ಮಾಡುವಂತೆ ಅನುಕೂಲ ಮಾಡಿ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಹಾಲಿನ ಡೈರಿ ಬಗ್ಗೆ ಇನ್ನು ಕೂಡ ಪ್ಲಾನು ಎಸ್ಟಿಮೇಟ್ ಫೈನಲ್ ಆಗಿಲ್ಲವೆಂದು ಹೇಳಿದ್ದಾರೆ. ಸನ್ಮಾನ್ಯ ಮಂತ್ರಿಯವರು ಡೈರಿಗೆ ಬೇಕಾಗುವಂತಹ ಜಮೀನನ್ನು ಸ್ವಾಧೀನ ಮಾಡಿಕೊಂಡು ಕೂಡಲೇ ಕಟ್ಟಡ ಕಟ್ಟುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮ ಮುಖಾಂತರ ಒತ್ತಾಯಿಸುತ್ತೇನೆ. ಚಿಕ್ಕನೀರಾ

ವರಿ ಮತ್ತು ದೊಡ್ಡ ನೀರಾವರಿಗೆ ಸಂಬಂಧಪಟ್ಟಂತೆ ನಮ್ಮ ಜಿಲ್ಲೆಯವರೇ ಮಂತ್ರಿಯವರು ಇದ್ದಾರೆ. ಕೊಟ್ಟಿ ಹೊಳೆ ಯೋಜನೆಗೆ ೧.೨೦ ಲಕ್ಷ ರೂಪಾಯಿಗಳ ಅಂದಾಜು ಕಳೆದ ಎರಡು ವರ್ಷಗಳಿಂದ ಪೆಂಡಿಂಗ್ ಇದೆ. ಇನೂ ಮಂಜೂರು ಆಗಿಲ್ಲ. ಈ ಯೋಜನೆಯ ಬಗ್ಗೆ ದೇವರಾಜ ಅರಸರ ಕಾಲದಿಂದಲೂ ನಾನು ಒತ್ತಾಯ ಮಾಡಿಕೊಂಡು ಬಂದಿದ್ದೇನೆ. ಅರ್ತನಾಳ ಯೋಜನೆ ಈ ಎರಡೂ ನಾರಾಯಣಪುರ ಎಡದಂಡೆ ನಾಲೆಯಲ್ಲಿ ಬರುತ್ತವೆ, ಇವು ಕಮಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿಯೊಳಗೆ ಬರುತ್ತವೆಂದು ಹೇಳುತ್ತಾರೆ. ಯಾವಾಗ ಬರುತ್ತವೆ ಸ್ವಾಮಿ ? ೨೦೨೦ ನೇ ಇಸವಿಗೆ ಬರುತ್ತವೆ, ಅಲ್ಲಿಯವರೆಗೆ ರೈತರೆಲ್ಲಾ ಸಾಯಬೇಕೇನು ? ಒಂದೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ, ಸುಮಾರು ೧೦ ಸಾವಿರ ಎಕರೆ ನೀರಾವರಿಯಾಗುತ್ತೆ ೧೦ ವರ್ಷಗಳಲ್ಲಿ ಉತ್ಪತ್ತಿಯನ್ನು ಪಡೆಯಬಹುದು. ಕಾಡಾದಲ್ಲಿ ಬಂದರೆ, ೪೦ ವರ್ಷವಾಗುತ್ತೇ. ತಾವು ಈ ವಿಚಾರವನ್ನು ಮುಖ್ಯಮಂತ್ರಿಗಳೊಂದಿಗೆ ಚರ್ಚೆಮಾಡಿ; ಆಧ್ಯತೆ ಮೇಲೆ ಈ ಕೆಲಸವನ್ನು ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರೆ, ಹರಿಜನರ ಕೇರಿಗಳಲ್ಲಿ ಭಾಗ್ಯಜ್ಯೋತಿ ಮುಖಾಂತರ ದೀಪಗಳನ್ನು ಕೊಟ್ಟಿರುವ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈಸಾರಿ ಬಡ್ಜೆಟ್ಟಿನಲ್ಲಿ ಹರಿಜನರ ಕೇರಿಗಳಿಗೆ ವಿದ್ಯುದೀಪಗಳನ್ನು ಒದಗಿಸುವ ಬಗ್ಗೆ ಹಣ ಇಟ್ಟಿಲ್ಲ ೧೯೮೦-೮೧ರಲ್ಲಿ ೩೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ೧೯೮೧-೮೨ರ ಸಾಲಿಗೆ ಬಡ್ಜೆಟ್ಟಿನಲ್ಲಿ ಏನೂ ಹಣವನ್ನು ಒದಗಿಸಿಲ್ಲ. ಆದುದರಿಂದ, ಇದರ ಬಗ್ಗೆ ಮಾನ್ಯ ಮಂತ್ರಿಗಳನ್ನು ನಾನು ಒತ್ತಾಯ ಪಡಿಸಬೇಕಾಗಿದೆ.

ಶ್ರೀ ವೈ. ರಾಮಕೃಷ್ಣ.—ಎಲೆಕ್ಟ್ರಿಸಿಟಿ ಬಗ್ಗೆ ಬೇರೆ ರಿಪೋರ್ಟ್ ಇದೆ ಆದನ್ನು ಮಾನ್ಯ ಸದಸ್ಯರು ನೋಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.—ಅಧ್ಯಕ್ಷರೆ, ಈ ಭಾಗ್ಯಜ್ಯೋತಿಯ ಬಗ್ಗೆ ೫೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇದು ಬಹಳ ಕಡಿಮೆ ಹಣ ಎಂದು ಹೇಳುತ್ತಿದ್ದೇನೆ. ೫೦ ಲಕ್ಷ ರೂಪಾಯಿ ಹಣದಲ್ಲಿ ಕಳೆದ ಸಾರಿ ೨೦ ಸಾವಿರ ಮನೆಗಳ ಒಂದು ಪ್ರೋಗ್ರಾಂ ಇಟ್ಟುಕೊಂಡು ೧೦ ಸಾವಿರ ಮನೆಗಳಿಗೆ ಮಾತ್ರ ಕೊಟ್ಟಿದ್ದಾರೆ. ಆದರೆ, ಈ ಸಾರಿಯೂ ಕೂಡ ೨೦ ಸಾವಿರ ಮನೆಗಳಿಗೆ ಕೊಡತಕ್ಕ ಒಂದು ಗುರಿಯನ್ನು ಇಟ್ಟುಕೊಂಡಿದ್ದಾರೆ. ಅಂದರೆ ಕಳೆದ ಸಾರಿಯ ೧೦ ಸಾವಿರ ಮನೆಗಳು, ಈ ಸಾರಿ ಇವರು ಕೊಡಬೇಕೆಂದಿರುವ ೨೦ ಸಾವಿರ ಮನೆಗಳ ಲೆಕ್ಕವನ್ನು ತೆಗೆದುಕೊಂಡರೆ ಒಟ್ಟು ೩೦ ಸಾವಿರ ಮನೆಗಳಿಗೆ ಭಾಗ್ಯಜ್ಯೋತಿ ಸ್ಕೀಮ್‌ನಿಂದ ದೀಪವನ್ನು ಕೊಡಬೇಕಾಗುತ್ತದೆ. ಒಂದು ಕೋಟಿ ರೂಪಾಯಿ ಕೊಡುವ ಬದಲು ೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹಿಂದಿನದು ೫೦ ಲಕ್ಷ ರೂಪಾಯಿ, ಈ ಸಾರಿ ಎರಡು ಕೋಟಿ ರೂಪಾಗಳನ್ನಾದರೂ ಈ ಯೋಜನೆಗೆ ಇಟ್ಟಿಲ್ಲ. ಈ ಒಂದು ಭಾಗ್ಯಜ್ಯೋತಿ ಸ್ಕೀಮ್‌ನಲ್ಲಿ ಕೆ.ಇ.ಬಿ. ಅವರು ಹರಿಜನ ಕೇರಿಗಳಿಗೆ ದೀಪಗಳನ್ನು ಹಾಕುವ ಕಾರ್ಯಕ್ರಮದಲ್ಲಿ ಸಮಗ್ರವಾದ ಕಾರ್ಯಕ್ರಮವನ್ನು ಕೈಗೊಂಡು ಸಂಪೂರ್ಣವಾಗಿ ಕೆಲಸವನ್ನು ಮಾಡಿಲ್ಲ. ಆದುದರಿಂದ, ಕೂಡಲೇ, ಹರಿಜನರ ಮನೆಗಳಿಗೆ ಬಡವರ ಮನೆಗಳಿಗೆ, ಕರ್ನಾಟಕ ವಿದ್ಯುಚ್ಛಕ್ತಿ ಇಲಾಖೆಯವರು ದೀಪಗಳನ್ನು ಒದಗಿಸುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಇದನ್ನು ಎಂಪ್ಲಾಯ್‌ಮೆಂಟ್ ಬಗ್ಗೆ ಹೇಳಬೇಕು ಎಂದರೆ ಮಾನ್ಯ ಸದಸ್ಯರಾದ ಆರ್ಮುಗಂ ಅವರು ಆದರ ಬಗ್ಗೆ ಈಗಾಗಲೇ ಹೇಳಿದ್ದಾರೆ. ಕರ್ನಾಟಕ ಪವರ್ ಕಾರ್ಪೊರೇಷನ್‌ನಲ್ಲಿ ಹದಿನೆಂಟು ಪರ್ಸೆಂಟ್ ಎಸ್. ಸಿ. ಮತ್ತು ಎಸ್. ಟಿ. ವಿದ್ಯಾರ್ಥಿಗಳನ್ನು ನೇಮಕ ಮಾಡಿಕೊಂಡಿಲ್ಲ. ರಿಸರ್ವೇಷನ್ ಕೊಡುವುದರಲ್ಲಿ ಸರಿಯಾಗಿ ನಿಯಮವನ್ನು ಅನುಸರಿಸುತ್ತಿಲ್ಲ. ಹಾಗೆಯೇ ಪ್ರಮೋಷನ್ ಕೊಡುವಾಗಲೂ ಕೂಡ ರಿಸರ್ವೇಷನ್ ನಿಯಮವನ್ನು ಅನುಸರಿಸುತ್ತಿಲ್ಲ. ಇದು ದುರ್ದೈವದ ಸಂಗತಿ ಎಂದು ತಿಳಿದುಕೊಂಡು ವಿದ್ಯುಚ್ಛಕ್ತಿ ಇಲಾಖೆಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಅಧ್ಯಕ್ಷರೇ ಮೊನ್ನೆ ಒಂದು ಘಟನೆ ನಡೆದಿದೆ. ಕಳೆದ ಜೂನ್ ೨೦ನೇ ತಾರೀಖಿನಂದು ಕರ್ನಾಟಕ ಪವರ್ ಕಾರ್ಪೊರೇಷನ್‌ನಲ್ಲಿ ೭೭ ಜನ ಜೂನಿಯರ್ ಅಸಿಸ್ಟೆಂಟ್‌ಗಳಿಗೆ ಪ್ರಮೋಷನ್ ಕೊಟ್ಟಿದಾರೆ. ಆ ರೀತಿ ಪ್ರಮೋಷನ್ ಕೊಡುವಾಗ ಎಸ್.ಸಿ. ಮತ್ತು ಎಸ್.ಟಿ. ಕ್ಯಾಂಡಿಡೇಟ್‌ಗಳಿಗೆ ಪ್ರಮೋಷನ್ ಕೊಟ್ಟಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ೧೮ ಪರ್ಸೆಂಟ್ ಅಪಾಯಿಂಟ್‌ಮೆಂಟ್‌ನಲ್ಲಿ ಮೈನ್‌ಟೈನ್ ಮಾಡಿಲ್ಲ ಎಂದು ಹೇಳುತ್ತಿದ್ದೀರಿ. ಯಾವ ಯಾವ ವರ್ಷ ಮೈನ್‌ಟೈನ್ ಮಾಡಿಲ್ಲ ಅದರ ಬಗ್ಗೆ ಸ್ವಲ್ಪ ಇಯರ್‌ವೈಸ್ ಬ್ರೇಕ್ ಅಪ್ ಕೊಡಲಿಕ್ಕೆ ಸಾಧ್ಯವೆ ? ಯಾವ ಯಾವ ಕಾಲದಲ್ಲಿ ಎಷ್ಟೆಷ್ಟು ಜನರನ್ನು ಅಪಾಯಿಂಟ್ ಮಾಡಿದ್ದಾರೆ. ಯಾವ ಯಾವ

ಚೇರ್ಮನ್‌ರು ಯಾವ ಯಾವ ರೀತಿ ಅಪಾಯಿಂಟ್ ಮಾಡಿದ್ದಾರೆ ಅದರ ಬಗ್ಗೆ ವಿವರಣೆಯನ್ನು ಕೊಡುತ್ತೀರಾ ?

ಶ್ರೀ ಎಸ್. ಎಸ್. ಅರಕೇರಿ.—ಮಾನ್ಯ ದೇವೇಗೌಡರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಈಗ ನನ್ನಲ್ಲಿ ಅಂಕಿಸಂಖ್ಯೆಗಳಿಲ್ಲ. ನಾನು ಎರಡುಮೂರು ಸಾರಿ ಇನ್‌ಸ್ಪೆಕ್ಷನ್‌ಗೆ ಹೋದಾಗ ನೋಡಿದ್ದೇನೆ. ಅಂಕಿ ಸಂಖ್ಯೆಯನ್ನು ಮಾನ್ಯ ಸದಸ್ಯರಿಗೆ ನಾನು ಸಪರೇಟ್ ಆಗಿ ಒದಗಿಸುತ್ತೇನೆ.

SRI H. D. DEVEGOWDA.—It will be very difficult for us to draw any conclusion as to who is responsible, so far as this issue is concerned.

SRI S. S. ARAKERI.—I appreciate the points raised by our hon. member. ಈಗ ನನ್ನ ಹತ್ತಿರ ಅಂಕಿಸಂಖ್ಯೆಗಳನ್ನು ಇಟ್ಟುಕೊಂಡಿಲ್ಲ. ಒಟ್ಟಿನಲ್ಲಿ ೧೮ ಪರ್ಸೆಂಟ್ ಮೈನ್‌ಟೈನ್ ಮಾಡಿಲ್ಲ. ಕಳೆದ ಮುವತ್ತು ವರ್ಷಗಳಿಂದ ಅವರ ಹೊಣೆಗಾರಿಕೆ ಇದೆ. ಕ್ಲಾಸ್ ಒನ್, ಕ್ಲಾಸ್ ಟು, ಕ್ಲಾಸ್ ಥ್ರಿ ನಲ್ಲಿ ಎಷ್ಟು ಜನ ಇದ್ದಾರೆ ಎನ್ನುವ ಬಗ್ಗೆ ಅಂಕಿಸಂಖ್ಯೆಗಳನ್ನು ನಾನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

SRI Y. RAMAKRISHNA ...It has been made abundantly clear in the report that has already been supplied. The hon. member may please see Page No. 9 of the report.

ಶ್ರೀ ಎಸ್. ಎಸ್. ಅರಕೇರಿ.—ಅಧ್ಯಕ್ಷರೇ, ಕರ್ನಾಟಕ ಪವರ್ ಕಾರ್ಪೊರೇಷನ್ ಅಂಬಿಕಾ ನಗರ ಬ್ರಾಂಚ್‌ನಲ್ಲಿ ಕಳೆದ ಜೂನ್ ೨೦ನೇ ತಾರೀಖಿನ ದಿವಸ ಸೀನಿಯಾರಿಟಿ ಲಿಸ್ಟ್ ಮಾಡಿದ್ದಾರೆ ಅಲ್ಲಿ ಜೂನಿಯರ್ ಅಸಿಸ್ಟೆಂಟ್ ಕೇಡರ್‌ನಿಂದ ಸೀನಿಯರ್ ಅಸಿಸ್ಟೆಂಟ್‌ಗೆ ಪ್ರಮೋಷನ್ ಕೊಡುವಾಗ ನಾಲ್ಕು ಜನ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಪ್ರಮೋಷನ್ ಕೊಟ್ಟಿಲ್ಲ. ನಾನು ಹೇಳುವ ಉದ್ದೇಶ ಏನು ಎಂದರೆ, ಈಗ ೭೭ ಜನ ಏನು ಕ್ವಾಲಿಫೈಡ್ ಆಗಿದ್ದಾರೆ, ಅದೇ ರೀತಿ ಇವರು ಕೂಡ ಕ್ವಾಲಿಫೈಡ್ ಆಗಿದ್ದಾರೆ. ಹಾಗೆ ಎಲ್ಲಾ ಡಿಪಾರ್ಟ್‌ಮೆಂಟ್ ಎಕ್ಸಾಮಿನೇಷನ್ ಪಾಸ್ ಮಾಡಿಕೊಂಡಿದ್ದಾರೆ. ಆದರೂ ಕೂಡ ಅವರಿಗೆ ಪ್ರಮೋಷನ್ ಕೊಟ್ಟಿಲ್ಲ. ಅಲ್ಲದೆ, ಪ್ರಮೋಷನ್ ಕೊಡುವಾಗ ರಿಸರ್ವೇಷನ್ ರೋಸ್ಟರ್ ಕೂಡ ಅನುಸರಿಸುತ್ತಿಲ್ಲ. ಅಂಬಿಕಾನಗರದಲ್ಲಿ ಇರತಕ್ಕ ಚೀಫ್ ಇಂಜಿನಿಯರ್ ಏನಿದ್ದಾರೆ ಅವರು ಮ್ಯಾನೇಜಿಂಗ್ ಡೈರೆಕ್ಟರ್‌ಗೆ ಸರಿಯಾದಂಥ ಮಾರ್ಗದರ್ಶನವನ್ನು ಮಾಡಿಲ್ಲ The Managing Director is one of the finest gentlemen. He has been listening to the Chief Engineer who is misguiding him. ನಮ್ಮ ಅಶ್ವತ್ಥರೆಡ್ಡಿಯವರು ಅವರು ಬಹಳ ಒಳ್ಳೆಯವರು ಎಂದು ಹೇಳಿದ್ದಾರೆ. What is the use ? ಹರಿಜನರಿಗೆ ನ್ಯಾಯ ದೊರಕುವಂತೆ ನೋಡಿಕೊಳ್ಳದಿದ್ದರೆ ಏನು ಪ್ರಯೋಜನ. ಅವರು ಸರಿಯಾಗಿ ರೋಸ್ಟರ್ ಮೈನ್‌ಟೈನ್ ಮಾಡಿಲ್ಲ. ಆ ಬಗ್ಗೆ ಅವರು ಯಾರೇ ಆಗಿರಲಿ ಅವರಿಂದ ಎಕ್ಸ್‌ಪ್ಲನೇಷನ್ ಕೇಳದೇ ಇದ್ದರೆ, ಇದಕ್ಕೆ ನಾವು ಏನು ಹೇಳಬೇಕು. ಉದಾಸೀನ ಎಂದು ಹೇಳಬೇಕೆ, ಇನ್ನು ಯಾವ ಭಾವನೆಯಿಂದ ಹೇಳಬೇಕು. ಮಾನ್ಯ ಮಂತ್ರಿಗಳಲ್ಲಿ ನಾನು ಒತ್ತಾಯ ಮಾಡಿ ಕೇಳಿಕೊಳ್ಳುತ್ತೇನೆ. ಈ ರೀತಿ ಆಗತಕ್ಕ ಅನ್ಯಾಯನ್ನು ಸರಿಪಡಿಸಬೇಕು. ಇಲ್ಲದೇ ಹೋದರೆ ಪರಿಸ್ಥಿತಿ ಗಂಭೀರವಾಗುತ್ತದೆ. ಈ ರೀತಿ ಆಗತಕ್ಕ ಅನ್ಯಾಯವನ್ನು ಸರಿಪಡಿಸಲಿಕ್ಕೆ ನನಗನಿಸುತ್ತದೆ. ಈಗ ಇರತಕ್ಕ ಐ. ಎ. ಎಸ್. ಅಧಿಕಾರಿಗಳು ಏನಿದ್ದಾರೆ ಅವರು ಸರಿಯಾಗಿ ರೋಸ್ಟರ್ ಮೈನ್‌ಟೈನ್ ಮಾಡದೇ ಇದ್ದರೆ, ೬ ತಿಂಗಳು ಶಿಕ್ಷೆ, ೫೦೦ ರೂಪಾಯಿ ದಂಡ ಎನ್ನುವುದನ್ನು ಈ ಸಭೆಯಲ್ಲಿ ಒಂದು ಅಮೆಂಡ್‌ಮೆಂಟ್ ತಂದರೆ ಸರಿಹೋಗಬಹುದು ಅಂತ ಅನಿಸುತ್ತದೆ. ಬುದ್ಧಿ ಇಲ್ಲದೇ ಇದ್ದರೆ ಅವರಿಗೆ ಹೇಳಬಹುದು. ಬುದ್ಧಿ ಇದ್ದವರಿಗೆ ನಾವು ಏನು ಹೇಳಬೇಕು. ಎಂದು ಗೊತ್ತಾಗುತ್ತಿಲ್ಲ. How long we should advise the Head of the Dept. to protect the interests of the SCs and the STs. ? ಈ ತರಹ ಪ್ರಶ್ನೆಗಳು ನಮ್ಮ ಮುಂದೆ ನಿರಂತರವಾಗಿದೆ. ಕೂಡಲೇ ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ಇನ್ನು ನಾನು ಹೇಳತಕ್ಕದ್ದು ಬಹಳಷ್ಟು ವಿಚಾರಗಳು ಇದ್ದರು ಅಧ್ಯಕ್ಷರು ಸಮಯ ಮುಗಿದಿದೆ ಎಂದು ಹೇಳುತ್ತಾ ಇರುವುದರಿಂದ ನಾನು ಇದುವರೆಗೂ ಹೇಳಿರತಕ್ಕ ವಿಚಾರಗಳ ಬಗ್ಗೆ ಸಂಬಂಧಪಟ್ಟಂಥ ಮಂತ್ರಿಗಳೆಲ್ಲರೂ

ಕೂಡ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಂಡು ಈಗ ಬೇಡಿಕೆಗಳನ್ನು ಇಟ್ಟಿರತಕ್ಕ ನಾಲ್ಕು ಜನ ಮಂತ್ರಿಗಳನ್ನು ಪ್ರಾರ್ಥಿಸಿಕೊಂಡು ನನ್ನ ಮತದಾರರ ಕ್ಷೇತ್ರದ ಹಿತವನ್ನು ನೋಡಬೇಕು, ನಮ್ಮ ಬಿಜಾಪುರ ಜಿಲ್ಲೆ ಬರಗಾಲಕ್ಕೆ ತುತ್ತಾಗುತ್ತಿದೆ. ಈ ಬಗ್ಗೆ ಮುಖ್ಯ ಮಂತ್ರಿಗಳು ಕೂಡಲೇ ಹೈ ಲೆವೆಲ್ ಕಮಿಟಿ ನೇಮಿಸತ್ತೇವೆಂದು ಹೇಳಿದ್ದರು, ಅದು ಕೂಡಲೇ ಆಗಬೇಕೆಂದು ಒತ್ತಾಯಪಡಿಸಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪರಪ್ಪ ಕಳ್ಳಿಗುಡ್ಡ (ಬಾಗಲಕೋಟೆ).—ಸನ್ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ, ಭಾರೀ ನೀರಾವರಿ, ಸಣ್ಣ ನೀರಾವರಿ ಪಂತ್ತಿತರೇ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ನನ್ನ ಮತ್ತು ನಮ್ಮ ಊರಿನ ಪರಿಸ್ಥಿತಿಯನ್ನು ಹೇಳಿಕೊಳ್ಳುತ್ತೇನೆ. ಈ ಸದನದ ಎಲ್ಲ ಸದಸ್ಯರೂ ನಮಗೆ ಅದು ಬೇಕು, ನಮಗೆ ಇದು ಬೇಕು ಅಂತ ಕೇಳುತ್ತಿದ್ದಾರೆ. ಅಂದರೆ ನಾನು ಏನು ಬೇಡಬೇಕೋ ನನಗೆ ತಿಳಿಯುತ್ತಿಲ್ಲ. ನಮ್ಮ ಬಾಗಲಕೋಟೆ ಮುಳುಗುವುದೋ ಅಥವಾ ಉಳಿಯುವುದೇ ಎಂಬ ಯೋಚನೆಯಲ್ಲಿ ನಾವು ಹೊಯ್ದಾಡುತ್ತಿದ್ದೇವೆ. ಆದರೆ ನಮ್ಮ ಬಾಳೇಕುಂದ್ರಿಯವರು ಯೋಜನೆ ಯನ್ನು ತಯಾರು ಮಾಡಿದ್ದಾರೆ ಅದನ್ನು ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಕಳುಹಿಸಿದ್ದಾರೆ. ಅದು ಯೋಗ್ಯವೋ ಅಥವಾ ಬರಾಬರಿಯೋ ಗೊತ್ತಿಲ್ಲ. ಅಂತೂ ಇದರಲ್ಲಿ ಕೆಲವು ಶಂಕೆಗಳು ಉತ್ಪತ್ತಿಯಾಗಿವೆ ಗೋಡೆ ಸರಿಯಾಗಿ ಆಗುವುದಿಲ್ಲ, ಡ್ಯಾಂ ಸರಿಯಾಗಿ ಆಗುವುದಿಲ್ಲ, ಎಂದು ಬಾಗಲಕೋಟೆ ಜನರು ಹುಯಿ ಲೆಬ್ಬಿಸಿದ್ದಾರೆ. ಅದನ್ನು ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಯೋಗ್ಯ ರೀತಿಯಿಂದ ಪುನರ್ ಪರಿ ಶೀಲನೆ ಮಾಡಿ, ನಮ್ಮ ಬಾಗಲಕೋಟೆ ನಾಗರೀಕರಿಗೆ ಯಾರಿಗೂ ಅನ್ಯಾಯವಾಗದಂತಹ ರೀತಿಯಲ್ಲಿ ವಿಚಾರ ಮಾಡಬೇಕಾಗಿದೆ. ನೀರು ಸೋರಿ ಊರಿನೊಳಗೆ ಬರದಂತೆ ಇದನ್ನು ಪುನರ್ ವಿಚಾರ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಮತ್ತು ಬಾಗಲಕೋಟೆಯ ಕೆಲವು ಜನರು ಏನು ಕೆಲಸ ಮಾಡುತ್ತಿದ್ದಾರೆ ಪ್ರೋತ್ಸಾಹ ಕೊಡಬೇಕು, ಊರಿನ ಚಿಂತೆಯೇ ನನ್ನ ಚಿಂತೆ. ೮೦ ಸಾವಿರ ಜನರ ಚಿಂತೆಯೇ ನನ್ನ ಚಿಂತೆ. ಆದರೆ ಕೆಲವು ಜನರು ಇದರಲ್ಲಿ ಕುಚೋದ್ಯ ಮಾಡುತ್ತಿದ್ದಾರೆ. ಅದನ್ನು ಸರ್ಕಾರದವರು ತಪ್ಪಿಸಬೇಕು, ಬಾಗಲ್ಕೋಟೆಗೆ ಯೋಗ್ಯವಾದುದನ್ನು ಮಾಡಬೇಕು. ಯೋಜನೆ ಮಾಡತಕ್ಕವರು ನಮ್ಮ ಬಾಗಲಕೋಟೆಗೆ ಮಲತಾಯಿ ಧೋರಣೆ ಮಾಡು ತ್ತಿದ್ದಾರೆ. ಘಟಪ್ರಭಾ ಬಲದಂಡೆಗೆ ೫ ಕೋಟಿ ರೂ. ಕೊಟ್ಟಿದ್ದಾರೆ. ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಯಾವಾಗಲೂ ಬಹಳ ಬರಗಾಲ ಪರಿಸ್ಥಿತಿ ಇದೆ. ಇಡೀ ಕರ್ನಾಟಕದಲ್ಲೇ ಎಲ್ಲೂ ಇಲ್ಲದಷ್ಟು ಬರಗಾಲ ವಿದೆ. ನಮ್ಮ ಬಿಜಾಪುರ ಜಿಲ್ಲೆಯಲ್ಲಿ ೧೧ ತಾಲೂಕುಗಳಿವೆ, ಇದರಲ್ಲಿ ೭ ತಾಲೂಕುಗಳಿಗೆ ಒಂದು ಸ್ವಲ್ಪವೂ ಹಣವನ್ನು ತೆಗೆದುಕೊಂಡಿಲ್ಲ. ಅಧಿಕಾರಿಗಳು ಎಸ್ಟಿಮೇಟ್ ಮಾಡಿ ಕಳುಹಿಸಿದ್ದಾರೆ. ಅದು ಎಲ್ಲಿಗೆ ಹೋಗಿದೆಯೋ ಪತ್ತೆಯೇ ಇಲ್ಲ. ಬಾಗಲಕೋಟೆ ತಾಲೂಕಿನ ಮಟ್ಟಿಗೆ ಹೊಸ ಯೋಜನೆಯನ್ನು ಏನು ಮಾಡುತ್ತೀರಿ ಅದರ ಎಸ್ಟಿಮೇಟ್ ಮಾಡಬೇಕೆಂದು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಬಾಗಲಕೋಟೆ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಕಳಕಳಿಯಿಂದ ಬೇಡಿ ಕೊಳ್ಳುತ್ತಿದ್ದೇನೆ. ನಮ್ಮ ಜಿಲ್ಲೆಯವರೂ ಕೂಡ ನೀರಾವರಿ ಮಂತ್ರಿಗಳಲ್ಲಿ ಬೇಡಿಕೊಳ್ಳುತ್ತಿದ್ದಾರೆ. ಬಾಗಲಕೋಟೆ ಜನರ ಕಲ್ಯಾಣವನ್ನು ಒಳ್ಳೆಯ ರೀತಿಯಿಂದ ವಿಚಾರ ಮಾಡಿ ಬಾಗಲಕೋಟೆ ಜನರ ಮನಸ್ಸನ್ನು ತಿಳಿದುಕೊಂಡು ಒಳ್ಳೆಯ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಬೇಕೆಂದು ಪುನಃ ಪ್ರಾರ್ಥಿಸಿಕೊಳ್ಳುತ್ತೇನೆ.

ಮಾನ್ಯ ಉಪಾಧ್ಯಕ್ಷರೆ, ಇನ್ನು ಪವರ್ ಕಾರ್ಪೊರೇಷನ್ ಸಚಿವರು ಒಮ್ಮೆ ಸ್ವತಃ ಬಾಗಲಕೋಟೆಗೆ ಬಂದಿದ್ದರು. ಆಗ ಕೆಲವು ಊರುಗಳನ್ನು ನೋಡಿ ಅಲ್ಲಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇನೆಂದು ಹೇಳಿದ್ದರು. ಅದನ್ನು ಯಾವಾಗ ಕೊಡುತ್ತಾರೋ ಗೊತ್ತಿಲ್ಲ. ಮಾಲನ್ನು ಸಪ್ಲೈ ಮಾಡುತ್ತೇವೆಂದು ಹೇಳಿದ್ದರು, ಅದನ್ನು ಮಾಡಿಲ್ಲ. ಇದರಲ್ಲೂ ಮಲತಾಯಿ ಧೋರಣೆ ಅವರದು. ಆದ್ದರಿಂದ ಯಾವುದೇ ರೀತಿಯಿಂದಲೂ ಇದು ನಮ್ಮ ಭಾಗ, ಅದು ನಿಮ್ಮ ಭಾಗ ಎಂಬ ಮಲತಾಯಿ ಧೋರಣೆಯನ್ನು ತಾಳದೆ ಎಲ್ಲ ಜಿಲ್ಲೆಗಳಿಗೂ ಸಮಾನವಾಗಿ ಹಂಚಬೇಕೆಂದು ಸರ್ಕಾರದವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಮ್ಮ ಬಾಗಲಕೋಟೆ ಬಗ್ಗೆ ಆಸಕ್ತಿ ವಹಿಸಬೇಕು. ಕೆಲವರು ಹೇಳುತ್ತಾರೆ ಬಂಡ್ ಕಟ್ಟಿದರೆ ನೀರು ಒಳಗೆ ಬರುತ್ತದೆ ಎಂದು ಕೆಲವರು ಹೇಳುತ್ತಾರೆ ಪದೇ ಪದೇ ತುಂಬುತ್ತವೆ ಎಂದು ಇನ್ನು ಕೆಲವರು ಇನ್ನೊಂದು ರೀತಿ ಹೇಳುತ್ತಾರೆ. ಆದ್ದರಿಂದ ನಾನು ಸರ್ಕಾರದವರಲ್ಲಿ ಕೇಳಿಕೊಳ್ಳುವುದೇನೆಂದರೆ ನನ್ನ ಮೇಲೆ ಯಾವುದೇ ರೀತಿಯಲ್ಲೂ ಆಪಾದನೆ ಬಾರದಂತೆ ಜನರ ಹಿತರಕ್ಷಣೆ ಆಗುವಂತಹ ಕ್ರಮವನ್ನು

ತೆಗೆದುಕೊಳ್ಳಬೇಕು. ಅಪ್ಪರ್‌ಕೃಷ್ಣದಿಂದ ನಮ್ಮ ಜಿಲ್ಲೆಗೆ ನೀರಿಲ್ಲ. ಹಿಂದಿನ ಹಿರಿಯರು ಮಾಡಿದ ತಪ್ಪಿಗಾಗಿ ಇವತ್ತು ನಾವು ಶಿಕ್ಷೆ ಅನುಭವಿಸಬೇಕಾಗಿದೆ. ಒಬ್ಬರು ದಿಲ್ಲಿಗೆ ಹೋದರು, ಒಬ್ಬರು ಮನೆಯಲ್ಲಿ ಕುಳಿತರು, ಇನ್ನೊಬ್ಬರು ಸತ್ತುಹೋದರು. ಅವರ ಹೊರೆ ಈಗ ನಮ್ಮ ಮೇಲೆ ಬಂದಿದೆ. ನಾನು ಏನು ಮಾಡಿಲ್ಲ ಅಂತ ಅವರು ಎಲೆಕ್ಷನ್‌ನಲ್ಲಿ ಹೇಳಿದರು. ಅವರು ಮಾಡಿದ ರೆಕಾರ್ಡ್ಸ್ ನನ್ನ ಹತ್ತಿರ ಇವೆ. ಅದರಲ್ಲಿ ತೋರಿಸುತ್ತೇನೆ. ನಮ್ಮ ಸರ್ಕಾರ ಯೋಗ್ಯ ಇದೆ. ನಮ್ಮ ಮಾನ್ಯ ಗುಂಡೂರಾಯರು ಯೋಗ್ಯವಾಗಿ ಕೆಲಸ ಮಾಡುತ್ತಿದ್ದಾರೆ. ನನಗೆ ಯಾವ ಅಪವಾದವು ಬಾರದಂತೆ ದೂರದೃಷ್ಟಿಯಿಂದ ಕೆಲಸ ಮಾಡಬೇಕಾಗಿದೆ. ನನಗೆ ಮಾನ್ಯ ಅಧ್ಯಕ್ಷರು ಟೈಂ ಕೊಡುವುದಿಲ್ಲ ಅಂತ ಅಂದರು ಚೆನ್ನಾಗಿ ಮಾತನಾಡುವುದಕ್ಕೆ ಬರುವವರಿಗೆ ಕೊಡುತ್ತಾರೆ. ನಮ್ಮಂಥ ಮಾತನಾಡುವುದಕ್ಕೆ ಬರದಿರುವವರಿಗೆ ಟೈಂ ಕೊಡುವುದಿಲ್ಲ. ಮಾನ್ಯ ದೇವೇಗೌಡರಿಗೆ ಮೂರೂವರೆ ತಾಸು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ನಮ್ಮ ಬಾಗಲಕೋಟೆ ತಾಲೂಕಿನಲ್ಲಿ ಇರತಕ್ಕ ರಸ್ತೆಗಳ ಹೆಸರುಗಳನ್ನು ನಾನು ಹೇಳುತ್ತೇನೆ. ಮಾನ್ಯ ಸಚಿವರು ಅದನ್ನು ಬರೆದುಕೊಂಡು ದುರಸ್ತಿ ಮಾಡಿಸಬೇಕು. ನನ್ನಲ್ಲಿರತಕ್ಕ ಈ ಚೀಟಿಯನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ಹಿಂದೆ ಮಾನ್ಯ ಬಂಗಾರಪ್ಪನವರು ಮಾಸ್ಟರ್ ಪ್ಲಾನ್ ಮಾಡಿ ಒಂದು ದೊಡ್ಡ ಬುಕ್ಕನ್ನು ಕೊಟ್ಟರು. ಆದರೆ ಆ ಬುಕ್ಕಿನಲ್ಲಿದ್ದುದು ಏನೂ ಆಗಲಿಲ್ಲ. ಈಗ ನಾನು ಈ ಸಣ್ಣ ಕಾಗದವನ್ನು ಕೊಡುತ್ತಿದ್ದೇನೆ. ಇದು ಕಾರ್ಯಗತವಾಗಬೇಕು ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳು ಗಮನಿಸಬೇಕು. ಸಣ್ಣ ನೀರಾವರಿ ಮಂತ್ರಿಗಳಲ್ಲಿ ಬೇಡಿಕೊಳ್ಳುತ್ತೇನೆ. ನಮ್ಮ ಚನ್ನಬಸಪ್ಪನವರ ಯೋಜನೆ ಪ್ರಕಾರ ಮಾಡಿದ್ದಾರೆ. ನಮ್ಮ ಜಿಲ್ಲೆ ವಿಚಾರದಲ್ಲಿ ನಮ್ಮ ತಾಲೂಕಿನ ಜನರು ಅವರಿಗೆ ಕೃತಜ್ಞರಾಗಿದ್ದೇವೆ. ನಮ್ಮ ಬಾಗಲಕೋಟೆ ಭಾಗದಲ್ಲಿನ ಎಲ್ಲ ಕೆಲಸವನ್ನೂ ಮಾಡಿ ಆ ಭಾಗದ ಜನರ ಮೆಚ್ಚುಗೆಯನ್ನು ತಾವು ಪಡೆಯುತ್ತೀರೆಂದು ನಂಬಿ, ನನ್ನ ಮೇಲೆ ಬಂದಿರತಕ್ಕ ಅಪವಾದವನ್ನು ಮಾನ್ಯ ಗುಂಡೂರಾಯರು ಪೂರ್ಣವಾಗಿ ಪರಿಹಾರ ಮಾಡುತ್ತಾರೆಂದು ನಂಬಿಕೆ ಮತ್ತು ವಿಶ್ವಾಸವಿಟ್ಟು ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕಾಗೋಡು ತಿಮ್ಮಪ್ಪ (ಲೋಕೋಪಯೋಗಿ ಖಾತೆ ಸಚಿವರು).—ಸನ್ಮಾನ್ಯ ಸಭಾಧ್ಯಕ್ಷರೆ, ನನ್ನ ಇಲಾಖೆ ಮೇಲಿನ ಚರ್ಚೆಯನ್ನು ಶ್ರೀಮಾನ್ ಬಾವಿಯವರು ಪ್ರಾರಂಭ ಮಾಡಿ ಮಾನ್ಯ ಪರಪ್ಪನವರು ಮುಕ್ತಾಯ ಮಾಡಿದ್ದಾರೆ. ಈ ಮಧ್ಯೆ ಮಾತನಾಡಿದಂಥ ಈ ಸದನದ ಎಲ್ಲ ಸದಸ್ಯರೂ ರೋಧಪಕ್ಷದ ಸದಸ್ಯರನ್ನೊಳಗೊಂಡ ಕೆಲವು ಉಪಯುಕ್ತ ಸಲಹೆಗಳನ್ನು ಮಾಡಿದ್ದಾರೆ. ರಾಜ್ಯದ ಬೆಳವಣಿಗೆ ದೃಷ್ಟಿಯಿಂದ ರಸ್ತೆಸಾರಿಗೆಗಳನ್ನು ಅಭಿವೃದ್ಧಿ ಪಡಿಸುವ ವಿಚಾರದಲ್ಲಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಮತ್ತು ಇಲಾಖೆಯಲ್ಲಿರತಕ್ಕ ಕೆಲವು ಲೋಪದೋಷಗಳನ್ನು ಸರಿಪಡಿಸುವ ವಿಚಾರದಲ್ಲಿ ಕೂಡ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಉತ್ತರ ಕೊಡತಕ್ಕ ಕಾಲದಲ್ಲಿ ಸಮಗ್ರವಾಗಿ ಎಲ್ಲ ಸದಸ್ಯರ ಮಾತಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಉತ್ತರ ಕೊಡುವುದು ಕಷ್ಟವಾದರೂ ಒಟ್ಟಿನ ಸಾರಾಂಶವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಸದನದಲ್ಲಿ ಸದಸ್ಯರಿಂದ ಬಂದಂಥ ಎಲ್ಲ ಸಲಹೆಗಳನ್ನೂ ಸರ್ಕಾರ ಗಂಭೀರವಾಗಿ ಗಮನಿಸಿ ಆಗತ್ಯವಾದ ಕಡೆಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳುತ್ತೇವೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಸಾರಿಗೆ ಸಂಪರ್ಕ ರಾಷ್ಟ್ರದ ಬೆಳವಣಿಗೆ ದೃಷ್ಟಿಯಿಂದ ಜೀವನಾಡಿ. ಇದನ್ನು ಅಲ್ಲಗೆಳೆಯುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ನಮ್ಮ ರಾಷ್ಟ್ರ ಅಷ್ಟೇ ಅಲ್ಲ ನಮ್ಮ ರಾಜ್ಯ ಕೂಡ ಗ್ರಾಮಾಂತರ ಪ್ರದೇಶಗಳಿಂದ ಕೂಡಿದ ಪ್ರದೇಶ. ರಸ್ತೆ ಸಂಪರ್ಕ ಕಲ್ಪಿಸಿಕೊಡಬೇಕಾದ ಹೊಣೆಗಾರಿಕೆ ಮತ್ತು ಜವಾಬ್ದಾರಿ ಸರ್ಕಾರದ್ದಿದೆ. ಇದುವರೆವಿಗೂ ಮಾಡಿರತಕ್ಕ ಸಾಧನೆ ನಾವು ಹೇಳಿಕೊಳ್ಳುವಷ್ಟು ತೃಪ್ತಿದಾಯಕವಾಗಿಲ್ಲ. ಮಾಡಬೇಕಾದ ಕೆಲಸ ಅಪಾರವಾಗಿದೆ. ಅಂತೆಯೇ ಅಪಾರವಾದ ಹಣದ ಅವಶ್ಯಕತೆ ಕೂಡ ಇದೆ. ಇದಕ್ಕೆ ಸರ್ಕಾರದವರು ತಮ್ಮ ಸಂಪನ್ಮೂಲಗಳನ್ನು ನಿರ್ಧಾರ ಮಾಡುವ ಮೂಲಕ ಜನರ ಆಸೆ. ಅನಿಸಿಕೆಗಳನ್ನು ನೆರವೇರಿಸಬೇಕಾಗಿದೆ. ಈಗ ಮಾನ್ಯ ದೇವೇಗೌಡರು, ಮಾನ್ಯ ಹನುಮೇಗೌಡರು ಮಾತನಾಡಿದ್ದಾರೆ. ಮಾನ್ಯ ಹನುಮೇಗೌಡರು ಮಾತನಾಡುತ್ತಾ ನೀವು ವಿರೋಧಪಕ್ಷದಲ್ಲಿ ಕೂತು ಮಾತನಾಡುವಾಗ ಈ ಇಲಾಖೆಯ ಎಲ್ಲ ಹಂದರಗಳನ್ನೂ ಬಿಚ್ಚಿ ಬಿಚ್ಚಿ ಮಾತನಾಡಿ ತೋರಿಸಿದ್ದೀರಿ ಎಂದು ಹೇಳಿದರು. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಅಧಿಕಾರ ಸ್ಥಾನದಲ್ಲಿ ಕೂತು ಮಾತನಾಡುವಾಗ ಅದರ ಧಾಟಿ ಬೇರೆ ರೀತಿ ಇರುತ್ತದೆ. ಇದು ಸ್ವಾಭಾವಿಕ. ಇದು ಯಾರೇ ಈ ಸ್ಥಾನದಲ್ಲಿ ಬಂದು ಕೂತರೂ ಬರುತ್ತದೆ. ಒಟ್ಟಿನಲ್ಲಿ ನಾವು ಕಾರ್ಯಕ್ರಮ ದೃಷ್ಟಿಯಿಂದ ಖರ್ಚು ಮಾಡತಕ್ಕ ಹಣ ಏನಿದೆ ಇದು ಅನೇಕ ಜನರಿಗೆ ತೃಪ್ತಿಯನ್ನು ತಂದು ಕೊಡುವುದಿಲ್ಲ.

೪-೩೦ ಪಿ. ಎಂ.

ಈವತ್ತು ನಮ್ಮ ಇಲಾಖೆಯ ವ್ಯಾಪ್ತಿಯಲ್ಲಿ ಸುಮಾರು ೬೪ ಸಾವಿರ ಕಿಲೋಮೀಟರ್ ಉದ್ದದ ರಸ್ತೆ ಇದೆ ಇದರಲ್ಲಿ ಈವರೆಗೆ ಅಭಿವೃದ್ಧಿ ಪಡಿಸಿರತಕ್ಕಂಥ ಸಂಖ್ಯೆ ಸುಮಾರು ೨೫ ಸಾವಿರದ ೯೫೩ ಕಿಲೋ ಮೀಟರು ರಸ್ತೆಗೆ ಟಾರು ಹಾಕಲಾಗಿದೆ. ಸುಮಾರು ೨೩,೪೦೭ ಕಿಲೋಮೀಟರ್ ರಸ್ತೆಗೆ ಜಲ್ಲಿಯನ್ನು ಹಾಕಿಸಲಾಗಿದೆ. ೧೪,೭೨೫ ಕಿಲೋಮೀಟರು ರಸ್ತೆಗೆ ನಾವು ಜಲ್ಲಿ ಹಾಕಿಸಬೇಕಾದ ಕೆಲಸವಿರುತ್ತದೆ. ನಾವು ಸರ್ವೆ ಸಾಧಾರಣವಾಗಿ ಲೆಕ್ಕಾಚಾರ ಹಾಕಿದ್ದೇವೆ. ಜಲ್ಲಿ ಹಾಕದೆ ಉಳಿದಿರತಕ್ಕಂಥ ಸುಮಾರು ೧೪ ಸಾವಿರ ಕಿಲೋಮೀಟರ್ ರಸ್ತೆ ಸರಾಸರಿ ೨೫ ಸಾವಿರ ರೂಪಾಯಿಗಳನ್ನು ನಾವು ಹೊಂಚಿಕೊಂಡಲ್ಲಿ ಈ ಒಂದು ಕೆಲಸಕ್ಕೆ ಸುಮಾರು ೩೭ಕೋಟಿ ರೂಪಾಯಿಗಳು ಬೇಕಾಗುತ್ತದೆ ಆದುದರಿಂದ ಇದನ್ನು ಸ್ವಲ್ಪ ಏಕಕಾಲದಲ್ಲಿ ಮಾಡಲು ಕಷ್ಟವಾಗುತ್ತದೆ. ಆಮೇಲೆ ಎಲ್ಲ ರಸ್ತೆಗಳಿಗೆ ಕನಿಷ್ಟಪಕ್ಷ ಜಲ್ಲಿಗಳನ್ನು ಕಲ್ಲು ಗಳನ್ನು ಹಾಕುವ ಮುಂಖೇನ ವರ್ಷಮುತು ಅಂದರೆ ೧೨ ತಿಂಗಳ ಕಾಲ ಸಂಚಾರಕ್ಕೆ ಯೋಗ್ಯ ರೀತಿಯಲ್ಲಿ ರಸ್ತೆಗಳನ್ನು ಅಭಿವೃದ್ಧಿ ಪಡಿಸತಕ್ಕಂಥ ಒಂದು ಪ್ರಯತ್ನವನ್ನು ಈವತ್ತು ಸರ್ಕಾರ ಮಾಡಲೇಬೇಕಾಗಿದೆ. ಇದರಿಂದ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಸಂಪರ್ಕಕ್ಕೆ ಉಪಯೋಗಿಸ ತಕ್ಕಂಥ ರಸ್ತೆಗಳು ಈವತ್ತು ಗ್ರಾಮಾಂತರ ಪ್ರದೇಶದ ಜನರಿಗೆ ಅವಶ್ಯಕವಾಗಿ ಎಲ್ಲ ಆವಶ್ಯಕತೆಗಳನ್ನು ಪೂರೈಸುವುದಕ್ಕೆ ಸಾಧ್ಯವಾಗದಿದ್ದರೂ ಕನಿಷ್ಟ ಪ್ರಮಾಣದ ಆವಶ್ಯಕತೆಗಳನ್ನು ಭರಿಸತಕ್ಕಂಥ ಒಂದು ಜವಾಬ್ದಾರಿ ಈ ಪ್ರಜಾಪ್ರಭುತ್ವದಲ್ಲಿ ಕೆಲಸ ಮಾಡತಕ್ಕಂಥ ಸರ್ಕಾರ ನಿರ್ವಹಿಸಲೇಬೇಕಾಗುತ್ತದೆ. ಈ ದೃಷ್ಟಿಯಿಂದ ನಮ್ಮ ಇಲಾಖೆಗೆ ಒಳಪಡತಕ್ಕಂಥ ರಸ್ತೆಗಳು ಸಾಕಷ್ಟು ಹೆಚ್ಚಿನ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಬೇಕು ಎನ್ನುವ ದೃಷ್ಟಿಯಲ್ಲಿ ವ್ಯಾಪಕವಾಗಿ ಗ್ರಾಮಾಂತರ ರಸ್ತೆಗಳ ಕಾರ್ಯವನ್ನು ನಾವು ಕಾರ್ಯಾರಂಭ ಮಾಡಿರುತ್ತೇವೆ. ಇಲಾಖೆ ನಿರ್ವಹಿಸಬೇಕಾದಂಥ ಒಟ್ಟು ಕಟ್ಟಡಗಳು, ರಸ್ತೆಗಳನ್ನು ಲೆಕ್ಕಹಾಕಿದರೆ ಸುಮಾರು ೯೬ ಕೋಟಿ ರೂಪಾಯಿಗಳ ವೆಚ್ಚದ ಕೆಲಸಗಳನ್ನು ಈಗಾಗಲೇ ಕಾರ್ಯಾರಂಭ ಮಾಡಿದ್ದೇವೆ. ಆದರೆ ಇದಕ್ಕೆ ಕಳೆದ ೧೯೭೯-೮೦-೮೧ನೇ ಸಾಲಿಗೆ ಸಿಕ್ಕಿದಂಥ ಹಣ ನಮ್ಮ ನಿರೀಕ್ಷಣೆಗಿಂತ ಕಡಿಮೆಯಾಗಿ ಸಿಕ್ಕಿದೆ. ಸುಮಾರು ೧೯೭೯ ರಿಂದ ೮೦ನೇ ಸಾಲಿಗೆ ಇದಕ್ಕೆ ಸಿಕ್ಕಿದಂಥ ಹಣ ಸುಮಾರು ೪೦ ಕೋಟಿ ರೂಪಾಯಿಗಳು. ೧೯೮೦-೮೧ರಲ್ಲಿ ಇದಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ಹಣ ಸಿಕ್ಕಿದೆ. ಉದಾ ಹರಣೆಗೆ ಅಧ್ಯಕ್ಷರೇ ಕಳೆದ ಸಾಲಿನಲ್ಲಿ ೧೯೮೦-೮೨ನೇ ಸಾಲಿನಲ್ಲಿ ಸುಮಾರು ರಸ್ತೆಗಳಿಗೋಸ್ಕರವಾಗಿ ನಾವು ೧೭ಕೋಟಿ೧ಲಕ್ಷರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ ಇದರಲ್ಲಿ ೧೮ಕೋಟಿ ೪೩ಲಕ್ಷ ರೂಪಾಯಿಗಳುಖರ್ಚಾ ಗಿದೆ. ೧೯೮೧-೮೨ರಲ್ಲಿ ಸುಮಾರು ೧೯ ಕೋಟಿರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಕಳೆದ ವರ್ಷ ಜಾಸ್ತಿ ಮಾಡಿದ್ದೇವೆ. ಇದರಲ್ಲಿ ಸುಮಾರು ರಸ್ತೆಗೆ ಎಂದು ಇಟ್ಟಿರುವ ಹಣದಲ್ಲಿ ನಾವು ದುರಸ್ತಿ ಕೆಲಸಗಳಿಗೋಸ್ಕರ ಪ್ರತ್ಯೇಕವಾಗಿ ಹಣವನ್ನು ತೆಗೆದಿಟ್ಟಿದ್ದೇವೆ. ಒಟ್ಟು ನಮ್ಮ ರಸ್ತೆಗಳು ಕಟ್ಟಡಗಳಿಗಾಗಿ ೪೦ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದರಲ್ಲಿ ಸುಮಾರು ೩೦ ಕೋಟಿ ರೂಪಾಯಿಗಳು ಖರ್ಚಾಗಿರುತ್ತದೆ. ೧೯೮೧-೮೨ರಲ್ಲಿ ಇದೇ ಬಾಬಿಗೆ ಈ ವರ್ಷ ಸುಮಾರು ೩೫ ಕೋಟಿ ರೂಪಾಯಿಗಳನ್ನು ತೆಗದಿಟ್ಟಿದ್ದೇವೆ. ಕಳೆದ ಸಾರಿ ಇದ್ದಂಥ ಹಣದಲ್ಲಿ ಕೆಲ ಪ್ರಮಾಣದಲ್ಲಿ ಖರ್ಚಾಗಲಿಲ್ಲ. ಏತಕ್ಕೆಂದರೆ ನಮಗೆ ಸಿಮೆಂಟ್ ಮತ್ತು ಕಬ್ಬಿಣದ ಕೊರತೆ ಉಂಟಾಯಿತು. ಈ ಕಾರಣಕ್ಕಾಗಿ ಇದರಲ್ಲಿ ಮುಖ್ಯವಾಗಿ ಕಟ್ಟಡಗಳಿಗೆ ಉಪಯೋಗಿಸಬೇಕಾಗಿದ್ದ ಹಣ ಸ್ವಲ್ಪ ಮಟ್ಟಿಗೆ ಕಡಿಮೆ ಖರ್ಚು ಮಾಡಬೇಕಾಯಿತು. ಆದರೂ ಅಧ್ಯಕ್ಷರೇ ನಾವು ಇಷ್ಟು ಪ್ರಮಾಣದ ರಸ್ತೆಗಳ ಜೊತೆಗೆ ಐ.ಸಿ. ಆರ್. ಸಿ ರಸ್ತೆಗಳನ್ನೂ ಕೂಡ ತೆಗೆದು ಕೊಂಡಿದ್ದೇವೆ. ಇದು ಸುಮಾರು ಹೊಸ ರಸ್ತೆಗಳು ೧೨ ಸಾವಿರ ಕಿಲೋಮೀಟರ್ ಇದೆ. ಇದ್ದಂಥ ರಸ್ತೆಗಳ ದುರಸ್ತಿಪಡಿಸುವುದಕ್ಕೋಸ್ಕರವಾಗಿ ೯ ಸಾವಿರ ಕಿಲೋ ಮೀಟರ್ ರಸ್ತೆಗಳನ್ನು ತೆಗೆದುಕೊಂಡಿ ದ್ದೇವೆ. ಒಟ್ಟು ಸುಮಾರು ೨೨ ಸಾವಿರ ಕಿಲೋ ಮೀಟರ್ ಐ. ಸಿ. ಆರ್. ಸಿ ರಸ್ತೆಗಳನ್ನು ೧೯೭೨-೭೩ ರಲ್ಲಿ ಸರ್ಕಾರ ಸ್ವಾಧೀನಕ್ಕೆ ತೆಗೆದುಕೊಂಡು ಅದರಲ್ಲಿ ಸುಮಾರು ಹೊಸ ರಸ್ತೆಗಳನ್ನು, ಸುಮಾರು ಮೊದಲನೆ ಹಂತದಲ್ಲಿ ೯ ಸಾವಿರದ ೭೩೦ ಕಿಲೋ ಮೀಟರ್‌ಗಳಷ್ಟು ಕೆಲಸ ಮಾಡಿದ್ದರು. ಎರಡನೆ ಹಂತ ದಲ್ಲಿ ಸುಮಾರು ೪ ಸಾವಿರದ ೯೩ ಕಿಲೋ ಮೀಟರ್ ರಸ್ತೆಗಳನ್ನು ಒಳಪಡಿಸಿದ್ದಾರೆ. ಮೂರನೆಯ ಹಂತದಲ್ಲಿ ೨. ೮೧ ಕಿಲೋ ಮೀಟರ್ ಒಳಪಡಿಸಿ. ದುರಸ್ತಿ ಕಾರ್ಯಗಳಿಗಾಗಿ ೯ ಸಾವಿರ ಕಿಲೋಮೀಟರ್ ರಸ್ತೆಗಳನ್ನು ೭೧೪೮ ಕಿಲೋಮೀಟರ್ ರಸ್ತೆಯ ವ್ಯಾಪ್ತಿ ಒಳಗೆ ತರಲಾಗಿದೆ. ಜೊತೆಗೆ ಈ ವರ್ಷ ಕೂಡ ಸುಮಾರು ಮೊದಲನೆ ಹಂತದ ಕೆಲಸವೆಂದು ೮ ನೂರು ಕಿಲೋ ಮೀಟರ್ ತೆಗೆದುಕೊಂಡು ದುರಸ್ತಿ ಮಾಡತಕ್ಕಂಥ ಕೆಲಸ ಎರಡು ನೂರು ಕಿಲೋಮೀಟರ್ ಈ ವರ್ಷ ಮಾಡಬೇಕು ಎನ್ನುವ ಅಂದಾಜನಲ್ಲಿ

ಇಟ್ಟುಕೊಂಡಿದ್ದೇವೆ. ಅಧ್ಯಕ್ಷರೇ ಈ ಬಗ್ಗೆ ಸುಮಾರು ೩ ಕೋಟಿ ರೂಪಾಯಿಗಳನ್ನು ಈ ವರ್ಷದ ಬಡ್ಜೆಟ್‌ನಲ್ಲಿ ನಾವು ತೆಗೆದಿಟ್ಟು ಪ್ರತಿಯೊಂದು ಸಲಕ್ಕೂ ಕೂಡ ಒಂದು ಲಕ್ಷ ಎಪ್ಪತ್ತು ಸಾವಿರ ರೂಪಾಯಿಗಳನ್ನು ಐ. ಸಿ. ಆರ್. ಸಿ ರಸ್ತೆಗಳನ್ನು ದುರಸ್ತಿಪಡಿಸುವುದಕ್ಕೋಸ್ಕರ ಇಟ್ಟಿದ್ದೇವೆ. ಈಗ ಇಟ್ಟಿರತಕ್ಕಂಥ ಹಣ ಸಾಕಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಎಲ್ಲ ಸದಸ್ಯರೂ ಕೂಡ ಈ ಒಂದು ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದು ನಮ್ಮ ಇಲಾಖೆಯ ವ್ಯಾಪ್ತಿಯಲ್ಲಿರತಕ್ಕಂಥ ರಸ್ತೆಗಳು. ಇನ್ನೂ ತಾಲ್ಲೋಕ್‌ಬೋರ್ಡ್ ವ್ಯಾಪ್ತಿಯಲ್ಲಿ ಪಂಚಾಯತಿಗಳ ವ್ಯಾಪ್ತಿಯಲ್ಲಿ ಎಷ್ಟು ಪ್ರಮಾಣದಲ್ಲಿ ರಸ್ತೆಗಳು ಇದೆಯೋ ಅಂದರೆ ಮಾನ್ಯ ಅಧ್ಯಕ್ಷರೇ ನಮ್ಮ ತಾಲ್ಲೂಕ್ ಬೋರ್ಡ್ ವ್ಯಾಪ್ತಿಯಲ್ಲಿ ಸುಮಾರು ೨೫ ಸಾವಿರ ಕಿಲೋ ಮೀಟರ್ ರಸ್ತೆಗಳು ಇರುತ್ತವೆ. ಇದ್ದಾಗ್ಯೂ ಕೂಡ ಸಾಕಷ್ಟು ಪ್ರಮಾಣದಲ್ಲಿ ಹಣವಿಲ್ಲ, ಅವುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಅಭಿವೃದ್ಧಿಪಡಿಸುವುದಕ್ಕೆ ಸಾಧ್ಯವಾಗಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಇದರಲ್ಲಿ ಅಧ್ಯಕ್ಷರೇ ಕಳೆದ ೧೯೭೯-೮೦-೮೧ನೇ ಸಾಲಿನಲ್ಲಿ ನಿರೀಕ್ಷಿಸಿದ ಮಟ್ಟದಲ್ಲಿ ಹೊಸ ಕೆಲಸಗಳನ್ನು ಪ್ರಾರಂಭ ಮಾಡಿದ್ದೇವೆ. ಅದಕ್ಕಿಂತ ಹಿಂದೆ ಈಗಾಗಲೇ ಯಾವ ಕೆಲಸಗಳನ್ನು ಪ್ರಾರಂಭ ಮಾಡಿದ್ದೇವೋ ಅವುಗಳನ್ನು ಪೂರ್ಣ ಮಾಡತಕ್ಕಂಥ ಒಂದು ಸನ್ನಿವೇಶ ಇರುವ ಕಾರಣಕ್ಕಾಗಿ ಎರಡು ಈ ವರ್ಷಗಳಲ್ಲಿ ಹೊಸ ಕೆಲಸಗಳನ್ನು ತೆಗೆದುಕೊಳ್ಳಲಾಗಿಲ್ಲ. ಎರಡು ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ಬಿಟ್ಟರೆ ಯಾವುದೇ ಕೆಲಸಗಳನ್ನು ನಾವು ತೆಗೆದುಕೊಂಡಿಲ್ಲ. ಹಿಂದೆ ತೆಗೆದುಕೊಂಡಿರತಕ್ಕಂಥ ಕೆಲಸಗಳನ್ನು ಪೂರ್ಣ ಮಾಡಬೇಕಾಗಿದೆ. ಆದುದರಿಂದ ಅನೇಕ ಮಾನ್ಯ ಸದಸ್ಯರು ಮನಸ್ಸಿನಲ್ಲಿ ಯಾವ ಹೊಸ ಕೆಲಸಗಳನ್ನು ಬಡ್ಜೆಟ್‌ನಲ್ಲಿ ಸೇರಿಸಿಲ್ಲ ಎನ್ನುವ ಕೊರತೆ ಕಂಡಬಂದಿದೆ. ಅದನ್ನು ಗಮನಿಸಿದ ಮೇಲೆ ನಾವು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಹಣಕಾಸಿನ ಸಚಿವರಲ್ಲಿ ಪ್ರಸ್ತಾಪ ಮಾಡಿದಾಗ ಅವರು ಪ್ರತಿಯೊಬ್ಬ ಶಾಸಕರಿಗೂ ಕೂಡ ಅವರಿಗೆ ಕನಿಷ್ಟ ೫ ಲಕ್ಷ ರೂಪಾಯಿ ಮಿತಿಯಲ್ಲಿ ಹೊಸ ಕೆಲಸಗಳನ್ನು ತೆಗೆದುಕೊಳ್ಳಬೇಕು ಎನ್ನುವ ಒಂದು ತೀರ್ಮಾನ ಮಾಡಲಾಗಿದೆ ಎನ್ನುವ ವಿಷಯವನ್ನು ಬಹಳ ಸಂತೋಷದಿಂದು ವ್ಯಕ್ತಪಡಿಸುತ್ತೇನೆ. ಈ ಕಾರಣಕ್ಕಾಗಿ ೧೮ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಗ್ರಾಮಾಂತರ ರಸ್ತೆಗಳು ಏನು ಇದೆ ಅದರಲ್ಲಿ ಎಲ್ಲ ಶಾಸಕರು...

ಶ್ರೀ ಕೆ. ಭಾಸ್ಕರ ನಾಯ್ಡು.—ನಾವು ಲೋಕೋಪಯೋಗಿ ಇಲಾಖೆಯಲ್ಲಿ ಯಾವ ಕೆಲಸ ಮಾಡಿಕೊಡಬೇಕೆಂದರೂ ರೊಕ್ಕವಿಲ್ಲವೆಂದು ಹೇಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಅದಕ್ಕೆ ನಾವು ಹೇಳಿದ್ದೇವೆ, ಮಾನ್ಯ ಸದಸ್ಯರು ಶಾಸನಸಭಾ ಸದಸ್ಯರು, ವಿಧಾನಪರಿಷತ್ತಿನ ಸದಸ್ಯರು, ಲೋಕಸಭಾಸದಸ್ಯರು ಹಾಗೂ ಪ್ರಮುಖರು ಯಾವುದೇ ಶಾಸನಸಭೆಯ ಕ್ಷೇತ್ರದಲ್ಲಿ ಬರತಕ್ಕಂಥ ತಾಲ್ಲೂಕ್ಕಾಗಲಿ, ಜಿಲ್ಲೆಗಳಾಗಲಿ ಕನಿಷ್ಟಪಕ್ಷ ೫ ಲಕ್ಷ ರೂಪಾಯಿಗಳ ಕಾಮಗಾರಿ ಕೆಲಸಗಳನ್ನು ಮಾಡಲು ಪಟ್ಟಿಯನ್ನು ಮಾಡಿದ್ದೇವೆ. ಅದನ್ನು ಮಾನ್ಯ ಸದಸ್ಯರು ತೋರಿಸಲಿಲ್ಲ ಎಂದು ಹೇಳಿದರು. ಅದರ ಒಂದು ಅಂತಿಮ ಪಟ್ಟಿಯನ್ನು ಮಾನ್ಯ ಸದಸ್ಯರಿಗೆ ತೋರಿಸಿ ಮಂಜೂರಾತಿಯನ್ನು ಪಡೆಯುತ್ತೇವೆ ಎಂದು ನಾನು ಹೇಳುತ್ತೇನೆ. ಅದು ಅಂತಿಮ ತೀರ್ಮಾನ ಆಗದೇ ಇರುವುದರಿಂದ ಎಷ್ಟು ರಸ್ತೆಗಳು ಇವೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ಒಂದು ಕಾರ್ಯಕ್ರಮ ಏನು ಮಾಡಿದ್ದೇವೆ. ಅದನ್ನು ಕಾರ್ಯಗತ ಮಾಡತಕ್ಕ ಬಗ್ಗೆ ಸರ್ಕಾರ ವಹಿಸಿಕೊಂಡಿದೆ ಎಂದು ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಹಣಕಾಸಿನ ಸಚಿವರು ಒಪ್ಪಿದ್ದಾರೆ. ಇನ್ನು ಕೆಲವೇ ದಿವಸಗಳಲ್ಲಿ ಮಂಜೂರಾತಿಯನ್ನು ಕೊಡುವ ಕೆಲಸವನ್ನು ಸರ್ಕಾರ ಮಾಡುತ್ತದೆಂದು ಹೇಳಿ, ಏನು ಸದಸ್ಯರಲ್ಲಿ ಕೊರತೆ ಇದೆ ಅದನ್ನು ನಿವಾರಣೆ ಮಾಡುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವ ಪ್ರಯತ್ನವನ್ನು ಸರ್ಕಾರ ಮಾಡುತ್ತದೆಂದು ಹೇಳುತ್ತೇನೆ. ಈ ಸಾರಿ ಹಣಕಾಸಿನ ಸಂಪನ್ಮೂಲಗಳನ್ನು ಸಂಗ್ರಹ ಮಾಡುವುದರಲ್ಲಿ ಸ್ವಲ್ಪ ಕಷ್ಟವಾಯಿತು. ಎಷ್ಟೇ ಕೊರತೆ ಇದ್ದರೂ ಸಹಾ ಹಳ್ಳಿಗಾಡಿನ ರಸ್ತೆ ಹಾಗೂ ಮೋರಿಗಳನ್ನು ನಿರ್ಮಿಸುವ ಕಲಸವನ್ನು ಬಿಡಬಾರದು, ಆ ಬಗ್ಗೆ ಇನ್ನೂ ಹೆಚ್ಚಿನ ಕೆಲಸ ಮಾಡಬೇಕು ಎಂದು ಸರ್ಕಾರಕ್ಕೆ ಇದೆ, ಆ ಬಗ್ಗೆ ಸರ್ಕಾರಕ್ಕೆ ಶಕ್ತಿಯೂ ಇದೆ ಎಂದು ನಾನು ಹೇಳುತ್ತೇನೆ. ಈ ಕೆಲಸವನ್ನು ಪರಿಪೂರ್ಣವಾಗಿ ಮಾಡಬೇಕಾಗಿರುತ್ತದೆ. ಈ ಮಾತಿನಲ್ಲಿ ಮಾನ್ಯ ಸದಸ್ಯರು ವಿಶ್ವಾಸವನ್ನು ಇಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಪ್ರಮುಖವಾಗಿ ಒಂದು ದೊಡ್ಡ ಇಲಾಖೆ. ಇದರಲ್ಲಿ ಹೆಚ್ಚಿನ ಹಣ ಖರ್ಚು ಆಗುತ್ತದೆ. ಖರ್ಚು ಮಾಡತಕ್ಕ ಹಣದ ಬಗ್ಗೆ ಮಾನ್ಯ ದೇವೇಗೌಡರು, ಮಾನ್ಯ ಭಾವಿಯವರು, ಶ್ರೀಮಾನ್ ಆನಂದಕುಂದ ಹೆಗ್ಗಡೆಯವರು ಹಾಗೂ ಇನ್ನೂ ಅನೇಕ ಸ್ನೇಹಿತರು ಹೇಳಿದ್ದಾರೆ.

ಶ್ರೀಮಾನ್ ಆರ್ಮುಗಂ ಅವರು ಇಲ್ಲಿ ಕೊಡತಕ್ಕ ಹಣ ಇಲಾಖೆಯಲ್ಲಿ ಕೆಲಸಕಾರ್ಯಗಳಿಗೆ ಪೂರ್ಣವಾಗಿ ವಿನಿಯೋಗವಾಗಬೇಕೆಂದು ಹೇಳಿದ್ದಾರೆ. ಇದನ್ನು ನಾನು ಸಂಪೂರ್ಣ ಒಪ್ಪುತ್ತೇನೆ. ಈ ಇಲಾಖೆ ಯಲ್ಲಿ ಸಾಕಷ್ಟು ಪರಂಪರೆ ಬೆಳೆದಿದೆ. ಈ ಇಲಾಖೆಯಲ್ಲಿ ೧೦೦ ರೂಪಾಯಿ ವೆಚ್ಚ ಮಾಡಿದರೆ ಅಷ್ಟು ಮೌಲ್ಯದ ಕೆಲಸ ಆಗಿದೆಯೇ ಎನ್ನತಕ್ಕಂತಹದ್ದು ಸ್ವಲ್ಪ ಸಂಶಯಕ್ಕೆ ಒಳಪಟ್ಟಿರತಕ್ಕ ಅಂಶವಾಗಿದೆ ಗುಣ ಮಟ್ಟದ ಒಳ್ಳೆಯ ಕೆಲಸ ಕಾರ್ಯಗಳು ಆಗಿವೆ ಸಣ್ಣಪುಟ್ಟ ದುರಸ್ತಿ ಮಾಡುವುದರಲ್ಲಿ ರಸ್ತೆ ಮಾಡುವ ಕೆಲಸದಲ್ಲಿ ಟಾರ್ ಹಾಕುವ ಕೆಲಸದಲ್ಲಿ ಗುಣ ಮಟ್ಟವನ್ನು ರಕ್ಷಣೆ ಮಾಡತಕ್ಕ ಪ್ರಯತ್ನದಲ್ಲಿ ನಾವು ಸಾಕಷ್ಟು ಯಶಸ್ಸಿಯನ್ನು ಸಾಧಿಸಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಸಣ್ಣ ಕೆಲಸಗಳಲ್ಲಿ ಮಾಡತಕ್ಕಂತಹದ್ದು ಸಣ್ಣ ಕೆಲಸ. ದೊಡ್ಡ ಕೆಲಸಗಳನ್ನು ಗುತ್ತಿಗೆ ತೆಗೆದುಕೊಂಡಿರತಕ್ಕವರಿಗೆ ಲಾಭ ಮಾಡಿಕೊಳ್ಳುವ ಬಗ್ಗೆ ಅವರಿಗೆ ಗೊತ್ತಿದೆ. ಹೇಗೆ ದುಡ್ಡು ತೆಗೆದುಕೊಳ್ಳುವುದೆಂದು ಅವರಿಗೆ ಗೊತ್ತಿದೆ. ಸಣ್ಣವರು ಸಣ್ಣ ಕೆಲಸ ಮಾಡುತ್ತಾರೆ ದೊಡ್ಡವರು ದೊಡ್ಡ ಕೆಲಸ ಮಾಡುತ್ತಾರೆ. ಐದು ಸಾವಿರ ಮೂರು ಸಾವಿರ ಇದೆಲ್ಲಾ ಕ್ಷುಲ್ಲಕ ವಿಷಯ.

ಶ್ರೀ ಕಾಗೋಡು ತಿಮ್ಮಪ್ಪ.—ಆದುದರಿಂದ, ಯಾವ ಕ್ಷೇತ್ರದ್ದೇ ಆಗಿರಲಿ ಅದು ಸಣ್ಣದ್ದಾಗಿರಲಿ, ದೊಡ್ಡದ್ದಾಗಿರಲಿ ಅದರ ಒಂದು ಗುಣ ಮಟ್ಟವನ್ನು ರಕ್ಷಣೆ ಮಾಡಿಕೊಂಡು ಬರಬೇಕು. ವೆಚ್ಚ ಮಾಡ ತಕ್ಕ ಹಣ ಸುರಕ್ಷಿತವಾಗಿರಬೇಕು. ಅದರ ಮೌಲ್ಯ ಉಳಿಯಬೇಕು. ಸಮಾಜದಲ್ಲಿ ಈ ಕೆಲಸದಲ್ಲಿ ತೃಪ್ತಿ ಕಾಣಬೇಕು. ಸಮಾಧಾನ ಆಗಬೇಕು ನೆಮ್ಮದಿ ಇರಬೇಕು. ಈ ದಿಸೆಯಲ್ಲಿ ಕೆಲಸ ಮಾಡತಕ್ಕದ್ದು ಜಾಸ್ತಿ ಇದೆ ಎಂದು ಮಾನ್ಯ ದೇವೇಗೌಡರು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಈ ದೃಷ್ಟಿಯಿಂದ ಇಲಾಖೆಯಲ್ಲಿ ಕೆಲಸ ಮಾಡಬೇಕಾದ ಅಗತ್ಯ ಇದೆ. ನಾನು ಈ ಇಲಾಖೆಯನ್ನು ವಹಿಸಿ ಕೊಂಡಮೇಲೆ, ಅಧಿಕಾರಿಗಳ ಮೇಲೆ ಪದೇ ಪದೇ ಒತ್ತಾಯ ತರುವುದಲ್ಲದೇ ಅನೇಕ ಸಾರಿ ಕಠೋರವಾಗಿ ವರ್ತಿಸಿದ್ದೇನೆ. ಈ ಬಗ್ಗೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕಾಗುತ್ತದೆ. ಸಾರ್ವಜನಿಕ ಹಣ ಇಲಾಖೆಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಖರ್ಚು ಆಗದಿದ್ದರೆ ಜನ ಇಲಾಖೆಯ ಮೇಲೆ ಸಿಟ್ಟಾಗುತ್ತಾರೆ. ಅಸಮಾಧಾನವನ್ನು ವ್ಯಕ್ತ ಮಾಡುತ್ತಾರೆ. ಈ ಸನ್ನಿವೇಶ ಬರುವುದಿಲ್ಲ. ಈ ಬಗ್ಗೆ ಸರ್ಕಾರ ಪ್ರಾಮಾಣಿಕ ವಾಗಿ ಕೆಲಸ ಮಾಡುತ್ತದೆ. ಕೇವಲ ಅಧಿಕಾರಿಗಳನ್ನು ಅವಲಂಬಿಸಿ ದುರಸ್ತಿ ಮಾಡಿದರೆ ಸಫಲವಾಗು ವುದಿಲ್ಲ ಈ ಇಲಾಖೆಯನ್ನು ದುರಸ್ತಿ ಮಾಡುವ ಕೆಲಸದಲ್ಲಿ ಹಸ್ತಕ್ಷೇಪ ಇದ್ದರೆ ಅದನ್ನು ಮಾಡುವು ದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ಮಾನ್ಯ ದೇವೇಗೌಡರು ಕೊಟ್ಟ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಪ್ರಯತ್ನ ನಡೆಸುತ್ತೇವೆಂದು ಹೇಳುತ್ತೇನೆ. ಹಾಗೆಯೇ ಈ ಇಲಾಖೆ ಛಿದ್ರವಾಗಿದೆ. ಇದರಿಂದ ಹೆಚ್ಚಿನ ಖರ್ಚಿಗೆ ಅವಕಾಶವಾಗಿದೆಯೆಂದು ಮಾನ್ಯ ಸದಸ್ಯರು ಹೇಳಿದರು. ಈ ಪ್ರತ್ಯೇಕ ವಿಂಗಡಣೆ ಮಾಡಿರು ವುದರಿಂದ ಮಾಡತಕ್ಕ ಕೆಲಸದಲ್ಲಿ ಆತಂಕ ಉಂಟಾಗಿಲ್ಲ ಎಂದು ನಮ್ಮ ಅಭಿಪ್ರಾಯ. ಇದರಲ್ಲಿ ನೋಡು ವುದಕ್ಕೆ ಹೆಚ್ಚು ವೆಚ್ಚ ಕಾಣಬಹುದು. ಒಟ್ಟು ವೆಚ್ಚವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಪ್ರತ್ಯೇಕ ಇಲಾಖೆ ಗಳನ್ನು ಮಾಡಿರುವುದರಿಂದ ಆಗತಕ್ಕ ಖರ್ಚು ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಆಗುವುದಿಲ್ಲ. ಡೀಸೆಂಟ್ರಲೈಸೇಷನ್ ಎನ್ನುವ ಮಾತನ್ನು ಹೇಳಿದ್ದಾರೆ. ಇದರಿಂದಾಗಿ ಕೆಲಸಗಾರರಲ್ಲಿ ಹೆಚ್ಚು ಆಸಕ್ತಿ ಬಂದು ಕೆಲಸದಲ್ಲಿನ ವೇಗ ಹೆಚ್ಚಾಗುತ್ತದೆಂದು ನಾನು ಹೇಳುತ್ತೇನೆ. ಈ ಒಂದು ಡೀಸೆಂಟ್ರಲೈಸೇಷನ್ ನಿಂದ ಕೆಲಸಕ್ಕೆ ಅಥವಾ ಪ್ರಗತಿಗೆ ಅಡಚಣೆ ಉಂಟಾಗುವುದಿಲ್ಲ ಎಂಬ ಮಾತನ್ನು ನಾನು ಹೇಳುತ್ತೇನೆ. ಈ ಇಲಾಖೆಯ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಿದಂತಹ ಮಾನ್ಯ ಭಾವಿ ಅವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಕೇಂದ್ರ ಸರ್ಕಾರದಿಂದ ಮೂಲ ಭೂತವಾಗಿ ಗ್ರಾಮಾಂತರ ಪ್ರದೇಶಗಳ ರಸ್ತೆಗಳ ಬಗ್ಗೆ ಪಡೆಯತಕ್ಕಂತಹ ಹಣವನ್ನು ಪಡೆಯುವುದರಲ್ಲಿ ರಾಜ್ಯ ಸರ್ಕಾರ ವಿಫಲ ಆಗಿದೆ ಎಂದು ಹೇಳಿದ್ದಾರೆ. ಅಧ್ಯಕ್ಷರೇ, ವಿಫಲ ಆಗಿಲ್ಲ. ಕೇಂದ್ರ ಸರ್ಕಾರದಿಂದ ಸಾಧ್ಯವಾದಷ್ಟು ಮಟ್ಟಿಗೆ ಪಡೆಯುವುದರಲ್ಲಿ ಸಫಲ ವಾಗಿದ್ದೇವೆ. ಇತ್ತೀಚೆಗೆ ಪಂಚವಾರ್ಷಿಕ ಯೋಜನೆಯ ವಿಷಯದಲ್ಲಿ ಚರ್ಚೆ ಮಾಡಿದ ಕಾಲದಲ್ಲಿ ಇನ್ನಷ್ಟು ಹಣವನ್ನು ಪಡೆಯುವ ಸಾಧ್ಯತೆ ಇದೆ. ಗ್ರಾಮಾಂತರ ರಸ್ತೆ ದುರಸ್ತಿಗಾಗಿ ಕೇಂದ್ರ ಸರ್ಕಾರದಿಂದ ನಾವು ಹೆಚ್ಚು ಹಣವನ್ನು ಪಡೆಯುವುದಕ್ಕಾಗಿ ಒಂದು ಕಾರ್ಯಕ್ರಮವನ್ನು ಕಳುಹಿಸಿದ್ದೇವೆ. ಈ ಬಗ್ಗೆ ಕೇಂದ್ರ ದಲ್ಲಿ ಪ್ರತ್ಯೇಕವಾದ ಇಲಾಖೆ ಇದೆ ಎಂಬುದು ನಮಗೆ ತಿಳಿದುಬಂದಿದೆ. ಅವರಿಗೆ ಇದನ್ನು ತಿಳಿಸಿದ್ದೇವೆ. ಅವರು ಕೊಡತಕ್ಕ ಹಣವನ್ನು ಪಡೆಯುವುದಕ್ಕೆ ಕಾರ್ಯಕ್ರಮಗಳನ್ನು ರೂಪಿಸಿ ಕಳುಹಿಸಿದ್ದೇವೆ. ಮಾನ್ಯ ಸದಸ್ಯರು ಮುಂದೆ ಹೋಗಿ ಹೇಳಿದರು, ನಮ್ಮ ಇಲಾಖೆಯಲ್ಲಿ ಒಂದು ಅಸಮಾಧಾನ ಇದೆ ಎಂದು

ಆಯಾ ಜಿಲ್ಲೆಯಲ್ಲಿರತಕ್ಕ ಅಧಿಕಾರಿಗಳ ಕಾನ್ಫಿಡೆನ್ಷಿಯಲ್ ರಿಪೋರ್ಟ್‌ಗಳು ಕೌಂಟರ್ ಸೈನ್‌ಗೆ ಡೆಪ್ಯುಟಿ ಕಮೀಷನರ್‌ರವರ ಬಳಿಗೆ ಹೋಗುತ್ತವೆ ಆ ಬಗ್ಗೆ ಸಮಾಧಾನ ಇದೆ ಎಂದು ಹೇಳಿದರು. ಈ ಅಪಮಂಧಾನವನ್ನು ಹೋಗಲಾಡಿಸುವ ಬಗ್ಗೆ ನಾನೂ ಕೂಡಾ ನೋಡಿದ್ದೇನೆ. ಜಿಲ್ಲಾ ವ್ಯಾಪ್ತಿಯಲ್ಲಿ ಅಲ್ಲಿನ ಅಧಿಕಾರಿಗಳ ಮೇಲೆ ಬರೆಯತಕ್ಕ ಸಿ. ಆರ್. ಗಳು ಏನಿವೆ ಅವಕ್ಕೆ ಜಿಲ್ಲಾಧಿಕಾರಿಗಳು ಸಹಿ ಮಾಡತಕ್ಕ ಪದ್ಧತಿಯನ್ನು ಹಿಂದೆಯೇ ಮಾರ್ಪಡಿಸಿ ತರಲಾಯಿತು. ಅದೇ ಒಂದು ವ್ಯವಸ್ಥೆ ಈಗಲೂ ನಡೆದುಕೊಂಡು ಬಂದಿದೆ. ಕೆಲವು ಸನ್ನಿವೇಶದಲ್ಲಿ ಅನಾವಶ್ಯಕ ದೂರುಗಳು ಈ ಬಗ್ಗೆ ಬಂದಿವೆ. ಇದನ್ನು ನಾನಾದರೂ ಒಪ್ಪುತ್ತೇನೆ. ಕೆಲವು ಬಾರಿ ಜಿಲ್ಲಾಧಿಕಾರಿಗಳ ಕೈಕೆಳಗೆ ಈ ಅಧಿಕಾರಿಗಳು ಕೆಲಸ ಮಾಡಿರುವುದಿಲ್ಲ. ಒಬ್ಬರ ಮೇಲೆ ಗುಪ್ತ ವರದಿಯನ್ನು ಬರೆಯುವಾಗ ಅವರಿಬ್ಬರಲ್ಲೂ ನೇರ ಸಂಪರ್ಕ ಮತ್ತು ಅವರಲ್ಲಿ ಕೆಲಸ ಮಾಡಿದ ಅನುಭವ ಇರಬೇಕಾಗುತ್ತದೆಂದು ಮಾನ್ಯ ಸದಸ್ಯರು ಏನು ಹೇಳಿದರು ಅದನ್ನು ನಾನು ಒಪ್ಪುತ್ತೇನೆ ಈ ಬಗ್ಗೆ ಮಾನ್ಯ ಸದಸ್ಯರು ಹೇಳಿರತಕ್ಕ ಅಂಶವನ್ನು ಗಮನದಲ್ಲಿ ಇಟ್ಟುಕೊಂಡು ವಿಚಾರ ಮಾಡುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ಇಲಾಖೆಯಲ್ಲಿರತಕ್ಕ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೂ ಸಹಾ ಪ್ರಯತ್ನಪಡಲಾಗಿದೆಯೆಂದು ಹೇಳುತ್ತೇನೆ. ಅದೇ ರೀತಿ ಪ್ರಮೋಷನ್ ಅಪರ್ಚ್ಯುನಿಟಿ ಬಗ್ಗೆ ಹೇಳಬೇಕೆಂದರೆ ಜ್ಯೂನಿಯರ್ ಎಂಜಿನಿಯರ್‌ನಿಂದ ಅಸಿಸ್ಟೆಂಟ್ ಎಂಜಿನಿಯರ್‌ಗೂ, ಅಸಿಸ್ಟೆಂಟ್ ಎಜನಿಯರ್‌ನಿಂದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಹುದ್ದೆಗೂ, ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಎಂಜಿನಿಯರ್ ಹುದ್ದೆಗೂ ಕೊಡುವ ಬಗ್ಗೆ ಏನು ಹೇಳಿದ್ದಾರೆ ಅದನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಅವರಿಗೆ ಕೊಡತಕ್ಕ ಅನುಕೂಲಗಳನ್ನು ಒದಗಿಸಿಕೊಡುವ ಬಗ್ಗೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ. ನಮ್ಮ ರಾಮಚಂದ್ರ ರೆಡ್ಡಿಯವರು ಒಂದು ಮಾತನ್ನು ಹೇಳಿದರು. ಟೆಕ್ನಿಕಲ್ ಯೂನಿವರ್ಸಿಟಿಯನ್ನು ಕೇಳಬೇಕೆಂದು ಹೇಳಿದರು. ಈಗಾಗಲೇ ಸಾಕಷ್ಟು ವಿಶ್ವವಿದ್ಯಾಲಯಗಳು ಇವೆ. ಈಗ ಮೆಡಿಕಲ್ ಯೂನಿವರ್ಸಿಟಿಯನ್ನು ಮಾಡಬೇಕೆಂದು ಪ್ರಯತ್ನ ಮಾಡಿದಾಗ ಅದು ಇನ್ನೂ ಅರ್ಧಕ್ಕೆ ನಿಂತಿದೆ. ಇಂತಹ ಸನ್ನಿವೇಶದಲ್ಲಿ ಟೆಕ್ನಿಕಲ್ ಯೂನಿವರ್ಸಿಟಿ ಮಾಡುವ ಬಗ್ಗೆ ಈ ಹಂತದಲ್ಲಿ ಪ್ರಸ್ತಾಪ ಮಾಡತಕ್ಕದ್ದು ಸಕಾಲವಲ್ಲ ಎನ್ನತಕ್ಕ ಅಭಿಪ್ರಾಯವಿದೆ. ಅದೇ ರೀತಿಯಲ್ಲಿ ಮುಂದೆ ಹೋಗಿ ಒಂದು ಮಾತು ಹೇಳಿದರು ಕೇಡರ್ ಅಂಡ್ ರೂಲ್ಸ್ ಕ್ಲಾಸ್ ೯ (ಎ) ಒಂದು ಅಂಶವಿದೆ ಅದರಿಂದ ಅನೇಕ ನೌಕರರಿಗೆ ತೊಂದರೆಯಾಗಿದೆ ಅದನ್ನು ತೆಗೆದುಹಾಕಬೇಕೆಂಬುವ ಮಾತನ್ನು ಹೇಳಿದರು. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಬೋರ್ಡ್ ಆಫ್ ಚೀಫ್ ಇಂಜಿನಿಯರ್ ಪರಿಶೀಲನೆ ನಡೆಸಿ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಎಷ್ಟರಮಟ್ಟಿನ ಬದಲಾವಣೆ ಮಾಡಬೇಕೆಂದು ಸರ್ಕಾರ ಈಗಾಗಲೇ ಗಮನಹರಿಸಿದೆ, ಆ ಬಗ್ಗೆ ಒಂದು ತೀರ್ಮಾನಕ್ಕೆ ಬರತಕ್ಕ ಸನ್ನಿವೇಶ ಕೂಡ ಇದೆ. ೧೯೭೭ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ಕೆಲವು ವಿದ್ಯಾರ್ಥಿನಿಲಯಗಳನ್ನು ಕಟ್ಟತಕ್ಕ ಕಾಲದಲ್ಲಿ ಸಿಮೆಂಟ್, ಕಬ್ಬಿಣ ಇವುಗಳ ಬಗ್ಗೆ ಅಪವ್ಯಯ ಆಗಿರುವ ಬಗ್ಗೆ ಆಪಾದನೆಗಳು ಇದ್ದವು. ಅದರ ಬಗ್ಗೆ ಜಾಗೃತ ಆಯೋಗದಲ್ಲಿ ವಿಚಾರಣೆ ನಡೆದಿದೆ, ಯಾರು ಅಪವ್ಯಯಕ್ಕೆ ಕಾರಣರಾಗಿದ್ದರು ಅಂತಹ ಅಧಿಕಾರಿಗಳ ಮೇಲೆ ನಾವು ಈಗಾಗಲೇ ಶಿಸ್ತಿನ ಕ್ರಮವನ್ನು ಕೈಗೊಂಡಿದ್ದೇವೆ. ಮಾನ್ಯ ಸದಸ್ಯರು ಇಲ್ಲಿ ಒಂದು ವರದಿಯನ್ನೇ ಓದಿದರು, ಗುರುತರವಾದ ಆಪಾದನೆಯನ್ನು ಮಾಡಿ ಈ ರೀತಿ ನಷ್ಟವುಂಟುಮಾಡಲು ಅಧಿಕಾರಿಗಳಿಂದಲೇ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಅಜಾಗರೂಕತೆಯಿಂದ ಕೆಲಸ ಮಾಡಿರತಕ್ಕ ಅಧಿಕಾರಿಗಳ ಮೇಲೆ ಸಣ್ಣ ಪ್ರಮಾಣದ ಶಿಸ್ತಿನ ಕ್ರಮವನ್ನು ಕೈಗೊಂಡಿದ್ದೇವೆ. ರೂಲ್ ೧೨ರ ಪ್ರಕಾರ ಮೈನರ್ ಫೆನಾಲ್ಟೀಸ್ ಮಾಡಿದ್ದೇವೆ. ಇನ್ನು ಕೆಲವರಿಗೆ ಹೆಚ್ಚಿನ ರೀತಿಯಲ್ಲಿ ಕ್ರಮ ಕೈಗೊಂಡಿದ್ದೇವೆ. ಇನ್ನು ಕಮರ್ಷಿಯಲ್ ಕಟ್ಟಡಗಳನ್ನು ಕಟ್ಟುವಾಗ ಇಟ್ಟಿಗೆ ಗೋಡೆಯನ್ನು ಕಟ್ಟುವುದನ್ನು ಬದಲಾವಣೆ ಮಾಡಿ ತಾಂತ್ರಿಕ ಒಪ್ಪಿಗೆ ಇಲ್ಲದೆ ಕಟ್ಟಲಾಗಿದೆ ಎಂದು ಅನುಮಾನ ವ್ಯಕ್ತ ಮಾಡಿದ್ದಾರೆ. ರೂಲ್‌ಗೆ ವಿರುದ್ಧವಾಗಿ ಕೆಲಸ ಮಾಡಿದ್ದಾರೆಂಬ ಆಪಾದನೆ ಮಾಡಿದ್ದಾರೆ, ನಾನು ಅದನ್ನು ಪರಿಶೀಲನೆ ಮಾಡಿ ನೋಡಿದ್ದೇನೆ ಆ ರೀತಿ ಏನು ಆಗಿಲ್ಲ, ರೂಲ್ ಪ್ರಕಾರ ಕೆಲಸ ಮಾಡಲಾಗಿದೆ. ಡೆಲಿಗೇಟ್ಸ್ ಆಫ್ ಪವರ್ಸ್ ಕಟ್ಟಡದ ಮೇಲೆ ಅವರಿಗೆ ಇರತಕ್ಕ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿದ್ದಾರೆ. ಅದರಲ್ಲಿ ನಿಯಮಕ್ಕೆ ವಿರುದ್ಧವಾಗಿ ನಡೆದಿಲ್ಲ ನಾನು ಈಗಾಗಲೇ ಪರಿಶೀಲನೆ ಮಾಡಿ ನೋಡಿದ್ದೇನೆ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಹಾಗೆಯೇ ಈಗ ಇರತಕ್ಕ ಕೇಡರ್ ಅಂಡ್ ರೂಲ್ಸ್ ಬಹಳ ಹಳೆಯಕಾಲದ್ದು, ಕಾಲಕ್ಕನುಗುಣವಾಗಿ ಕೇಡರ್ ಅಂಡ್ ರೂಲ್ಸ್‌ನ್ನು ತಿದ್ದುಪಡಿ ಮಾಡಬೇಕೆಂಬ ಒಂದು ಮಾತನ್ನು ಹೇಳಿದ್ದಾರೆ. ಈ ಬಗ್ಗೆ ಹಿಂದೆ ಒಂದು ಕಮಿಟಿಯನ್ನು ನೇಮಕ ಮಾಡಲಾಗಿತ್ತು, ಆ ಸಮಿತಿಯು ಮೀಟಿಂಗ್ ಸೇರದೆ ಇದ್ದ ಕಾರಣಕ್ಕಾಗಿ ಆ ಬಗ್ಗೆ ಒಂದು ತೀರ್ಮಾನಕ್ಕೆ ಬರಲಿಕ್ಕೆ ಆಗಿಲ್ಲ. ಕೇಡರ್ ಅಂಡ್ ರೂಲ್ಸ್‌ನಲ್ಲಿ ಕೆಲವನ್ನು ಬದಲಾವಣೆ ಮಾಡತಕ್ಕ ಅಗತ್ಯವಿಲ್ಲ, ಬಹಳ ಹಳೆಯ ಕಾಲದ್ದು ಇತ್ತೀಚಿಗೆ ಬದಲಾವಣೆಗಳಾಗಿವೆ, ಇವತ್ತಿನ ಅವಶ್ಯಕತೆಗಳನ್ನು ಮತ್ತು ಬದಲಾದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನಮ್ಮ ಕೇಡರ್ ಅಂಡ್ ರೂಲ್ಸ್‌ನ್ನು ಬದಲಾವಣೆ ಮಾಡಲಿಕ್ಕೆ, ಒಂದು ಹೊಸ ಸಮಿತಿಯನ್ನು ನೇಮಕಮಾಡಿ ಸರ್ಕಾರ ಕೆಲವು ಬದಲಾವಣೆಗಳನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ನಮ್ಮ ಶಾಸಕರ ಭವನದ ಕಟ್ಟಡದ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಮಾನ್ಯ ಸದಸ್ಯರ ಮನಸ್ಸಿನಲ್ಲಿ ಕೆಲವು ಸಂಶಯಗಳು ಇವೆ. ಅವರು ಸಂಶಯಮಾಡುವ ದೃಷ್ಟಿಯಿಂದ ಈ ಕಟ್ಟಡಕ್ಕೆ ತಾಂತ್ರಿಕ ಅನುಮತಿ ಕೊಟ್ಟಿಲ್ಲ ಅನ್ನತಕ್ಕದ್ದು ಇದರಲ್ಲಿ ಸ್ವಲ್ಪ ನಿಜಾಂಶವಿದೆ. ಈ ಕಟ್ಟಡಕ್ಕೆ ಆಡಳಿತ ಅನುಮತಿ ಮತ್ತು ತಾಂತ್ರಿಕ ಅನುಮತಿ ಕೊಡದೆ ಕಾರಣ ಕಾಲಕಾಲಕ್ಕೆ ಅನೇಕ ಬದಲಾವಣೆಗನ್ನು ಹೊಂದಿದೆ. ಹಿಂದೆ ವಿಧಾನಸಭೆಯ ಅಧ್ಯಕ್ಷರಾಗಿದ್ದವರು ಮಂತ್ರಿಗಳು ಅಲ್ಲಿಗೆ ಕೆಲವರು ಹೋಗಿ ನೋಡಿದಾಗ ಬದಲಾವಣೆಗಳನ್ನು ಹೇಳಿದಾಗ ಆ ರೀತಿ ಬದಲಾವಣೆ ಮಾಡುತ್ತಾ ಬಂದಿದ್ದಾರೆ. ಅಡಿಗೆ ರೂಂ ೨ ಮಾಡಬೇಕೆಂದು ಹೇಳಿದ್ದಾರೆ, ರೀಡಿಂಗ್ ರೂಮ್ ಮಾಡಬೇಕೆಂದು ಹೇಳಿದ್ದಾರೆ ಈ ಕಾರಣದಿಂದಾಗಿ ವೆಚ್ಚ ಜಾಸ್ತಿಯಾಗಿದೆ. ಕಾಲಕ್ಕೆ ಸರಿಯಾಗಿ ತಾಂತ್ರಿಕ ಅನುಮತಿ ಕೊಡಲಿಕ್ಕೆ ಆಗಿಲ್ಲ. ಮೊದಲು ಅದಕ್ಕೆ ಆಡಳಿತ ಅನುಮತಿ ಸಿಕ್ಕಿರತಕ್ಕದ್ದು ೧೨೫ ಲಕ್ಷ ರೂಪಾಯಿಗಳು. ಈಗ ಒಟ್ಟು ವೆಚ್ಚವಾಗಿರತಕ್ಕದ್ದು ಸುಮಾರು ೧೪೪ಲಕ್ಷಕ್ಕೆ ಹೋಗಿದೆ. ೧೯೭೭–೭೮ನೇ ಸಾಲಿನ ಅಂದಾಜು ಈಗಿನ ಅಂದಾಜು ಎಲ್ಲಾವನ್ನು ಲೆಕ್ಕಹಾಕಿದರೂ ಯಾವುದೇ ರೀತಿಯಲ್ಲಿ ಶೇಕಡ ೧೪ಕ್ಕಿಂತ ಜಾಸ್ತಿಯಾಗಿಲ್ಲ. ನಮ್ಮ ಇಲಾಖೆಯಿಂದ ಕೆಲಸ ಮಾಡಿಸಿದ್ದೇವೆ. ಕನಸ್ಟ್ರಕ್ಸನ್ ಕಾರ್ಪೊರೇಷನ್‌ನಿಂದ ಕೆಲಸ ಮಾಡಿಸಿದ್ದೇವೆ. ನಮ್ಮ ಇಲಾಖೆಯವರು ಮಾಡಿರತಕ್ಕ ಕೆಲಸ ಸುಮಾರು ೫೬,೮೩೨ ಸ್ಕ್ವೇರ್ ಫೀಟ್ ಆಗಿದ್ದರೆ, ಕನ್ಸ್ಟ್ರಕ್ಸನ್ ಕಾರ್ಪೊರೇಷನ್‌ರವರು ೫೬,೦೬೮ ಸ್ಕ್ವೇರ್ ಫೀಟ್ ಕೆಲಸ ಅವರು ಮಾಡಿದ್ದಾರೆ. ಜೂನ್ ಕೊನೆಯ ವೇಳೆಗೆ ಲೋಕೋಪಯೋಗಿ ಇಲಾಖೆಯಿಂದ ೭೦ ಲಕ್ಷದ ೯೪ ಸಾವಿರ ಖರ್ಚಾಗಿದೆ. ಕನ್ಸ್ಟ್ರಕ್ಸನ್ ಕಾರ್ಪೊರೇಷನ್‌ರವರು ೫೧ ಲಕ್ಷದ ೬೩ ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಇದರಲ್ಲಿ ಲೋಪದೋಷಗಳಿವೆ ಅಕ್ರಮಗಳ ವ್ಯವಹಾರ ಇದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ನಾನು ಪರಿಶೀಲನೆ ಮಾಡಿ ನೋಡಿದ್ದೇನೆ ಇದರಲ್ಲಿ ಸರ್ಕಾರದ ಅನುಮತಿಯನ್ನು ತೆಗೆದುಕೊಂಡು ಕೆಲಸ ಮಾಡಿದ್ದಾರೆ. ಮಾನ್ಯ ಸದಸ್ಯರು ಏನಾದರೂ ಇದಕ್ಕಿಂತ ವಿಶೇಷವಾದ ವಿದ್ಯಮಾನಗಳು ಗೊತ್ತಿದ್ದರೆ ತಿಳಿಸಿ ನಾನು ಖಂಡಿತವಾಗಿಯೂ ಪರಿಶೀಲನೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಇದರಲ್ಲಿ ಮುಚ್ಚಿ ಹಾಕುವ ಅಗತ್ಯವಿಲ್ಲ. ಒಂದು ಪ್ರಕರಣವನ್ನು ಬಿಟ್ಟರೆ, ಜಲ್ಲಿ ಕಲ್ಲನ್ನು ಕೊಳ್ಳುವಾಗ ಹೆಚ್ಚಿನ ದರ ಕೊಟ್ಟು ಕೊಂಡಿದ್ದಾರೆ. ಆಗಿನ ಸನ್ನಿವೇಶದಲ್ಲಿ ಆ ಒಂದು ಪ್ರಮಾಣದಲ್ಲಿ ದೃಷ್ಟಿಯಿಂದ ಹೆಚ್ಚಿನ ದರದಲ್ಲಿ ಕೊಂಡುಕೊಂಡಿದ್ದಾರೆ. ಆವತ್ತಿನದಿವಸ ಜಲ್ಲಿ ಬೇಕಾದ್ದರಿಂದ ಹೆಚ್ಚಿನ ದರವನ್ನು ತೆತ್ತು ಕೊಳ್ಳಲಾಗಿದೆ, ಆ ಒಂದು ವಿಷಯವನ್ನು ಬಿಟ್ಟರೆ ಬೇರೆ ವಿಚಾರದಲ್ಲಿ ಅಂತಹ ಒಂದು ವಿಷಯವನ್ನು ಬಿಟ್ಟರೆ ಬೇರೆ ವಿಚಾರದಲ್ಲಿ ಅಂತಹ ಒಂದು ವ್ಯವಹಾರ ನಡೆದಿರುವುದು ಕಂಡುಬಂದಿಲ್ಲ. ಮಾನ್ಯ ಸದಸ್ಯರು ಸ್ವತಃ ಇಂಜಿನಿಯರ್ ಕೂಡ ಆಗಿದ್ದಾರೆ, ಅವರು ಇದಕ್ಕಿಂತ ವಿವರವನ್ನು ಕೊಡುವುದಾದರೆ ಅದನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡುವುದಕ್ಕೆ ನಾನು ಹಿಂದುಮುಂದು ನೋಡುವುದಿಲ್ಲ. ಇನ್ನೊಂದು ಮಾತನ್ನು ಹೇಳಿದರು ಮಾನ್ಯ ದೇವೇಗೌಡರು ಕೂಡ ಪ್ರಸ್ತಾಪಮಾಡಿದ್ದಾರೆ. ಇತ್ತೀಚೆಗೆ ಸರ್ಕಾರ ಕೈಗೊಂಡಿರತಕ್ಕ ಕ್ರಮದಿಂದ ಅನೇಕ ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಲಾಗಿದೆ. ಜಾಗೃತ ಆಯೋಗದ ಶಿಫಾರಸ್ಸಿನ ಮೇಲೆ ಆ ರೀತಿ ಮಾಡಲಾಗಿದೆ. ರಾಮಚಂದ್ರರೆಡ್ಡಿಯವರು, ಆ ರೀತಿ ಅನಾಮತ್‌ನಲ್ಲಿಟ್ಟಿರುವವರ ಪೈಕಿ ಒಕ್ಕಲಿಗರ ಇಂಜಿನಿಯರ್‌ಗಳೇ ಜಾಸ್ತಿ ಇದ್ದಾರೆಂದು. ಅದ್ದು ತಪ್ಪು, ಕಾಗೋಡುತಿಮ್ಮಪ್ಪನವರ ಕಡೆಯವರಾದರೂ ಕೂಡ ಆ ರೀತಿ ಮಾಡಲೇಬೇಕಾಗುತ್ತದೆ. ಆ ಜನ ಈ ಜನ ಎಂದು ಅಪದಾನ ಮಾಡಿರುವುದು ಸರಿಯಲ್ಲ. ಯಾರಿಗೂ ಮಣೆಯಾಕುವುದಿಲ್ಲ, ಯಾರ ಮುಂಖಕ್ಕೂ ಮಸಿ ಬಳಿಯುವುದಿಲ್ಲ ಆ ಅಗತ್ಯವೂ ಇಲ್ಲ. ನನ್ನ ಮನಸ್ಸಿಗೆ ವಿರುದ್ಧವಾಗಿ ನಡೆದುಕೊಳ್ಳುವುದು ನನಗೆ ಇಲ್ಲ. ಯಾವ ಅಧಿಕಾರಿಗಳನ್ನು ಯಾವ ವರ್ಗವನ್ನು ತುಳಿಯಬೇಕಾದ ಸನ್ನಿವೇಶವು ಇಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ತುಳಿಯುವುದಕ್ಕೆ ಪ್ರಾರಂಭ ಮಾಡಿರುವುದು ಇಲ್ಲಿ ಗೊತ್ತಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ತಪ್ಪು ಕಲ್ಪನೆ ಮಾಡಿಕೊಂಡಿದ್ದೀರಿ, ನಾನು ಆ ರೀತಿ ಮಾಡುವವನಲ್ಲ. If anybody has got a wrong notion I am responsible.

5 P.M.

SRI C.M. ARMUGHAM —It gives an impression like that People talk about it. We are not talking. People say that it is only directed againt one section of the society and one Department. They ask why it is not applicable to other sections of the society and other Departments. I know you are not for it.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ. ಈಗ ಯಾವ ಯಾವ ಜಾತಿಗೆ ಸೇರಿದವರನ್ನು ಅಮಾನತ ಗೊಳಿಸಲಾಗಿದೆ ಎನ್ನುವ ಅಂಕಿಅಂಶವನ್ನು ತಮ್ಮ ಮುಂದೆ ಇಡುತ್ತೇನೆ, ಇದರಿಂದ ತಮಗೆ ಗೊತ್ತಾಗಬಹುದು. ಇದರಲ್ಲಿ ಯಾವುದೇ ಜಾತೀಯ ಆಧಾರದಿಂದ ನಡೆದಿಲ್ಲ ಅನ್ನುವ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದರಲ್ಲಿ ವಕ್ಕಲಿಗರು ೧೦, ಲಿಂಗಾಯಿತರು ೯, ಅಲ್ಪಸಂಖ್ಯಾತರು ೫, ಮುಸ್ಲಿಮರು ೩, ಹರಿಜನ–ಗಿರಿಜನರು ೩, ಮತ್ತು ಬ್ರಾಹ್ಮಣರು ೩. ಹೀಗೆ ಒಟ್ಟು ೩೩ ಜನ ಇದ್ದಾರೆ. ಆದರೆ ತಮಗೆ ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳುತ್ತೇನೆ. ಆಡಳಿತಾತ್ಮಕ ಕೆಲಸದಲ್ಲಿ ಜಾತೀ ಏನಾದರೂ ಅಡ್ಡ ಬಂದರೆ. ನೆಂಟಸ್ತನವಾಗಲಿ ಸ್ನೇಹವಾಗಲಿ ಏನಾದರೂ ಅಡ್ಡ ಬಂದರೆ ಆ ತೊಡಕನ್ನು ಧಿಕ್ಕರಿಸದೇ ಹೋದರೆ ಪ್ರಜಾಪ್ರಭುತ್ವದಲ್ಲಿ ಉತ್ತಮವಾದ ಆಡಳಿತವನ್ನು ಕೊಡುವುದಕ್ಕೆ ಸಾಧ್ಯವಿಲ್ಲಾ. ಅದನ್ನೆಲ್ಲಾ ಧಿಕ್ಕರಿಸಿ ಮುನ್ನಡೆದರೆ ಮಾತ್ರ ಪ್ರಜಾಪ್ರಭುತ್ವದಲ್ಲಿ ಉತ್ತಮವಾದ ಆಡಳಿತವನ್ನು ಕೊಡುವುದಕ್ಕೆ ಸಾಧ್ಯ. ಈವೊತ್ತಿನ ದಿವಸ ನಾನು ಕೆಲಸ ಮಾಡತಕ್ಕಂಥಾ ಇಲಾಖೆಯಲ್ಲಿ, ನಮ್ಮ ಸಂಬಂಧಿಕರಿಗೆ ನಾನೂ ಏನೂ ಮಾಡಿಕೊಟ್ಟಿಲ್ಲಾ, ಮೇಲಾಗಿ ಈ ಇಲಾಖೆಯಲ್ಲಿ ನನಗೆಚ್ಚು ಜನ ಸಂಬಂಧಿಕ ರಾಗಲಿ ಅಥವಾ ಸ್ನೇಹಿತರಾಗಲಿ ಪಡೆದಿಲ್ಲಾ. ಈ ಕೆಲಸವನ್ನು ಮಾಡುವಾಗ ಅವರು ಯಾರೇ ಇರಲಿ ಕಣ್ಣೆತ್ತಿಯೂ ನೋಡಿಲ್ಲಾ, ಒಂದುವೇಳೆ ಈ ಪ್ರಯತ್ನದ ಹಾದಿಯಲ್ಲಿ ಯಾರು ಅಡ್ಡಿ ಮಾಡುವುದಕ್ಕೆ ಬರುತ್ತಾರೆ ಅವರಿಗೆ ಸಾಕಾದಷ್ಟು ಅನುಭವ ಈಗಾಗಲೇ ಇದೆ. ಹಾಗೆ ನಡೆದರೆ ಮಾತ್ರ ಈ ಪ್ರಜಾಪ್ರಭುತ್ವದ ಉಳಿವು. ಈ ಬಗ್ಗೆ ಸದನ ಪ್ರಶಂಸೆ ಮಾಡಬೇಕು ಹಾಗೂ ಇದರ ಬಗೆ ಪ್ರೋತ್ಸಾಹ ಕೊಡಬೇಕು. ರಾಜಕೀಯದಲ್ಲಿ ಇರತಕ್ಕಂಥಾವರಿಗೆ ಇದು ಸ್ವಾಭಾವಿಕ. ತಮಗೆ ಹೇಳಬೇಕಾದರೆ ಈ ಕೆಲಸದಲ್ಲಿ ಹಿಂದುಳಿದ ಜನಾಂಗ ಅಷ್ಟು ದೊಡ್ಡ ಪ್ರಮಾಣದಲ್ಲಿಲ್ಲ, ಹೀಗಿರುವಾಗ ಜಾತೀಯ ವಿಚಾರವಾಗಿ ಪ್ರಸ್ತಾಪ ಮಾಡುವುದಾದರೆ, ಅದು ತಪ್ಪಾಗುತ್ತದೆ, ಇದರ ಬಗ್ಗೆ ತಪ್ಪುತಪ್ಪಾಗಿ ಪ್ರಚಾರ ಮಾಡಿ ಬಂದರೆ ನಮ್ಮಲ್ಲಿರತಕ್ಕಂಥಾ ಪ್ರಾಮಾಣಿಕರಿಗೂ ಕೂಡ ಕೆಲಸ ಮಾಡುವುದಕ್ಕೆ ಒಂದುರೀತಿ ತೊಡಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಜಾತೀಯ ವಿಚಾರದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಆ ಜಾತೀಯವರು ಇದ್ದರೆ ಅವರನ್ನು ರಕ್ಷಣೆ ಮಾಡಬೇಕು ಅಂತ ಏನೂ ಇಲ್ಲ. ಅವರು ನಮ್ಮ ಜಾತೀಯವರೇ ಇರಬಹುದು, ನಮ್ಮ ಸ್ನೇಹಿತರೇ ಇರಬಹುದು, ಅವರು ನಮ್ಮ ಸಂಬಂಧೀ ಇರಬಹುದು ಅವರು ತಮ್ಮ ಅಧಿಕಾರ ವ್ಯಾಪ್ತಿಯೊಳಗೆ ಏನಾದರೂ ದುರುಪಯೋಗ ಮಾಡಿದ್ದರೆ ಅವರನ್ನು ಯಾವರೀತಿಯಲ್ಲೂ ರಕ್ಷಣೆ ಇಲ್ಲ ಅನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ಹೆಚ್.ಡಿ. ದೇವೇಗೌಡ.—ಅವರು ಬಲೆ ಬೀಸಿದರು, ಅದರಲ್ಲಿ ಅವರು ಸಿಕ್ಕಿದ್ದಾರೆ ಅಷ್ಟೆ. ಆದರೆ ಅವರು ಹಿಂದುಳಿದ ಪಂಗಡದವರು, ಇವರು ಮುಂದುವರೆದ ಜಾತಿ ಅನ್ನುವುದಕ್ಕೆ ಹೋಗಿಲ್ಲ. ಅವರು ಬಲೆ ಬೀಸುವಾಗ ಇವರೆಲ್ಲಾ ಸಿಕ್ಕಿದ್ದಾರೆ. ಆದರೆ ಆ ಬಲೆ ಬೀಸುವಾಗ ನಿಮ್ಮ ಬಲೆ ಅಷ್ಟು ವ್ಯವಧಾನವಾದ ರೀತಿಯಲ್ಲಿ ಇತ್ತೇ ಅನ್ನುವುದನ್ನು ಪ್ರಶ್ನೆ ಮಾಡುತ್ತಿದ್ದಾರೆ. ಇದರಲ್ಲಿ ಯಾವ ಸಂಶಯಕ್ಕೂ ಆಸ್ಪದ ಬಗಬಾರದು ಅಂತ ಅವರು ಹೇಳಿದ್ದಾರೆ. ನಾನು ಅದನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಆ ರಿಪೋರ್ಟ್ ನೋಡಿದ್ದೇನೆ. ಆದರೆ ೪ ಜನ ವಕ್ಕಲಿಗರನ್ನು ತೆಗೆದು ಮಾತ್ರಕ್ಕೇನೇ ಸಮಾಜದಲ್ಲಿ ಅವರನ್ನು ತೆಗೆದುಕೊಳ್ಳುವುದಿಲ್ಲ ಅಂತ ಹೇಳುವುದಕ್ಕಾಗುವುದಿಲ್ಲ. I am not going to think on those lines. Could you be able to bring certain

radical changes if you want to eradicate inefficiency ? ಅದನ್ನು ಮಾಡದೇ ಹೋದರೆ ನಿಮ್ಮ ಸರ್ಕಾರಕ್ಕೆ ಈ ಲೋಕೋಪಯೋಗಿ ಇಲಾಖೆಯಲ್ಲಿ ಮಾತ್ರ ಕರಪ್ಷನ್ ಇದೆ ಬಾಕಿ ದರಲ್ಲಿ ಇಲ್ಲ ಎಂದು ಭಾವಿಸಬಹುದೇ ? ಹಾಗೆ ಭಾವಿಸಬೇಕಾದರೆ ತಾವು ಎಲ್ಲಾ ಇಲಾಖೆಯಲ್ಲೂ ಕೂಡ ಯಾರ್ಯಾರನ್ನು ಎಷ್ಟು ಕರಪ್ಟ್ ಇದ್ದಾರೆ, ಯಾರ್ಯಾರು ಕರಪ್ಟ್ ಇಲ್ಲಾ ಅನ್ನುವ ಪಟ್ಟಿಯನ್ನಾದರೂ ಕೊಡಿ.

ಶ್ರೀ ಪ್ರಭಾಕರ್ ತೇಲ್ಕರ್.—ಮಾನ್ಯ ಮಂತ್ರಿಗಳು ಅವರ ಇಲಾಖೆ ಬಗ್ಗೆ ಹೇಳುತ್ತಾರೆ, ಬೇರೆಯವರ ಇಲಾಖೆ ಬಗ್ಗೆ ಅವರು ಏತಕ್ಕೆ ಹೇಳುತ್ತಾರೆ.

SRI H.D. DEVEGOWDA.—It is the Government. All the 33 Officers belong to the P.W,D. Now various other Departments are there. ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಹಿಡಿದಿದ್ದಾರೆ ಅನ್ನುವ ಪಟ್ಟಿಯೊಂದನ್ನು ಕೊಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಬೇರೆ ಬೇರೆ ಇಲಾಖೆಗಳಿದ್ದೂ ಕೂಡ ಇದೆ. ಆದರೆ ಅಧ್ಯಕ್ಷರೇ, ನಮ್ಮ ಇಲಾಖೆಗೆ ಸಂಬಂಧಪಟ್ಟದ್ದು ಮಾತ್ರ ನಾನು ಹೇಳಿದ್ದೇನೆ. ಮಾನ್ಯ ದೇವೇಗೌಡರ ಹೇಳಿದ ಸವಾಲನ್ನು ನಾನು ಸ್ವೀಕಾರ ಮಾಡುವುದಕ್ಕೆ ತಯಾರಾಗಿದ್ದೇನೆ. ಅದಕ್ಕಾಗಿ ಹೆದರಿ ಓಡಿ ಹೋಗುವಂಥಾ ಪ್ರಮೇಯ ಇಲ್ಲಾ.

ಶ್ರೀ ಹೆಚ್.ಡಿ. ದೇವೇಗೌಡ.—ಯಾರೂ ಹೆದರುವುದಿಲ್ಲ ಅನ್ನುವುದು ಗೊತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀಮಾನ್ ರಾಮಚಂದ್ರರೆಡ್ಡಿಯವರು ಮಾತನಾಡುವಾಗ ಇದರ ಬಗ್ಗೆ ನೂರಾರು ಹೇಳಿದ್ದಾರೆ. ಆದರೆ ನಮ್ಮ ಇಲಾಖೆಯಲ್ಲಿ ಏನು ಆಗುತ್ತಾ ಇದೆ ಅನ್ನುವುದು ನಮಗೆ ಗೊತ್ತಿದೆ. ಈ ಜಾಗೃತಾ ಆಯೋಗದವರು ಮಾಡುವಂಥಾ ಕೆಲಸಗಳ ಬಗ್ಗೆ ನಾನು ಸೂಚನೆ ಕೊಡಲು ಅದು ನಮ್ಮ ಹತೋಟಿಯಲ್ಲಿ ಇಲ್ಲ. ಆದುದರಿಂದ ಇಂಥಾವರನ್ನು ಹಿಡಿಯಿರಿ ಇಂಥಾವರನ್ನು ಬಿಟ್ಟು ಬಿಡಿ ಎಂದು ನಾವು ಹೇಳುವುದಕ್ಕಾಗುವುದಿಲ್ಲ.

SRI H.D. DEVEGOWDA.—How many IAS Officers houses were raided? I would like to ask this specific question. Who is at the helm of these affairs? ಐ.ಪಿ.ಎಸ್. ಅಧಿಕಾರಿಗಳನ್ನು ತಾವು ರೇಡ್ ಮಾಡುವುದಿಲ್ಲ. ಏತಕ್ಕೆಂದರೆ ಅವರೆಲ್ಲಾ ದೇವತೆಗಳ ಸ್ವರೂಪದವರು. ಈಗ ತಾವು ಕರಪ್ಷನ್ ಅನ್ನು ನಿರ್ಮೂಲ ಮಾಡಬೇಕು ಅಂತ ಹೊರಟಿದ್ದೀರಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಇದರ ಬಗ್ಗೆ ಸ್ವಲ್ಪ ವಿವರಣೆಕೊಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಮಾನ್ಯ ದೇವೇಗೌಡರಿಗೆ ಎಲ್ಲಾ ವಿಚಾರವೂ ಗೊತ್ತು ಜಾಗೃತಾ ಆಯೋಗದವರಿಗೆ ಇಂಥಾ ಅಧಿಕಾರಿಯನ್ನು ಹಿಡಿಯಿರಿ ಇಂಥಾ ಅಧಿಕಾರಿಯನ್ನು ಬಿಟ್ಟು ಬಿಡಿ ಅಂತ ಹೇಳುವ ಅಧಿಕಾರವಾಗಲಿ ಅಥವಾ ಒಂದು ಹತೋಟಿಯಾಗಲಿ ಅದರ ಒಂದು ವ್ಯಾಪ್ತಿಯಾಗಲಿ ನಮಗೆ ಇಲ್ಲಾ. ಅವರು ಈ ಒಂದು ಇಲಾಖೆಯಮೇಲೆ ಮಾತ್ರ ಬೆನ್ನು ಹತ್ತಿದ್ದರೆ ಅಥವಾ ಪ್ರಯತ್ನ ಮಾಡಿದ್ದರೆ ಅದು ನಮ್ಮ ವ್ಯಾಪ್ತಿಯಲ್ಲಿದ್ದರೆ ಆ ವಿಚಾರ ಬೇರೆ. ಈ ಹೊತ್ತು ಆ ಜಾಗೃತಿ ಆಯೋಗಕ್ಕೆ ಸರ್ವ ಅಧಿಕಾರವನ್ನೂ ಕೊಟ್ಟಿರುವುದರಿಂದ ಯಾರ ಮನೆಯನ್ನಾದರೂ ರೇಡ್ ಮಾಡಬಹುದು ಯಾವ ಐ.ಎ.ಎಸ್. ಆಫೀಸರ್ ಮನೆಯನ್ನಾದರೂ ರೇಡ್ ಮಾಡಬಹುದು, ನಾವು ಇಂಥಾವರನ್ನು ಬಿಡಿ ಅಂತ ಹೇಳುವುದಕ್ಕೆ ಬರುವುದಿಲ್ಲ. ನಾವೇನಾದರೂ ಇದರ ಬಗ್ಗೆ ಪ್ರೇರೇಪಣೆ ಮಾಡಿದ್ದರೆ ಆವಾಗ ಸದಸ್ಯರು ಹೇಳಿದಂಥಾ ಮಾತನ್ನು ನಾನು ಒಪ್ಪುತ್ತೇನೆ. ಈವೊತ್ತಿನ ದಿವಸ ಜಾಗೃತ ಆಯೋಗದವರ ಒಂದು ವ್ಯಾಪ್ತಿಯಲ್ಲಿ ಐ.ಎ.ಎಸ್. ಆಫೀಸರ್ ಬೇಕಾದರೂ ಬರಬಹುದು, ಬೇರೆ ಬೇರೆ ಇಲಾಖೆಯ ಅಧಿಕಾರಿಗಳು ಸಹ ಅದರ ಬರಬಹುದು. ಆದುದರಿಂದ ಈ ಬಗ್ಗೆ ವೈಯುಕ್ತಿಕವಾದ ಆಪಾದನೆ ಮಾಡುವಂಥಾ ಅಗತ್ಯ ಏನೂ ಇಲ್ಲ. ಆದರೆ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಆದನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ, ಕೇವಲ ನಮ್ಮ ಇಲಾಖೆಯ ಮೇಲೆ ಈ ರೀತಿಯಾದ ಮಲತಾಯಿ ಧೋರಣೆ ಇದೆ ಅನ್ನುವುದನ್ನು ಅವರು ತಿಳಿಯಬಾರದು.

ಶ್ರೀ ಹೆಚ್.ಡಿ. ದೇವೇಗೌಡ.---ವಿಜಿಲೆನ್ಸ್ ಕಮೀಷನರಿಗೆ ಹೇಳುವ ಅಧಿಕಾರ ನಿಮಗೆ ಇಲ್ಲ ಅನ್ನುವುದೂ ಗೊತ್ತಿದೆ. ಇನ್ನು ನೀವು ಇಂಥಾ ವಿಷಯವನ್ನು ಗಮನದಲ್ಲಿಟ್ಟುಕೊಂಡು ಆಲೋಚನೆ ಮಾಡುತ್ತೇನೆ ಅನ್ನುವುದಾದರೆ ಏನು ಪ್ರಯೋಜನ? ಅವರ ಖುಷಿ ಬಂದ ಹಾಗೆ ಮಾಡಬಹುದು. ಇದರಲ್ಲಿ ನಿಮ್ಮ ಪ್ರಭಾವ ಏನು ಇದೆ ಅದನ್ನು ಹೇಳಿ. ವಿಜಿಲೆನ್ಸ್ ಕಮಿಷನರು ಅವರು ಕೆಲಸ ಅವರು ಮಾಡಲಿ, ಶ್ರೀಮಾನ್ ರೆಡ್ಡಿಯವರು ಈ ಬಗ್ಗೆ ಏನು ಸಲಹೆ ನೀಡಿದ್ದಾರೋ ನನಗೆ ಗೊತ್ತಿಲ್ಲ. ವಿಜಿಲೆನ್ಸ್ ಕಮೀಷನ್‌ನವರು ತಮ್ಮ ಕಾರ್ಯವನ್ನು ಮುಂದುವರೆಸಲಿ, ನೀವೇನೂ ಆ ಬಗ್ಗೆ ಗಮನ ತೆಗೆದುಕೊಳ್ಳುವುದು ಬೇಡ.

ಶ್ರೀ ಕಾಗೋಡು ತಿಮ್ಮಪ್ಪ.---ಈ ರೀತಿಯಾಗಿ ಶ್ರೀಮಾನ್ ರಾಮಚಂದ್ರ ರೆಡ್ಡಿಯವರು ಹೇಳುವುದರಲ್ಲಿ ಅರ್ಥವಿಲ್ಲಾ. ನೋಡುವುದಕ್ಕೆ ಹಾಗೆ ಕಾಣುತ್ತಾ ಇದೆ. ಹೆಚ್ಚು ಅಧಿಕಾರಿಗಳನ್ನು ನಮ್ಮ ಇಲಾಖೆಯಲ್ಲಿ ಸಿಕ್ಕಿರುವುದರಿಂದ ಎಲ್ಲರ ಕಣ್ಣು ಈ ಇಲಾಖೆಯ ಮೇಲೆ ಇದೆ. ಆ ರೀತಿ ತಿಳಿದುಕೊಳ್ಳುವುದು ಸ್ವಾಭಾವಿಕ. ಆಲ್ಲದೆ ಈ ಒಂದು ಊಹೆಯನ್ನೂ ಕೂಡ ಯಾರಾದರೂ ಕಲ್ಪನೆ ಮಾಡಬಹುದು. ಆದರೆ ಉದ್ದೇಶಪೂರ್ವಕವಾಗಿ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ರಾಮಚಂದ್ರ ರೆಡ್ಡಿ.---ನಾನು ಈ ಒಂದು ಜನಾಂಗದ ಮೇಲೆ ಹೆಚ್ಚು ರೇಡ್ ಮಾಡುತ್ತಿದ್ದಾರೆ ಅಂತ ಏತಕ್ಕೆ ಹೇಳಿದೆ ಎಂದರೆ ಈ ಒಂದು ಇಲಾಖೆಯಲ್ಲಿ ಈ ಜನಾಂಗದವರನ್ನು ಹೆಚ್ಚು ಹಿಡಿದಿರುವುದರಿಂದ ಇದರ ಬಗ್ಗೆ ಜನತೆಗೆ ಅನುಮಾನ ಬಂದಿರುವುದರಿಂದ ನಾನು ಹೇಳಿದ್ದು. ನೀವು ಆ ರೀತಿ ಮಾಡದೇ ಇರಬಹುದು ನಿಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೇನೋ ಅಥವಾ ನಿಮ್ಮ ಹೆಸರನ್ನು ಕೆಡಿಸುವುದಕ್ಕೇನಾದರೂ ಕೂಡ ಈ ರೀತಿ ಆಗುತ್ತಾ ಇದೆ. ಅದಕ್ಕೋಸ್ಕರವಾಗಿ ಇದನ್ನು ಪರಿಶೀಲಿಸಿ ಅಂತ ಹೇಳಿದ್ದು. ಈ ಜನತೆಯನ್ನು ರೇಡ್ ಮಾಡಬೇಡಿ ಎಂದು ನಾನು ಹೇಳುವವನಲ್ಲ, ಅವರು ಈಗ ಏನು ರೇಡ್ ಮಾಡುತ್ತಿದ್ದಾರೋ ಅದಕ್ಕೆ We have welcomed itand appreciated it. ನೀವು ಯಾರಿಗೆ ಈ ಅಧಿಕಾರ ಕೊಟ್ಟಿದ್ದೀರೋ ಅವರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಲಿಲ್ಲಾ ಎಂದು ಹೇಳಿದನೇ ಹೊರತು, ಈ ವಿಚಾರದಲ್ಲಿ ತಾವು ಪರಿಶೀಲನೆ ಮಾಡಬೇಕು ಅಂತ ಹೇಳಿದನೇ ಹೊರತು ಮತ್ತೇನೂ ಅಲ್ಲ,

ಶ್ರೀ ಕಾಗೋಡು ತಿಮ್ಮಪ್ಪ.---ಅಧ್ಯಕ್ಷರೇ, ಮಾನ್ಯ ದೇವೇಗೌಡರು ಮತ್ತು ಮಾನ್ಯ ಆರ್ಮುಗಂರವರು ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥಾ ವರ್ಕ್ ಛಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ ಕೆಲಸ ಮಾಡತಕ್ಕಂಥಾ ಹಂಗಾಮಿ ನೌಕರರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ೫ ವರ್ಷ ಸೇವೆ ಸಲ್ಲಿಸಿದವರನ್ನು ಹಂತ ಹಂತವಾಗಿ ಈ ವರ್ಕ್‌ಛಾರ್ಜ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿದ್ದವರನ್ನು ಖಾಯಂಗೊಳಿಸಬೇಕ ಎಂದು ಏನು ನಿರ್ಣಯ ಆಗಿತ್ತು ಆ ಪ್ರಕಾರ ಈಗ ಮೊದಲನೇ ಹಂತ ಆಗಿದೆ. ಅದೇ ರೀತಿಯಾಗಿ ಈ ಇಲಾಖೆಯಲ್ಲಿ ಗ್ಯಾಂಗ್‌ಮನ್ಸ್ ಇದ್ದಾರೆ, ಅವರ ಸಂಖ್ಯೆಯೂ ಕೂಡ ಸುಮಾರು ೧೧,೦೦೦ ಅಷ್ಟು ಜನ ಇದ್ದಾರೆ. ಅಷ್ಟು ದೊಡ್ಡ ಸಂಖ್ಯೆಯಲ್ಲಿದ್ದಾರೆ. ನಾವು ಈ ಕೆಲಸ ಮಾಡುವಾಗ ಇದನ್ನು ಸ್ವಲ್ಪ ವ್ಯವಸ್ಥಿತವಾಗಿ ಮಾಡಬೇಕೆನ್ನುವ ಆಲೋಚನೆ ಇದೆ. ಅಧ್ಯಕ್ಷರೇ, ಈಗ ನಮ್ಮಲ್ಲಿ ಕೆಲವು ಪರ್ಮನೆಂಟ್ ನೇಚರ್ ವೇಕೆನ್ಸೀಸ್ ಪ್ರತಿಯೊಂದು ಸಬ್‌ಡಿವಿಷನ್‌ನಲ್ಲೂ ಎಷ್ಟು ಇದೆ ಅನುವುದನ್ನು ಮೊದಲು ತಿಳಿದುಕೊಳ್ಳಬೇಕಾಗಿದೆ. ಇದರಲ್ಲಿ ಡ್ರೈವರ್ಸ್, ಕ್ಲೀನರ್ಸ್ ಮತ್ತು ಟ್ರಾವಲರ್ಸ್ ಬಂಗ್ಲೋನಲ್ಲಿರತಕ್ಕಂಥಾ ಮೇಟಿಗಳು ಇದ್ದಾರೆ. ಇದಕ್ಕೆ ವರ್ಕ್ ಇನ್ಸ್‌ಪೆಕ್ಟರ್ ಸಹ ಇದ್ದಾರೆ ಈ ಬಗ್ಗೆ ವೇಕೆನ್ಸೀಸ ಎಷ್ಟು ಇದೆ ಅನ್ನುವುದನ್ನು ತಿಳಿದುಕೊಂಡು ಶಾಶ್ವತವಾಗಿಯೇ ಪರ್ಮನೆಂಟ್ ನೇಚರ್ ವರ್ಕ್‌ನಲ್ಲಿರುವಂಥಾ ಜನರನ್ನೇ ಒಂದೇ ಸಾರಿ ಏತಕ್ಕೆ ಮಾಡಬಾರದು ಎನ್ನುವುದನ್ನು ನಾವು ಆಲೋಚನೆ ಮಾಡುತ್ತಿದ್ದೇವೆ. ಆದಕ್ಕೋಸ್ಕರ ಇತ್ತೀಚೆಗೆ ನಾವು ಸೂಪರಿಂಟೆಂಡಿಂಗ್ ಇಂಜಿನಿಯರ್‌ವರನ್ನು ಕರೆದು ಚರ್ಚೆ ಮಾಡಿದಂಥ ಕಾಲದಲ್ಲಿ ಅವರ ಸರ್ಕಲ್‌ನಲ್ಲಿ ಈ ರೀತಿ ಅವರನ್ನು ಶಾಶ್ವತವಾಗಿ ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶ ಇರತಕ್ಕಂಥ ಎಷ್ಟು ಸ್ಥಾನಗಳು ಇವೆ, ಎಷ್ಟು ಹುದ್ದೆಗಳು ಇವೆ ಅವುಗಳನ್ನು ಪಟ್ಟಿಮಾಡಿ ಕೊಡಬೇಕೆಂದು ಹೇಳಿದ್ದೇವೆ, ಅದನ್ನು ಅವರಿಂದ ತರಿಸಿಕೊಂಡಮೇಲೆ ಅದರ ಬಗ್ಗೆ ಅಂತಿಮವಾಗಿ ನಾವು ತೀರ್ಮಾನ ಮಾಡಬೇಕಾಗಿದೆ. ಇವತ್ತು ನಮ್ಮಲ್ಲಿ ಗ್ಯಾಂಗ್‌ಮನ್‌ಗಳು ಇದ್ದಾರೆ. ಅವರು ಯಾವ ವರ್ಷ ಕೆಲಸಕ್ಕೆ ಸೇರಿದ್ದಾರೆ ಎಂಬ ಬಗ್ಗೆ ದಾಖಲೆ ಇಲ್ಲ. ಬಹಳ ವರ್ಷಗಳಿಂದ ಅವರಿಗೆ ಸರ್ವಿಸ್ ರಿಜಿಸ್ಟರ್ ಮೈನ್‌ಟೈನ್ ಮಾಡಿಲ್ಲ. ಅಂತಹವರು ಹೆಚ್ಚು

ಕಡಿಮೆ they are belonging to labour class. ಅವರನ್ನು ಸರ್ಕಾರದ ಅಧಿಕಾರಿಗಳನ್ನಾಗಿ ಮಾಡಿಕೊಳ್ಳುವುದು ನ್ಯಾಯಸಮ್ಮತವೇ ಎಂಬುದನ್ನು ನಾವು ಆಲೋಚನೆ ಮಾಡಬೇಕು. ಅವರ ಪ್ರತಿನಿಧಿಗಳ ಜೊತೆಯಲ್ಲಿ ನಾವು ಕುಳಿತು ಮಾತನಾಡಿದಂಥ ಕಾಲದಲ್ಲಿ ಅವರು ನಮ್ಮ ಒಂದು ಸಲಹೆಯನ್ನು ಒಪ್ಪಿದ್ದಾರೆ. ಅವರು ಲೇಬರ್ ಕ್ಲಾಸ್‌ಗೆ ಬರುತ್ತಾರೆ ಅಂದರೆ ಅವರದು ಶ್ರಮಜೀವಿಗಳ ವರ್ಗ, ಅವರಿಗೆ ಇಂಡಸ್ಟ್ರೀಯಲ್ ಲೇಬರ್ ಆಕ್ಟ್ ಪ್ರಕಾರ ಏನೇನು ಅನುಕೂಲತೆಗಳನ್ನು ಕೊಡಬೇಕೋ ಅದನ್ನು ಕೊಟ್ಟರೆ ಸಾಕು ಎನ್ನತಕ್ಕಂಥ ಅಭಿಪ್ರಾಯವನ್ನು ಅವರು ಸೂಚಿಸಿದ್ದಾರೆ. ನಾವು ಇದರಲ್ಲಿ ಈ ಎರಡು ಕೆಲಸಗಳನ್ನು ಮಾಡಲೇಬೇಕಾಗುತ್ತದೆ. ಈ ವರ್ಗದಲ್ಲಿರತಕ್ಕಂಥವರು ಬಹಳ ಬಡವರು. ಬಹಳ ದಿವಸದಿಂದ ಇಲ್ಲಿ ಕೆಲಸಮಾಡುತ್ತಿದ್ದಾರೆ. ಅವರನ್ನು ಕಳಿಸಿಬಿಟ್ಟರೆ ಅವರಿಗೆ ಏನೂ ಗತಿ ಇಲ್ಲ. ಅದನ್ನು ನಾವು ನೋಡಿದ್ದೇವೆ. ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಈ ಸಮಸ್ಯೆಯನ್ನು ಬಗೆಹರಿಸತಕ್ಕಂಥ ಕಾಲದಲ್ಲಿ ಶಾಶ್ವತವಾಗಿ ಸರ್ಕಾರಕ್ಕೆ ಇದರಿಂದ ಬಾಧಕವಾಗಬಾರದು ಮತ್ತು ಸರ್ಕಾರ ಈ ಲೇಬರ್‌ಕ್ಲಾಸನ್ನು ಸರ್ಕಾರಿ ಅಧಿಕಾರಿಗಳನ್ನಾಗಿ ಮಾಡುವುದಕ್ಕೆ ಹೊರಟರೆ ನಮ್ಮ ಒಂದು ಇಲಾಖೆಗೆ ಅಷ್ಟೇ ಅಲ್ಲ ಅನೇಕ ಇಲಾಖೆಯಲ್ಲಿ ಇದೇ ಪ್ರಮಾಣದಲ್ಲಿ ಸಹಸ್ರಾರು ಜನ ಕೆಲಸಮಾಡತಕ್ಕಂಥವರು ಏನಿದ್ದಾರೆ ಅವರೆಲ್ಲರಿಗೂ ಪರಿಣಾಮವಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಸಮಗ್ರವಾಗಿ ಸರ್ಕಾರದ ಮೇಲೆ ಹೆಚ್ಚು ಬಾಧಕವಾಗದ ರೀತಿಯಲ್ಲಿ ಬಹಳ ವರ್ಷಗಳಿಂದ ಇಲ್ಲಿ ಕೆಲಸಮಾಡುತ್ತಿರತಕ್ಕಂಥ ಈ ವರ್ಗಕ್ಕೆ ಶಾಶ್ವತವಾಗಿ ಒಂದು ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಒಂದು ಪ್ರಯತ್ನವನ್ನು ನಾವು ಇವತ್ತು ಮಾಡುತ್ತಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರು ಕೊಟ್ಟಂತಹ ಈ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಹೆಚ್ಚು ಸಮಯವನ್ನು ತೆಗೆದುಕೊಳ್ಳದೇ ಶೀಘ್ರಗತಿಯಿಂದ ಇವರಿಗೆಲ್ಲಾ ಒಂದು ಶಾಶ್ವತವಾಗಿ ಪರಿಹಾರವನ್ನು ಕಂಡುಹಿಡಿಯತಕ್ಕಂಥ ಪ್ರಯತ್ನವನ್ನು ಮಾತ್ರ ನಾವು ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

SRI C. M. ARUMUGHAM.—Mr. Speaker, the Minister says that because this section of the workers are labour class, they cannot be considered as Government employees. I am sorry that he is advancing a wrong argument. What is wrong in making this labour class as Government Employees ? Do you want to keep the labour class away from the Government service ? I do not know who is the representative who told him that they are satisfied if they are given concessions like industrial labourers are getting. I am sorry this statement comes from Sri Kagodu Thimmappa. I thought he is for workers and labourers. What is wrong in making them Government employees ?

SRI H. D. DEVE GOWDA.—With your kind permission Sir, I would like to seek clarification from the Hon. Minister. He had just now said that 2000 work-charged employees have already been regularised. What are the norms that you have applied ? You have already recognised the services of 2000 employees. You have made them permanent. Why do you want to change the norms already applied ?

SRI KAGODU THIMMAPPA.—So far as workcharged establishment is concerned, ಅವರೆಲ್ಲಾ ಇದ್ದಾರೆ. We are not changing that class. Here there are 11,000 people belonging to Gangmen Cadre. ಇಲ್ಲಿ ೧೧ ಸಾವಿರ ಗ್ಯಾಂಗ್‌ಮ್ಯಾನ್ ಏನಿದ್ದಾರೆ ಅವರು ೧೫—೨೦ ವರ್ಷದಿಂದ ಇಲ್ಲಿದ್ದಾರೆ. ಇವರ ವಿಚಾರದಲ್ಲಿ, which is convenient, which is not convenient ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. Because this is purely labour class.

SRI H. D. DEVE GOWDA.—Gangmen are working on daily wages. work-charged establishment people are drawing monthly salaries. ವರ್ಕ್‌ಚಾರ್ಜ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ ಕೆಲಸ ಮಾಡುವವರು ಮಂತ್ರಿಯವರಷ್ಟು ಸ್ಯಾಲರಿಯನ್ನು ಡ್ರಾ ಮಾಡುತ್ತಾರೆ. ಆದ್ದರಿಂದ ಅದನ್ನು ಇದರಿಂದ ಪ್ರತ್ಯೇಕ ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ವರ್ಕ್‌ಚಾರ್ಜ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿರುವವರು ಕೆಲವರು ಡೈಲಿ ವೇಜಸ್‌ನಲ್ಲಿ ಕೆಲಸಮಾಡುತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಈ ೧೧ ಸಾವಿರ ಜನರನ್ನು ಕನ್‌ಫರ್ಮ್ ಮಾಡುವುದರ ಬಗ್ಗೆ ಹಿಂದೆ ಇದೇ ಸದನದಲ್ಲಿ ನಾವು ಹತ್ತಾರು ಸಾರಿ ಪ್ರಸ್ತಾಪಮಾಡಿದ್ದೇವೆ ಮತ್ತು ಸರ್ಕಾರ ಅದಕ್ಕೆ ಒಪ್ಪಿಗೆ ಕೊಟ್ಟಿದೆ. ಈ ೧೧ ಸಾವಿರ ಜನರು ಏನು ಡೈಲಿ ವೇಜಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ ಅವರ ಬಗ್ಗೆ ಈ ವಿಚಾರವನ್ನು ಪ್ರತ್ಯೇಕವಾಗಿ ಡೀಲ್ ಮಾಡಬೇಕೆಂದು ನಾನು ಈಗಾಗಲೇ ಸಲಹೆ ಕೊಟ್ಟು ಹೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಅದನ್ನೇ ಹೇಳುತ್ತಿದ್ದೇನೆ. ಈ ವರ್ಕ್ಸ್‌ಚಾರ್ಜ್ ಎಷ್ಟಾಬ್ಲಿಷ್‌ಮೆಂಟ್‌ನಲ್ಲಿ ಕೆಲಸಮಾಡುತ್ತಿರುವುದರ ಬಗ್ಗೆ ಪ್ರತ್ಯೇಕವಾಗಿ ಡೀಲ್ ಮಾಡಬೇಕೆಂದು ಹಿಂದೆಯೇ ಒಂದು ತೀರ್ಮಾನ ಆಗಿದೆ; ಮತ್ತು ೫ ವರ್ಷದಿಂದ ಇದೇ ಹಂತದಲ್ಲಿ ಅವರೆಲ್ಲರ ಸರ್ವಿಸ್‌ನ್ನು ರೆಗ್ಯುಲರೈಸ್ ಮಾಡತಕ್ಕಂಥಾದ್ದು ಏನಿದೆ ಅದೂ ಇದ್ದೇ ಇದೆ. ನನ್ನ ದೃಷ್ಟಿಯಲ್ಲಿ ಎಲ್ಲರನ್ನೂ ಒಂದೇ ಸಾರಿ ಏತಕ್ಕೆ ರೆಗ್ಯುಲರೈಸ್ ಮಾಡಬಾರದು ಎನ್ನುವ ಆಲೋಚನೆ ಕೂಡ ಇದೆ. ಅದಕ್ಕೆ ಕೆಲವು ನಾರ್ಮ್ಸ್‌ನ್ನು ವರ್ಕ್ ಔಟ್ ಮಾಡೋಣ ಎಂದು ನಾನು ಹೇಳಿದ್ದೇನೆ ಇದರ ಜೊತೆಗೆ ೧೧ ಸಾವಿರ ಗ್ಯಾಂಗ್‌ಮನ್ ಇದ್ದಾರಲ್ಲ ಇವರ ಬಗ್ಗೆ ಕೂಡ ನಾನು ಎಲ್ಲರ ಸಲಹೆಯನ್ನೂ ಕೇಳಿದ್ದೇನೆ. ಒಂದು ಇಲಾಖೆಯಲ್ಲಿ ಇವರನ್ನು ಗೌರ್ನಮೆಂಟ್ ಎಂಪ್ಲಾಯ್ ಎಂದು ಮಾಡುವುದರಿಂದ ಇನ್ನೊಂದು ಇಲಾಖೆಯ ಮೇಲೆ ಪರಿಣಾಮ ಉಂಟಾಗಬಾರದು. ಈ ಲೇಬರ್ ಕ್ಲಾಸ್ ಏನಿದೆ ಇದನ್ನು ಗೌರ್ನಮೆಂಟ್ ಎಂಪ್ಲಾಯೀಸ್ ಎಂದು ಟ್ರೀಟ್ ಮಾಡಬಹುದೇ ? ಇವರನ್ನು ಮಾಡುವುದರಿಂದ ನಮ್ಮ ಇಲಾಖೆಯೇ ಅಲ್ಲದೇ ಬೇರೆ ಇಲಾಖೆಯ ಮೇಲೆ ಏನು ಪರಿಣಾಮ ಆಗಬಹುದು ಎನ್ನತಕ್ಕಂಥ ಪ್ರಶ್ನೆ ಕೂಡ ಇದೆ. It is the question placed befo.e the House. I have not taken any decision or the Government has not taken any decision. This is a suggestion just I am placing before the House.

SRI C. M. ARUMUGHAM.—I Welcome it. I welcome that the work-charged establishment personnel have been regularised. While appointing gangmen and also work-charged employees, it has been done exclusively at the discretion of the Executive Engineer, Superintending Engineer or the Chief Engineer. While doing so, they have not made any reservation for SC/ST. As I have already said, your Department has got inadequate representation of SC/ST. Therefore, while doing it, you must regularise to the extent of 18% for SC/ST. If they are not available you must recruit them.

KUM. S. PRAMILA.—If there are more number of SC/STs, should he remove them ?

SRI C. M. ARUMUGHAM.—I tell you that not even 2% representation of SC/ST is there. I know it. Don't say, it is more than 18%. Go by facts. I know it is not there. If you talk like that, it shows your innocence. If there are more, remove them, she says What is this ? Are you going to remove those who are dominating in the service ? No. Therefore, what I say is when you issue order for regu-

larisation, in the same order you must make reservation of 18% for SC/ST. If there are less SC/STs you must make special recruitment.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಇಂತಹ ಒಂದು ಪರಂಪರೆ ಸಾಕಷ್ಟು ರೀತಿಯಲ್ಲಿ ನಡೆದುಕೊಂಡು ಬಂದಿದೆ. ಈ ಹಂಗಾಮಿ ನೌಕರರನ್ನು ಖಾಯಂ ಮಾಡತಕ್ಕಂಥ ಸಂದರ್ಭದಲ್ಲಿ ಮತ್ತು ಎಲ್ಲಾ ಸಂದರ್ಭದಲ್ಲಿ ಕೂಡ ಈ ರಿಸರ್ವೇಷನ್ ಕೊಡತಕ್ಕಂಥಾದ್ದು ಅಥವಾ ನಾವು ಅವರಿಗೆ ಮೀಸಲಾತಿಯನ್ನು ನೀಡತಕ್ಕಂಥ ವ್ಯವಸ್ಥೆ ಹೆಚ್ಚು ಕಡಿಮೆ ಗಾಳಿಗೆ ತೂರಲ್ಪಟ್ಟಿದೆ. ಈ ಕಾರಣಕ್ಕಾಗಿ............

SRI B. BASAVALINGAPPA.—At the time of Mr. Jatti, more than 22,000 people were regularised.

MR. SPEAKER.—Mention the year.

SRI B. BASAVALINGAPPA.—During 1958-59 they were regularised. Subsequently also, several temporary employees were also regularised without giving due attention to the fact that there should be certain amount of reservation which is guaranteed under the constitution. Now, you are thinking of regularising gangmen again. If you don't reserve 18% of the posts, then again you are depriving these people. Mr. Arumugham's argument is that if you want to regularise all these people, you will have to calculate at the rate of 18% out of this 11,000. You have got to make fresh recruitment if there are no SC/ST. This is the constitutional obligation that you have got to honour. Otherwise, you are only trying to deprive SC/STs from entry into service. This is the point. You will have to answer squarely to the point raised by Mr. Arumugham.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ ನಾನು ಹೇಳುವುದು ಇಷ್ಟೇ ಖಾಯಂ ಹುದ್ದೆಗಳನ್ನು ಮತ್ತು ಹಂಗಾಮಿ ಹುದ್ದೆಗಳನ್ನು ಎಲ್ಲಾ ಸಂದರ್ಭದಲ್ಲಿ ಮೀಸಲಾತಿಯನ್ನು ಹೆಚ್ಚು ಕಡಿಮೆ ಕೈಬಿಟ್ಟಿದ್ದೇವೆ. ಆದರೂ ಕೂಡ ಮಂತ್ರಿಮಂಡಲದಲ್ಲಿ ವರ್ಕ್‌ಚಾರ್ಜ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿರತಕ್ಕಂತಹ ನೌಕರರನ್ನು ರೆಗ್ಯೂಲರ್ ಮಾಡಬೇಕೆಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಶ್ರೀಮಾನ್ ಬಸವಲಿಂಗಪ್ಪನವರು ಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಹರಿಜನ ಮತ್ತು ಗಿರಿಜನರ ಹುದ್ದೆಗಳನ್ನು ಖಾಯಂ ಮಾಡಬೇಕೆಂದು ಹೇಳಲಿಲ್ಲ. ಆದರೆ ೧೯-೧-೧೯೭೫ ರಿಂದ ೧೦ ವರ್ಷಗಳ ಕಾಲ ಯಾರು ಸೇವೆಯನು ಸಲ್ಲಿಸಿರುತ್ತಾರೋ ಅವರು ಮಾತ್ರ ಈ ವ್ಯಾಪ್ತಿಯಲ್ಲಿ ಬರುತ್ತಾರೆ. Irrespective of SC/STs, any question of reservation is nowhere. It has not at all found a place in that order.

SRI B. BASAVALINGAPPA.—What do you think of doing now ?

SRI KAGODU THIMMAPPA.—That is a separate question.

SRI B. BASAVALINGAPPA.—Do not argue from a wrong premises and come to a wrong conclusion. Now, if the previous Government had committed certain mistake, should you continue it ? Now the order may be different. We know the Chief Secretary or some officer drafts this order and it is drafted in English and you come and read it here. You are a person who is guided by certain ideals of socialism. Now, you have to rectify the wrong that is done long ago.

The reservation formula is a must and it is guaranteed under the Constitution and the Government is obliged to implement all these things. Therefore, my friend, I request you kindly to see that no more injustice is done to the SCs/STs.

MR. SPEAKER.—Do not request the friend.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ ಹರಿಜನ ಮತ್ತು ಗಿರಿಜನರಿಗೆ ಕೊಡಬೇಕಾದಂತಹ ಮೀಸಲಾತಿಯನ್ನು ಯಾವ ರೀತಿಯಾಗಿ ಕೊಡಬೇಕೋ ಆ ರೀತಿಯಾಗಿ ಕೊಡುವುದಕ್ಕೆ ಪರಿಶೀಲನೆ ಮಾಡುತ್ತೇವೆ. ನಮ್ಮ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಆರ್ಮುಗಂ ರವರು ಸಮಾಜ ಕಲ್ಯಾಣ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. ವರದಿಯನ್ನು ಕೂಡ ನೋಡಿದ್ದೇನೆ. ಹರಿಜನ ಮತ್ತು ಗಿರಿಜನರಿಗೆ ಸಿಗಬೇಕಾದಂತಹ ಸೌಲಭ್ಯಗಳು ಸಿಗುತ್ತಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಅಂಶವನ್ನು ಖಂಡಿತವಾಗಿ ಪರಿಶೀಲನೆ ಮಾಡುತ್ತೇವೆ. ಯಾರ್ಯಾರೋ ಏನೇನೋ ಮಾಡಿಕೊಂಡು ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ ನಾನು ಗುಲ್ಬರ್ಗಕ್ಕೆ ಪ್ರವಾಸ ಹೋದಾಗ ನೋಡಿದ್ದೇನೆ. ಈ ಲೋಕೋಪಯೋಗಿ ಇಲಾಖೆಯಲ್ಲಿ ೫ ಕಿಲೋಮೀಟರ್‌ಗೆ ಒಬ್ಬ ಗ್ಯಾಂಗ್‌ಮೆನ್ ಅಥವಾ ಮೇಸ್ತ್ರಿ ಎಂದು ಇರುತ್ತಾರೆ. ಆದರೆ ಅಲ್ಲಿ ಈಗ ೨½ ಕಿಲೋಮೀಟರ್‌ಗೆ ಒಬ್ಬ ಗ್ಯಾಂಗ್‌ಮೆನ್ ಇದ್ದಾರೆ. ಅವರು ಸುಮಾರು ಹತ್ತಾರು ವರ್ಷಗಳಿಂದ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಈಗ ಅಲ್ಲಿ ಸುಮಾರು ೧೫೦–೨೦೦ ಜನರು ಕೆಲಸ ಮಾಡುತ್ತಿದ್ದಾರೆ. ಅವರೆಲ್ಲರನ್ನು ಕೆಲಸದಿಂದ ತೆಗೆದು ಹಾಕಿದರೆ ಅವರು ಬಡಜನಾಂಗದವರು ಮತ್ತು ಅವರಿಗೆ ರಕ್ಷಣೆ ಇಲ್ಲ. ಅವರು ಜೀವನ ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ ಅವರಿಗೆ ರಕ್ಷಣೆ ಕೊಡಬೇಕು ಎನ್ನುವ ದೃಷ್ಟಿಯಿಂದ ಮಾನವೀಯ ದೃಷ್ಟಿಯಿಂದ ಅವರನ್ನು ರಕ್ಷಣೆ ಮಾಡಬೇಕಾದುದು ಸರ್ಕಾರದ ಜವಾಬ್ದಾರಿ. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಆರ್ಮುಗಂರವರು ಮತ್ತು ಶ್ರೀಮಾನ್ ಬಿ. ಬಸವಲಿಂಗಪ್ಪನವರು ಹೇಳಿದರು ಹರಿಜನ ಮತ್ತು ಗಿರಿಜನರಿಗೆ ೧೮ ಪರ್ಸೆಂಟ್ ಮೀಸಲಾತಿಯನ್ನು ಕೊಡಬೇಕೆಂದು ಆ ರೀತಿಯಾಗಿ ೧೮ ಪರ್ಸೆಂಟ್ ಮೀಸಲಾತಿಯನ್ನು ಕೊಡುವುದು ಸರ್ಕಾರದ ಜವಾಬ್ದಾರಿ ಕೂಡ ಇದೆ. ಆದ್ದರಿಂದ ಇದನ್ನು ಹೇಗೆ ಮಾಡಬೇಕು ಎಂಬುದನ್ನು ಖಂಡಿತವಾಗಿ ಪರಿಶೀಲನೆ ಮಾಡುತ್ತೇವೆ.

ಶ್ರೀ ಪ್ರಭಾಕರ್ ತೇಲ್ಕರ್.—ಈ ರಿಜರ್‌ವೇಷನ್‌ನಲ್ಲಿ ಎಲ್ಲಾ ವರ್ಗದವರೂ ಸೇರಿದ್ದಾರೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲಾ ವರ್ಗದವರು ಸೇರಿದ್ದಾರೆ ಆದರೆ ಹಿಂದುಳಿದ ಜನಾಂಗದವರು ಸಮಸ್ಯೆ ಜಾಸ್ತಿ ಇದೆ. ಎಂಬುದನ್ನು ಸರ್ಕಾರ ಮನಗಂಡಿದೆ. ಶ್ರೀಮಾನ್ ಆರ್ಮುಗಂರವರು ಹೇಳಿದರು ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಬರೆಯುವಾಗ ಯಾರೋ ಮರ್ಜಿಗೆ ಒಳಗಾಗಿ ಬರೆದಿದ್ದಾರೆ ಎಂದು ಅವರು ಅಪಾದನೆ ಮಾಡಿದ್ದಾರೆ.

SRI C. M. ARUMUGHAM.—I have read it, I will bring it. It is not that I charge baseless.

SRI KAGODU THIMMAPPA.—There is no foundation for this argument.

SRI C. M. ARUMUGHAM.— Please go through.

SRI KAGODU THIMMAPPA.—The whole argument is based on wrong premises. I appeal to Hon. Member not to enter into such wrong information.

SRI C. M. ARUMUGHAM.—You are reading sombebody's review. You have not gone through. I stand on a firm ground when I charge. Let him not speak on what somebody told him. Yesterday he was not here. I did not know he will refute it. I will bring it. Read the Confidential Reports of those persons whom I say, as to how

they have been placed. I have said the man who should come in the sixth has came in first and the man who should come in third, has come in second. When I said it, you were never here. You never noted down. You are coming and saying, "Please do not accuse me." When I say, I say it with facts. You read the confidential report of the sixth Superintending Engineer. The man who has got 'outstanding' has been placed serial No. 1. I said it yesterday. That is not shown to you. I will bring it to-morrow. I will raise it again, After Question Hour I will raise this issue,

SRI K. BHASKAR NAIDU.—Whom you think has given wrong information to the Hon. Minister ?

SRI C. M. ARUMUGHAM.—Yesterday he was not here. He was not seen here. Since you have been fed with that information, you are saying. But, do not accuse me, because I am not making this allegation on a false ground.

SRI K. BHASKAR NAIDU.—Are you trying to give false information on the floor of the House ? Are you giving false information ? Pelase tell us correctly.

MR. SPEAKER.—Please resume.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರಾದ ಶ್ರೀಮಾನ್ ಆರ್ಮುಗಂ ರವರು ಚರ್ಚೆ ಮಾಡುವ ಕಾಲದಲ್ಲಿ ಮಾಡಿದ ಆಪಾದನೆ ಅರ್ಥವಿಲ್ಲದೆ ಇರುವಂತಹದ್ದು. I am not accusing Sri Arumugham for having made that statement. I am just enlightening him that the information he has got has no genesis and no basis.

SRI C. M. ARUMUGHAM.—I will say it again. You verify and reply. That is my appeal to you. What I said, I will repeat it to-morrow. You verify and reply. I referred to two or three persons. But bring all the confidential Reports. Let us see. You send it to the Speaker. I will raise it. You have access to the document, whereas I have not. When you have got access to the documents, you must verify. I am not questioning your veracity. When I Make important points, you cannot say that there is no proof. You were not here. You are a man to protect the interest of the back-ward community, the minorities and the SC/STs.

MR. SPEAKER.—All.

SRI C. M. ARUMUGHAM.—All, No. Then, there is no need for a Minister for Secial Welfare to look after. There is no need for reservation in the Constitution. All is not there. That is how we presume. Then, you scrap the Constitution, tear it and burn it, All means what ? There is some section of the society which require protection.

5·30 P.M.

Therefore, I am asking him. The conspiracy is such that it is the report to deprive the Scheduled Castes, the Schedule Tribes, the Minorities and the Backward Classes. I him not raising it simply Starting with the Under Secretary they spread it to other departments like Agriculture, Horticulture, Revenue and all, thereby a day will come that the confidential Report will be a document sent by God. You kindly see to it. It is not that you are not capable of understanding it. I will raise it tomorrow. I will speak for another half. an hour, because I have not touched other subjects of PWD.

SRI KAGODU THIMMAPPA.—'Excellent reports can be purchased.' This is the statement the hon. member has made. There is no reason to suspect. That is all my appeal. He has got the right to raise any quastion that he likes. But here the allegation made on the floor of the House has no basis for that.

ಅಧ್ಯಕ್ಷರು.—ಓನೇ ಸ್ಥಾನದಲ್ಲಿದ್ದವರು ಮೇಲೆ ಹೋಗಿದ್ದಾರೆ, ಮೇಲೆ ಇದ್ದವರು ಕೆಳಗೆ ಹೋಗಿದ್ದಾರೆ, ಆದ್ದರಿಂದ ಇದನ್ನು ವೆರಿಫೈ ಮಾಡಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಅದನ್ನು ವೆರಿಫೈ ಮಾಡೋಣ.

SRI C. M. ARUMUGHAM.—I am only saying, if you take the outstanding report of the CR, I want to know what is the yard-stick or measure applied in writing this report. It can be purchased by going round the chair of the Officer who writes Confidential Reports and pleading all his requirement by giving tea, coffe and everything to get outstanding report for three years.

MR. SPEAKER.—Only for tea?

SRI C. M. ARUMUGHAM.—Morning tea, evening tiffin and in the night something else.

ಶ್ರೀ ಕಾಗೋಡು ತಿಮ್ಮಪ್ಪ.—ಆದ್ದರಿಂದ ಅವರು ಹೇಳಿರತಕ್ಕಂಥ ಕೆಲವು ಸನ್ನಿವೇಶಗಳನ್ನು ನಾನು ಗಮನದಲ್ಲಿಟ್ಟುಕೊಂಡು ನೋಡುತ್ತೇನೆ.

SRI C. M. ARUMUGHAM.—Thank you very much.

ಶ್ರೀ ಕಾಗೋಡು ತಿಮ್ಮಪ್ಪ.—ಆದರೆ ಅವರು Confidential Reportನ್ನು ಪರ್ಚೇಸ್ ಮಾಡಲಾಗಿದೆ ಎಂದು ಏನು ಹೇಳಿದ್ದಾರೆ, ಅದು ಸರಿಯಲ್ಲವೆಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಪ್ರಮೋಷನ್ ಕೊಡುವ ವಿಚಾರದಲ್ಲಿ ಅಂದರೆ ಅದು ಎಕ್ಸಿಕ್ಯುಟಿವ್ ಇಂಜಿನಿಯರ್ ಪೋಸ್ಟ್‌ಗೆ ಇರಬಹುದು, ಸೂಪರಿಂಟೆಂಡಿಂಗ್ ಇಂಜಿನಿಯರ್ ಪೋಸ್ಟ್‌ಗೆ ಇರಬಹುದು ಅಥವಾ ಚೀಫ್-ಇಂಜಿನಿಯರ್ ಪೋಸ್ಟ್‌ಗೆ ಇರಬಹುದು, ಈಗ Seniority-*cum*-Selection ಎಂದು ಮಾಡಿಕೊಂಡಿದ್ದೀರಿ.

Mr. Speaker.—Seniority-cum-merit.

ಎಚ್. ಡಿ. ದೇವೇಗೌಡ.—ಇಲ್ಲ.

Mr. Speaker.—It is promotion by selection taking into consideration Seniority-*cum*-merit.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲಿ ಸೀನಿಯಾರಿಟಿ ಒಂದನ್ನೇ ಗಮನದಲ್ಲಿಟ್ಟುಕೊಳ್ಳುವುದಕ್ಕಾಗುವುದಿಲ್ಲ. The merit is also taken into consideration so far as these two categories are concerned in P. W. D. ಇದರ ಬಗ್ಗೆ ಇಲ್ಲಿ ಈ ಹಿಂದೆ ಕೂಡ ಚರ್ಚೆಯಾಗಿದೆ. Outstandings ಮತ್ತು ಮೆರಿಟ್ ಇದ್ದರೆ ಅದು ಬೇರೆ. Confidential Report ಬರೆಯುವುದು ಬೇರೆ. ಆದರೆ ೬ನೇ ಸ್ಥಾನದಲ್ಲಿರುವವರನ್ನು ಒಂದನೇ ಸ್ಥಾನಕ್ಕೆ ತರುವುದು, ಒಂದನೇ ಸ್ಥಾನದಲ್ಲಿರುವವರನ್ನು ೬ನೇ ಸ್ಥಾನಕ್ಕೆ ತರುವಂತಹ ಪಾಲಿಸಿ ಏನಿದೆ, ಇದನ್ನು ಬದಲಾವಣೆ ಮಾಡಬೇಕಾಗುತ್ತದೆ. ಇಲ್ಲಿ ತಾವು Merit-*cum*-Seniority ಪ್ರಶ್ನೆಯನ್ನು ಇಟ್ಟುಕೊಂಡು ತೀರ್ಮಾನ ಮಾಡುತ್ತೇವೆ ಎನ್ನುವುದಾದರೆ, ಅದಕ್ಕೆ ಒಬೇ ಮಾಡಿ, ಇಲ್ಲದಿದ್ದರೆ ಬರೀ ಸೀನಿಯಾರಿಟಿ ಒಂದನ್ನೇ ಗಣನೆಗೆ ತೆಗೆದುಕೊಳ್ಳುವುದಾದರೆ ಇಲ್ಲಿ Confidential Report ಪ್ರಶ್ನೆ ಬರುವುದಿಲ್ಲ. ಏಕೆಂದರೆ. ಕೆಲವರದ್ದು ಅತ್ಯುತ್ತಮವಾದಂಥ Confidential Report ಇರಬಹುದು ಜೊತೆಗೆ ಮೆರಿಟೋರಿಯಸ್ ಸರ್ವಿಸ್ ಇಸಬಹುದು. ಆದ್ದರಿಂದ ಈಗಿನ ನಿಮ್ಮ ಒಂದು ಪಾಲಿಸಿಯನ್ನು ಬದಲಾವಣೆ ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ. ಇಲ್ಲಿ ಮಾನ್ಯ ದೇವೇಗೌಡರು ಹೇಳಿದಂತೆ ಕೆಲವು ಸಂಶಯಗಳಿಗೆ ಅವಕಾಶವಿದೆ. ಆದ್ದರಿಂದ ಈ ವಿಚಾರದಲ್ಲಿ.........

ಶ್ರೀ ಎಚ್. ಡಿ. ದೇವೇಗೌಡ.—ಮೆರಿಟೋರಿಯಸ್ ಸರ್ವಿಸ್ ಇದ್ದಂಥವರಿಗೆ ಗೋಲ್ ಮೆಡಲ್ ಕೊಡಿ, ನಾವು ಬೇಡ ಎಂದು ಹೇಳುವುದಿಲ್ಲ, ಆದರೆ ಪ್ರಮೋಷನ್ ಕೊಡುವಾಗ ಈಗಿನ ಸರ್ಕಾರದ ಪಾಲಿಸಿಯನ್ನು ಬದಲಾವಣೆ ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಅದು ಸರ್ಕಾರದ ಆಲೋಚನೆಯಲ್ಲಿದೆ. ಸೀನಿಯಾರಿಟಿ-ಕಮ್-ಮೆರಿಟ್ ಮೇಲೆ ಸೆಲೆಕ್ಷನ್ ಮಾಡಬೇಕೆಂಬುದು ಸರ್ಕಾರದ ಆಲೋಚನೆಯಲ್ಲಿದೆ. ಏಕೆಂದರೆ, ಕೆಲವು ಇಲಾಖೆಗಳಲ್ಲಿ ಪ್ರಮೋಷನ್ ಕೊಡುವಾಗ ವ್ಯತ್ಯಾಸಗಳಾಗಿವೆ. out standing ಅಥವಾ very-good Confidential Report ಇಲ್ಲದಿರುವ ಕಾರಣದಿಂದ ಕೆಲವರನ್ನು ಕೆಳಗಿಟ್ಟು ಮತ್ತೆ ಕೆಲವರನ್ನು ಮೇಲೆ ಎತ್ತುವಂತಹ ಸನ್ನಿವೇಶಗಳಿವೆ. ಆದ್ದರಿಂದ ಎಲ್ಲ ಇಲಾಖೆಗಳ ಹಿತದೃಷ್ಟಿಯಿಂದ ಇದನ್ನು ಯೋಚನೆ ಮಾಡಿ ತೀರ್ಮಾನ ಮಾಡಬೇಕಾಗಿದೆ. ಇಂತಹ ಒಂದು ಸನ್ನಿವೇಶ ಈ ನಮ್ಮ ಇಲಾಖೆಯಲ್ಲಿ ಏನಿದೆ, ಇದನ್ನು ನಿವಾರಣೆ ಮಾಡುವ ವಿಷಯ ಸರ್ಕಾರದ ಚರ್ಚೆಯಲ್ಲಿದೆ. ಆದ್ದರಿಂದ ಮಾನ್ಯ ಸದಸ್ಯರ ಮನಸ್ಸಿನಲ್ಲಿರುವ ಅನುಮಾನವನ್ನು ನಿವಾರಣೆ ಮಾಡುವುದಕ್ಕೆ ನಾನು ಖಂಡಿತವಾಗಿಯೂ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ.

ಇನ್ನು ರಾಷ್ಟ್ರೀಯ ಹೆದ್ದಾರಿ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಈಗ ನಮಗಿರುವ ಒಟ್ಟು ರಾಷ್ಟ್ರೀಯ ಹೆದ್ದಾರಿಯು ನಮ್ಮ ಇತರೇ ದಕ್ಷಿಣ ರಾಜ್ಯಗಳಿಗೆ ಹೋಲಿಸಿ ನೋಡಿದರೆ ನಮ್ಮ ರಾಜ್ಯದ್ದು ಕಡಿಮೆ ಇದೆ. ಆದ್ದರಿಂದ ಇನ್ನಷ್ಟು ಹೆದ್ದಾರಿಗಳನ್ನು ಸೇರಿಸಿಕೊಳ್ಳಬೇಕೆಂಬ ವಾದವನ್ನು ಕೇಂದ್ರ ಸರ್ಕಾರದ ಮುಂದೆ ಇಟ್ಟಿದ್ದೇವೆ. ಸುಮಾರು ೧೧ ಹೆದ್ದಾರಿಗಳನ್ನು ಸೇರಿಸಬೇಕೆಂಬುದು ನಮ್ಮ ವಾದ. ಇದರಲ್ಲಿ ಪ್ರಮುಖವಾಗಿ ನಾಲ್ಕನ್ನಾದರೂ ಸೇರಿಸಬೇಕೆಂದು ಕೇಳಿದ್ದೇವೆ. ಈ ನಾಲ್ಕರ ವಿವರಗಳು ಈ ರೀತಿ ಇದೆ.—

(೧) ತುಮಕೂರು, ಅರಸೀಕೆರೆ, ಶಿವಮೊಗ್ಗ, ಸಾಗರ, ಹೊನ್ನಾವರ—ಜಾಯಿನ್—ಎನ್.ಎಚ್. ೧೭.

(೨) ಬೆಂಗಳೂರು, ಮೈಸೂರು, ಮರ್ಕೆರಾ—ಜಾಯಿನ್—ಎನ್.ಎಚ್. ೧೭.

(೩) ಬೆಳಗಾಂ, ಬಿಜಾಪುರ, ಗುಲ್ಬರ್ಗ, ಹುಮ್ನಾಬಾದ್—ಜಾಯಿನ್—ಎನ್.ಎಚ್. ೯.

(೪) ಮೈಸೂರು, ಶ್ರೀರಂಗಪಟ್ಟಣ, ನಾಗಮಂಗಲ, ಚಿಕ್ಕನಾಯಕನ ಹಳ್ಳಿ, ಹಿರಿಯೂರು, ಬಳ್ಳಾರಿ, ಸಿರಗುಪ್ಪ, ಶಹಾಪುರ್, ಗುಲ್ಬರ್ಗ. ಹುಮ್ನಾಬಾದ್—ಜಾಯಿನ್—ಎನ್.ಎಚ್. ೯.

ಈ ನಾಲ್ಕನ್ನು ಸೇರಿಸಿದರೆ ಒಟ್ಟು ೧೭೫೯ ಕಿಲೋಮೀಟರ್‌ಗಳಾಗುತ್ತದೆ. ಈಗ ಹಾಲಿ ನಮ್ಮಲ್ಲಿ ರುವುದು ಸುಮಾರು ೧೯೬೮ ಕಿಲೋಮೀಟರ್‌ಗಳು. ಇದಕ್ಕೆ ಹೊಸದಾಗಿ ೧೭೫೯ ಕಿಲೋಮೀಟರ್‌ಗಳನ್ನು ಸೇರಿಸಿದರೆ ನಾವೂ ಸಹ ರಾಷ್ಟ್ರೀಯ ಹೆದ್ದಾರಿಯಲ್ಲಿ ತಮಿಳುನಾಡು, ಆಂಧ್ರ ಹಾಗೂ ಕೇರಳಾ ರಾಜ್ಯಗಳ ಮಟ್ಟಕ್ಕೆ ಹೋಗುತ್ತೇವೆ. ಈಗ ಕೇಂದ್ರದಲ್ಲಿ ನಮ್ಮವರೇ ಆದಂಥ ಸಚಿವರು ಇರುವುದರಿಂದ ಈ ಒಂದು ಕೆಲಸವಾಗುತ್ತದೆಂಬ ವಿಶ್ವಾಸ ನಮಗಿದೆ. ಕಳೆದ ಸಲಕ್ಕೆ ಹೋಲಿಸಿ ನೋಡಿದರೆ ನಮ್ಮ ರಾಷ್ಟ್ರೀಯ ಹೆದ್ದಾರಿಗಳಿಗೆ ಕೇಂದ್ರದಿಂದ ಹೆಚ್ಚು ಹಣ ಸಿಕ್ಕಿದೆ. ಪ್ರಾರಂಭದ ಅಲಾಟ್‌ಮೆಂಟ್ **೫೨೫** ಲಕ್ಷ ಇದ್ದರೆ ನಂತರದಲ್ಲಿ ೬೨೮ ಲಕ್ಷ ರೂಪಾಯಿಗಳನ್ನು ಕೂಡಿಸಿಕೊಟ್ಟಿದ್ದಾರೆ. ಶೇಕಡ ೨೫ರಷ್ಟು ಜಾಸ್ತಿ ಹಣವನ್ನು ರಾಷ್ಟ್ರೀಯ ಹೆದ್ದಾರಿಗೆ ಕೊಟ್ಟಿದ್ದಾರೆ. ಈ ವರ್ಷ ಇನ್ನೂ ಹೆಚ್ಚಾಗಿ ಕೊಡತಕ್ಕ ಸಂದರ್ಭವಿದೆ. ಅದಕ್ಕೆ ಪ್ರಯತ್ನ ಮಾಡಿದ್ದೇವೆ. ಸೆಂಟ್ರಲ್ ರಿಸರ್ವ್ ಫಂಡ್‌ನಲ್ಲಿ ರೋಡುಗಳಿಗೆ ಕಳೆದಸಾರಿ ೬ನೇ ಪ್ಲಾನ್ ಪಿರೀಡ್‌ನಲ್ಲಿ ಸುಮಾರು ೧೬೫೮.೬೧ ಲಕ್ಷ ರೂಪಾಯಿಗಳನ್ನು ನಮಗೆ ಸೇರಿಸಿದ್ದಾರೆ. ಇದರಲ್ಲಿ ನಾವು ಮತ್ತೊಂದು ಕಾರ್ಯಕ್ರಮದ ಪಟ್ಟಿಯನ್ನು ಕಳಿಸುತ್ತಾ ಇದ್ದೇವೆ. ಸುಮಾರು ೮ ಕೋಟಿಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲೂ ಪ್ರಮುಖವಾದಂಥ ಕೆಲಸಗಳನ್ನು ಆಯ್ಕೆ ಮಾಡಿದ್ದೇವೆ. ಅದರಲ್ಲೂ ಕೂಡ ಈ ಸದನದ ಮಾನ್ಯ ಸದಸ್ಯರ ಸಲಹೆ ಮೇರೆಗೆ ಕೆಲವು ಮುಖ್ಯವಾದಂಥ ರಸ್ತೆಗಳನ್ನು ಮತ್ತು ದೊಡ್ಡ ದೊಡ್ಡ ಸೇತುವೆಗಳನ್ನು ಅದರಲ್ಲೂ ಹೆಚ್ಚು ಖರ್ಚಿನಿಂದ ಕಟ್ಟತಕ್ಕಂಥ ಕೆಲಸಗಳು ಯಾವುವು ಇದ್ದಾವೆ, ಆ ಕೆಲಸಗಳನ್ನು ಪಟ್ಟಿಮಾಡಿ ಸೇರಿಸಿದೆ, ಮಾನ್ಯ ಸದಸ್ಯರಾದ ಬಾವಿಯವರು ಹೇಳಿರತಕ್ಕ ಸಿಂತಾಲೂರು ಸೇತುವೆಯೂ ಕೂಡ ಅದರಲ್ಲಿ ಸೇರಿದೆ. ಅದನ್ನೂ ಪಟ್ಟಿಮಾಡಿ ಕಳಿಸುತ್ತಾ ಇದ್ದೇವೆ. ಆದುದರಿಂದ ನಮಗೆ ಕಳೆದ ವರ್ಷಕ್ಕಿಂತ ಈ ಸಾರಿ ಹೆಚ್ಚು ಹಣ ಬರತಕ್ಕಂಥ ನಿರೀಕ್ಷೆ ಇದೆ. ಈ ವಿಷಯದಲ್ಲಿ ಅನೇಕ ಲೋಕಸಭಾ ಸದಸ್ಯರಲ್ಲೂ ಪ್ರಾರ್ಥನೆ ಮಾಡಿದ್ದೇನೆ. ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ದೊಡ್ಡ ದೊಡ್ಡ ರಸ್ತೆಗಳು ಯಾವುವು ಇದ್ದಾವೆ ಅವುಗಳನ್ನು ಮಂಜೂರಾತಿ ಮಾಡುವುದಕ್ಕೆ ಕೇಂದ್ರದಲ್ಲಿ ಸಾಕಷ್ಟು ಪ್ರಯತ್ನ ಮಾಡಬೇಕು ಎನ್ನತಕ್ಕಂಥ ಮಾತನ್ನು ಅವರಿಗೆ ಹೇಳಿದ್ದೇನೆ. ಈಗ ನಮ್ಮ ಲೋಕಸಭಾ ಸದಸ್ಯರು ಮತ್ತು ನಮ್ಮವರೇ ಆದಂಥ ಮಂತ್ರಿಗಳು ಅಲ್ಲಿರುವುದರಿಂದ ನಮಗೆ ಇವತ್ತು ಕೇಂದ್ರ ಸರ್ಕಾರದಿಂದ ಹೆಚ್ಚು ಹಣವನ್ನು ರಾಷ್ಟ್ರೀಯ ಹೆದ್ದಾರಿ ಬಗ್ಗೆ ಮತ್ತು ಸೆಂಟ್ರಲ್ ರೋಡ್ ಫಂಡ್ ಏನಿದೆ ಅದನ್ನು ಪಡೆಯತಕ್ಕ ನಂಬಿಕೆ ಮತ್ತು ವಿಶ್ವಾಸ ಇದೆ. ಅದಕ್ಕೆ ನಮ್ಮ ಸಂಘಟಿತವಾದ ಪ್ರಯತ್ನ ಬಹಳ ಮುಖ್ಯವಾಗಿ ಆಗಬೇಕಾಗಿದೆ. ಮಾನ್ಯ ಸದಸ್ಯರಾದ ರಾಮಯ್ಯನವರು ಬಳ್ಳಾರಿಯಲ್ಲಿ ಏರೋಡ್ರಾಂ ಬಗ್ಗೆ ಪ್ರಸ್ತಾಪ ಮಾಡಿದರು. ಆದರೆ ಏನಾಗಿದೆಯೆಂದರೆ, ಅಲ್ಲಿ ಸೂಚಿಸಿದಂಥ ಒಂದು ನಿವೇಶನ ಇದಕ್ಕೆ ಸೂಕ್ತವಾಗಿ ಕಂಡುಬರಲಿಲ್ಲ.

ಶ್ರೀ ಕೆ. ಭಾಸ್ಕರ ನಾಯ್ಡು.—ಹೀಗೆ ಹೇಳುತ್ತಾರೆ ಸ್ವಾಮಿ, ಇನ್ನೊಬ್ಬ ಮಿನಿಸ್ಟರ್ ಸೆಂಟ್ರಲ್‌ನಲ್ಲಿ ಬ್ರಾಡ್‌ಗೇಜ್ ಇಲ್ಲ ಎಂದು ಹೇಳಿದರು. ೧೯೬೯ರಲ್ಲೇ ಹೊಸಪೇಟೆ ತನಕ ಬ್ರಾಡ್‌ಗೇಜ್ ಇದೆ. In 1933 when first plane came to India it flew over Bombay, Ahamedabad, Bellary and on to Madras. Still Bellary has that runway. ಪಾಪ ಕಾಗೋಡು ತಿಮ್ಮಪ್ಪನವರು ತಿಳಿದುಕೊಳ್ಳದಹಾಗೆ ಜವಾಬು ಕೊಡುತ್ತಿದ್ದಾರೆ. I can tell you, there are two aerodromes. Saying that at Bellary there is no aerodrome is far from truth. One is post-military centre. Whenever the Chief Minister came, his helicopter used to be landed there. Now it has become very old. When first plane came to India carrying royal mail from Karachi to Madras it flew through Bellary also. I request the Hon'ble Minister to take steps to improve the existing runway and have an aerodrome.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೆ, ಅವನ್ನು ನಾವು ಕೈಬಿಟ್ಟಿಲ್ಲ. ಇವರು ತೋರಿಸಿ ದಂಥ ಜಾಗ ಸರಿಯಲ್ಲ ಎಂದು ಹೇಳಿದ್ದರಿಂದ ಮತ್ತೆ ಡೆಪ್ಯುಟಿ ಕಮಿಷನರ್‌ರವರು ಪರಿಶೀಲನೆ ಮಾಡುವು ದಕ್ಕೆ ಅದನ್ನು ಕಳಿಸಿದೆ, ಮುಕ್ತಾಯ ಮಾಡಿಲ್ಲ. ಅದೇ ರೀತಿಯಲ್ಲಿ ರೈಲ್ವೆ ಲೈನ್‌ಗಳ ಬಗ್ಗೆ ಈಗಾಗಲೇ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದಿದ್ದೇನೆ. ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗಿರತಕ್ಕ ರೈಲ್ವೆ ಲೈನ್ ಅರಸೀಕೆರೆ-ಮೈಸೂರು, ಹಾಸನ-ಬೆಂಗಳೂರು, ಬೀರೂರು-ತಾಳಗುಪ್ಪ, ಮೈಸೂರು-ಚಾಮರಾಜನಗರ ಮತ್ತು ಚಿಕ್ಕಜಾಜೂರು-ಚಿತ್ರದುರ್ಗ ಈ ಲೈನುಗಳನ್ನು ಬ್ರಾಡ್‌ಗೇಜಾಗಿ ಕನ್‌ವರ್ಟ್ ಮಾಡುವ ದೃಷ್ಟಿಯಿಂದ ಸರ್ವೆ ಕೆಲಸ ಪ್ರಾರಂಭವಾಗಿದೆ. ಇದು ಸುಮಾರು ೨ ವರ್ಷಗಳಲ್ಲಿ ಪೂರ್ಣ ವಾಗಬಹುದು ಎನ್ನತಕ್ಕ ನಿರೀಕ್ಷಣೆ ಕೂಡ ಇದೆ, ಇದರ ಜೊತೆಯಲ್ಲಿ ಹೊಸ ಮಾರ್ಗಗಳನ್ನೂ ಕೂಡ ತೆಗೆದುಕೊಳ್ಳಬೇಕು ಎಂದು ಒತ್ತಾಯ ಮಾಡಿದ್ದೇವೆ. ಈ ಸನ್ನಿವೇಶದಲ್ಲಿ ಕರ್ನಾಟಕದವರೇ ಆದಂಥ ರೈಲ್ವೆ ಮಂತ್ರಿಗಳು ಇರುವಾಗ್ಯೆ ನಮ್ಮ ಬೇಡಿಕೆಗೆ ಹೆಚ್ಚು ಮಾನ್ಯತೆ ಸಿಗುತ್ತದೆ ಹೆಚ್ಚು ಮಾರ್ಗಗಳೂ ಸಿಗಬಹುದು ಎನ್ನತಕ್ಕ ನಿರೀಕ್ಷಣೆ ಕೂಡ ಇದೆ. ಅದೇರೀತಿ ಹಿಂದೆ ಕೂಡ ಬೀರೂರು-ಭಟ್ಕಳ ಲೈನನ್ನು ವೆಸ್ಟ್‌ಕೋಸ್ಟ್‌ಗೆ ಕನೆಕ್ಟ್ ಮಾಡುವ ದೃಷ್ಟಿಯಿಂದ ಇದನ್ನು ಮಾಡಬೇಕು ಎಂದು ೧೯೭೯ರಲ್ಲಿ ಆಗಿದ್ದಂಥ ರೈಲ್ವೆ ಮಂತ್ರಿಗಳು ಆಶ್ವಾಸನೆ ನೀಡಿದ್ದರು, ಇದನ್ನೂ ಕೂಡ ಮುಂದುವರಿಸುವುದಕ್ಕೆ ಪ್ರಯತ್ನವನ್ನು ನಡೆಸಿದ್ದೇವೆ. ಆದುದರಿಂದ ಈ ಬಗ್ಗೆ ಮಾನ್ಯ ಸದಸ್ಯರು ಕೊಟ್ಟಂಥ ಸಲಹೆಗಳನ್ನು ಗಮನದಲ್ಲಿಟ್ಟು ಕೊಂಡು ಹೊಸ ರಸ್ತೆಗಳನ್ನು ಮತ್ತು ಹೊಸ ರೈಲ್ವೆ ಮಾರ್ಗಗಳನ್ನು ತೆಗೆದುಕೊಳ್ಳುವ ಬಗ್ಗೆ ಹಿಂದೆ ಇದ್ದಂಥ ಕೆಲವು ಸಲಹೆಗಳನ್ನು ಮತ್ತು ಈಗ ಮಾನ್ಯ ಸದಸ್ಯರು ಕೊಟ್ಟಂಥ ಸಲಹೆಗಳನ್ನೂ ಕ್ರೋಢೀ ಕರಿಸಿ ಕೇಂದ್ರಸರ್ಕಾರದಲ್ಲಿ ನಮ್ಮ ಮನವಿಯನ್ನು ಸಲ್ಲಿಸಬೇಕು, ಬೇಡಿಕೆಯನ್ನು ಇಡಬೇಕು ಎನ್ನತಕ್ಕಂಥ ತೀರ್ಮಾನವನ್ನು ನಾವು ಮಾಡಿದ್ದೇವೆ. ಅದಕ್ಕೆ ಒಂದು ಸಮಗ್ರವಾದಂಥ ಕಾರ್ಯಕ್ರಮವನ್ನು ರೂಪಿ ಸುತ್ತೇವೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ, ಮಾನ್ಯ ಸದಸ್ಯರು ಆ ಸನ್ನಿವೇಶದಲ್ಲಿ ಯಾವ ಹೆಸರನ್ನು ಸೂಚಿಸಬೇಕೋ ಅದನ್ನು ಸೂಚಿಸಿದರೆ ಅದರಲ್ಲಿ ಅಳವಡಿಸಿ, ನಾವು ಕೊಡತಕ್ಕಂಥ ಮನವಿಯಲ್ಲಿ ಸೇರಿಸಿ ಕಳಿಸತಕ್ಕಂಥ ಪ್ರಯತ್ನವನ್ನು ನಾವು ಮಾಡುತ್ತೇವೆ. ಮಾನ್ಯ ಅಧ್ಯಕ್ಷರೆ, ಇಷ್ಟು ಮಾತುಗಳನ್ನು ಹೇಳಿ, ಮಾನ್ಯ ಸದಸ್ಯರು ಅನೇಕರು ಕೆಲವು ಪ್ರತ್ಯೇಕವಾದಂಥ ಕೆಲಸಕಾರ್ಯಗಳಿಗೆ ಸಂಬಂಧಪಟ್ಟಂಥ ಮಾತನ್ನು ಹೇಳಿದ್ದಾರೆ. ಆ ಕೆಲಸಕಾರ್ಯಗಳನ್ನು ಮಾಡಿಸಿಕೊಡತಕ್ಕ ದೃಷ್ಟಿಯಲ್ಲಿ ನಾವು ಪ್ರಯತ್ನ ಮಾಡುತ್ತೇವೆ. ಅದರಲ್ಲೂ ನಮ್ಮ ಪರಪ್ಪನವರು ರಸ್ತೆಗಳನ್ನು ಮಾಡಲೇಬೇಕು ಎಂದು ಪಟ್ಟಿಯನ್ನು ಕೊಟ್ಟಿದ್ದಾರೆ. ಅವರು ಹೇಳಿರತಕ್ಕ ರಸ್ತೆಗಳು ದೊಡ್ಡ ಪ್ರಮಾಣದ ರಸ್ತೆಗಳಲ್ಲ. ಬಹುಶಃ ಈ ರಸ್ತೆಗಳನ್ನು ಹಿಂದೆ ಪಟ್ಟಿಯಲ್ಲಿ ಸೇರಿಸಿದ್ದರೆ ಅದು ಸುಲಭವಾಗಿ ಸೇರುತ್ತವೆ. ಮತ್ತೆ ಮಾನ್ಯ ಸದಸ್ಯರು ಕೆಲವು ಕೆಲಸಗಳ ಬಗ್ಗೆ ನಮ್ಮ ಗಮನವನ್ನು ಸೆಳೆದಿದ್ದಾರೆ. ಅವುಗಳನ್ನು ಗಮನ ದಲ್ಲಿಟ್ಟುಕೊಂಡು ಕೆಲಸಗಳನ್ನು ಮಾಡಿಸತಕ್ಕ ಪ್ರಯತ್ನವನ್ನು ನಾವು ಮಾಡುತ್ತೇವೆ. ಒಟ್ಟಿನಲ್ಲಿ ಮಾನ್ಯ ಸದಸ್ಯರು ಕೊಟ್ಟಂಥ ಸಲಹೆ, ಅದು ಟೀಕೆಯಾಗಿದ್ದರೂ ಕೂಡ ಸರ್ಕಾರ ಹೋಗತಕ್ಕ ಮಾರ್ಗ ದಲ್ಲಿ ಒಂದು ಮಾರ್ಗದರ್ಶನ ಎಂದು ನಾವು ತಿಳಿದುಕೊಂಡಿದ್ದೇವೆ. ಮಾನ್ಯ ಸದಸ್ಯರ ಸಲಹೆ ಮತ್ತು ಸಹಕಾರದೊಂದಿಗೆ ಈ ಇಲಾಖೆಗೆ ಒಂದು ಹೊಸ ದೃಷ್ಟಿಕೋನ ತರುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಿ ಈ ಒಂದು ಬೇಡಿಕೆಗೆ ಈ ಸದನ ಅನುಮತಿ ಕೊಡಬೇಕು ಎಂದು ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಎ. ಚಂದ್ರೇಗೌಡ.—ನಾನು ತಮ್ಮ ಅಪ್ಪಣೆ ಮೇರೆಗೆ ಸುಮಾರು ೩೦ ನಿಮಿಷಗಳ ಕಾಲ ಮಾತನಾಡಿದೆ. ಮಂತ್ರಿಗಳ ರಿಕಾರ್ಡ್‌ನಲ್ಲಿ ನನ್ನ ಕೆಲವು ಸಲಹೆಗಳು ಇಲ್ಲ ಎಂದು ಕಾಣುತ್ತದೆ. ನಾನು ಇನ್ನೂ ಅನೇಕ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದೇನೆ, ಅದರ ಬಗ್ಗೆ ಉತ್ತರ ಬಂದಿಲ್ಲ. ತಾಲ್ಲೂಕು ಬೋರ್ಡ್ ಒಂದೊಂದು ಡಿವಿಜನ್‌ನಲ್ಲಿ ೮-೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇರುವಾಗ ತಾವು ಕೊಡತಕ್ಕಂಥ ಒಂದು ಲಕ್ಷ ೭೦ ಸಾವಿರ ರೂಪಾಯಿ ಯಾವ ಮೂಲೆಗೂ ಅಲ್ಲ, ಅದನ್ನು ಹೆಚು ಮಾಡಬೇಕು ಎಂದು ಹೇಳಿದ್ದೇನೆ. ಹೆದ್ದಾರಿಯನ್ನು ಆರಿಸುವಾಗ ಅರಸೀಕೆರೆವರೆಗೆ ಮಾತ್ರ ತೆಗೆದು ಕೊಂಡು ಹೋಗಿದ್ದೀರಿ, ಮುಂದಕ್ಕೆ ಕಡೂರು ಮತ್ತು ಮಂಗಳೂರಿಗೆ ಕನೆಕ್ಷನ್ ಕೊಡತಕ್ಕ ಬಗ್ಗೆ ಯಾರೂ ತಮಗೆ ಸಲಹೆ ಕೊಡಲಿಲ್ಲವೇನೋ. ಮಲೆನಾಡಿಗೆ ತಾವು ಬ್ಲಾಕ್ ಕಾಟನ್ ಸಾಯಿಲ್‌ಗೆ ೪೦ ಪರ್ಸೆಂಟ್ ಮಾಡಿದ್ದೀರಿ, ಅದು ಕಡಿಮೆ, ೪೦ ಪರ್ಸೆಂಟ್ ಈಕ್ವಲ್ಲಾಗಿ ಬ್ಲಾಕ್ ಕಾಟನ್ ಸಾಯಿಲ್‌ಗೆ ತೆಗೆದುಕೊಂಡಿದ್ದು, ಹೆಚು ಪರ್ಸೆಂಟೇಜ್ ತೆಗೆದುಕೊಂಡು ಮಲೆನಾಡಿನ ಇಂಪ್ರೂವ್‌ಮೆಂಟ್‌ಗೆ ಕೂಡ

ಬೇಕು ಎಂದು ಹೇಳಿದ್ದೇನೆ. ಇದರ ಬಗ್ಗೆ ಉತ್ತರ ಕೊಡಬೇಕು. ಮತ್ತು ಅಧಿಕಾರಿಗಳಿಗೆ ಏನು ಪವರ್ ಡೆಲಿಗೇಟ್ ಮಾಡಿದಿರಿ ಅದನ್ನು ಡೀಸೆಂಟ್ರಲೈಸ್ ಮಾಡಬೇಕು, ಸೆಟ್‌ರೈಟ್ ಮಾಡಬೇಡಿ, ಈ ಚೀಫ್ ಇಂಜಿನಿಯರ್‌ಗೆ ೨ ಲಕ್ಷ ರೂಪಾಯಿವರೆಗೆ ಕೊಡತಕ್ಕಂಥ ಪವರ್ ಏನಿದೆ ಅದನ್ನು ಎಗ್ಸಿಕ್ಯೂಟೀವ್ ಇಂಜಿನಿಯರ್ ಲೆವಲ್‌ಗೆ ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರ್ ಲೆವೆಲ್‌ಗೆ ಕೊಟ್ಟರೆ ಆದಷ್ಟು ಜಾಗ್ರತೆ ಕೆಲಸ ಕಾರ್ಯಗಳು ನಿರೀಕ್ಷಿಸಿದ ಮಟ್ಟಿಗೆ ಆಗುತ್ತವೆ ಎಂದು ಹೇಳಿದ್ದೇನೆ. ಈ ೪ ಪ್ರಶ್ನೆಗಳಿಗೆ ತಾವು ಉತ್ತರ ಹೇಳಬೇಕು.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—ಅಧ್ಯಕ್ಷರೇ, ಕೇವಲ ಎರಡು ವಿಚಾರಗಳ ಬಗ್ಗೆ ಮಾನ್ಯ ಮಂತ್ರಿಗಳವರ ಗಮನವನ್ನು ಸೆಳೆಯಬಯಸುತ್ತೇನೆ. ಶಾಸಕರ ಭವನದ ನಿರ್ಮಾಣದಲ್ಲಿ ಅವ್ಯವಹಾರ ಮೇಲ್ನೋಟಕ್ಕೆ ಕಾಣಿಸುವುದಿಲ್ಲವೆಂದು ಸಚಿವರು ಹೇಳಿದರು. ಅವ್ಯವಹಾರಗಳು ಮೇಲ್ನೋಟಕ್ಕೆ ಕಾಣಿಸುವುದಿಲ್ಲ, ಇಣುಕಿ ನೋಡಿದರೆ ಕಾಣಿಸುವುದು. ನಾನು ಈ ಮಾತನ್ನು ಜವಾಬ್ದಾರಿಯುತವಾಗಿ ಹೇಳುತ್ತಿದ್ದೇನೆ, ಶಾಸಕರ ಭವನದ ನಿರ್ಮಾಣದ ಬಗ್ಗೆ ೩ ವರ್ಷಗಳಿಂದ ಬಡ್ಜೆಟ್‌ನಲ್ಲಿ ಪ್ರಿಂಟ್ ಆಗುತ್ತಾ ಬರುತ್ತಿರುವುದನ್ನು ನೋಡುತ್ತಿದ್ದೇವೆ. ಮೊದಲನೆಯ ವರ್ಷದ ಬಡ್ಜೆಟ್‌ನಲ್ಲಿ ೬೦ ಲಕ್ಷ ರೂ. ನಮೂದಾಗಿದೆ, ಎರಡನೆಯ ವರ್ಷದಲ್ಲಿ ೧೨೫ ಲಕ್ಷ ರೂ, ಗಳಿಗೆ ಬಂದಿದೆ ಈಗ ೩ನೇ ವರ್ಷಕ್ಕೆ ಅದು ೧೯೫ಕ್ಕೆ ಬರುತ್ತದೆಂದು ಹೇಳಿದ್ದೆ ಆದಕ್ಕೆ ಮಂತ್ರಿಗಳವರು ೧೪೪ಕ್ಕೆ ಬರಬಹುದೆಂದು ಹೇಳಿದ್ದಾರೆ. ಆದರೆ ಅದು ಅಷ್ಟಕ್ಕೆ ನಿಲ್ಲುವುದು ಗ್ಯಾರಂಟಿ ಇದೆಯೇ ? ೧೪೪ ಲಕ್ಷಕ್ಕೆ ಗ್ಯಾರಂಟಿಯಾಗಿ ನಿಲ್ಲುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಈಗ ನಡೆದಿರತಕ್ಕಂಥ ಅವ್ಯವಹಾರದೊಳಗೆ ಇಣುಕಿ ನೋಡಿದರೆ ಅವ್ಯವಹಾರ ಏನು ನಡೆದಿದೆಂಬುದನ್ನು ಪತ್ತೆ ಹಚ್ಚುವುದಕ್ಕೆ ಸಾಧ್ಯವಾಗುತ್ತದೆ. ಬಿ.ಡಿ.ಎ. ನಲ್ಲಿ ೨೦ ಲಕ್ಷ ರೂ. ಗಳ ಸಿಮೆಂಟ್ ಅವ್ಯವಹಾರವಾಯಿತು ಎಂದಾಗ ದೊಡ್ಡದಾಗಿ ತನಿಖೆ ಮಾಡಿರುತ್ತೀರಾ ಸಿ.ಒ.ಡಿ.ಗೆ ರೆಫರ್ ಮಾಡುತ್ತೀರಾ ಆದರೆ ವಿಧಾನ ಸೌಧದ ಪಕ್ಕದಲ್ಲಿರುವ ಶಾಸಕರ ಭವನದಲ್ಲಿ ನಡೆಯುತ್ತಿರತಕ್ಕ ಅವ್ಯವಹಾರಗಳನ್ನು ಪತ್ತೆ ಹಚ್ಚುವುದಕ್ಕಾಗುವುದಿಲ್ಲವೇ ? ಇನ್ನು ಕೊನೆಯದಾಗಿ ೧೯೭೪ನೇ ಇಸ್ವಿಯಲ್ಲಿ ಸಾವಿರಾರು ಗುತ್ತಿಗೆದಾರರಿಂದ ಸರ್ಕಾರ ಸಾಮಗ್ರಿಗಳನ್ನು ಬೆಲೆ ಬಾಳುವ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆಂದು ಹೇಳಿದ್ದಾರೆ. ಈಗ ಅದರಲ್ಲಿ ಯಾವಯಾವ ಗುತ್ತಿಗೇದಾರರಿಗೆ ಹಣವನ್ನು ವಾಪಸ್ಸು ಕೊಟ್ಟಿದ್ದೀರಿ ? ಈ ೮ ವರ್ಷಗಳಲ್ಲಿ ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ ಸ್ವಾಮಿ ?

ಶ್ರೀ ವಿ. ಬಿ. ಭಾವೆ.—ಇಂಜಿನಿಯರ್‌ಗಳ ಬಗ್ಗೆ ರಹಸ್ಯ ವರದಿಯನ್ನು ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರ ತರಿಸಿಕೊಳ್ಳುತಿದೆ. ಇದರಿಂದ ತಪಿತಸ್ಥರನ್ನು ಹಿಡಿದು ವಿಚಾರಣೆ ಮಾಡುತ್ತೇವೆಂದು ಉತ್ತರವನ್ನು ಮಾನ್ಯ ಮಂತ್ರಿಗಳವರು ಕೊಟ್ಟರು. ಆದರೆ ನಾನು ಕೇಳುತ್ತೇನೆ ಇವತ್ತಿನ ದಿವಸ ನೀವು ಹೀಗೆ ಮಾಡುವುದರಿಂದ, ಜಿಲ್ಲಾಧಿಕಾರಿಗಳವರು ಅಧಿಕಾರಿಗಳ ಬಗ್ಗೆ ಈ ರೀತಿಯ ರಹಸ್ಯ ವರದಿಯನ್ನು ಕಳುಹಿಸುವುದರಿಂದ ಅವರ ನೈತಿಕ ಅತಃಪತನವಾಗುವುದಿಲ್ಲವೇ ಆದರಿಂದ ಅವರಿಗೆಲ್ಲಾ ಅಸಮಧಾನವಾಗುವುದಿಲ್ಲವೇ ? I want a definite answer from the Hon. Minister.

MR. SPEAKER.—You cae talk to the Minister in his chamber. Writing of confidential reports by Deputy Commissioners, is a policy matter.

SRI V. B. BHAVI.—Even though it is a policy matter, it demoralises the engineers. Now, therefore, the Minister is bound to act upon it.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ, ನಿನ್ನೆ ನಾನು ಮಾತನಾಡುತ್ತಾ ಕೌಶಿಕ ರೈಲ್ವೆ ಗೇಟ್ ಬಗ್ಗೆ ಪ್ರಸ್ತಾಪ ಮಾಡಿ ಹೇಳಿದೆ. ಇದರ ಬಗ್ಗೆ ೧೧ ವರ್ಷಗಳಿಂದ ವ್ಯವಹಾರ ನಡೆಯುತ್ತಿದೆ, ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಮಾನ್ಯ ಮಂತ್ರಿಗಳವರಿಗೂ ಮನವಿಯನ್ನು ಸಲ್ಲಿಸಿದ್ದೇವೆ. ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರನ್ನೂ ಸಹ ರಿಕ್ವೆಸ್ಟ್ ಮಾಡಿಕೊಂಡ ಅವರು ಸಹ ಏನೂ ಉತ್ತರ ಹೇಳಲಿಲ್ಲ.

ಅಧ್ಯಕ್ಷರು.—ಹಗಲು ಹೊತ್ತು ಎಲ್ಲಾ ಚೆನ್ನಾಗಿ ಕೆಲಸ ಮಾಡುತ್ತಾನೆ, ರಾತ್ರಿ ಹೊತ್ತು ಅಲ್ಲಿ ಓಡಾಡತಕ್ಕಂಥ ವಾಹನಗಳಿಗೆ ತೊಂದರೆಯುನ್ನುಂಟು ಮಾಡುತ್ತಿದ್ದಾನೆ ಎಂದು ಪ್ರಸ್ತಾಪ ಮಾಡಿ ಹೇಳಿದ್ದಾರೆ. ಅದೇನೆಂಬುದನ್ನು ತಾವು ಸ್ವಲ್ಪ ಗಮನಿಸಿ.

ಶ್ರೀ ಕಾಗೋಡು ತಿಮ್ಮಪ್ಪ.--ನಾವು ಇದರ ಬಗ್ಗೆ ರೈಲ್ವೆ ಇಲಾಖೆಯವರೊಂದಿಗೆ ವ್ಯವಹಾರ ನಡೆಸಿದ್ದೇವೆ. ಇದಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಎಂದೆಲ್ಲಾ ಕೇಳಿದ್ದೇವೆ ಆದರೆ ಅವರಿಂದ ಉತ್ತರ ಬರುತ್ತಿಲ್ಲ. ಅದಕ್ಕೆ ಎಷ್ಟು ಹಣ ಖರ್ಚಾದರೂ ನಾವು ಖರ್ಚು ಮಾಡುವುದಕ್ಕೆ ತಯಾರಿದ್ದೇವೆ.

ಅಧ್ಯಕ್ಷರು.--ರಾತ್ರಿ ಹೊತ್ತು ರೈಲ್ವೇ ಗೇಟನ್ನು ಹಾಕಿ ತೊಂದರೆಯುನ್ನುಂಟು ಮಾಡುತ್ತಿದ್ದಾರೆಂದು ಸರ್ಕಾರದ ಗಮನಕ್ಕೆ ತಂದಿದ್ದಾರೆ ಆದುದರಿಂದ ಅದನ್ನು ತಾವು ಸ್ವಲ್ಪ ವಿಚಾರ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ.--ಅದನ್ನು ಮಾಡಿಸುತ್ತೇನೆ.

SRI PRABHAKAR TELKAR.--Sir, I want a clarification regarding services of employees in this Department. Backward classes and minorities people are not being promoted, earlier. If you want to promote them, you have to create 40-50 vacancies. If there is any promotional vacancy, backward class or SC/ST cannot get it because they will have to maintain 40 to 50 promotions. Why these Backward class and SC/ST people have to wait for years together ? Therefore will the Government pass an order to effect promotion immediately whenever some vacancies arise ? Sir another thing with regard to completion of railway crossing work at Chitapur. Necessary works on the part of Railway Department has been fully done. Some works pertaining to State Government is not yet commenced. So, I request the hon. Minister to immediately pass orders to this effect.

ಶ್ರೀ ಜಿ. ಕೆ. ತಕ್ಕೇಡ್.--ಅಧ್ಯಕ್ಷರೇ, ಪಶ್ಚಿಮ ಘಟ್ಟದ ಯೋಜನೆಗೆ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿದೆ ಮತ್ತು ಯಾವಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದಾರೆನ್ನುವ ವಿವರವನ್ನು ತಿಳಿಸುತ್ತಾರೆಯೋ ?

ಶ್ರೀ ಕಾಗೋಡು ತಿಮ್ಮಪ್ಪ.--ಅದರ ಬಗ್ಗೆ ಈಗ ನನ್ನ ಹತ್ತಿರ ಮಾಹಿತಿ ಇಲ್ಲ. ಆದರೆ ನಮ್ಮ ಇಲಾಖೆಗೆ ಸುಮಾರು ೩೩ ಲಕ್ಷ ರೂ. ಗಳನ್ನು ೧೯೮೧-೮೨ಕ್ಕೆ ಕೊಟ್ಟಿದ್ದಾರೆ ಅದರಲ್ಲಿ ೨೨ ಲಕ್ಷ ರೂ. ಗಳನ್ನು ಕಾಲುವೆ, ಸೇತುವೆ ನಿರ್ಮಾಣಕೋಸ್ಕರಕೊಟ್ಟಿದ್ದೇವೆ. ಆ ಒಂದು ಕಾರ್ಯಕ್ರಮವನ್ನು ಈಗಾಗಲೇ ನಾವು ನಿರ್ವಹಿಸಿದ್ದೇವೆ.

ಶ್ರೀ ಜಿ. ಕೆ, ತಕ್ಕೇಡ್--ನಮ್ಮ ತಾಲ್ಲೂಕಿಗೆ ಎಷ್ಟೆಷ್ಟು ಹಣವನ್ನು ಒದಗಿಸಿದ್ದೀರಿ, ಸವದತ್ತಿ, ಖಾನಾಪುರ ತಾಲ್ಲೂಕ್‌ಗಳಿಗೆ ಎಷ್ಟು ಕೊಟ್ಟಿದ್ದೀರಿ ಸ್ವಾಮಿ ?

ಶ್ರೀ ಕಾಗೋಡು ತಿಮ್ಮಪ್ಪ.--ಅದನ್ನು ಬೇಕಾದರೆ ಪ್ರತ್ಯೇಕವಾಗಿ ಕಳುಹಿಸಿಕೊಡುತ್ತೇನೆ. ಅಷ್ಟು ದೀರ್ಘವಾಗಿ ವಿವರಣೆ ಕೊಡಬೇಕೆಂದರೆ ತುಂಬಾ ಸಮಯಬೇಕಾಗುತ್ತದೆ. ಮತ್ತೆ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರರೆಡ್ಡಿಯವರು ಏನು ಪ್ರಸ್ತಾಪ ಮಾಡಿ ಹೇಳಿದರು ಅದರ ಬಗ್ಗೆ ನಾನು ಈಗಾಗಲೇ ಪ್ರಸ್ತಾಪ ಮಾಡಿ ಹೇಳಿದ್ದೇನೆ, ಇದರಲ್ಲಿ ಏನೂ ಇರತಕ್ಕಂಥ ಇಶ್ಯುವನ್ನು ಕ್ಲೋಸ್ ಮಾಡ ತಕ್ಕಂಥಾದ್ದು ಇಲ್ಲ. ಅವರಿಗೆ ಅದರಲ್ಲಿ ಏನಾದರೂ ಸಂಶಯ ಬಂದಿದ್ದರೆ, ಅಥವಾ ಏನಾದರೂ ಮಾಹಿತಿ ಇದ್ದರೆ ಅದನ್ನು ಕೊಟ್ಟರೆ ನಾನು ಡಿಟೇಲ್ ಆಗಿ ಇನ್‌ವೆಸ್ಟಿಗೇಷನ್ ಮಾಡಿಸುತ್ತೇನೆ. There is no question of hiding it. But, I want further information from the hon. Member. I am prepared to discuss with him. ನಮ್ಮ ಶ್ರೀ ಸಿ. ಎ. ಚಂದ್ರೇಗೌಡರವರು ಮಾತನಾಡುತ್ತಾ, ವಿಶೇಷವಾಗಿ ಶ್ರೀಮಾನ್ ಆರ್ಮುಗಂರವರು ಇಲ್ಲವೇ

ಶ್ರೀ ದೇವೇಗೌಡರವರು ಪ್ರಸ್ತಾಪ ಮಾಡಿದ ವಿಷಯಗಳಿಗೇ ಲಕ್ಷ್ಯ ಕೊಟ್ಟು ಹೇಳುತ್ತೀರಾ, ನಾವು ಹೇಳಿದ್ದನ್ನು ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ ಎನ್ನತಕ್ಕ ಮಾತನ್ನು ಹೇಳಿದರು, ಅದು ಹಾಗಲ್ಲ. ಸ್ವಾಭಾವಿಕವಾಗಿ ಏನಾಗುತ್ತದೆ ಎಂದರೆ ಈ ಸದನದಲ್ಲಿ ಎಲ್ಲಾ ವಿಷಯವನ್ನು ವಿವರವಾಗಿ ಹೇಳುವುದಕ್ಕೆ ೩ ಗಂಟೆಗಳ ಕಾಲ ಬೇಕಾಗುತ್ತದೆ. ಪ್ರತಿಯೊಬ್ಬರ ಸಲಹೆಗೂ ಉತ್ತರ ಕೊಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ದೊಡ್ಡದೊಡ್ಡ ವಿಷಯಗಳನ್ನು, ಅದರಲ್ಲೂ ಪ್ರಾಮುಖ್ಯವಾಗಿರತಕ್ಕಂಥ ಪ್ರಶ್ನೆಗಳಿಗೆ ಉತ್ತರಕೊಟ್ಟು ಮಿಕ್ಕ ಸಲಹೆಗಳನ್ನು ನಾವು ಮರೆಯುತ್ತೇವೆ ಎನ್ನತಕ್ಕ ಭಾವನೆ ಇರಕೂಡದು. ಆದುದರಿಂದ ನಾವು ಮಂತ್ರಿಗಳಾದವರು ಉತ್ತರ ಕೊಡತಕ್ಕಂಥ ವಿರೋಧ ಪಕ್ಷದವರಿಗೆ ಮುಖ್ಯವಾದ ಗಮನವನ್ನು ಕೊಟ್ಟು ಉತ್ತರ ಹೇಳಬೇಕಾಗುತ್ತದೆ ಅದು ಒಂದು ಸಂಪ್ರದಾಯ. ಆದುದರಿಂದ ಇದರಲ್ಲಿ ವಿರೋಧ ಪಕ್ಷದವರು ಕೊಡತಕ್ಕಂಥ ಸಲಹೆ ಸೂಚನೆಗಳಿಗೆ ಹೆಚ್ಚಿನ ಮಹತ್ವ ಕೊಡಬೇಕು ಎನ್ನುವ ಉದ್ದೇಶವೇ ಹೊರತು ಆಳುವ ಪಕ್ಷದವರು ಕೊಡುವ ಸಲಹೆಗಳಿಗೆ ಸಲಹೆಗಳನ್ನು ಲಘುವಾಗಿ ಗಮನಿಸಬೇಕು ಎನ್ನುವ ಉದ್ದೇಶವಿಲ್ಲ. ಆದುದರಿಂದ ಅಧ್ಯಕ್ಷರೇ ಅವರು ಕೊಟ್ಟಂಥ ಎಲ್ಲಾ ಸಲಹೆಗಳನ್ನೂ ಸಹ ಗಮನದಲ್ಲಿಟ್ಟುಕೊಳ್ಳಲಾಗಿದೆ. ೩೦ ಲಕ್ಷ ರೂ. ಗಳನ್ನು ಆಸ್ಫಾಲ್ಟಿಂಗ್‌ಗೆ ಕೊಡುತ್ತಿದ್ದೇವೆ ಅದು ಕಡಿಮೆ ಏನೂ ಸಾಕಾಗುವುದಿಲ್ಲವೆಂದು ಹೇಳಿದರು. ಅದಕ್ಕೆ ನಾವು ಹೋದ ವರ್ಷದಿಂದ ಆಸ್ಫಾಲ್ಟಿಂಗ್‌ಗೆ ದುಡ್ಡನ್ನು ಹೆಚ್ಚಿಸಬೇಕು ಎನ್ನತಕದರ ಬಗ್ಗೆ ಪ್ರಯತ್ನವನ್ನು ಈಗಾಗಲೇ ಮಾಡಿದ್ದೇವೆ. ಇದರ ಜೊತೆಯಲ್ಲಿ ಅವರು ವೆಸ್ಟ್ರನ್ ಘಾಟ್ ಯೋಜನೆಯಿಂದಲೂ ಅವರು ಹೆಚ್ಚಿನ ಹಣವನ್ನು ತೆಗೆದುಕೊಂಡಿದ್ದಾರೆ, ಇದೇ ರೀತಿ ಶ್ರೀಮತಿ ವೋಟಮ್ಮನವರ ಕ್ಷೇತ್ರವಾದ ಮಲೆನಾಡು ಪ್ರದೇಶದಲ್ಲಿ ಸಹ ಶೇಕಡ ೪೦ ರಷ್ಟು ಜಾಸ್ತಿ ಕೊಡಬೇಕೆಂದು ಹೇಳಿದ್ದಾರೆ, ಈಗಾಗಲೇ ೨೫ ಪರ್ಸೆಂಟ್ ಕೊಡುತ್ತಿದ್ದೇವೆ. ಮತ್ತು ಇನ್ನು ಅನೇಕ ಮಾನ್ಯ ಸದಸ್ಯರುಗಳು ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ನಮ್ಮ ಶ್ರೀ ಅರಕೇರಿಯವರು ಮಾತನಾಡುತ್ತಾ ಹೈದರಾಬಾದ್ ಮತ್ತು ಬೆಳಗಾಂ ಮತ್ತು ಉತ್ತರ ಕನ್ನಡ ಭಾಗಗಳನ್ನು ಕಡೆಗಣಿಸಿದ್ದಾರೆಂದು ಹೇಳಿದರು. ನನ್ನ ಹತ್ತಿರ ಅದರ ಬಗ್ಗೆ ಅಂಕಿ ಅಂಶಗಳು ಇವೆ ಆ ರೀತಿಯಲ್ಲಿ ಆಗುವುದಕ್ಕೆ ಸಾಧ್ಯವಿಲ್ಲ. ಗುಲ್ಬರ್ಗ ಜಿಲ್ಲೆಯಲ್ಲಿ ೧೦೦೦ ಚದರ ಮೈಲಿ ರಸ್ತೆಗಳ ವಿಸ್ತೀರ್ಣ ಇರತಕ್ಕಂಥದ್ದು ಶೇಕಡಾವಾರು ೨೫ ಪರ್ಸೆಂಟ್ ಇದೆ ಅದೇ ಮಂಡ್ಯಾದಲ್ಲಿ ೧೧೧ ಪರ್ಸೆಂಟ್ ಇದೆ ಬೆಂಗಳೂರಿನಲ್ಲಿ ೧೧೭ ಪರ್ಸೆಂಟ್ ಆಗುತ್ತದೆ. ಇದು ಇರುವ ವಿಷಯ ಹೇಳಿದ್ದೇನೆ. ಇಷ್ಟು ವ್ಯತ್ಯಾಸವಿದೆ, ರಾಜ್ಯದಲ್ಲಿ ಇರತಕ್ಕಂಥ ಇಷ್ಟು ವ್ಯತ್ಯಾಸವನ್ನು ಸಾಧ್ಯವಾದಷ್ಟು ಮಟ್ಟಿಗೆ ತಡೆ ಹಾಕಬೇಕಾಗುತ್ತದೆ. ಒಂದೊಂದು ಕಡೆ ವಿಪರೀತವಾಗಿ ವ್ಯತ್ಯಾಸವಿರಬಹುದು. ಬರಗಾಲ ಬಂದಂಥ ಕಾಲದಲ್ಲಿ ಮಾನ್ಯ ಸ್ನೇಹಿತರುಗಳು ಹೇಳಿದ ಹಾಗೆ ಅಲ್ಲಿಗೆ ಹೆಚ್ಚಿನ ಮಹತ್ವ ಕೊಡತಕ್ಕದ್ದು ಇದೆ, ಆದೇ ರೀತಿ ಶಿವಮೊಗ್ಗಕ್ಕೆ ನಾನು ಅಲ್ಲಿಯ ಮಂತ್ರಿಯಾಗಿದ್ದೇನೆಂದು ಅಲ್ಲಿಗೆ ಹೆಚ್ಚಿನ ಗಮನ ಕೊಡತಕ್ಕಂಥದ್ದು ಸರಿಯಲ್ಲ.

೬-೦೦ ಪಿ.ಎಂ.

ಆದ್ದರಿಂದ, ಸ್ವಲ್ಪ ಹೆಚ್ಚು ಕಡಿಮೆ ಇರತಕ್ಕ ಹಣವನ್ನು ಸಮಾನವಾಗಿ ಹಂಚಲಾಗಿದೆ. ಅಲ್ಲಿ ರಸ್ತೆ ಪ್ರಮಾಣ ಕಡಿಮೆ ಇರುವುದರಿಂದ ಸಿಗತಕ್ಕ ಮೆಯಿಂಟೆನೆನ್ಸ್ ಗ್ರ್ಯಾಂಟ್ ಕೂಡ ಕಡಿಮೆಯಾಗುತ್ತದೆ. ಆದುದರಿಂದ ಅಲ್ಲಿಗೆ ಈ ವರ್ಷ ಹೆಚ್ಚಿನ ಪ್ರಮಾಣದಲ್ಲಿ ಹಣ ಕೊಡಬೇಕೆಂಬುದು ನನ್ನ ದೃಷ್ಟಿಯಲ್ಲಿದೆ. ಮಾನ್ಯ ಚಂದ್ರೇಗೌಡರು ಮಲೆನಾಡಿನ ಭಾಗಕ್ಕೆ ೪೦ ಪರ್ಸೆಂಟ್ ಹಣ ಕೊಡಬೇಕೆಂದು ಏನು ಹೇಳಿದ್ದಾರೆ ಅದನ್ನು ತಕ್ಷಣ ತೀರ್ಮಾನ ಮಾಡುವುದು ಕಷ್ಟವಾಗುತ್ತದೆ. ಏಕೆಂದರೆ ಬಯಲು ಸೀಮೆಯಲ್ಲಿ ಮಣ್ಣು ಹತ್ತಿರದಲ್ಲಿ ಸಿಗುವುದಿಲ್ಲ. ಅಲ್ಲಿ ರಸ್ತೆಗೆ ಮಣ್ಣು ತರಬೇಕೆಂದರೆ ಸುಮಾರು ೧೦-೨೦ ಮೈಲಿ ದೂರದಿಂದ ತರಬೇಕಾಗುತ್ತದೆ. ಹೀಗೆ ಮಲೆನಾಡಿನ ಪರಿಸ್ಥಿತಿಗೂ ಅಲ್ಲಿಗೂ ವ್ಯತ್ಯಾಸ ಇರುತ್ತದೆ. ಆದ್ದರಿಂದ, ಮಲೆನಾಡಿನ ಭಾಗಕ್ಕೆ ೨೫ ಪರ್ಸೆಂಟ್ ಕೊಡತಕ್ಕದ್ದು ಸಾದುವಾಗಿದೆಯೆಂದು ನನಗೆ ತೋರುತ್ತದೆ. ಇನ್ನು ಅದಕ್ಕಿಂತ ಹೆಚ್ಚು ಮಾಡುವ ಅಗತ್ಯ ಕಾಣುವುದಿಲ್ಲ. ಅದೇ ರೀತಿ ಮಾಸ್ಟರ್ ಪ್ಲಾನ್ ಬಗ್ಗೆ ಹೇಳಿದ್ದಾರೆ. ಅದರಲ್ಲಿ ನಾವು ೬೦೦ ಚಿಲ್ಲರೆ ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಕಳೆದ ವರ್ಷ ನಾಲ್ಕೂವರೆ ಸಾವಿರ ರೂಪಾಯಿಗಳನ್ನು ಒಂದೊಂದು ಸಣ್ಣ ಸೇತುವೆಗಳನ್ನು ಕಟ್ಟಲು ಖರ್ಚು ಮಾಡಿದ್ದೇವೆ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಮಾಸ್ಟರ್ ಪ್ಲಾನ್ ಜೀವಂತವಾಗಿದೆಯೆ?

ಶ್ರೀ ಕಾಗೋಡು ತಿಮ್ಮಪ್ಪ.—ಜೀವಂತವಾಗಿದೆ. ನಾನು ಮೊದಲೇ ಹೇಳಿದ ಹಾಗೆ ಹಣಕಾಸಿನ ದೃಷ್ಟಿ ಇಟ್ಟುಕೊಂಡು ಮಾಡಬೇಕಾಗಿದೆ. ೧೮ ಕೋಟಿ ರೂಪಾಯಿಗಳ ಒಂದು ಕಾರ್ಯಕ್ರಮವನ್ನು ಮಾನ್ಯ ಸದಸ್ಯರ ಒತ್ತಾಯದ ಮೇರೆಗೆ ಮಾಡಿದ್ದೇವೆ. ಅದಕ್ಕೆ ೧೮ ಕೋಟಿ ರೂಪಾಯಿಗಳನ್ನು ಕೊಡುವುದು ಕಡಿಮೆ ಮಾಡಿದರೆ ಅದನ್ನು ಮಾಸ್ಟರ್ ಪ್ಲಾನಿಗೆ ಕೊಡಬಹುದಾಗಿತ್ತು. ಅದನ್ನೇ ಮಾಡುವುದಕ್ಕೆ ಹೋದರೆ ಇಲ್ಲಿ ಕಡಿಮೆಯಾಗುತ್ತದೆ. ಇಲಾಖಾ ವ್ಯಾಪ್ತಿಯಲ್ಲಿರುವ ರಸ್ತೆಗಳನ್ನು ಅಭಿವೃದ್ಧಿ ಮಾಡುವುದಾದರೆ ಅದಕ್ಕಿಂತ ಉತ್ತಮವಾದ ಕೆಲಸ ಬೇರೊಂದು ಇಲ್ಲ. ಹಳ್ಳಿಗಳಿಗೆ ರಸ್ತೆಗಳನ್ನು ಮಾಡಿ ಕೊಡತಕ್ಕ ಕೆಲಸವನ್ನು ಬೇರೆ ಬೇರೆ ಹಂತದಲ್ಲಿ ಬೇರೆ ಬೇರೆ ರೂಪದಲ್ಲಿ ಮಾಡಬೇಕಾಗುತ್ತದೆ. ಇರತಕ್ಕ ರಸ್ತೆಗಳನ್ನು ದುರಸ್ತಿಮಾಡಿದರೆ ಬಹಳ ಜನರಿಗೆ ಸಮಾಧಾನವಾಗುತ್ತದೆ.

ಶ್ರೀ ಪ್ರಭಾಕರ್ ತೇಲ್ಕರ್.—ಆದರೆ ಆ ಬಗ್ಗೆ ಪ್ರಯತ್ನ ಮಾಡುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಆ ಬಗ್ಗೆ ಸಾಕಷ್ಟು ಸಾರಿ ವಿಷಯ ಚರ್ಚೆಯಾಗಿದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ದೊಡ್ಡ ನೀರಾವರಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನೀರಾವರಿ ಇಲಾಖೆ ಮೇಲೆ ಅನೇಕ ಮಂದಿ ಮಾನ್ಯ ಸದಸ್ಯರುಗಳು ಸೂಕ್ತವಾದ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅದರಂತೆ ಇಲಾಖೆಯ ಬಗ್ಗೆ ಅನೇಕ ಲೋಪದೋಷಗಳನ್ನು ಕೂಡ ಎತ್ತಿ ಹೇಳಿದ್ದಾರೆ. ನಾವು ಸುಮಾರು ನೂರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡತಕ್ಕ ಸಂದರ್ಭದಲ್ಲಿ ಅನೇಕ ಲೋಪ ದೋಷಗಳು ಇರುವುದು ಸಹಜ. ಅನೇಕ ನ್ಯೂನತೆಗಳು ಕೂಡ ಇರುವುದು. ಅದನ್ನು ಇಲ್ಲವೆಂದು ಸ್ಪಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಆದರೂ ಮಾನ್ಯ ಸದಸ್ಯರುಗಳು ಅನೇಕ ಸಲಹೆಗಳನ್ನು ಮತ್ತು ಸೂಚನೆಗಳನ್ನು ಕೊಟ್ಟಿರುವುದನ್ನು ಗಮನದಲ್ಲಿಟ್ಟುಕೊಂಡು ಈ ಇಲಾಖೆಯನ್ನು ಎಷ್ಟರಮಟ್ಟಿಗೆ ವ್ಯವಸ್ಥಿತ ರೀತಿಯಿಂದ ನಡೆಸುವುದಕ್ಕೆ ಸಾಧ್ಯ ಎಂಬುದನ್ನು ಮಾಡಿ ತೋರಿಸಬೇಕಾಗಿದೆ. ಇವತ್ತಿನ ದಿವಸ ನೀರಾವರಿ ಬಗ್ಗೆ ಮಾನ್ಯ ಸದಸ್ಯರೆಲ್ಲರೂ ಒಳ್ಳೆಯ ಅಭಿಪ್ರಾಯಗಳನ್ನು ಮತ್ತು ಹೆಮ್ಮೆಯ ವಿಷಯಗಳನ್ನು ಹೇಳಿದ್ದಾರೆ.

SRI C.M. ARUMUGHAM.—Mr. Deputy Speaker Sir, let me know, how long we are going to sit ?

ಶ್ರೀ ಭಾಸ್ಕರ ಶೆಟ್ಟಿ.—ಮೂರು ಜನ ಮಂತ್ರಿಗಳು ಉತ್ತರ ಕೊಡುವವರಿದ್ದಾರೆ.

SRI C. M. ARUMUGHAM.—we are sitting since 12 O'clock.

ಶ್ರೀ ಎಸ್.ಆರ್. ಬೊಮ್ಮಾಯಿ.—ಕೂರಲಿಕ್ಕೆ ನನ್ನದೇನು ಅಭ್ಯಂತರ ಇಲ್ಲ. ದೊಡ್ಡ ನೀರಾವರಿ ಬಗ್ಗೆ ೩ ನಿಮಿಷದಲ್ಲಿ ಉತ್ತರಿಸುತ್ತಾರೆಂದರೆ...

MR. SPEAKER—Still three Hon. Ministers are going to reply.

ಶ್ರೀ ಎಸ್.ಆರ್. ಬೊಮ್ಮಾಯಿ.—ಇದರ ಬಗ್ಗೆ ಸರ್ಕಾರದಿಂದ ವಿವರವಾಗಿ ಉತ್ತರ ಬರಬೇಕಾಗುತ್ತದೆ. ಏನೇನು ಮಾಡಿದ್ದಾರೆ, ಏನೇನು ಪ್ರಗತಿಯನ್ನು ಸಾಧಿಸಿದ್ದಾರೆಂಬುದನ್ನು ಹೇಳಬೇಕಾಗುತ್ತದೆ. ಬೇಕಾದರೆ ಇನ್ನೂಸ್ವಲ್ಪ ಕಾಲ ಕೂರೋಣ. We want a detailed reply from the Hon. Minister for Major Irrigation since it concerns the very life of the people.

MR SPEAKER.—In fact, we should have completed these demands yesterday only.

ಶ್ರೀ ಎಸ್.ಆರ್. ಬೊಮ್ಮಾಯಿ.—ಉತ್ತರವನ್ನು ಮಾತ್ರ ವಿವರವಾಗಿ ಕೊಡುವುದು ಅವಶ್ಯ.

ಅಧ್ಯಕ್ಷರು.—ಈಗತಾನೇ ಪ್ರಾರಂಭಿಸಿದ್ದಾರೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ನೀರಾವರಿ ಬಗ್ಗೆ ಮಾನ್ಯ ಸದಸ್ಯರು ಒಳ್ಳೆಯ ರೀತಿಯ ಮಾತುಗಳನ್ನು ಆಡಿದ್ದಾರೆ. ಈ ಅಧಿವೇಶನದಲ್ಲಿ ಈ ವಿಷಯದ ಮೇಲೆ ಅನೇಕ ಸದಸ್ಯರು ಕೊಟ್ಟಿರುವ ಸೂಚನೆಗಳನ್ನು ಮತ್ತು ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳುವುದರ ಜೊತೆಗೆ ಕಳೆದ ೮–೧೦ ವರ್ಷಗಳ ಹಿಂದೆ ಮಾತನಾಡಿದ ಎಲ್ಲ ಸದಸ್ಯರ ಅಭಿಪ್ರಾಯಗಳನ್ನು ಕೂಡ ಮನಸ್ಸಿನಲ್ಲಿ ಇಟ್ಟುಕೊಂಡಿದ್ದೇನೆ. ಕಾರಣ, ಈ ಬಗ್ಗೆ ಒಳ್ಳೆಯ ಅನುಭವ ಇರತಕ್ಕ ಸದಸ್ಯರು ಅನೇಕ ಸೂಚನೆಗಳನ್ನು ಕೊಟ್ಟಿದ್ದಾರೆ. ಆ ವಿಷಯಗಳನ್ನು ಕೂಡ ಗಮನದಲ್ಲಿಟ್ಟುಕೊಂಡು ಸಾಧ್ಯವಾದಷ್ಟು ಮಟ್ಟಿಗೆ ಈ ಇಲಾಖೆಯಿಂದ ಹೆಚ್ಚಿನ ಜನತೆಗೆ ನೆರವಾಗುವ ರೀತಿಯಲ್ಲಿ ಪ್ರಯತ್ನ ಮಾಡಬೇಕಾಗಿದೆ. ಇದರ ಜೊತೆಗೆ ನೀರಾವರಿ ಬಗ್ಗೆ ಮಾನ್ಯ ಸದಸ್ಯರು ಏನು ಕಳವಳ ವ್ಯಕ್ತ ಮಾಡಿದ್ದಾರೆ ಅದರಲ್ಲಿ ಒಂದು ಅಂಶವನ್ನು ನಾವು ತಿಳಿದುಕೊಳ್ಳತಕ್ಕದ್ದು ಏನೆಂದರೆ, ಒಂದು ರಾಜ್ಯದ ಭವಿಷ್ಯವನ್ನು ಆ ರಾಜ್ಯದ ಜನತೆಯ ಆರ್ಥಿಕ, ಸಾಮಾಜಿಕ, ಔದ್ಯಮಿಕ, ಶೈಕ್ಷಣಿಕ ಹೀಗೆ ಪ್ರತಿಯೊಂದು ರಂಗದಲ್ಲೂ ಕೂಡ ಒಂದು ಒಳ್ಳೆಯ ಯಶಸ್ಸನ್ನು ಕೊಡಬೇಕೆಂದರೆ ಮತ್ತು ಎಲ್ಲ ಜನತೆಯ ಜೀವನಮಟ್ಟವನ್ನು ಹೆಚ್ಚಿಗೆ ಮಾಡತಕ್ಕ ಪರಿಸ್ಥಿತಿಯನ್ನು ನೋಡಿದರೆ ಇವತ್ತಿನ ದಿವಸ ನೀರಾವರಿಗೆ ಆಧ್ಯತೆ ಕೊಡಬೇಕಾದುದು ಬಹಳ ಮುಖ್ಯ. ಆ ದಿಸೆಯಲ್ಲಿ ಅನೇಕ ಜನರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ನಾವು ಹಿಂದಿನ ವರ್ಷಗಳನ್ನು ನೆನಸಿಕೊಂಡಾಗ (೧೯೫೧ ರಿಂದ ನೀರಾವರಿಗೆ ಆದ್ಯತೆ ನೀಡಿರುವುದನ್ನು ನೋಡಿದರೆ) ಇತ್ತೀಚೆಗೆ ನಮ್ಮ ಸರ್ಕಾರ ಈ ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಿದೆ. ನಾವು ನೀರಾವರಿಗೆ ಹೆಚ್ಚಿನ ಆಧ್ಯತೆ ಕೊಟ್ಟಿರುವುದರಿಂದ ಇವತ್ತು ಕರ್ನಾಟಕ ರಾಜ್ಯದಲ್ಲಿ ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಯುತಕ್ಕ ಅವಕಾಶವನ್ನು ಕಲ್ಪಿಸಿಕೊಂಡಿದ್ದೇವೆ. ಆ ರೀತಿ ಒಂದು ಪ್ರಯತ್ನವನ್ನು ನಾವು ಮಾಡಿದ್ದೇವೆ. ಈ ದಿಸೆಯಲ್ಲಿ ಪ್ರಯತ್ನ ಮಾಡುವ ಸಂದರ್ಭದಲ್ಲಿ ನಮ್ಮ ಕರ್ನಾಟಕದ ಒಂದು ವಿಶಿಷ್ಟತೆ ಏನೆಂದರೆ ಇದು ಸಾಕಷ್ಟು ನಿಸರ್ಗದ ಸಂಪತ್ತನ್ನು ಪಡೆದಿದೆ. ೭ ದೊಡ್ಡ ದೊಡ್ಡ ನದಿಗಳನ್ನು ಹೊಂದಿದೆ. ಆ ೭ ನದಿಗಳಿಂದಲೂ ನೀರನ್ನು ಸದುಪಯೋಗಪಡಿಸಿಕೊಂಡದ್ದೇ ಆದರೆ ಇನ್ನೂ ೫೫ ಲಕ್ಷ ಹೆಕ್ಟೇರ್ ಭೂಮಿಯನ್ನು ನೀರಾವರಿ ಪ್ರದೇಶವನ್ನಾಗಿ ಮಾಡಬಹುದು. ಆದರೆ ಇವತ್ತಿನ ದಿವಸ ರಾಜ್ಯದ ಆರ್ಥಿಕ ಸಂಪನ್ಮೂಲಗಳನ್ನು ನೋಡಿಕೊಂಡು ಎಲ್ಲ ಇಲಾಖೆಗಳನ್ನು ಗಮನದಲ್ಲಿಟ್ಟುಕೊಂಡು ಪ್ರಾಮಾಣಿಕವಾಗಿ ಪ್ರಯತ್ನಪಟ್ಟು ರಾಜ್ಯದಲ್ಲಿ ೬೨ ಲಕ್ಷ ಹೆಕ್ಟೇರ್ ಭೂಮಿಯನ್ನು ನೀರಾವರಿ ಪ್ರದೇಶವನ್ನಾಗಿ ಮಾಡಿದ್ದೇವೆ. ಇದರಲ್ಲಿ ನಮಗೆ ಸಿಕ್ಕಿರತಕ್ಕ ರಿಸೋರ್ಸಸ್ ಮೇಲೆ ಹೇಳುವುದಾದರೆ, ೧೬೦೦ ಟಿ.ಎಂ.ಸಿ.ಗಳನ್ನು ಉಪಯೋಗಿಸತಕ್ಕ ಅವಕಾಶ ಇದೆ. ಆದರೆ ಇವತ್ತಿನ ದಿವಸ ೫೫೦ ಟಿ.ಎಂ.ಸಿ.ಗಳನ್ನು ಮಾತ್ರ ಉಪಯೋಗಿಸಿಕೊಂಡಿದ್ದೇವೆ. ಇನ್ನೂ ಉಪಯೋಗಿಸಿಕೊಳ್ಳುವುದಕ್ಕೆ ಹೆಚ್ಚಿನ ಆಸ್ಪದಗಳು ಇವೆ. ಈ ನೀರನ್ನು ಉಪಯೋಗಿಸಿಕೊಳ್ಳತಕ್ಕ ಅವಕಾಶಗಳು ಹೆಚ್ಚಾಗಿ ಪಶ್ಚಿಮ ಘಟ್ಟದಲ್ಲಿವೆ. ಈ ಈ ಬಗ್ಗೆ ಹೆಚ್ಚಿನ ಗಮನ ನೀಡಿ ಸಾಧ್ಯವಾದ ಮಟ್ಟಿಗೆ ಎಷ್ಟು ನೀರು ದೊರೆಯುತ್ತದೋ ಅಷ್ಟನ್ನು ಪೂರ್ತಿಯಾಗಿ ಉಪಯೋಗಿಸಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಆ ದಿಸೆಯಲ್ಲಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿರುವಾಗ ಅನೇಕ ಮಾನ್ಯ ಸದಸ್ಯರುಗಳು ಏನು ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆಂದರೆ ಕೇವಲ ೧೦೦ ಕೋಟಿ ರೂಪಾಯಿಗಳನ್ನು ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ಖರ್ಚು ಮಾಡಿದ್ದೇ ಆದರೆ ನೂರಾರು ವರ್ಷಗಳಾದರೂ ಈ ಯೋಜನೆಗಳನ್ನು ಮುಗಿಸುವುದಕ್ಕೆ ಆಗುವುದಿಲ್ಲ, ಆದ್ದರಿಂದ ಈ ಬಾಬಿಗೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಹೇಳಿದ್ದಾರೆ.

ಅದು ನಿಜ. ಆದರೆ ಇವತ್ತಿನ ದಿವಸ ಆ ದಿಸೆಯಲ್ಲಿ ನಮ್ಮ ಸರ್ಕಾರ ಕೂಡ ಹೆಚ್ಚಿನ ಆಧ್ಯತೆಯನ್ನು ನೀಡಿದೆ. ಇನ್ನೂ ಹೆಚ್ಚಿನ ಆಧ್ಯತೆಯನ್ನು ನೀಡುವುದಕ್ಕಾಗಿ ಈಗಾಗಲೇ ವಿಶ್ವಬ್ಯಾಂಕಿನ ನೆರವನ್ನು ಪಡೆಯುವ ಪ್ರಯತ್ನವನ್ನು ಮಾಡಿದ್ದೇವೆ. ಸೆಂಟ್ರಲ್ ಬ್ಯಾಂಕಿನಿಂದ ಡಿಬೆಂಚರ್ ಮುಖಾಂತರ ಸಾಲ ತೆಗೆದುಕೊಂಡು ಕೆಲಸ ಮಾಡಬೇಕೆಂದು ನಮ್ಮ ಮುಖ್ಯ ಮಂತ್ರಿಗಳು ಮತ್ತು ಅರ್ಥ ಮಂತ್ರಿಗಳು ಪ್ರಯತ್ನ ಮಾಡಿದ್ದಾರೆ. ಬಹುಶಃ ನಿರೀಕ್ಷಿಸಿದಷ್ಟು ಫಲ ಸಿಗಬಹುದೆಂದು ಆಶೆಯನ್ನು ನಾವು ಇಟ್ಟುಕೊಂಡಿದ್ದೇವೆ. ಮಾನ್ಯ ಸದಸ್ಯರು ನಮ್ಮ ಇಲಾಖೆಯ ವಿಚಾರದಲ್ಲಿ ಒಳ್ಳೆಯ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ನಾನು ಮಾನ್ಯ ಸದಸ್ಯರು ಹೇಳಿದ ಎಲ್ಲ ವಿಷಯದ ಬಗ್ಗೆ ಹೇಳದಿದ್ದರೂ ಅವರ ಅಭಿಪ್ರಾಯದ ಮೇಲೆ ಸ್ವಲ್ಪ ವಿವರಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಮಾನ್ಯ ಸದಸ್ಯರಾದ ರೆಡ್ಡಿಯವರಾಗಲೀ, ಭಾವಿಯವರಾಗಲೀ ನೀರಾವರಿ ಇಲಾಖೆಯ ಮೇಲೆ ಹೆಚ್ಚಿಗೆ ಮಾತನಾಡದಿದ್ದರೂ ಲೋಕೋಪಯೋಗಿ ಇಲಾಖೆಯ ಮೇಲೆ ಮಾತನಾಡಿದ್ದಾರೆ. ಅದೇರೀತಿ ಮಾನ್ಯ ಚಂದ್ರೇಗೌಡರು ನೀರಾವರಿ ಇಲಾಖೆಯಮೇಲೆ ಮಾತನಾಡತಕ್ಕ ಸಂದರ್ಭದಲ್ಲಿ ಈ ಯೋಜನೆಗಳನ್ನು ಮುಗಿಸ

ಬೇಕಾದರೆ ೧೦ ಸಾವಿರ ಕೋಟಿ ರೂಪಾಯಿಗಳು ಬೇಕಾಗಬಹುದು. ಅದಕ್ಕೋಸ್ಕರ ಹೆಚ್ಚಿಗೆ ಹಣವನ್ನು ತಂದು ಈ ಅಣೆಕಟ್ಟುಗಳಲ್ಲಿ ಏನು ನೀರು ಸ್ಟೋರ್ ಮಾಡಿದೆ ಅದನ್ನು ಸದುಪಯೋಗಪಡಿಸಿಕೊಳ್ಳ ಬೇಕು ಎಂದು ಹೇಳಿದ್ದಾರೆ. ಆ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಸರ್ಕಾರ ಹೆಚ್ಚಿನ ರೀತಿಯಿಂದ ಹಣ ಪಡೆಯಲು ಪ್ರಯತ್ನ ಮಾಡುತ್ತಿದೆ. ಶ್ರೀ ಆನಂದ ಕುಂದ ಹೆಗಡೆಯವರು ಮತ್ತು ಇತರ ಸದಸ್ಯರು ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿನ ಅವ್ಯವಹಾರಗಳ ಬಗ್ಗೆ ಹೇಳಿದ್ದಾರೆ. ಅದನ್ನು ಸರ್ಕಾರ ಬಹಳ ತೀಕ್ಷ್ಣವಾಗಿ ಪರಿಶೀಲಿಸಿ ಸರ್ಕಾರ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದೆ. ಮೇಲಾಗಿ ಈ ರೀತಿಯಾಗದಂತೆ ಮುನ್ನೆಚ್ಚರಿಕೆ ವಹಿಸುವುದಕ್ಕೆ ಕೂಡ ಸರ್ಕಾರ ಪ್ರಯತ್ನ ಮಾಡುತ್ತಿದೆ. ಮಾನ್ಯ ಸದಸ್ಯರಾದ ಆನಂದ ಕುಂದ ಹೆಗಡೆಯವರು ಇನ್ನೂ ಒಂದು ವಿಚಾರ ಹೇಳಿದ್ದಾರೆ. ಈ ಇಲಾಖೆಯಲ್ಲಿ ಫೈನಾನ್ಷಿಯಲ್ ಇನ್‌ಡಿಸಿಪ್ಲೀನ್ ಕಂಡುಬಂದಿದೆ, ಆದ್ದರಿಂದ ಒಳ್ಳೆಯ ರೀತಿಯಿಂದ ಅದನ್ನು ಸುಧಾರಿಸಬೇಕೆಂದು ಹೇಳಿದ್ದಾರೆ. ಅದು ಸೂಕ್ತ ಸಲಹೆಯಾಗಿದ್ದು ಅವರು ಹೇಳಿದ ಪ್ರಕಾರ ಈಗಾಗಲೇ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೂ ಇನ್‌ಸ್ಟ್ರಕ್ಷನ್ ಕೊಟ್ಟು ಫೈನಾನ್ಸಿಯಲ್ ಡಿಸಿಪ್ಲೀನ್ ತರುವ ರೀತಿಯಲ್ಲಿ ಪ್ರಯತ್ನ ಪಟ್ಟಿದ್ದೇವೆ. ಅದೇ ರೀತಿ ಅಧಿಕಾರಿಗಳೂ ಕೂಡ ಒಳ್ಳೆಯ ರೀತಿಯಿಂದ ಆರ್ಥಿಕ ವ್ಯವಸ್ಥೆಯನ್ನು ತಮ್ಮ ಇಲಾಖೆಯಲ್ಲಿ ಮಾಡಿಕೊಂಡಿದ್ದಾರೆ. ಯು.ಕೆ.ಪಿ.ಯಲ್ಲಿ...

ಶ್ರೀ ಕೆ. ಭಾಸ್ಕರನಾಯಿಡು.—ಅಧ್ಯಕ್ಷರೆ. ಹೊರಗಡೆ ಮಳೆ ಬರುತ್ತಿದೆ, ಒಳ್ಳೆಯದು. ಅದೇ ರೀತಿ ಇಲ್ಲಿ ಇಬ್ಬರು ಸೀನಿಯರ್ ಗೌಡರುಗಳು (ಶ್ರೀ ಹೆಚ್.ಡಿ. ದೇವೇಗೌಡ ಮತ್ತು ಶ್ರೀ ಹೆಚ್.ಸಿ. ಶ್ರೀಕಂಠಯ್ಯನವರು) ಒಟ್ಟಿಗೆ ಕುಳಿತು ಮಾತನಾಡುತ್ತಿದ್ದಾರೆ. ಇದು ಬಹಳ ಅಪರೂಪದ ಪ್ರಸಂಗ.

ಶ್ರೀ ಬಿ. ಬಿ ಚಿಮ್ಮನಕಟ್ಟಿ.—ಕಾಂಪೆನ್‌ಸೇಷನ್ ಕೊಡತಕ್ಕ ಸಂದರ್ಭದಲ್ಲಿ ಜಮೀನ್ದಾರರಿಗೆ ಹೆಚ್ಚಿಗೆ ದುಡ್ಡನ್ನು ಕೊಡುತ್ತಿದ್ದಾರೆ ಎಂಬ ಅಭಿಪ್ರಾಯವನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ ಆ ಕಾಂಪನ್‌ಸೇಷನ್ ನಿಗದಿ ಮಾಡುವವರು ವಿಶೇಶ ಜಿಲ್ಲಾಧಿಕಾರಿಯವರು ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಅವರು ನಿಗದಿ ಮಾಡಿದಂಥ ಕಾಂಪನ್‌ಸೇಷನ್ ವಿರುದ್ಧ ಕೋರ್ಟಿಗೆ ಹೋಗಿ ಜಮೀನ್ದಾರರು ಹೆಚ್ಚಿಗೆ ಕಾಂಪೆನ್‌ಸೇಷನ್ ತೆಗೆದುಕೊಳ್ಳುತ್ತಾರೆ. ಕೋರ್ಟ್ ಮುಖಾಂತರ ತೆಗೆದುಕೊಂಡಿದ್ದಾರೆಯೇ ಹೊರತು ಇದಕ್ಕೆ ಇಲಾಖೆಯವರಾಗಲೀ, ವಿಶೇಷ ಜಿಲ್ಲಾಧಿಕಾರಿಯವರಾಗಲೀ, ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಆಗಲೀ ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಮತ್ತು ಈ ರೀತಿಯಾಗಿ ಕೊಟ್ಟಿಲ್ಲ, ಮಾನ್ಯ ಸದಸ್ಯರಾದ ಶ್ರೀ ಟಿ. ಬಿ. ಜಯಚಂದ್ರ ಅವರು ಅವರ ಕ್ಷೇತ್ರಕ್ಕೆ ನೆರವಾಗತಕ್ಕ ಯೋಜನೆಯನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳಬೇಕು ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀ ಸಿ ನೋಡಲಾಗಿ ಅಪ್ಪರ್ ಭದ್ರಾ ಪ್ರಾಜೆಕ್ಟನ್ನು ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿರುವ ವಿಚಾರ ಗೊತ್ತಾಗಿದೆ. ಈ ಬಗ್ಗೆ ಆಮೂಲಾಗ್ರವಾಗಿ ಪರಿಶೀಲನೆ ಮಾಡಬೇಕಾಗಿದೆ. ನಂತರ ಇದರ ಬಗ್ಗೆ ಹೆಚ್ಚಿಗೆ ಗಮನ ಹರಿಸಿ ಈ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಸದಸ್ಯರಾದ ಶ್ರೀ ಬಿಕಿನಾಳ್ಕರ್ ಅವರು ಕೃಷ್ಣ ಮೇಲ್ದಂಡೆ ಯೋಜನೆ ಅಣೆಕಟ್ಟು ಕೆಲಸ ಆದಷ್ಟು ಜಾಗ್ರತೆ ಮುಗಿಯಬೇಕು ಎಂದು ಹೇಳಿದ್ದಾರೆ. ಇದಕ್ಕೆ ವಿಶ್ವ ಬ್ಯಾಂಕಿನ ನೆರವು ಸಿಕ್ಕಿದೆ. ಈ ವಿಷಯದಲ್ಲಿ ದಕ್ಷ ರೀತಿಯಿಂದ ಹೆಚ್ಚಿನ ಕಾಳಜಿ ಕೊಟ್ಟು ಆದಷ್ಟು ಜಾಗ್ರತೆ ಈ ಯೋಜನೆ ಕೆಲಸ ಮುಗಿಸಿ ಬರಗಾಲ ಪೀಡಿತ ಪ್ರದೇಶಗಳು ತೊಳಲಾಡದಂತೆ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಬಾಗಲಕೋಟೆ ನಗರ ಮುಳುಗಡೆ ಆಗತಕ್ಕ ಬಗ್ಗೆ ಪ್ರಸ್ತಾಪಿಸಿ ಆದಷ್ಟು ಜಾಗ್ರತೆ ಈ ಸಮಸ್ಯೆಯನ್ನು ಇತ್ಯರ್ಥಗೊಳಿಸಬೇಕೆಂದು ಹೇಳಿದ್ದಾರೆ, ಇವತ್ತು ಬಾಗಲಕೋಟೆ ಪಟ್ಟಣವನ್ನು ಉಳಿಸಬೇಕು ಎಂಬ ದೃಷ್ಟಿಯಿಂದ ಬಾಳೇಕುಂದ್ರಿ ಕಮಿಟಿಯವರು ವಿಶೇಷವಾಗಿ ಪರಿಶೀಲಿಸಿ ವಿಷಯಗಳನ್ನು ಸಂಗ್ರಹಿಸಿ ಸರ್ಕಾರಕ್ಕೆ ವರದಿಯನ್ನು ಕೂಡ ಕೊಟ್ಟಿದ್ದಾರೆ. ನಾನು ಮತ್ತು ಮುಖ್ಯಮಂತ್ರಿಗಳು ಬಾಗಲಕೋಟೆ ಪಟ್ಟಣದಲ್ಲಿರತಕ್ಕ ಎಲ್ಲಾ ಜನರನ್ನೂ ಸಂದರ್ಶಿಸಿ ಅವರ ಅಭಿಪ್ರಾಯಗಳನ್ನೂ ತೆಗೆದುಕೊಂಡಿದ್ದೇವೆ. ಬಾಗಲಕೋಟೆ ಪಟ್ಟಣವನ್ನು ಉಳಿಸಬೇಕು ಎಂಬ ಅಭಿಲಾಶೆ ನಮಗಿದೆ. ಈ ಬಗ್ಗೆ ಅಂತಿಮವಾದ ತೀರ್ಮಾನವನ್ನು ಇನ್ನೂ ತೆಗೆದುಕೊಂಡಿಲ್ಲ. ಆದಷ್ಟು ಜಾಗ್ರತೆ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ತಿಳಿದುಕೊಂಡು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಡಾ॥ ತಿಮ್ಮೇಗೌಡರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ವಿಶೇಷವಾಗಿ ಕಾವೇರಿ ನೀರಿನ ವಿವಾದದ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಹೇಳಿದ್ದಾರೆ. ಇದರ ಬಗ್ಗೆ ಮುಖ್ಯ ಮಂತ್ರಿಗಳು ಸಂಬಂಧಪಟ್ಟ ಕೇಂದ್ರ ಮಂತ್ರಿಗಳ ಜೊತೆ ಪತ್ರವ್ಯವಹಾರ ಮಾಡಿದ್ದಾರೆ. ಆದಷ್ಟು ಜಾಗ್ರತೆ ಅಂದರೆ ಮುಂದಿನ ತಿಂಗಳು ಅಥವಾ ಇನ್ನೆರಡು ತಿಂಗಳಲ್ಲಿ

ವೋಟಿಂಗ್ ಫಿಕ್ಸ್ ಮಾಡುವವರಿದ್ದಾರೆ. ಮಾಡಿದ ತಕ್ಷಣ ಆ ರಾಜ್ಯದ ಮುಖ್ಯಮಂತ್ರಿಗಳು, ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಮತ್ತು ಕೇಂದ್ರದ ಮಂತ್ರಿಗಳು ಕೂಡಿಕೊಂಡು ಈ ವಿಷಯಗಳನ್ನು ಆಮೂಲಾಗ್ರವಾಗಿ ಚರ್ಚಿಸಿ ಮಾನ್ಯ ಸದಸ್ಯರಲ್ಲಿರತಕ್ಕ ಆಸಕ್ತಿಯನ್ನು ಆದಷ್ಟು ಜಾಗ್ರತೆ ಪೂರೈಸುವು ದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತು ಇದರ ಜೊತೆಗೆ ಕಬಿನಿ ಪ್ರಾಜೆಕ್ಟ್ ಬಗ್ಗೆ ಮಾತನಾಡಿ ಈ ರೀತಿ ಕೆಲಸ ಮುಂದುವರೆದರೆ ಬಹಳ ವರ್ಷಗಳು ಬೇಕಾಗಬಹುದು. ಅಲ್ಲದೆ ಎಷ್ಟು ಖರ್ಚು ಮಾಡಿದರೂ ಇರಿಗೇಷನ್ ಪೊಟೆನ್‌ಷಿಯಲ್ ಆಗದೇ ಇರಬಹುದು ಎಂದು ಹೇಳಿದ್ದಾರೆ. ಎಲ್ಲ ಯೋಜನೆಗಳನ್ನೂ ಮನಸ್ಸಿನಲ್ಲಿಟ್ಟುಕೊಂಡು ಕೊಟ್ಟಿರತಕ್ಕ ಹಣದಲ್ಲಿ ಯಾರ ಯಾನ ಯೋಜನೆಗಳಿಗೆ ಎಷ್ಟೆಷ್ಟು ಆದ್ಯತೆ ಕೊಡಬೇಕೋ ಕೊಟ್ಟಿದ್ದೇವೆ. ಇನ್ನೂ ಹೆಚ್ಚಿಗೆ ಕೆಲಸ ಮಾಡಿ ತೋರಿಸಬೇಕು ಎಂದು ಕೆಲಸ ಮಾಡು ತ್ತಿದ್ದೇವೆ. ಅಗೇ ರೀತಿ ಹಾರಂಗಿ ಯೋಜನೆ, ಕಕ್ಕಟಹೊಳೆ ಪ್ರಾಜೆಕ್ಟ್ ಬಗ್ಗೆ ಮಾತನಾಡಿ ವ್ಯರ್ಥವಾಗ ತಕ್ಕ ನೀರನ್ನು ಸುದುಪಯೋಗ ಪಡಿಸಿಕೊಳ್ಳಬೇಕು, ಅದರಿಂದ ನಮ್ಮ ರಾಜ್ಯಕ್ಕೆ ನೆರವಾಗುತ್ತದೆ ಎಂದು ಹೇಳಿದ್ದಾರೆ. ಅದೂ ಕೂಡ ಕಾವೇರಿ ಬೇಸಿನ್ ವ್ಯಾಪ್ತಿಯಲ್ಲಿ ಬರುವುದರಿಂದ ಕೇಂದ್ರ ಸರ್ಕಾರ ದಿಂದ ಕ್ಲಿಯರೆನ್ಸ್ ತೆಗೆದುಕೊಳ್ಳಬೇಕಾಗುತ್ತದೆ. ಈಗಿರತಕ್ಕ ಯೋಜನೆಗಳಿಗೆ ಹೆಚ್ಚಿನ ಹಣ ಒದಗಿಸಿ ಆ ಯೋಜನೆಗಳನ್ನು ಪೂರೈಸಬೇಕೆಂಬ ಉದ್ದೇಶ ಒಂದು ಕಡೆ ಇದ್ದರೂ ಕೂಡ ಹೊಸ ಯೋಜನೆಯನ್ನು ಎಷ್ಟರಮಟ್ಟಿಗೆ ತೆಗೆದುಕೊಳ್ಳಬೇಕು ಎಂಬ ಬಗ್ಗೆಯೂ ಯೋಚನೆ ಮಾಡಬೇಕಾಗಿದೆ. ಆನ್ ಗೋಯಿಂಗ್ ವರ್ಕ್ಸ್‌ಗೆ ಹೆಚ್ಚಿನ ಪ್ರಾತಿನಿಧ್ಯ ಕೊಟ್ಟು ಹೊಸ ಯೋಜನೆಗಳಿಗೆ ಎರಡನೇ ಆದ್ಯತೆ ಕೊಡ ಬೇಕಾಗುತ್ತದೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಹೊಸ ಯೋಜನೆ ಬಗ್ಗೆ ನಾನು ಸಲಹೆ ಮಾಡಲಿಲ್ಲ. ವರಣಾ ನಾಲೆ ಕೆಲಸ ಏನು ಶುರು ಮಾಡಿದ್ದೀರಿ ಅದನ್ನು ಮಾಡಿ ಮೈಸೂರು ಜಿಲ್ಲೆಯ ಕೆಲವು ತಾಲ್ಲೂಕು ಗಳಿಗೆ ನೀರು ಕೊಡಬೇಕಾದರೆ ಕಕ್ಕಟಹೊಳೆ ಪ್ರಾಜೆಕ್ಟ್ ಮಾಡಬೇಕಾಗುತ್ತದೆ. ಅದನ್ನು ಮಾಡ ದಿದ್ದರೆ ಅವರಿಗೆ ನೀರು ಕೊಡುವುದಕ್ಕಾಗುವುದಿಲ್ಲ. ಈಗ ವರುಣಾ ನಾಲೆಯ ಕಾಲುವೆಯನ್ನು ಕೆಲವು ಮೈಲಿಗಳಷ್ಟು ತೆಗೆದಿದ್ದೀರಿ. ರೈತರಿಗೆ ಇದರ ಪೂರ್ಣ ಅನುಕೂಲವಾಗಬೇಕಾದರೆ ಕಕ್ಕಟಹೊಳೆ ಪ್ರಾಜೆಕ್ಟ್ ಮಾಡಲೇಬೇಕು. ಮಂಡ್ಯ ಜಿಲ್ಲೆಯವರು ಹಿಂದೆ ಚಡ್ಡಿ ಮೆರವಣಿಗೆ ಮಾಡಿದ್ದರು. ನೀವು ಇದನ್ನು ಮಾಡದಿದ್ದರೆ ಅವರು ಕೌಪೀನದ ಮೆರವಣಿಗೆ ಮಾಡಬೇಕಾಗುತ್ತದೆ. ಸಕ್ಕರೆ ಕಾರ್ಖಾನೆ ಗಳು ಮುಚ್ಚಬೇಕಾಗುತ್ತದೆ. ಆದ್ದರಿಂದ ಕಕ್ಕಟಹೊಳೆ ಪ್ರಾಜೆಕ್ಟನ್ನು ಹೊಸ ಯೋಜನೆ ಎಂದು ತಿಳಿದುಕೊಳ್ಳದೆ ವರುಣಾ ನಾಲೆಗೆ ಅವಶ್ಯಕವಾದ ಯೋಜನೆ ಎಂದು ತಿಳಿದುಕೊಂಡು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಾವೇರಿ ಕಣಿವೆಯಲ್ಲಿ ಬರತಕ್ಕ ಎಲ್ಲ ಯೋಜನೆಗಳಿಗೂ ಆಸಕ್ತಿ ವಹಿಸ ಬೇಕೆಂದು ನಮ್ಮ ಸರ್ಕಾರದ ಉದ್ದೇಶವಿದೆ. ಅದನ್ನು ನಾನೀಗ ವಿವರವಾಗಿ ಹೇಳುವುದಕ್ಕೆ ಹೋಗು ವುದಿಲ್ಲ. ಆದರೂ, ಮಾನ್ಯ ಸದಸ್ಯರ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆಗೆ ಸರ್ಕಾರ ಆಸಕ್ತಿ ವಹಿಸುತ್ತಿದೆ ಎಂದು ತಿಳಿಸಬಯಸುತ್ತೇನೆ.

ಹಾಸನ ಮತ್ತು ಬೇಲೂರು ತಾಲ್ಲೂಕುಗಳು ಬರಗಾಲ ಪೀಡಿತ ಪ್ರದೇಶಗಳಾಗಿರುವುದರಿಂದ ಆದಷ್ಟು ಬೇಗನೆ ಯಗಚಿ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ಶ್ರೀಮಾನ್ ಹನುಮೇಗೌಡರು ಹೇಳಿದ್ದಾರೆ. ಅದಕ್ಕೆ ನಾನು ಮೊನ್ನೆ ಉತ್ತರ ಕೊಟ್ಟಿದ್ದೇನೆ. ಈ ಯೋಜನೆಯನ್ನು ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಕಳುಹಿಸಲಾಗಿದೆ. ಅಲ್ಲಿಂದ ಅದು ಬಂದ ತಕ್ಷಣ, ಆದ್ಯತೆ ಕೊಟ್ಟು ಸರ್ಕಾರ ತೆಗೆದುಕೊಳ್ಳುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಬಿ. ಮಲ್ಲಪ್ಪನವರು ಹಾಗೂ ಶ್ರೀ ರಾಮಯ್ಯನವರು ಮಾತನಾಡಿ ತುಂಗಭದ್ರ ಮಂಡಲಿಯನ್ನು ರದ್ದು ಮಾಡಬೇಕೆಂದು ಹೇಳಿದ್ದಾರೆ. ಅದನ್ನು ರದ್ದು ಮಾಡುವ ಅಧಿಕಾರ ರಾಜ್ಯ ಸರ್ಕಾರಕ್ಕಿಲ್ಲ. ಇದು ಕೇಂದ್ರ ಸರಕಾರದವರು ರಚಿಸಿರುವ ಮಂಡಲಿಯಾದುದರಿಂದ, ರದ್ದು ಮಾಡುವ ವಿಚಾರವನ್ನು ಅವರಿಗೆ ನಾವು ತಿಳಿಸಬಹುದೇ ವಿನಹ ಸಂಪೂರ್ಣವಾಗಿ ರದ್ದು ಮಾಡುವ ಅಧಿಕಾರ ನಮಗಿಲ್ಲ. ಇದರಿಂದ ನಮ್ಮ ರಾಜ್ಯಕ್ಕೆ ಯಾವುದೇ ಲಾಭವಿಲ್ಲ ಮತ್ತು ಹಾನಿಯಾಗುತ್ತಿದೆ ಎಂದು ಸದಸ್ಯರು ಹೇಳಿದ್ದಾರೆ. ನಾನು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿ, ಜನತೆಗೆ ಅನ್ಯಾಯ ವಾಗದಂತೆ ಪರಿಶೀಲಿಸಿ, ಆದರಿಂದ ಜನತೆಗೆ ಲಾಭ ಸಿಗುವ ದಿಸೆಯಲ್ಲಿ ಪ್ರಯತ್ನ ಮಾಡುತ್ತೇನೆ. ಜೊತೆಗೆ, ಮಾನ್ಯ ಸದಸ್ಯರುಗಳು ನೀರಾವರಿ ಕಾಯಿದೆಯನ್ನು ತಿದ್ದುಪಡಿ ಮಾಡಬೇಕೆಂದು ಹೇಳಿದ್ದಾರೆ.

Tailenders problems and unauthorised cropping pattern ಸಮಸ್ಯೆಗಳು ಕೇವಲ ತುಂಗಭದ್ರ ಜಲಾಶಯಕ್ಕೆ ಮಾತ್ರ ಸೀಮಿತವಾಗಿಲ್ಲ. ಸಮಸ್ಯೆಗಳು ಕರ್ನಾಟಕಾದ್ಯಂತ ಇವೆ. ಈ ಸಮಸ್ಯೆಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಸೂಕ್ತ ತಿದ್ದುಪಡಿಗಳನ್ನು ಮಾಡಬೇಕೆಂದು Board of Chief Engineersಗೆ ವಹಿಸಿದ್ದೇವೆ. ನಂತರ ಅಲ್ಲಿಂದ ಕಾನೂನು ಇಲಾಖೆಗೆ ಕಳುಹಿಸಿ ಸೂಕ್ತ ಸಲಹೆಗಳನ್ನು ಪಡೆದ ನಂತರ ಇದರ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ ಸರ್ಕಾರ ಮುಂದಿದೆ ಎಂದು ಹೇಳಬಯಸುತ್ತೇನೆ. ಮಾನ್ಯ ಚೌಡಯ್ಯನವರೂ ಕೂಡ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅದರಲ್ಲಿ ವಿಶೇಷವಾಗಿ alignment change ಮಾಡುವ ಸಂದರ್ಭ ಬಂದಾಗ ಶಾಸಕರ ಸಲಹೆ ಪಡೆಯು ಬೇಕೆಂದು ಹೇಳಿದ್ದಾರೆ. ಅಂತೆಯೇ ಶಾಸಕರನ್ನು ಕರೆದು ಅವರ ಸಲಹೆಗಳನ್ನು ಪಡೆದು ಅದನ್ನು ಸಿದ್ಧ ಪಡಿಸಲಾಗುವುದೆಂದು ಹೇಳಬಯಸುತ್ತೇನೆ.

ಶ್ರೀ ಹೆಚ್. ಡಿ. ಚೌಡಯ್ಯ.—ಇದನ್ನು ದಯವಿಟ್ಟು ಅಧಿವೇಶನ ಮುಗಿಯುವುದರೊಳಗೆ ಮಾಡ ಬೇಕೆಂದು ಪ್ರಾರ್ಥನೆ.

ಶ್ರೀ ಬಿ.ಬಿ, ಚಿಮ್ಮನಕಟ್ಟಿ.—ಸಲಹೆಗಳನ್ನು ತಾವು ಯಾವಾಗ ಕೊಟ್ಟರೂ ಸ್ವಾಗತ ಮಾಡುತ್ತೇವೆ.

ಶ್ರೀ ಹೆಚ್.ಡಿ. ಚೌಡಯ್ಯ.—ಶಾಸಕರು ಮತ್ತು ಸಂಬಂಧಪಟ್ಟ ಇಂಜಿನಿಯರುಗಳನ್ನು ಕರೆದು ಸಮಾಲೋಚನೆ ಮಾಡಬೇಕು.

ಶ್ರೀ ಬಿ.ಬಿ.ಚಿಮ್ಮನಕಟ್ಟಿ.—ತಾವು ಹೇಳಿದ tunnel ವರೆಗೆ ಫೈನಲೈಸ್ ಮಾಡಿದ್ದೇವೆ. ಆದರೆ, ಇನ್ನೂ alignment approval ಮಾಡಿಲ್ಲ. Alignment approval ಮಾಡುವಾಗ ತಾಂತ್ರಿಕ ಉಪಯುಕ್ತತೆಯನ್ನು ನೋಡಿಕೊಂಡು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್. ಡಿ. ಚೌಡಯ್ಯ.—ನಾನು ಎರಡು ಸಲಹೆಗಳನ್ನು ಕೊಟ್ಟಿದ್ದೆ. ಒಂದು, ಹೇಮಾವತಿ ಯೋಜನೆ ಬಗ್ಗೆ ಮತ್ತು ಎರಡನೆಯದು ವಿಶ್ವೇಶ್ವರಯ್ಯ ನಾಲೆಯನ್ನು ಆಧುನೀಕರಣಗೊಳಿಸುವ ಬಗ್ಗೆ. ಮಾನ್ಯ ಸಚಿವರು tunnel ವರೆಗೆ ಫೈನಲೈಸ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಹಾಗಾದರೆ, ಅದು ಈ ಎರಡರಲ್ಲಿ ಯಾವುದಕ್ಕೆ ಎಂದು ತಿಳಿಸುವರೆ ?

ಶ್ರೀ ಬಿ.ಬಿ.ಚಿಮ್ಮನಕಟ್ಟಿ.—ಅದನ್ನು ನಂತರ ಹೇಳುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಅರಕೇರಿ ಮತ್ತು ಪರಪ್ಪನವರು ಒಳ್ಳೆಯ ರೀತಿಯಿಂದ ಮಾತನಾಡಿದ್ದಾರೆ. ಶ್ರೀ ದೇವೇಗೌಡರು ಈ ಇಲಾಖೆ ಬಗ್ಗೆ ಇಂದು ಮಾತನಾಡದಿದ್ದರೂ ಅವರು ಚೆನ್ನಾಗಿ ಅಭ್ಯಾಸ ಮಾಡಿದ್ದಾರೆ. ಅವರು ಕಳೆದ ೮-೧೦ ವರ್ಷಗಳಲ್ಲಿ ಮಾಡಿದ ಭಾಷಣಗಳನ್ನು ಓದಿದ್ದೇನೆ. ಅವರ ಹಿಂದಿನ ಭಾಷಣಗಳನ್ನು ತರಿಸಿ, ಅವರು ಮಾಡಿರತಕ್ಕ ಕೆಲವು ಸಲಹೆಗಳನ್ನು ತಿಳಿದುಕೊಂಡಿದ್ದೇನೆ. ವಿಶೇಷವಾಗಿ ಅವರು ಕಾವೇರಿ ಕಣಿವೆ ಬಗ್ಗೆ ಚೆನ್ನಾಗಿ ಅಭ್ಯಾಸ ಮಾಡಿದ್ದಾರೆ. ಇದನ್ನು ರಾಜ್ಯ ಸರ್ಕಾರ ತೀಕ್ಷ್ಣವಾಗಿ ಪರಿಗಣಿಸಿ ಇತ್ಯರ್ಥಪಡಿ ಸದೆ ಹೋದರೆ ಅದರಿಂದ ಹಾನಿಯಾಗುತ್ತದೆ ಎಂದು ಅವರು ಹೇಳಿ, ನದಿಗಳ ಸಮಸ್ಯೆ ವಿಚಾರದಲ್ಲಿ ಕೇಂದ್ರ ಮಂತ್ರಿಗಳು ಕೊಟ್ಟಿರುವ ಹೇಳಿಕೆಯನ್ನು ಪ್ರಸ್ತಾಪ ಮಾಡಿದರು. ಕೇಂದ್ರ ಸರ್ಕಾರದವರು ಒಂದು ತಿದ್ದುಪಡಿ ತಂದು ಸಮಸ್ಯೆಗಳನ್ನು ನೀಗಿಸುತ್ತೇವೆಂದು ಹೇಳಿರುವಾಗ ನಮ್ಮ ರಾಜ್ಯಕ್ಕೆ ಅದರಿಂದ ಹಾನಿಯಾಗುತ್ತದೆನ್ನುವ ಶಂಕೆಯನ್ನೂ ಅವರು ವ್ಯಕ್ತ ಮಾಡಿದರು. ನಮ್ಮ ರಾಜ್ಯಕ್ಕೆ ಒಳ್ಳೆಯ ದಾಗಬೇಕೆನ್ನುವ ಉದ್ದೇಶದಿಂದ ನಾವು ಕೆಲಸ ಮಾಡುತ್ತಿರುವುದು ಈಗಾಗಲೇ ತಮಗೆ ಸ್ಪಷ್ಟವಾಗಿದೆ. ನಮ್ಮ ರಾಜ್ಯದ ನೀರಾವರಿ ಸಲಹಾ ಮಂಡಲಿಯ ಅಧ್ಯಕ್ಷರು ಪತ್ರಿಕೆಗಳಲ್ಲಿ ಬಂದಿದ್ದ ಹೇಳಿಕೆಗಳನ್ನು ನಿರಾ ಕರಿಸಿದ್ದಾರೆ. ಈ ಮಂಡಲಿ ಸ್ಟಾಚ್ಯುಯಟರಿ ಬೋರ್ಡ್ ಅಲ್ಲ. ಸಲಹಾ ಮಂಡಲಿ ಮಾತ್ರ. ನೀರಾ ವರಿ ವಿಚಾರದಲ್ಲಿ ಹೆಚ್ಚು ವಿಷಯಗಳನ್ನು ತಿಳಿದು ಕೊಂಡಿರುವವರು ಈ ಮಂಡಲಿಯ ಅಧ್ಯಕ್ಷರಾದರೆ ಒಳ್ಳೆಯ ಸಲಹೆಗಳನ್ನು ನೀಡುವರೆಂಬ ದೃಷ್ಟಿಯಿಟ್ಟುಕೊಂಡು ಮಾನ್ಯ ಮುಖ್ಯ ಮಂತ್ರಿಗಳು ಈ ವ್ಯವಸ್ಥೆ ಮಾಡಿದ್ದಾರೆ. ಆದುದರಿಂದ, ಅಂತರ ರಾಜ್ಯ ನದಿ ನೀರಿನ ವಿವಾದಗಳನ್ನು ಬಗೆಹರಿಸುವ ದಿಸೆಯಲ್ಲಿ ಮಾನ್ಯ ದೇವೇಗೌಡರು ವ್ಯಕ್ತಮಾಡಿರುವ ಅಭಿಪ್ರಾಯಗಳನ್ನು ಸರ್ಕಾರ ಮನಸ್ಸಿನಲ್ಲಿಟು ಕೊಂಡಿರುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಇದು ಬಹಳ ಜಟಿಲವಾದ ಪ್ರಶ್ನೆ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳೇ ಉತ್ತರ ನೀಡುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಬಹುಶಃ ಅವರು ವಿಧಾನ ಪರಿಷತ್ತಿನಲ್ಲಿಂದು ಶ್ರೀ ಇಬ್ರಾಹಿಂ ಅವರ ವಿಚಾರ ಚರ್ಚೆಯಲ್ಲಿರುವುದರಿಂದ ಅಲ್ಲಿರಬಹುದು. ತಾವೂ ಕೂಡ ಚೆನ್ನಾಗಿ ಮಾತನಾಡುತ್ತಿದ್ದೀರಿ. ಕೇಂದ್ರ ಸರ್ಕಾರಕ್ಕೆ ತಾವೊಂದು ಮಾತು ಹೇ ಬೇಕಾಗುತ್ತದೆ. ಕೇಂದ್ರ ಸರ್ಕಾರದವರು ಕಾಯಿದೆಯನ್ನು ತಿದ್ದುಪಡಿ ಮಾಡುವ ಮುಖಾಂತರ ನಮ್ಮ ಅಧಿಕಾರವನ್ನು ತೆಗೆದುಕೊಳ್ಳುವುದಕ್ಕೆ ಹೋಗಬಾರದು. ರಾಷ್ಟ್ರೀಯ ಜಲಸಂಪತ್ತನ್ನು ವಿತರಣೆ ಮಾಡುವಾಗ, ಯಾವ ಯಾವ ರಾಜ್ಯಗಳಿಗೆ ಇವತ್ತು ಧಕ್ಕೆಯಾಗಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು, ಭೂಗುಣ, ಜನಸಂಖ್ಯೆ, ಜಲಾನಯನ ಪ್ರದೇಶ, ಇಳುವರಿ ಪ್ರದೇಶ ಅಥವಾ ಎಷ್ಟು ಪ್ರದೇಶ ಅಭಿವೃದ್ಧಿಯಾಗಿದೆ ಮತ್ತು ಹಿಂದುಳಿದಿರುವಿಕೆ—ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ರಾಷ್ಟ್ರೀಯ ನೀತಿಯನ್ನು ನಿರೂಪಣೆ ಮಾಡಿದರೆ, ನಮಗಷ್ಟೇ ಸಾಕು. ನಮಗೆ ಇನ್ನೇನು ಮಾಡಬೇಕಾಗಿಲ್ಲ ನಮಗಿರತಕ್ಕ ಅಧಿಕಾರವನ್ನು ಉಳಿಸಿಕೊಂಡು, ಜಲಸಂಪತ್ತನ್ನು ವಿನಿಯೋಗ ಮಾಡುವುದಕ್ಕೆ ರಾಷ್ಟ್ರಿಯ ನೀತಿಯನ್ನು ನಿರೂಪಣೆ ಮಾಡಿದರೆ ನಮಗೆ ಹೆಚ್ಚು ಅನುಕೂಲವಾಗುತ್ತದೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ.—ಕೇಂದ್ರ ಸರ್ಕಾರದವರು ಏನಾದರೂ ತಿದ್ದುಪಡಿ ತರಬೇಕಾದ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಕೇಳಬಹುದು. ಆಗ ನಾವು ಸ್ಪಷ್ಟವಾಗಿ ವಿಚಾರವನ್ನು ತಿಳಿಸುವುದಕ್ಕೆ ಸಾಧ್ಯ. ಆದುದರಿಂದ, ಮಾನ್ಯ ದೇವೇಗೌಡರು ವ್ಯಕ್ತಪಡಿಸಿರುವ ಶಂಕೆಯನ್ನು ಗಮನದಲ್ಲಿಟ್ಟುಕೊಂಡು, ಇದನ್ನು ಇತ್ಯರ್ಥಪಡಿಸುವ ದಿಸೆಯಲ್ಲಿ ಪ್ರಯತ್ನ ಮಾಡಲಾಗುವುದೆಂದು ಹೇಳಬಯಸುತ್ತೇನೆ.

ಇದರ ಜೊತೆಗೆ, ಕೃಷ್ಣ ಮೇಲ್ದಂಡೆ ಯೋಜನೆಗೆ ವಿಶ್ವ ಬ್ಯಾಂಕಿನ ನೆರವು ಪಡೆದಿರುವಂತೆ ಪ್ಲಾನ್‌ನಲ್ಲಿರುವ ರಾಜ್ಯದ ಇತರ ಯೋಜನೆಗಳಿಗೂ ನೆರವು ಪಡೆಯಲು ಏತಕ್ಕೆ ಪ್ರಯತ್ನ ಮಾಡಬಾರದೆಂದು ಅವರು ಕೇಳಿದರು. ಈ ಬಗ್ಗೆ ನಾವು ಕೇಂದ್ರ ಸರ್ಕಾರದ ಹಣಕಾಸಿನ ಸಚಿವರೊಡನೆ ಸಮಾಲೋಚನೆ ಮಾಡಿ ಡಿಬೆಂಚರ್ ಪಡೆಯಲಿಕ್ಕೆ ಪ್ರಯತ್ನಿಸುತ್ತಿದ್ದೇವೆ. Financial indiscipline ಬಗ್ಗೆ ಶ್ರೀ ದೇವೆಗೌಡರು ಮತ್ತು ಆನಂದಕುಂದ ಹೆಗ್ಗಡೆಯವರು ಹೇಳಿದ್ದಾರೆ. ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳಿಗೆ ಐದು ಸಾವಿರ ರೂಪಾಯಿಗಳವರೆಗೂ ಖರೀದಿ ಮಾಡುವ ಅಧಿಕಾರವಿದ್ದರೂ ಅವರು ೨–೩ ಸಾವಿರ ಬ್ರೇಕ್ ಅಪ್ ಮಾಡಿ ಖರೀದಿಸುವ ವ್ಯವಸ್ಥೆ ಇತ್ತು. ಈ financial indiscipline ಹೋಗಲಾಡಿಸುವುದಕ್ಕೆ ಮುಖ್ಯ ಇಂಜಿನಿಯರ್‌ಗಳ ಸಭೆ ಕರೆದು ಸೂಚನೆ ನೀಡಲಾಗುವುದು. Central mobilisation of machinery—ಬಗ್ಗೆ ಮಾತನಾಡಿ ಆ ಯಂತ್ರೋಪಕರಣಗಳನ್ನು ಬೇರೆ ಬೇರೆ ಯೋಜನೆಗಳಿಗೆ ಉಪಯೋಗಿಸಬೇಕೆಂದು ದೃಷ್ಟಿಯಿಟ್ಟುಕೊಂಡು ಹೇಳಿದ್ದಾರೆ. ಈ ಬಗ್ಗೆ ಈಗಾಗಲೇ ಸೂಚನೆ ಕೊಡಲಾಗಿದೆ. ಅದೇರೀತಿ financial discipline ತರುವುದಕ್ಕೆ ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಗಳಿಗೆ ಆದ್ಯತೆ ಕೊಡುತ್ತೇವೆ, ಮತ್ತು ಇನ್ನು ಮುಂದೆ ಹಿಗಾಗುವುದಿಲ್ಲವೆಂದು ತಿಳಿಸಬಯಸುತ್ತೇನೆ.

ಇನ್ನು, ಕೃಷ್ಣ ಮೇಲ್ದಂಡೆಯಲ್ಲಿ ನಡೆದಿರತಕ್ಕ ಕೆಲವು ವಿಷಯಗಳನ್ನು ಪ್ರಸ್ತಾಪಮಾಡುತ್ತಾ ಕಡಿಮೆ ಟೆಂಡರ್ ಹಾಕಿದ್ದರೂ ಕಂಟ್ರಾಕ್ಟನ್ನು ಬೇರೆಯವರಿಗೆ ಕೊಟ್ಟಿದ್ದಾರೆಂದು ಹೇಳಿದರು. ಇದರ ವಿವರಗಳನ್ನು ಆಮೇಲೆ ಒದಗಿಸಿಕೊಡುತ್ತೇನೆ.

SRI C. M. ARUMUGHAM.—Has the Minister studied the Upper Krishna Project ? How it is working; whether they have taken the World Bank Loan; whether there are proper returns; whether there is misuse of thousands of bags of cement ? Has he studied all these questions ? How it is misused ? Whether any enquiry is going on ? What is the result of enquiry ? Upper Krishna Project is a very big project. Give a policy statement, If you have not studied, reserve it for some other day. You have not touched them for want of time. When you are a Minister of State for Major Irrigation, you

touch these subjects and the Government should come forward with the facts of the case. What is going on all round? Your Hemavathi Project was constructed spending crores of rupees. Are we using the water? Like that, you must make a statement, Mr. Speaker, please if the time is not there, let him reply tomorrow.

SRI K. BHASKAR NAIDU.—There is an allegation with regard to the Upper Krishna Lands.

MR. SPEAKER.—By whom? Who made that reference?

SRI K. BHASKAR NAIDU.—We have seen in papers and other things. Is it a fact that the allegations are there?

MR SPEAKER.—Let him complete the reply. You can raise it afterwards.

SRI C. M. ARUMUGHAM.—Mr. Speaker, even if you ask us to go, we cannot go because it is raining outise.

SRI K. BHASKAR NAIDU.—Let him say how much money is distributed in that area for the land that has been acquired. World Bank has given lot of money. What is the actual amount that has been spent there?

ಶ್ರೀ ಬಿ.ಬಿ. ಚಿಮ್ಮನಕಟ್ಟಿ —ಶ್ರೀ ದೇವೇಗೌಡರು ಒಂದು ಸ್ಪಷ್ಟವಾದ ಪ್ರಕರಣದ ಬಗ್ಗೆ ಹೇಳಿದ್ದಾರೆ ಅಗ್ರಿಮೆಂಟ್ ಟೆಂಡರನ್ನು ಯಾವ ತಾರೀಖಿನಲ್ಲಿ ಕರೆದಿದ್ದರು ಮತ್ತು ಯಾರು ಕಡಿಮೆ ಟೆಂಡರನ್ನು ಕೊಟ್ಟಿದ್ದರು ಎಂದು ಅವರು ಕೇಳಿದ್ದಾರೆ ಆದರ ಬಗ್ಗೆ ವಿವರಗಳು ಸಿಗುತ್ತಿಲ್ಲ. ಈ ಎರಡು ವಿಚಾರಗಳ ಬಗ್ಗೆ ವಿವರ ತರಿಸಿ ವಿಚಾರ ಮಾಡುತ್ತೇನೆ. ಜೊತೆಗೆ, ಸಿಮೆಂಟಿನ ದುರ್ವ್ಯವಹಾರದ ಬಗ್ಗೆ ಹೇಳಿದ್ದಾರೆ. ಅದನ್ನು ಸಿ.ಒ.ಡಿ.ಗೆ ವಹಿಸಿದ್ದೇವೆ. ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆ. ತನಿಖೆ ಇನ್ನೂ ನಡೆಯುತ್ತಿದೆ. ತಪ್ಪಿತಸ್ಥರಿಗೆ ಶಿಕ್ಷೆ ಕೊಡಬೇಕೆಂದು ಸರ್ಕಾರದ ಉದ್ದೇಶವಿದೆ. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಇದರಲ್ಲಿ ಸಂದೇಹಕ್ಕೆ ಆಸ್ಪದವಿಲ್ಲ. ಮಾನ್ಯ ದೇವೇಗೌಡರು, Centrel Mechnical Organisation ಅನ್ನು ರಾಜ್ಯದಲ್ಲಿ ಪ್ರಾರಂಭ ಮಾಡಬೇಕೆಂದು ಹೇಳಿದರು. ಅಂತಹ ಒಂದು ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಈಗಾಗಲೇ ಇದೆ ಎಂದು ಅವರಿಗೆ ತಿಳಿಸಬಯಸುತ್ತೇನೆ.

SRI K BHASKAR NAIDU.—What is the amount that has been spent? The figures are not comming forth. This is a very simple question that I am asking.

MR. SPEAKER.—He may touch about this afterwards.

SRI K. BHASKAR NAIDU.—This is about Upper Krishna. How many acres have been acquired? This has to be provided. This is a simple question, that I am asking.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಇದರ ಬಗ್ಗೆ ಆಮೇಲೆ ಉತ್ತರ ಕೊಡುತ್ತೇನೆ.

SRI K BHASKAR NAIDU.—You are debating on this subject. The Minister does not know how much money has been spent on acquisition.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಇನ್ನು, Central Computerisation Scheme ಮಾಡಿದರೆ ಒಳ್ಳೆಯ ರೀತಿಯಲ್ಲಿ ಕೆಲಸಗಳಾಗುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಬಗ್ಗೆ ಸೂಚನೆ ಕೊಟ್ಟಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ನಮ್ಮ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ವಿಭಾಗಗಳಲ್ಲೂ ಪರಿಣಾಮಕಾರಿಯಾಗಿ ಕೆಲಸನಡೆಯುವ ಹಾಗೆ ಪ್ರಯತ್ನ ಮಾಡುತ್ತಿದ್ದೇವೆ.

ಯೋಜನೆಗಳನ್ನು ಆದಷ್ಟು ಬೇಗ ಮುಗಿಸಬೇಕೆಂದು ಮಾನ್ಯ ಸದಸ್ಯರನೇಕರು ಹೇಳಿದ್ದಾರೆ. ಈ ಎಲ್ಲ ಸದಸ್ಯರ ಅಭಿಪ್ರಾಯಗಳನ್ನೂ ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ. ಶ್ರೀ ಪರಪ್ಪನವರು ಮತ್ತು ಶ್ರೀ ಅರಕೇರಿಯವರು ಯಾತ ನೀರಾವರಿ ಬಗ್ಗೆ ಹೇಳಿದ್ದಾರೆ. ಇದು ಕಮ್ಯಾಂಡ್ ಏರಿಯಾ ವ್ಯಾಪ್ತಿಗೆ ಬರುವುದಾಗಿದ್ದು ಇದು ಪಾಲಿಸಿ ಮ್ಯಾಟರ್ ಆಗುತ್ತದೆ. ಆದರೂ, ಮಾನ್ಯ ಸದಸ್ಯರು ಹೇಳಿರುವ ಸಲಹೆಗಳನ್ನು ಗಮನದಲ್ಲಿ ಇಟ್ಟುಕೊಂಡು ಸರ್ಕಾರ ಪರಿಶೀಲಿಸುತ್ತದೆ.

ಬಾಗಲಕೋಟೆ ಮತ್ತು ಸಂಗಮೇಶ್ವರದ ಮುಳಗಡೆ ಬಗ್ಗೆ ಶ್ರೀ ಪರಪ್ಪನವರು ಹೇಳಿದ್ದಾರೆ. ಸಂಗಮೇಶ್ವರ ದೇವಸ್ಥಾನವನ್ನು ಉಳಿಸುವ ಮತ್ತು ಕಟ್ಟಿಸುವ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ. ಬಾಗಲಕೋಟೆ ಮುಳುಗಡೆ ವಿಚಾರದಲ್ಲಿ ವರದಿ ಬಂದಿದ್ದು ಅದನ್ನು ನಾನು ಅವರಿಗೆ ತಿಳಿಸಿದ್ದೇನೆ.

ಪ್ರತಿಯೊಬ್ಬ ಸದಸ್ಯರೂ ಮಾಡಿರತಕ್ಕ ಸಲಹೆಗಳನ್ನು ನಾನು ನೋಟ್ ಮಾಡಿಕೊಂಡಿದ್ದೇನೆ ಮತ್ತು ಇವುಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆಗೆ ಮಾತನಾಡಿ, ಕರ್ನಾಟಕ ಜನತೆಗೆ ಒಳ್ಳೆಯದನ್ನು ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಹೇಳಿ, ನನ್ನ ಇಲಾಖೆಯ ಬೇಡಿಕೆಗೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಹೆಚ್. ಡಿ. ಚೌಡಯ್ಯ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನನ್ನ ಸ್ಪೀಚ್ ಆದಮೇಲೆ ಕ್ಲಾರಿಫಿಕೇಷನ್‌ಗೆ ಉತ್ತರ ಕೊಡುತ್ತೇವೆಂದು ಹೇಳಿದರು. ಹೇಮಾವತಿ ಯೋಜನೆಯು ಮೂಲ ಯೋಜನೆಯಲ್ಲಿ ಎಡದಂಡೆ ನಾಲೆ ಏನಿದೆ ಅದು ಮಂಡ್ಯ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಹಾದು ಹೋಗುತ್ತದೆ. ಈ ಸಾರಿ ಫೈನಲ್ ಅಲೈನ್‌ಮೆಂಟ್ ಫಿಕ್ಸ್ ಆಗಿದೆ. ವಿಲೇಜ್‌ವೈಸ್ ಸರ್ವೆ ಆಗಿದೆ, ಅಚ್‌ಕಟ್ ಸರ್ವೆ ಮುಗಿದಿದೆ. ಅಲೈನ್‌ಮೆಂಟ್ ಚೇಂಜ್ ಮಾಡಬೇಕೆಂದು ಸನ್ನಾಹ ನಡೆಯುತ್ತಿದೆ ಎಂದು ಕೇಳಿದೆ. ಆ ಅನುಮಾನವನ್ನು ಪರಿಹಾರ ಮಾಡಲಿಕ್ಕೆ ಆ ಪ್ರದೇಶದ ಶಾಸಕರನ್ನು, ಇಂಜಿನಿಯರ್‌ಗಳನ್ನು ಕರೆದು ಈ ಅಧಿವೇಶನ ಮುಗಿಯುವುದರೊಳಗೆ ತಾವು ಸಮಾಲೋಚನೆ ಮಾಡಿ ಅನುಮಾನ ಪರಿಹಾರ ಮಾಡಬೇಕು ಎಂದು ಕೇಳಿದ್ದೆ ಅದಕ್ಕೆ ಮಾನ್ಯ ಮಂತ್ರಿಗಳಿಂದ ಉತ್ತರ ಬರಲಿಲ್ಲ, ಇನ್ನು ಮಾಡರನೈಸೇಷನ್ ಆಫ್ ಕೆ.ಆರ್.ಎಸ್. ಕೆನಾಲ್ ತಾವು ಕೊಟ್ಟಿರತಕ್ಕ ಅಂಕಿಅಂಶ ಏನು ಇದೆ ಅದರ ಪ್ರಕಾರ ೧೨೦ ವರ್ಷ ಬೇಕಾಗುತ್ತದೆ. ೬೩ ಕೋಟಿ ರೂಪಾಯಿ ಅಂದಾಜು ಈ ಯೋಜನೆ. ಅದರಲ್ಲಿ ಮೊದಲನೇ ಫೇಸ್ ೧೪ ಕೋಟಿ ೮೦ ಲಕ್ಷ ರೂಪಾಯಿಗಳು. ಎರಡು ವರ್ಷದಿಂದ ನೀವು ಖರ್ಚು ಮಾಡಿರತಕ್ಕ ದಾಟಿಯನ್ನು ನೋಡಿದರೆ ಇನ್ನು ೧೨೦ ವರ್ಷಗಳು ಬೇಕಾಗುತ್ತದೆ. ಇದು ಸಾಧ್ಯವೇ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಅಧ್ಯಕ್ಷರೆ ಮಾನ್ಯ ಸದಸ್ಯರು ಅಲೈನ್‌ಮೆಂಟ್ ಬಗ್ಗೆ ಕೇಳಿದ್ದಾರೆ. ಹೇಮಾವತಿ ಲೆಫ್ಟ್‌ಬ್ಯಾಂಕ್ ಕೆನಾಲ್ ೧೫೬ ಕಿಲೋಮೀಟರ್ ಉದ್ದ ಇದೆ. ಈಗಾಗಲೇ ಫೈನಲೈಸ್ ಮಾಡಿ ಟೆಂಡರ್ ಫಿಕ್ಸ್ ಅಪ್ ಮಾಡಿದ್ದಾರೆ.

ಅಧ್ಯಕ್ಷರು.—ಅಲೈನ್‌ಮೆಂಟ್ ಬದಲಾವಣೆ ಆಗುತ್ತಿರುವುದರ ಬಗ್ಗೆ ಮಾನ್ಯ ಸದಸ್ಯರು ಅವರ ಅನುಮಾನ ಪರಿಹಾರ ಮಾಡಿಕೊಳ್ಳಲಿಕ್ಕೆ ಕೇಳುತ್ತಿದ್ದಾರೆ. ಈ ಅಧಿವೇಶನ ಮುಗಿಯುವುದರೊಳಗೆ ಮಾನ್ಯ ಸದಸ್ಯರನ್ನು ಕರೆಸಿ ಅವರ ಅನುಮಾನ ಪರಿಹಾರ ಮಾಡುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಅಧ್ಯಕ್ಷರೆ, ಮಾನ್ಯ ಸದಸ್ಯರನ್ನು ಕರೆದು ಅವರ ಬಗ್ಗೆ ಡಿಸ್‌ಕಷನ್ ಮಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ನಾಲ್ಕು ತಾಲೂಕುಗಳಲ್ಲಿ ಹಾದು ಹೋಗುತ್ತದೆಂದು ಹೇಳಿದ್ದಾರೆ.

ಶ್ರೀ ಬಿ. ಬಿ, ಚಿಮ್ಮನಕಟ್ಟಿ.—ಅಧ್ಯಕ್ಷರೆ, ನಾನು ಈ ವಿಷಯಂದ ಬಗ್ಗೆ ಸಂಬಂಧಪಟ್ಟ ಮಾನ್ಯ ಸದಸ್ಯರೆಲ್ಲರನ್ನೂ ಕರೆದು ಪ್ರಸ್ತಾಪ ಮಾಡುತ್ತೇನೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಅಧ್ಯಕ್ಷರೆ, ನಾನು ಎಸ್ಟಿಮೇಟ್ ಕಮಿಟಿಯ ಛೇರ್ಮನ್ ಆಗಿ ಹಲವಾರು ಪ್ರಾಜೆಕ್ಟ್‌ಗಳಿಗೆ ಭೇಟಿ ಕೊಟ್ಟಿದ್ದೇನೆ. ಅಪ್ಪರ್ ಕೃಷ್ಣ ನೋಡಿದ್ದೇನೆ. ಎಲ್ಲಿ ನೋಡಿದರೂ ಗ್ಲೇರಿಂಗ್ ಆಗಿ ಕಾಣಿಸುತ್ತದೆ, ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಇವೊತ್ತು ೨೦ ಸಾವಿರ ಎಕರೆಗೆ ನೀರು ಕೊಟ್ಟಿಲ್ಲ. ಆ ಯೋಜನೆಯಿಂದ ಸುಮಾರು ಎರಡು ಲಕ್ಷ ಎಕರೆಗೆ ನೀರಾವರಿ ಆಗಬೇಕು. ಇವೊತ್ತು ಚಾನಲ್ ವರ್ಕ್ ಆಗಿಲ್ಲ, ಅಪ್ಪರ್ ಕೃಷ್ಣದಲ್ಲಿ ಏನು ಮಾಡಿದರು ಅರ್ದನ್ ಡ್ಯಾಂಮ್ ಕಟ್ಟಿದರು. ವರ್ಲ್ಡ್ ಬ್ಯಾಂಕ್ ಅಥಾರಿಟೀಸ್ ಬಂದು ಹೇಳಿದರು ಅಂಥ ಅರ್ದನ್ ಡ್ಯಾಂಮ್ ಕಿತ್ತು ಹಾಕಿ ಮೇಸನರಿ ಡ್ಯಾಮ್ ಕಟ್ಟಿದ್ದೀರಿ. ಇದನ್ನು ಯಾವರೀತಿ ಬಗೆಹರಿಸುತ್ತಿರಾ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಅಧ್ಯಕ್ಷರೆ, ಇದೇ ವಿಷಯವನ್ನು ಅನೇಕ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಹಾಗೆ ಮಾನ್ಯ ದೇವೇಗೌಡರು, ಮಾನ್ಯ ಚಂದ್ರೇಗೌಡರು ಅನೇಕ ವಿಷಯಗಳನ್ನು ಪ್ರಸಾಪ್ತ ಮಾಡಿದ್ದಾರೆ, ಈಗಾಗಲೇ ಅಲ್ಲಿ ಟೆಂಡರ್ ಫಿಕ್ಸ್ ಆಪ್ ಮಾಡಲಾಗಿದೆ. ತಮ್ಮ ಉದ್ದೇಶ ಏನು ಎಂದರೆ, ನಾವು ಎಕ್ಸ್‌ಪೆಂಡಿಚರ್ ಯಾವ ರೀತಿ ಮಾಡುತ್ತೇವೆ ಅದೇರೀತಿ ಪ್ರಪೋಷನೇಟ್ ಆಗಿ ಇರಿಗೇಷನ್ ಪೊಟೆನ್‌ಷಿಯಲ್ ಕ್ರಿಯೇಟ್ ಆಗಬೇಕು ಎಂದು ಇದೆ. ಹಿಂದೆ ಇಲಾಖೆಯವರು ಅದನ್ನು ಯಾವರೀತಿ ಮಾಡಿದ್ದರೊ ಗೊತ್ತಿಲ್ಲ. ಟೆಂಡರ್ ಫಿಕ್ಸ್ ಅಪ್ ಮಾಡಿ ಪ್ರಾಜೆಕ್ಟ್ ಕಟ್ಟುವಾಗ ನಾವು ಕೊಟ್ಟಿರತಕ್ಕ ೧೦ ಕೋಟಿ ರೂಪಾಯಿನಲ್ಲಿ ಎಷ್ಟು ಕೆಲಸವನ್ನು ತೆಗೆದುಕೊಳ್ಳಬೇಕಾಗಿತ್ತೋ ಅಷ್ಟೇ ಕೆಲಸ ತೆಗೆದುಕೊಂಡಿದ್ದರೆ ಒಳ್ಳೆಯದಿತ್ತು. ಮೊದಲು ೧೦ ಕೋಟಿ ರೂಪಾಯಿ ಗ್ರ್ಯಾಂಟ್ ಸ್ಯಾಂಕ್ಷನ್ ಮಾಡುತ್ತಾರೆ ಎನ್ನುವ ಉದ್ದೇಶ ಇದ್ದರೂ ಕೂಡ ಸುಮಾರು ೩೦ ಕೋಟಿ ರೂಪಾಯಿಯಷ್ಟು ಕೆಲಸ ತೆಗೆದುಕೊಂಡು ಈಗಾಗಲೇ ಎಲ್ಲಾ ಉದ್ದದ ಚಾನಲ್ ಮಾಡಿದ್ದಾರೆ. ಯಾವುದನ್ನೂ ಪೂರ್ತಿ ಮಾಡಿಲ್ಲ. ಈ ವರ್ಷ ಅವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಎಲ್ಲಾ ಚೀಫ್ ಇಂಜಿನಿಯರ್, ಸೂಪರಿಂಟೆಂಡೆಂಟ್ ಇಂಜಿನಿಯರ್ ಮೀಟಿಂಗ್ ಕರೆದು ನಾವು ಕೊಟ್ಟಿರತಕ್ಕ ದುಡ್ಡಿನಲ್ಲಿ ಪ್ರಪೋಷನೇಟ್ ಆಗಿ ಇರಿಗೇಷನ್ ಪೊಟೆನ್ಷಿಯಲ್ ಕ್ರಿಯೇಟ್ ಮಾಡಬೇಕು. ನಮ್ಮ ಆರ್ಥಿಕ ಸ್ಥಿತಿಯನ್ನು ನೋಡಿಕೊಳ್ಳಬೇಕೆಂದು ಹೇಳಿ ಚರ್ಚೆ ಮಾಡಿದ್ದೇವೆ. ಹೋದ ವರ್ಷ ಅವರು ಯೋಜನೆಗಳನ್ನು ಹಾಕಿಕೊಂಡಿದ್ದರು. ಈ ವರ್ಷ ಮಾತ್ರ ಪ್ರತಿಯೊಬ್ಬ ಚೀಫ್ ಇಂಜಿನಿಯರ್ ಕೂಡ ಇದರ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟಿದ್ದಾರೆ. ಈ ಒಂದು ವ್ಯವಸ್ಥೆಗೆ ಒಳಗಾಗಿದ್ದಾರೆ. ಮೊದಲು ಹೆಚ್ಚಿನ ರೀತಿಯಲ್ಲಿ ಕೆಲಸಗಳನ್ನು ತೆಗೆದುಕೊಂಡು ಅದನ್ನು ಅರ್ಧ ಮಾಡಿ ಸರ್ಕಾರಕ್ಕೆ ಕೆಟ್ಟ ಹೆಸರು ತರತಕ್ಕ ಸಂದರ್ಭ ಇತ್ತು. ಕಾರಣ ಅಂದರೆ ಎಲ್ಲಾ ಕಂಟ್ರಾಕ್ಟರುಗಳಿಗೆ ಹೆಚ್ಚಿಗೆ ಕೆಲಸ ಕೊಟ್ಟು, ಅವರು ಕೆಲಸ ಮಾಡಿದರೂ ಕೂಡ ದುಡ್ಡು ಕೊಡಲಿಕ್ಕೆ ಆಗದೇ ಇದ್ದ ಪರಿಸ್ಥಿತಿ ಇತ್ತು. ಮಾನ್ಯ ದೇವೇಗೌಡರು ಏನು ಹೇಳಿದರು, ಒಬ್ಬ ಕಂಟ್ರಾಕ್ಟರು ಅನೇಕ ಸಾರಿ ತಿರುಗಾಡಿ ಕೊನೆಗೆ ನಮ್ಮ ಮನೆಗೆ ಬಂದಿರತಕ್ಕ ಸನ್ನಿವೇಶವನ್ನು ಪ್ರಸ್ತಾಪ ಮಾಡಿದರು. ಇನ್ನು ಮುಂದೆ ಈ ರೀತಿ ಆಗಬಾರದು ಎಂದು ನಾವು ಸಂಬಂಧಪಟ್ಟ ಎಲ್ಲಾ ಚೀಫ್ ಇಂಜಿನಿಯರ್‌ಗಳಿಗೆ ಇನ್‌ಸ್ಟ್ರಕ್ಷನ್ ಕೊಟಿದ್ದೇವೆ. ಆ ರೀತಿಯಲ್ಲಿ ಈ ವರ್ಷ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ, ಇಷ್ಟನ್ನು ಹೇಳಿ ಮಾನ್ಯ ಸದಸ್ಯರು ನನ್ನ ಬೇಡಿಕೆಗೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR SPEAKER.—We will have to sit for a long time. There are some more Ministers. Let us see afterwards.

ಶ್ರೀ ಕೆ. ಹೆಚ್. ಹನುಮೆಗೌಡ.—ಅಧ್ಯಕ್ಷರೆ, ಡ್ಯಾಮ್ ಕಟ್ಟಿ ಜಮೀನು ಮುಳುಗಡೆಯಾದಾಗ ಪುನರ್ವಸತಿ ಕಲ್ಪಿಸುವ ಜಾಗದಲ್ಲಿ ಲಿಫ್ಟ್ ಇರಿಗೇಷನ್ ಮಾಡಿಕೊಡಬೇಕೆಂದು ಪ್ರಸ್ತಾಪವಾಗಿ ಫೋರ್ ಶೋರ್‌ನಿಂದ ನೀರನ್ನು ಲಿಫ್ಟ್ ಮಾಡಿಕೊಡಬೇಕೆಂದು ಆರ್ಡರ್ ಆಗಿದೆ ಎಂದು ಕೇಳಿದ್ದೇನೆ. ಮಾನವೀಯ ದೃಷ್ಟಿಯಿಂದ, ಯಾರು ಜಮೀನನ್ನು ಕಳೆದುಕೊಂಡು ನಿರ್ಗತಿಕರಾಗಿರುತ್ತಾರೆ ಅವರಿಗೆ ಆ ಡ್ಯಾಮ್‌ನ ಫೋರ್‌ಶೋರ್‌ನಿಂದ ನೀರನ್ನು ಲಿಫ್ಟ್ ಮಾಡಿಕೊಡಲಿಕ್ಕೆ ೧೯೭೭ರಲ್ಲಿ ಆಗಿರತಕ್ಕ ಜಿ.ಒ. ಸ್ವಲ್ಪ ಬದಲಾವಣೆ ಮಾಡಿ ಅವರಿಗೆ ನೀರನ್ನು ಕೊಡಲಿಕ್ಕೆ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

MR. SPEAKER.—The Minister can just think of it and call the Member and have a talk with him.

SRI K. BHASKAR NAIDU.—So the suggestion is that should I go to his chamber. I have your permission to go to his chamber ?

MR. SPEAKER.—Even without my permission you can.

ಶ್ರೀ ಜಿ. ಕೆ. ತಕ್ಕೆಡ್‌..—ಅಧ್ಯಕ್ಷರೆ, ನಾವು ಕ್ಲಾರಿಫಿಕೇಷನ್ ಕೇಳುವುದು ಬೇಡವೆ ?

MR. SPEAKER.—Let me see afterwards. There are three more Ministers to speak.

ಶ್ರೀ ಜಿ ಕೆ. ತಕ್ಕೆಡ್‌.—ಅಧ್ಯಕ್ಷರೆ, ನಾನು ಒಂದೆರಡು ಕ್ಲಾರಿಫಿಕೇಷನ್ ಕೇಳುತ್ತೇನೆ.

ಅಧ್ಯಕ್ಷರು.—ಇನ್ನೂ ಮೂರು ಜನ ಮಂತ್ರಿಗಳಿದ್ದಾರೆ ಅನಂತರ ಕೇಳಿ. Please hear me. I am really sorry.

SRI K. BHASKAR NAIDU.—I am saying that this hustling and bustling......

MR. SPEAKER.—Just because of you, do you know how many people have spoken ? Shall I say all thes things ?

ಶ್ರೀ ಕೆ. ಭಾಸ್ಕರ ನಾಯುಡು.—ನಾಲ್ಕು ಜನ ಮಂತ್ರಿಗಳು ಒಂದೇ ದಿನದಲ್ಲಿ ಉತ್ತರ ಹೇಳಿದರೆ, ಏನು ಸ್ವಾಮಿ. If yon want to close the Assembly by 23rd you can guilletione and close.

MR. SPEAKER.—I am really sorry. ಶನಿವಾರವೇ ಮುಗಿಸಬೇಕಾಗಿತ್ತು. When did we commence this ? This is the fourth day. Do you want that it should be continued for to-morrow also ? If that is the case I do not mind.

SRI K. BHASKAR NAIDU.—Please calculate the member of hours discu-sed. Because it is an important thing we tried to discuss.

MR. SPEAKER.—Please ask your whip.

SRI K. BHASKAR NAIDU.—I will obey you. But the question of hustling and bustling...

MR. SPEAKER.—I call the Hon. Minister for Minor Irrigation to reply.

ಶ್ರೀ ಎಂ. ಎಂ. ಜೆ ಸದ್ಯೋಜಾತ (ಸಾರಿಗೆ ಹಾಗೂ ಸಣ್ಣ ನೀರಾವರಿ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಭಾವಿಯವರು.—ನಮ್ಮ ಕಡೆಗೆ ಚೀಫ್ ಇಂಜಿನಿಯರ್ ಪೋಸ್ಟ್ ಮಾಡಬೇಕಾಗುತ್ತದೆ ಎಂದು ಹೇಳಿದ್ದಾರೆ. ಸರ್ಕಾರ ಈಗ ಇರತಕ್ಕ ವ್ಯವಸ್ಥೆಯಿಂದ ಅಲ್ಲಿಗೆ ಚೀಫ್ ಇಂಜಿನಿಯರ್ ಹಾಕುವ ವ್ಯವಸ್ಥೆ ಇಲ್ಲ ಅಂದುಕೊಂಡಿದ್ದೇನೆ. ಇನ್ನು ಶ್ರೀಮಾನ್ ಚೌಡಯ್ಯನವರು ಮಾತನಾಡುತ್ತಾ ಸಣ್ಣ ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡಬೇಕು. ಹೆಚ್ಚಿನ ಹಣ ಒದಗಿಸಬೇಕೆಂದು ಹೇಳಿದ್ದಾರೆ, ಸೀಲಿಂಗ ಲಿಮಿಟ್ ಹೆಚ್ಚಿಸಬೇಕೆಂದು ಹೇಳಿದ್ದಾರೆ. ಈಗಾಗಲೇ ನಾನು ಅರ್ಥಸಚಿವರೊಂದಿಗೆ ಮಾತನಾಡಿದ್ದೇನೆ. ಅವರು ಕೂಡ ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಹೇಳಿದ್ದಾರೆ. ಹಾಗೆ ಮಾನ್ಯ ಸದಸ್ಯರು ನಾಲೆಗಳು, ಪಿಕ್‌ಅಪ್‌ಗಳ ಬಗ್ಗೆ ಹಣ ಒದಗಿಸಬೇಕೆಂದು ಹೇಳಿದ್ದಾರೆ. ಅದನ್ನು ನಾನು ಗಮನದಲ್ಲಿಟ್ಟುಕೊಂಡು ಆದಷ್ಟು ತಮ್ಮ ಬೇಡಿಕೆಗಳಿಗೆ ಆದ್ಯತೆ ಕೊಡುವ ಭರವಸೆಯನ್ನು ಕೊಡುತ್ತೇನೆ.

೭-೦೦ ಪಿ. ಎಂ.

ಮಾನ್ಯ ಸದಸ್ಯರಾದ ಚಂದ್ರೇಗೌಡರು ಮಾತನಾಡುತ್ತಾ ಚಿಕ್ಕ ನೀರಾವರಿಗೆ ಹೆಚ್ಚಿನ ಹಣವನ್ನೊದಗಿಸಬೇಕೆಂದು ಹೇಳಿದ್ದಾರೆ ಅಲ್ಲದೆ ಡೀ ಸಿಲ್ಟಿಂಗ್ ಬಗ್ಗೆ ಕೂಡ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದಾರೆ. ಅದೇರೀತಿ ಮಾನ್ಯ ಜಯಚಂದ್ರರವರು ಮಾತನಾಡಿ ಗಂಟೇನಳ್ಳಿ ಕೆರೆ ನಿರ್ಮಾಣದ ಬಗ್ಗೆ ಒಂದು ಬೋರ್‌ನ್ನು ಪರಿಶೀಲಿಸಬೇಕೆಂದು ಹೇಳಿದ್ದಾರೆ, ಮತ್ತು ಮೈನರ್ ಇರಿಗೇಷನ್‌ಗೆ ಹೆಚ್ಚಿನ ಹಣವನ್ನೊದಗಿಸಬೇಕೆಂದು ಹೇಳಿದ್ದಾರೆ.

ಇನ್ನು ಮಾನ್ಯ ಬೆಕ್ಕಿನಾಲ್ಕರ್‌ರವರು ಮೈನರ್ ಇರಿಗೇಷನ್‌ಗೆ ಹೆಚ್ಚಿನ ಹಣವನ್ನೊದಗಿಸಬೇಕು ಮತ್ತು ಇನ್‌ವೆಸ್ಟಿಗೇಷನ್ ಸರಿಯಾಗಿ ಆಗಬೇಕಲ್ಲದೆ ಬೇಗನೆ ಕೂಡ ಮುಗಿಸಬೇಕೆಂದು ಹೇಳಿದ್ದಾರೆ. ಮಾನ್ಯ ಡಾ. ತಿಮ್ಮೇಗೌಡರು ಇರಿಗೇಷನ್‌ಗೆ ಹೆಚ್ಚಿನ ಹಣವನ್ನೊದಗಿಸಬೇಕು ಎಂದು ಹೇಳಿದ್ದಾರೆ. ಮಾನ್ಯ ಹನುಮೇಗೌಡರು ಹೂಳು ತೆಗೆಸುವ ವಿಚಾರದಲ್ಲಿ ಏನು ಹೇಳಿದ್ದಾರೆ ಅದರ ಬಗ್ಗೆ ನಾನು ಈಗಾಗಲೇ ಕ್ರಮವನ್ನು ಕೈಗೊಂಡಿದ್ದೇವೆ. Silt tracers ಎಂದು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಮ್ಮ ಇಂಜಿನಿಯರ್‌ಗೆ ಹೇಳಿ ಏನು ಕ್ರಮವನ್ನು ಅದರ ಬಗ್ಗೆ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳುತ್ತೇವೆ. ತಾವು ಹೇಳಿದ ೩ ಸ್ಕೀಂಗಳ ಬಗ್ಗೆ ನಮ್ಮ ಚೀಫ್ ಇಂಜಿನಿಯರ್‌ರವರಿಗೆ ಪತ್ರವನ್ನು ಬರೆದಿದ್ದೇವೆ. ಇದನ್ನು ಕೈಬಿಟ್ಟಿದ್ದಾರೆಂಬ ಸಂಶಯ ಮಾನ್ಯ ಸದಸ್ಯರಲ್ಲಿ ಬರುವುದು ಬೇಡ. ಇದರ ಬಗ್ಗೆ ಏನು ಕ್ರಮ ಕೈಗೊಳ್ಳಬೇಕೋ ಕೈಗೊಳ್ಳುತ್ತೇವೆ.

ಇನ್ನು ಮಾನ್ಯ ಅರಕೇರಿಯವರು ೨ ಲಿಫ್ಟ್ ಇರಿಗೇಷನ್ ಹಾಗೂ ೩ ಕೆರೆಗಳ ನಿರ್ಮಾಣದ ಬಗ್ಗೆ ಹೇಳಿದ್ದಾರೆ, ಅದನ್ನೂ ಕೂಡ ಚೀಫ್ ಇಂಜಿನಿಯರ್‌ರವರಿಗೆ ಹೇಳಿ ಸಾಧ್ಯವಾದಷ್ಟು ಬೇಗ ಮಾಡಿಸುತ್ತೇವೆ. "ಸಿ" ಲಿಸ್ಟ್‌ನಲ್ಲಿ ಈ ವರ್ಷ ಇರತಕ್ಕ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ನಿರ್ಧಾರ ಮಾಡಿಕೊಂಡಿರುವುದರಿಂದ ಹೊಸ ಕೆಲಸಗಳನ್ನು ಈ ಪಟ್ಟಿಯಲ್ಲಿ ಸೇರಿಸಿಲ್ಲ ಎನ್ನುವ ಅನುಮಾನವನ್ನು ಸದಸ್ಯರು ಇಟ್ಟುಕೊಳ್ಳುವುದು ಬೇಡ. ಈ ಅಧಿವೇಶನ ಮುಗಿಯುವುದರೊಳಗೆ ನಮ್ಮ ಅಧಿಕಾರಿಗಳು ಮತ್ತು ಸದಸ್ಯರ ಒಂದು ಸಭೆಯನ್ನು ಡಿವಿಜನ್‌ವೈಸ್ ಕರೆದು ಯಾವ ಯಾವ ಕೆಲಸಗಳಿಗೆ ಆದ್ಯತೆ ಕೊಟ್ಟು ಮಾಡಿಸಬೇಕೋ ಅದರ ಪ್ರಕಾರ ಮಾಡಿಸುತ್ತೇವೆಂದು ಭರವಸೆ ನೀಡ ಬಯಸುತ್ತೇನೆ ; ಮಾನ್ಯ ಸದಸ್ಯರು ನನ್ನ ಇಲಾಖೆಯ ಬೇಡಿಕೆಗಳಿಗೆ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SRI K. BHASKAR NAIDU —Sir, if the Minister sit and reply in two minutes ? why all these things are required ? They are creating some record......

(Interruptions)

MR. SPEAKER.—You are also creating some record.

SRI K. BHASKAR NAIDU.—I am sorry. I have the greatest regard particularly to the Chair and particularly to Sri K.H.Ranganath. This cannot be a lesson.

MR. SPEAKER.—The Hon'ble Minister has taken the permission to sit and speak.

SRI K. BHASKAR NAIDU.—That is alright. What is the hurry ? Why not he reply tomorrow ?

SRI H. SHIVAPPA.—It is left to the concerned Ministers. We are not here to teach the ministers how they should reply and in what manner they should reply. The must have obtained permission of the Hon'ble Chair. Unless the minister obtains permission of the Chair, how can he sit and speak ? Why should we criticise him ?

SRI K. BHASKAR NAIDU.—Sir, I am ignorant of the fact that the Minister has taken permission of the Chair. If the hon. member wants to support him, let him know that I also support him. There should not be any correction.

MR. SPEAKER.—It is not a matter of argument. Since the Minister was sitting and speaking, I told the hon. member Sri K. Bhaskar Naidu that the Minister has taken the permission of the Chair.

ಶ್ರೀ ಹೆಚ್. ಶಿವಪ್ಪ.—ಮಾನ್ಯ ಸದಸ್ಯರು ಈರೀತಿ ಮಾತನಾಡುವುದು ಸರಿಯಲ್ಲ It is a damaging statement.

MR. SPEAKER.—All these things you can discuss in the lounge or in your party meetings. I am not concerned with these things here. I am supposed to control the House. You please resume your seat. The Whip may advise.

ಶ್ರೀ ಜಿ. ಕೆ. ತಕ್ಕೆಡ್.—ಮಾನ್ಯ ಅಧ್ಯಕ್ಷರೆ, ನಾವು ಗಂಟೆಗಟ್ಟಲೆ ಕೇಳಿದ ಪ್ರಶ್ನೆಗಳಿಗೆ ಮಾನ್ಯ ಸಚಿವರು ಕೇವಲ ಐದು ನಿಮಿಷದಲ್ಲಿ ಉತ್ತರ ಕೊಟ್ಟರೆ ಹೇಗೆ .....

MR. SPEAKER.—Hon. member Sri Takked should know this is not the party meeting. This is Assembly; this is House.

SRI G. K. TAKKED.—We know our responsibility.

MR. SPEAKER.—Then you would not have......

ಶ್ರೀ ಅಶ್ವತ್ಥರೆಡ್ಡಿ (ಮಾನ್ಯ ವಿದ್ಯುಚ್ಛಕ್ತಿ ಖಾತೆ ಸಚಿವರು).—ಮಾನ್ಯ ಸಭಾಧ್ಯಕ್ಷರೆ, ಪವರ್ ಕಾರ್ಪೊರೇಷನ್ ಮತ್ತು ಎಲೆಕ್ಟ್ರಿಸಿಟಿ ಬೋರ್ಡ್ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರುಗಳು ಬಹಳ ಉತ್ತಮ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಕೆಲವು ವಿಷಯಗಳು ದೋಷಪೂರಿತವಾಗಿದೆ ಅವುಗಳನ್ನು ಸರಿಪಡಿಸಬೇಕೆಂದು ಹೇಳಿದ್ದಾರೆ. ೧೯೮೦-೮೧ರಲ್ಲಿ ಪವರ್ ಜನರೇಷನ್ ಆಗಬೇಕಾದರೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಗುಂಡೂರಾಯರು ೧೯೮೦ರಲ್ಲಿ ಹೇಳಿದ್ದರು Kali Unit No. I & II have been dedicated to the Nation producing 170 Megawatts of electricity. The total hydro-electric potential is 6 Million units. ಇದೆ ಆದರೆ ನಾವು ಕಾಲು ಭಾಗ ಮಾತ್ರ ತೆಗೆದುಕೊಳ್ಳುತ್ತಿದ್ದೇವೆ. The present generation of power (1981-82) is 6793 Million Units and in 1980-81 it was about 5,874 Million Units. Last year there was a shortage of about 33.13% for High Tension power industries and this year also we are having a shortage of abont 24.8% in general. To meet the demand we are expecting power from other States like Kerala, Maharashtra and Andhra Pradesh and it may subside this and we may reduce the power cut to 10% by getting more power from Kerala. ನಮ್ಮ ಪವರ್ ಪ್ರಾಜೆಕ್ಟ್‌ನಿಂದ ಇವತ್ತು ನಮಗೆ ಬರುತ್ತಿರುವುದು ೬೭೯೩ ಮಿಲಿಯನ್ ಯೂನಿಟ್ಸ್. ನಮಗೆ ಬೇಕಾಗಿರತಕ್ಕ ಪವರ್ ಸುಮಾರು ೧೧ ಸಾವಿರ ಮಿಲಿಯನ್ ಯೂನಿಟ್ಸ್. ಆದರೆ ನಮಗೆ ಪವರ್ ಸಾಲದೆ ಇರುವುದರಿಂದ ಈ ವರ್ಷ ಕೊರತೆ ಬೀಳಬಹುದೆಂದು ನಾವು ಆಲೋಚನೆ ಮಾಡಿದ್ದೇವೆ. ವೀನಸ್ ಪವರ್ ಪ್ರಾಜೆಕ್ಟ್ಸ್ ವಿಚಾರದಲ್ಲಿ ಮಾನ್ಯ ಸದಸ್ಯರುಗಳಾದ ಚಂದ್ರೇಗೌಡರು, ಡಾ॥ ತಿಮ್ಮೇಗೌಡರು, ಮತ್ತು ಜಯಚಂದ್ರರವರು ಮಾತನಾಡಿದ್ದಾರೆ. ಮಾನ್ಯ ದೇವೇಗೌಡರು ಮಾತನಾಡಿ ರಾಯಚೂರು ಪ್ರಾಜೆಕ್ಟ್‌ನಲ್ಲಿ ಕೋಲ್ ಸಿಕ್ಕುತ್ತಿಲ್ಲ. ಇದರಿಂದ ನಮಗೆ ತೊಂದರೆಯಾಗುತ್ತಿದೆ ಎಂದರು. ಆದರೆ ನಾವು ಆಂಧ್ರ

ಸರ್ಕಾರದೊಂದಿಗೆ ಒಪ್ಪಂದವನ್ನು ಇದರ ಬಗ್ಗೆ ಮಾಡಿಕೊಂಡಿದ್ದೇವೆ. ಇದರಿಂದ ಯಾವುದೇ ತೊಂದರೆ ಆಗುವುದಿಲ್ಲ. ಚಕ್ರಾ ಡ್ಯಾಂ ವಿಚಾರದಲ್ಲಿ ಕೆಲವು ಲೋಪದೋಷವಾಗಿದೆ ಎಂದು ಮಾನ್ಯ ಸದಸ್ಯರು ಹೇಳಿರುವುದನ್ನು ವಿಚಾರಣೆ ಮಾಡಿಸುತ್ತೇನೆ. ಮತ್ತು ಸೂಪಾ ಡ್ಯಾಂನಲ್ಲಿ ಕೂಡ ದೋಷಪೂರಿತವಾದ ಕೆಲಸವಾಗಿದೆ ಎಂದು ಹೇಳಿದ್ದಾರೆ.

ಸೂಪ ಡ್ಯಾಮ್‌ನಲ್ಲಿ ತೊಂದರೆಯಾಗಿದೆ, ದೋಷಪೂರಿತವಾಗಿ ಕೆಲಸವಾಗುತ್ತಿದೆ ಎಂದು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅದಕ್ಕೂ ಕೂಡ ಒಂದು ಆಯೋಗವನ್ನು ಮಾನ್ಯ ಜಸ್ಟೀಸ್ ರಂಗೇಗೌಡರ ನೇತೃತ್ವದಲ್ಲಿ ರಚನೆ ಮಾಡಿದ್ದೇವೆ. ಡಾಕ್ಟರ್ ತಿಮ್ಮೇಗೌಡರು ಕೂಡ ಕಬಿನಿ ಪ್ರಾಜೆಕ್ಟ್ ಬಗ್ಗೆ ಹೇಳಿರುತ್ತಾರೆ. ಈ ವರ್ಷದಲ್ಲಿ ತೆಗೆದುಕೊಂಡು ಪ್ರಾರಂಭ ಮಾಡುತ್ತೇವೆ. ನಾನ್ ಪ್ಲಾನ್‌ನಲ್ಲಿ ಸುಮಾರು ೮ ಕೋಟಿ ರೂಪಾಯಿಗಳ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ ಕಾಳಿ ಸೆಕೆಂಡ್ ಸ್ಟೇಜ್ ಬೇಡತಿ ಈ ಯೋಜನೆಗಳು ಬಹಳ ದೊಡ್ಡ ಯೋಜನೆಗಳಾಗಿರುತ್ತವೆ. ಈ ಯೋಜನೆಗಳಿಂದ ಬೇಕಾದಷ್ಟು ಪವರ್ ಉತ್ಪತ್ತಿಯಾಗುತ್ತದೆ. ಆದರೆ ಅಲ್ಲಿರತಕ್ಕಂಥ ರೈತರು ಮತ್ತೆ ಕೆಲವು ಜನರು ಹೆಸಿಟೇಷನ್ ಮಾಡಿದ ಕಾರಣಕ್ಕಾಗಿ ರಿಟೈರ್ಡ್ ಇಂಜಿನೀಯರ್ ಶ್ರೀ ನಾರಾಯಣರಾವ್‌ರವರ ನೇತೃತ್ವದಲ್ಲಿ ಒಂದು ಆಯೋಗವನ್ನು ರಚಿಸಿದ್ದೇವೆ. ಅವರಿಂದ ರಿಪೋರ್ಟ್ ಬಂದಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಇದ್ದೇವೆ.

ಮತ್ತೆ ಮಿನಿ ಮೈಕ್ರೋ ಪ್ರಾಜೆಕ್ಟ್ ಸಣ್ಣ ಸಣ್ಣ ಪ್ರಾಜೆಕ್ಟ್‌ಗಳನ್ನು ತೆಗೆಯಬೇಕೆನ್ನುವ ಉದ್ದೇಶ ಸರ್ಕಾರಕ್ಕೆ ಇದೆ. ಒಂದು ಕಿಲೋವಾಟ್‌ಗೆ ೨೦ ಸಾವಿರ ರೂಪಾಯಿಗಳಿಗೂ ಬೆಲೆ ಜಾಸ್ತಿಯಾಗುತ್ತದೆ. ಆದರೂ ಕೂಡ ಇದು ಬಹಳ ಆವಶ್ಯಕವಾಗಿ ಇರುವುದರಿಂದ ಸಣ್ಣ ಸಣ್ಣ ಪ್ರಾಜೆಕ್ಟ್‌ಗಳಾದ ಕಾವೇರಿ ತುಂಗಭದ್ರಾ ಇವುಗಳಿಂದ ಮಂಡ್ಯಾ ಡಿಸ್ಟ್ರಿಕ್ಟ್‌ಗೆ ಅನುಕೂಲವಾಗುವ ದೃಷ್ಟಿಯಿಂದ ಇವೆಲ್ಲವನ್ನು ಕೂಡ ತೆಗೆದುಕೊಳ್ಳಬೇಕೆಂದು ಸರ್ಕಾರ ವತಿಯಿಂದ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಇದರಿಂದ ಒಟ್ಟು ಆರುನೂರು ಮಿಲಿಯನ್ ಯೂನಿಟ್ಸ್ ಪವರ್ ಬರುತ್ತದೆಂದು ಅಂದಾಜು ಮಾಡಲಾಗಿದೆ, ಬೆಲೆ ಮಾತ್ರ ಒಂದು ಕಿಲೋ ವಾಟ್ಸ್‌ಗೆ ೨೦ ಸಾವಿರ ರೂಪಾಯಿಗಳಿಗಿಂತಲೂ ಜಾಸ್ತಿಯಾಗುತ್ತದೆ.

ಇನ್ನೂ ಮಾನ್ಯ ದೇವೇಗೌಡರು ಮಾತನಾಡುತ್ತಾ ಪವರ್ ಪ್ರಾಜೆಕ್ಟ್ ವಿಷಯದಲ್ಲಿ ರಾಯಚೂರು ಸೂಪಾ ಪ್ರಾಜೆಕ್ಟ್‌ನಲ್ಲಿ ಕೆಲಸ ಬಹಳ ನಿಧಾನವಾಗುತ್ತದೆಯೆಂದು ಪೇಪರ್‌ನಲ್ಲಿ ಬಂದಿದೆ ಎಂದು ಹೇಳಿದರು. ರಿಪೇರಿ ಕೆಲಸಗಳು ಇದ್ದರೆ ಈ ವರ್ಷ ಹಿಂದಿನ ವರ್ಷಕ್ಕಿಂತ ಅಂದರೆ ೧೯೮೧-೮೨ನೇ ಸಾಲಿಗೆ ಇನ್ನೂ ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಕೆಲಸ ಪೂರ್ತಿಯಾಗಿಲ್ಲ. ಅಲ್ಲಿ ಪವರ್ ಹೌಸ್ ಕೂಡ ಮಾಡಬೇಕು. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ನೀರನ್ನು ಉಪಯೋಗಿಸಿಕೊಂಡು ಪವರ್ ಜನರೇಟರನ್ನೂ ಕೂಡ ಮಾಡತಕ್ಕಂಥ ಪ್ರಶ್ನೆ ಇದೆ. ಅದನ್ನೂ ಕೂಡ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನು ದೊಡ್ಡ ದೊಡ್ಡ ಪ್ರಾಜೆಕ್ಟ್ಸ್‌ಗಳು ಏನು ಇವೆ ಶರಾವತಿ ಸ್ಟೇಷನ್, ಕಾಳಿ, ಅಪ್ಪರ್‌ಕೃಷ್ಣ, ಮಹದಾಯಿ, ಕಾವೇರಿ, ನೇತ್ರಾವತಿ ಇವೆಲ್ಲ ನದಿಗಳಲ್ಲಿ ಇರತಕ್ಕಂಥ ನೀರನ್ನು ಉಪಯೋಗಿಸಿಕೊಂಡು ಪವರ್ ಜನರೇಟ್ ಮಾಡಬೇಕೆಂಬ ಉದ್ದೇಶದಿಂದ ಇನ್‌ವೆಸ್ಟಿಗೇಷನ್ ಕಾರ್ಯ ಮಾಡತಕ್ಕಂಥದ್ದು ಇರುತ್ತದೆ. ಅದನ್ನೂ ಕೂಡ ಸರ್ಕಾರ ಪರಿಶೀಲನೆ ಮಾಡುತ್ತಿದೆ. ತಮಗೆ ಗೊತ್ತಿರುವ ಹಾಗೆ ಹಣಕಾಸಿನ ಕೊರತೆ ಜಾಸ್ತಿ ಇರುವುದರಿಂದ ಕೆಲಸಗಳು ನಿಧಾನವಾಗುತ್ತಿದೆಯೇ ಹೊರತು ಮತ್ತೇನೂ ಇಲ್ಲ. ಆದರೂ ಕೂಡ ಇವೆಲ್ಲವನ್ನೂ ಹಂತಹಂತವಾಗಿ ತೆಗೆದುಕೊಂಡು ಪವರ್ ಅಭಾವವನ್ನು ನೀಗಿಸಬೇಕೆಂಬ ಆಶಯವನ್ನು ಇಟ್ಟುಕೊಂಡಿದ್ದೇವೆ. ಸಾಕಷ್ಟು ಪ್ರಮಾಣದಲ್ಲಿ ಪವರನ್ನು ಪೂರೈಸಬೇಕೆಂದರೆ ಹೊಸ ಹೊಸ ಪ್ರಾಜೆಕ್ಟ್‌ಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಇದನ್ನು ಕೈಗೊಳ್ಳಲು ಹಣದ ಕೊರತೆಯೇ ಮುಖ್ಯ ಕಾರಣವಾಗಿರುತ್ತದೆ. ಆದರೂ ಕೂಡ ಬೇರೆ ಬೇರೆ ರಿಸೋರ್ಸಸ್‌ನಿಂದ ಬೇರೆ ಬೇರೆ ಸಂಪನ್ಮೂಲಗಳಿಂದ ಹೆಚ್ಚಿನ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬೇಕೆನ್ನುವ ಆಶಯವಿಟ್ಟುಕೊಂಡಿರುತ್ತೇವೆ. ಮತ್ತು ಈ ವರ್ಷ ಮಾನ್ಯ ಜಯಚಂದ್ರರವರು ಹೇಳಿದ ಹಾಗೆ ಅಮೇರಿಕಾ ದೇಶದಲ್ಲಿ ವಾಟರ್ ಫ್ಲೋ ಆದಮೇಲೆ ಅದನ್ನು ರೀ ಜನರೇಟ್ ಮಾಡಿ ಕರೆಂಟ್ ಉತ್ಪತ್ತಿ ಮಾಡುವುದಕ್ಕೆ ಆಲೋಚನೆ ಮಾಡಬೇಕೆಂದರೆ ಕಷ್ಟವಾಗುತ್ತದೆ. ಏತಕ್ಕೆಂದರೆ ಅದಕ್ಕೆ ಬೇಕಾದ ಹಣವಾಗಲಿ ಅಥವಾ ಮೆಷನರಿಯಾಗಲಿ ನಮ್ಮಲ್ಲಿ ಇಲ್ಲ. ಅದನ್ನು ಪರಿಶೀಲನೆ ಮಾಡಿ ನಮ್ಮ ಪವರ್ ಕಾರ್ಪೊರೇಷನ್ ತಾಂತ್ರಿಕರಿಗೆ ತಿಳಿಸುತ್ತೇನೆಂದು ಹೇಳುತ್ತೇನೆ.

ಇನ್ನು ಜನತಾ ಪವರ್ ವಿಷಯದಲ್ಲಿ ಮಾನ್ಯ ಚಂದ್ರೇಗೌಡರು ಹೇಳಿದ್ದಾರೆ ಹರಿಜನರಿಗೆ ಭಾಗ್ಯ ಜ್ಯೋತಿ ಸ್ಕೀಂ ಪವರ್ ಕೊಟ್ಟಿಲ್ಲ, ಈಗ ಕೊಟ್ಟಿರುವುದು ಬಹಳ ಕಡಿಮೆ ಕೊಟ್ಟಿದ್ದೀರಿ ಎಂದು ಹೇಳಿದರು ೧೯೭೯–೮೦ರಲ್ಲಿ ೧೫,೯೭೮ ಹಳ್ಳಿಗಳಿಗೆ ಪವರ್ ಕೊಟ್ಟಿದ್ದೇವೆ. ೧೯೮೦–೮೧ರಲ್ಲಿ ೧೮,೮೯ ಹಳ್ಳಿಗಳಿಗೆ ಪವರ್ ಕೊಟ್ಟಿದ್ದೇವೆ. ಒಂದು ಮನೆಗೆ ಒಂದು ಬಲ್ಬ್ ಕೊಟ್ಟಿದ್ದೇವೆ. ಈ ವರ್ಷ ಕೂಡ ಇನ್ನಷ್ಟು ಹೆಚ್ಚಿಗೆ ಈ ಭಾಗ್ಯಜ್ಯೋತಿ ಸ್ಕೀಮನ್ನು ಕಾರ್ಯಗತಮಾಡಲು ಹೆಚ್ಚು ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ.

ಮತ್ತೆ ಎಲೆಕ್ಟ್ರಿಸಿಟಿ ಬೋರ್ಡ್ ಬಗ್ಗೆ ಕೆಲವು ಸದಸ್ಯರು ಮಾತನಾಡಿದ್ದಾರೆ. ಅವಕಾಶ ಸಿಕ್ಕದ ಕ್ಯೋಸ್ಕರ ಪ್ರಶ್ನೆಗಳಿಗೆ ಉತ್ತರವನ್ನು ಲಿಖಿತಮೂಲಕ ಕೊಟ್ಟಿದ್ದೇನೆ. ಟೆಕ್ನಿಕಲ್‌ಸ್ಟ್ಯಾಫ್ ಮತ್ತು ಸಲಕರಣೆಗಳ ಬಗ್ಗೆ ತಿಳಿಸಿರುತ್ತಾರೆ, ಇವುಗಳನ್ನೂ ಕೂಡ ಸಾಕಷ್ಟು ಪ್ರಮಾಣದಲ್ಲಿ ಒದಗಿಸಬೇಕೆಂದು ಸಂಬಂಧಪಟ್ಟವರಿಗೆ ಸೂಚನೆ ಕೊಡುತ್ತೇನೆಂದು ಹೇಳಲು ಇಚ್ಛೆಪಡುತ್ತೇನೆ.

ಇನ್ನು ಮಾನ್ಯ ಆನಂದಕುಂದ ಹೆಗ್ಗಡೆಯವರು ಒಂದು ಹಾರ್ಸ್‌ಪವರ್‌ಗೆ ೫೦ ರೂಪಾಯಿಗಳಿಗಿಂತಲೂ ಹೆಚ್ಚು ಎಲೆಕ್ಟ್ರಿಸಿಟಿ ಚಾರ್ಜಸ್ ವಸೂಲು ಮಾಡುತ್ತಾರೆಂದು ಹೇಳಿದರು. ರೈತರಿಗೆ ಅನುಕೂಲ ಮಾಡುವ ಬದಲಾಗಿ ಅಷ್ಟೇ ಕಿರುಕುಳ ಕೊಡುತ್ತಿದ್ದಾರೆ, ಏತಕ್ಕೆಂದರೆ ಕರೆಂಟ್ ಚಾರ್ಜಸ್ ಕಟ್ಟಲಿಲ್ಲವೆಂದು ಡಿಸ್‌ಕನೆಕ್ಟ್ ಮಾಡುವುದು ಮತ್ತೆ ಕನೆಕ್ಟ್ ಕೊಡಬೇಕಾದರೆ ನಿಧಾನಮಾಡುವುದು ಇಂಥ ತಪ್ಪು ಕೆಲಸವನ್ನು ಮಾಡುತ್ತಿದ್ದಾರೆಂದು ಹೇಳಿರುತ್ತಾರೆ. ಅಂಥ ಕೆಲಸ ಮಾಡುತ್ತಿಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಮತ್ತೆ ಕೆಲವರು ಹಂಗಾಮಿಯಾಗಿ ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಕೆಲಸ ಮಾಡುತ್ತಿರುತ್ತಾರೆ ಅವರನ್ನೆಲ್ಲ ಪರ್ಮನೆಂಟ್ ಮಾಡಬೇಕೆಂದು ಹೇಳಿದ್ದಾರೆ. ಯಾರು ಒಂದು ವರ್ಷ ಕೆಲಸಮಾಡಿ ಮತ್ತೆ ಅರ್ಹತೆಯನ್ನು ಹೊಂದಿರುತ್ತಾರೆ ಅಂಥವರಿಗೆ ಲೈನ್‌ಮೆನ್ ಆಗಿ ಕೆಲಸ ಮಾಡುವುದಕ್ಕೆ ಅರ್ಹತೆ ಸಿಗುತ್ತದೆ. ಅಂಥವರನ್ನು ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀಮಾನ್ ಆರ್ಮುಗಂರವರು ಹೇಳಿದರು. ಸಿ.ಆರ್. ಸರಿಯಾಗಿ ಬರೆಯುವುದಿಲ್ಲ. ಔಟ್‌ಸ್ಟ್ಯಾಂಡಿಂಗ್ ಎಂದು ಬರೆಯುತ್ತಾರೆಂದು ಹೇಳಿದರು. ದಕ್ಷತೆಯಿಂದ ಆಡಳಿತ ನಡೆಸುವವರು ಕಾನೂನು ಪ್ರಕಾರ ಆ ರೀತಿ ಬರದೇ ಬರೆಯುತ್ತಾರೆ. ಮಾನ್ಯ ಆರ್ಮುಗಂರವರೂ ಕೂಡ ಲೆಜಿಸ್ಲೇಚರ್‌ನಲ್ಲಿ ಗಲಾಟೆ ಜಾಸ್ತಿ ಮಾಡುತ್ತಾರೆ. ಆದ್ದರಿಂದ ಅವರನ್ನೂ ಕೂಡ ಔಟ್‌ಸ್ಟ್ಯಾಂಡಿಂಗ್ ಮೆಂಬರ್ ಎಂದು ಕರೆಯಬಹುದಲ್ಲ.

ಅಧ್ಯಕ್ಷರು.—ಯಾರೇ ಸದಸ್ಯರಾಗಲಿ ಗಲಾಟೆ ಜಾಸ್ತಿ ಮಾಡುತ್ತಾರೆಂದು, ಬಹಳ ಮಾತನಾಡುತ್ತಾರೆಂದು ಹೇಳಬಾರದೆಂದು ಮಾನ್ಯ ಸಚಿವರಿಗೆ ಹೇಳುತ್ತೇನೆ,

ಶ್ರೀ ಅಶ್ವತ್ಥರೆಡ್ಡಿ.—ಅಧ್ಯಕ್ಷರೇ ಶೆಡ್ಯೂಲ್ ಕ್ಯಾಸ್ಟ್ ಮತ್ತು ಶೆಡ್ಯೂಲ್ ಟ್ರೈಬ್ಸ್ ಜನಾಂಗದವರಿಗೆ ೧.೮ ಪರ್ಸೆಂಟ್ ಅವಕಾಶ ಕೊಟ್ಟಿದ್ದಾರೆಯೇ ಎಂದು ಕೇಳಿದ್ದಾರೆ. ಪವರ್ ಕಾರ್ಪೊರೇಷನ್‌ನಲ್ಲಿ ಸುಮಾರು ೫೫ ಅಪ್ಲಿಕೇಷನ್ ಕರೆದಿದ್ದಕ್ಕೆ ಶೆಡ್ಯೂಲ್‌ಕ್ಯಾಸ್ಟ್ ಮತ್ತು ಶೆಡ್ಯೂಲ್ ಟ್ರೈಬ್ಸ್ ಜನಾಂಗದವರಿಂದ ಸುಮಾರು ೧೫ ಜನ ಇಂಟರ್‌ವ್ಯೂಗೆ ಬಂದಿದ್ದರು. ಅವರಲ್ಲಿ ೫ ಜನರನ್ನು ಸೆಲೆಕ್ಟ್ ಮಾಡಿದ್ದರೆ ಸೇರಿದವರು ಮೂರು ಜನರು ಮಾತ್ರ. ಈ ರೀತಿಯಾಗಿದೆ. ಮತ್ತೆ ರೆಗ್ಯುಲರೈಸ್ ಮಾಡಿಲ್ಲ, ಸೀನಿಯರ್ ಅಸಿಸ್ಟೆಂಟ್ ಆಗಿ ಪ್ರಮೋಷನ್ ಕೊಟ್ಟಿಲ್ಲವೆಂದು ಹೇಳಿರುತ್ತಾರೆ. ೧೯೭೪ನೇ ಇಸವಿಯಿಂದ ಇಲ್ಲಿಯವರೆಗೆ ೭೦ ಜನರಿಗೆ ಪ್ರಮೋಷನ್ ಕೊಟ್ಟಿದ್ದೇವೆ.

ಮತ್ತೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ೨೬ ಸಾವಿರ ಹಳ್ಳಿಗಳಿವೆ. ಇದರಲ್ಲಿ ೧೬ ಸಾವಿರ ಹಳ್ಳಿಗಳಿಗೆ ಎಲೆಕ್ಟ್ರಿಫೈ ಮಾಡಿದ್ದೇವೆ. ಇನ್ನು ೧೦ ಸಾವಿರ ಹಳ್ಳಿಗಳು ಉಳಿದಿವೆ. ಈ ವರ್ಷ ೧೦ ಸಾವಿರ ಹಳ್ಳಿಗಳಿಗೆ ಎಲೆಕ್ಟ್ರಿಫೈ ಮಾಡಬೇಕೆನ್ನುವ ವಿಶ್ವಾಸ ಇಟ್ಟುಕೊಂಡು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇನ್ನು ಮೆಟೀರಿಯಲ್ಸ್ ಇಲ್ಲವೆಂದು ಹೇಳಿರುತ್ತಾರೆ. ಈಗಾಗಲೇ ಕೆ.ಇ.ಬಿ.ರವರು ಮೆಟೀರಿಯಲ್ಸ್‌ಗೋಸ್ಕರವಾಗಿ ೬೦ ಕೋಟಿ ರೂಪಾಯಿಗಳಷ್ಟು ಹಣವನ್ನು ಮಂಜೂರಾತಿ ಪಡೆದು ಅದರಲ್ಲಿ ಸುಮಾರು ೧೬ ಕೋಟಿ ರೂಪಾಯಿಗಳಷ್ಟು ರೂರಲ್ ಎಲೆಕ್ಟ್ರಿಫಿಕೇಷನ್‌ಗಾಗಿ ಖರ್ಚುಮಾಡುತ್ತಿರುತ್ತೇವೆ. ಕರ್ನಾಟಕ ರಾಜ್ಯದ ಎಲ್ಲಕಡೆ ಎಲೆಕ್ಟ್ರಿಫಿಕೇಷನ್ ಕೊಡಬೇಕೆನ್ನುವ ಸದುದ್ದೇಶದಿಂದ ಈವತ್ತು ೧೭೫ ತಾಲೂಕುಗಳಲ್ಲಿ ೧೧೭ ತಾಲೂಕುಗಳು ಲಿಸ್ಟ್‌ನಲ್ಲಿ ಸೇರಿಸಿದ್ದೇವೆ. ಇವುಗಳನ್ನು ಹಂತಹಂತವಾಗಿ ಮಾಡಲು ಪ್ರಯತ್ನ ಮಾಡುತ್ತೇವೆ. ೫ ವರ್ಷದೊಳಗೆ ಕರ್ನಾಟಕದ ಎಲ್ಲ ಹಳ್ಳಿಗಳಿಗೂ ಕೂಡ ಎಲೆಕ್ಟ್ರಿಸಿಟಿ ಒದಗಿಸಿಕೊಡುತ್ತೇವೆನ್ನುವ ಆಶಯ ಇಟ್ಟುಕೊಂಡಿದ್ದೇವೆಂದು ತಿಳಿಸಲು ಇಚ್ಛಿಸುತ್ತೇನೆ.

ಹಾಗೂ ಕೆಲವು ಮಾನ್ಯ ಸದಸ್ಯರುಗಳು ಮತ್ತು ಮಾನ್ಯ ಚಂದ್ರೇಗೌಡರು ಭಾಗ್ಯಜ್ಯೋತಿ, ಹರಿಜನರಿಗಿ ಜನ ಕಲ್ಯಾಣದ ವಿಷಯದಲ್ಲಿ ಮಾತನಾಡಿದ್ದಾರೆ. ಟೆಕ್ನಿಕಲ್ ಸ್ಟಾಫ್ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ಟೆಕ್ನಿಕಲ್ ಸ್ಟಾಫ್‌ನ್ನು ಆದಷ್ಟು ಜಾಗ್ರತೆ ಕೊಟ್ಟು ಕೆಲಸಕಾರ್ಯಗಳು ಜಾಗ್ರತೆ ಆಗುವ ಹಾಗೆ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತೇನೆ. ಹಾಗೂ ಏನು ೨೪.೮ ಪರ್ಸೆಂಟ್ ಡಿಫಿಸಿಯನ್ಸಿ ಇದೆ ಅದನ್ನು ಏನಾದರೂ ಮಾಡಿ ಕಡಿಮೆ ಮಾಡಬೇಕಾದರೆ ಅದಕ್ಕೆ ಮಳೆ ಬರಬೇಕಾಗುತ್ತದೆ. ಕೇರಳದಿಂದ ಹೆಚ್ಚು ವಿದ್ಯುತ್‌ನ್ನು ಪಡೆದುಕೊಳ್ಳಲಾಗುತ್ತಿದೆ. ಮಹಾರಾಷ್ಟ್ರ ಆಂಧ್ರದಿಂದ ಕೂಡಾ ವಿದ್ಯುತ್‌ನ್ನು ಪಡೆಯಲಾಗಿದೆ. ಹೋದವರ್ಷ ೯ರಿಂದ ೩೦ ಮಿಲಿಯನ್ ಮೆಗೋವಾಟ್ಸ್ ಯೂನಿಟ್‌ಗಳನ್ನು ಆಂಧ್ರದವರು ಕೊಟ್ಟಿದ್ದಾರೆ. ಈ ವರ್ಷ ಹೆಚ್ಚು ವಿದ್ಯುತ್ ಪಡೆದು ಈ ಒಂದು ವಿದ್ಯುತ್ ಕೊರತೆಯನ್ನು ನೀಗಿಸಬೇಕು ಎನ್ನುವ ಆಸೆ ನಮಗೆ ಇದೆ. ಇದರಿಂದ ನಮ್ಮ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಹಾಗೂ ಪವರ್ ಕಾರ್ಪೊರೇಷನ್‌ಗೆ ಹೆಚ್ಚಿನ ಒಂದು ಆದಾಯ ಬರುತ್ತದೆ. ಈಗ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಆದಾಯದಲ್ಲಿ ನಡೆಯುತ್ತಿದೆ. ಬೇರೆ ರಾಜ್ಯದ ವಿದ್ಯುಚ್ಛಕ್ತಿಗಳು ಈ ನಷ್ಟದಲ್ಲಿ ಸಾಗುತ್ತಿವೆ. ನಮ್ಮ ಮಂಡಲಿ ಆದಾಯದಲ್ಲಿ ನಡೆಯುತ್ತಿರುವುದು ಸಂತೋಷದ ವಿಷಯವೆಂದು ನಾನು ಹೇಳುತ್ತೇನೆ. ನಮ್ಮ ಕರ್ನಾಟಕದಲ್ಲಿ ಬೇಕಾದಷ್ಟು ಕಾರ್ಖಾನೆಗಳು ಬರುತ್ತಿವೆ. ಬೇರೆಯವರೆಲ್ಲಾ ನಮ್ಮ ಕರ್ನಾಟಕದ ಜನರು ಬಹಳ ಒಳ್ಳೆಯವರು, ಇಲ್ಲಿಯ ಕೆಲಸಗಾರರು ಏನೇ ಎಷ್ಟೇ ತೊಂದರೆ ಇದ್ದರೂ ಸಹಾ ಸ್ಟ್ರೈಕ್ ಮಾಡುವುದಿಲ್ಲ ಎಂದು ಹೇಳಿ ಕಾರ್ಖಾನೆಗಳನ್ನು ತೆರೆಯುವುದಕ್ಕೆ ದಿನವೂ ಪವರ್‌ಗಾಗಿ ಅರ್ಜಿಗಳನ್ನು ಹಾಕುತ್ತಿದ್ದಾರೆ.

ಅಧ್ಯಕ್ಷರು.—ತಾವು ಹೀಗೆ ಹೇಳಿದಮೇಲೆ ಕೆಲಸಗಾರರು ಸ್ಟ್ರೈಕ್ ಮಾಡಿಬಿಟ್ಟರೆ ಕಷ್ಟ ಆಗುತ್ತದೆ.

ಶ್ರೀ ಅಶ್ವತ್ಥರೆಡ್ಡಿ.—ಈ ಬಗ್ಗೆ ನಮ್ಮಲ್ಲಿ ಇರತಕ್ಕಂತಹ ವಿದ್ಯುತ್ ಘಟಕಗಳನ್ನು ಹೆಚ್ಚು ಮಾಡಬೇಕಾಗುತ್ತದೆ. ಹೆಚ್ಚಿನ ವಿದ್ಯುತ್ ಉತ್ಪಾದನೆ ಮಾಡಿ ಹೆಚ್ಚು ಕಾರ್ಖಾನೆಗಳಿಗೆ ವಿದ್ಯುತ್‌ನ್ನು ಒದಗಿಸಬಹುದೆಂದು ನಾನು ಹೇಳುತ್ತೇನೆ. ಈ ಒಂದು ಮಂಡಲಿಯಿಂದ ಸರ್ಕಾರಕ್ಕೆ ಹೆಚ್ಚಿನ ಒಂದು ಆದಾಯ ಬರುತ್ತಿದೆ ಎಂದು ಹೇಳಿ, ಏನು ಅನೇಕ ಸದಸ್ಯರುಗಳು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ ಅದನ್ನು ಪರಿಶೀಲಿಸಿ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ. ದಯಮಾಡಿ ಮಾನ್ಯ ಸದಸ್ಯರು ನನ್ನ ಬೇಡಿಕೆಗೆ ಒಪ್ಪಿಗೆ ಕೊಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಶೇರ್‌ಖಾನ್.—ತಾವೇನೋ ಪಂಪುಸೆಟ್ಟುಗಳಿಗೆ ರೇಟ್ಸ್ ರೆಡ್ಯೂಸ್ ಮಾಡಿದ್ದೇವೆ ಎಂದಿದ್ದೀರಿ. ಆದರೆ ನಮ್ಮ ಕಡೆ ಅಧಿಕಾರಿಗಳು ಏನು ಮಾಡುತ್ತಿದ್ದಾರೆಂದರೆ, ಅಲ್ಲಿ ಸಣ್ಣ ಸಣ್ಣ ನಾಲಾದಿಂದ ಏನು ನೀರನ್ನು ಎತ್ತುತ್ತಿದ್ದಾರೆ ಅದಕ್ಕೆ ಈ ಫೆಸಲಿಟೀಸ್ ಕೊಡುವುದಿಲ್ಲ ಎಂದು ತ್ರಾಸ ಮಾಡುತ್ತಿದ್ದಾರೆ. ಅವರು ಎಲ್ಲಿಂದಲೇ ನೀರು ಎತ್ತಲಿ ಒಂದೇ ರೀತಿ ಪರಿಗಣನೆಗೆ ತೆಗೆದುಕೊಳ್ಳುವಂತೆ ಮಾಡ ಮಾಡಬೇಕೆಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಅಶ್ವತ್ಥರೆಡ್ಡಿ.—ಈ ಬಗ್ಗೆ ನಿರ್ದಿಷ್ಟವಾದ ಉದಾಹರಣೆಯನ್ನು ಕೊಟ್ಟರೆ ಆ ಬಗ್ಗೆ ಕ್ರಮ ಕೈಗೊಳ್ಳಬಹುದು.

ಶ್ರೀ ಶೇರ್‌ಖಾನ್.—ಗುಲ್ಬರ್ಗ ಜಿಲ್ಲೆಯ ಎಲ್ಲಾ ಭಾಗದಲ್ಲೂ ಈ ರೀತಿ ಇದೆ.

ಶ್ರೀ ಅಶ್ವತ್ಥರೆಡ್ಡಿ.—ಈ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ಸರಿಮಾಡಲಾಗುತ್ತದೆಂದು ಹೇಳುತ್ತೇನೆ.

ಶ್ರೀ ಶೇರ್‌ಖಾನ್.—ಎಲ್ಲಾ ಕಡೆಯೂ ಒಂದೇ ರೀತಿ ದರವನ್ನು ನಿಗದಿ ಮಾಡಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಅಶ್ವತ್ಥರೆಡ್ಡಿ.—ಈ ಬಗ್ಗೆ ಸರ್ಕಾರದ ಆದೇಶ ಹೋಗಿದೆ. ಆ ಬಗ್ಗೆ ಏನೂ ತೊಂದರೆ ಇಲ್ಲ. ಬೇಕಾದರೆ ಮತ್ತೊಂದು ಸಾರಿ ಆ ಬಗ್ಗೆ ಆದೇಶವನ್ನು ಕಳುಹಿಸುತ್ತೇವೆ.

SRI M. ABDUL LATIF.—I have asked the Hon, Minister to shift the Divisional Office from KGF to Kolar ; but he has not touched that point.

ಶ್ರೀ ಆರ್. ರಾಜುಗೌಡ.—ಆರ್.ಇ.ಸಿ.ನಲ್ಲಿ ನೂರಾರು ತಾಲ್ಲೂಕುಗಳಲ್ಲಿ ವಿಸ್ತರಿಸಲಾಗಿದೆ ಎಂದು ಹೇಳಿದ್ದೀರಿ. ಸ್ಪೆಷಲ್ ಪ್ರೋಗ್ರಾಮ್ ಆಫ್ ಅಗ್ರಿಕಲ್ಚರ್‌ನಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ವಿಸ್ತರಿಸಿದ್ದೀರಿ ಎಂದು ಕೇಳುತ್ತೇನೆ.

ಶ್ರೀ ಅಶ್ವತ್ಥ ರೆಡ್ಡಿ.—ನಮ್ಮ ಸರ್ಕಾರ ಸುಮಾರು ಪಂಪುಸೆಟ್ಟುಗಳಿಗೆ ವಿದ್ಯುತ್‌ನ್ನು ಕೊಟ್ಟಿದೆ. ಆರ್.ಇ.ಸಿ. ಸ್ಕೀಮ್‌ನಲ್ಲಿ ಕಳೆದ ಎರಡು ಮೂರು ತಿಂಗಳುಗಳಲ್ಲಿ ಸುಮಾರು ೨೦೦ ಪಂಪುಸೆಟ್ಟುಗಳಿಗೆ ವಿದ್ಯುತ್‌ನ್ನು ಕೊಟ್ಟಿದ್ದೇವೆ. ಆದ್ಯತೆಯ ಮೇರೆಗೆ ಎಲ್ಲರಿಗೂ ಪಂಪುಸೆಟ್ಟುಗಳಿಗೆ ವಿದ್ಯುತ್‌ನ್ನು ಕೊಡುತ್ತೇವೆ. ಎಷ್ಟು ಐ.ಪಿ. ಸೆಟ್‌ಗಳಿಗೆ ಬೇಡಿಕೆಗಳು ಬಂದರೂ ಅವುಗಳಿಗೆ ವಿದ್ಯುತ್ ಕೊಡುವುದರ ಬಗ್ಗೆ ನಾವು ಹಿಂದೆಮುಂದೆ ನೋಡುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

SRI D. B. PAWAR.—Sir, the annual reports of the Fisheries and Ports Department are supplied to the hon. Members. So, I need not go into the details of working of the Department. However, I would like to cite one or two prominent achievements of both the Departments. The Ports Department has introduced two LCDs this year in Koliba and Sadashivgad in Karwr, on which the Department has invested about Rs. 14 lakhs. I am happy to tell the hon. Members that the Department has already recovered Rs. 6 lakhs in course of one year. So, probably, by the end of this year the entire amount would be recovered by the Ports Department. With the introduction of about 216 purse-seine boats in the North and South Kanara Districts, the fish catches have also increased and I would be very happy to mention that the catches have now gone up to 1,60,000 tonnes in coastal areas, We have also earned about Rs. 15 crores in foreign exchange by the export of fish from this area.

Having mentioned a few salient features, I whould like to say that orders have been issued for handling 14 navigation schemes directly under the Departmental control. I would now come to some of the suggestions made by the hon. Members of this House. Firstly, I will refer to the suggestion made by our former Minister of State for Fisheries and Ports, Sri P. F. Rodrigues. He has suggested that the Mangalore-Coondapur canal work should be taken up as early as possible and for his information I would like to say, that the scheme is under considerstian of the Water Sources Development Organisation Now, the Scheme is under investigation and it is observed that a sum of Rs. 29 to 40 crores of rupees are required for the development of this canal. So, still has to be finalised and it is under the active consideration of the Government. Then, there was another suggestion of Sri Rodrigues that the submerged trees in Linganamakki reservoir are a sort of hazard for navigation. So, it is suggested that it should be cut. This suggestion will be teken into consideration.

7-30 P.M.

The suggestion regarding the introduction of deep sea trawlers will be examined.

To construct a fisheries harbour at Malpe, the Department has so far spent a sum of Rs. 3·30 crores out of an estimate of Rs. 4.26 crores. Owing to the difficulties in securing necessary timber for wharfs and shortage of cement for the construction and difficult nature of work, the progress has been slow. However, we will be able to commission the harbour by the end of this year.

It was also suggested that the Karnataka Fisheries Development Corporation should take up export of frozen fish to the Middle East. I am happy to say that the Corporation has already exported one consignment of 70 tonnes of frozen fish to Gulf countries.

With regard to the suggestion regarding opening up fish canteens at railway Stations, I wish to point out that efforts were made by the Corporation to get the space at the Railway Stations for putting up fish canteens. But, the railway authorities did not provide space. I assure. that the matter will be pursued again.

I am happy to say that efforts are being made by the Corporation to minimise the losses and encourage people to take up this proteinous food. The looses have come down from Rs. nine lakhs to Rs. four lakhs. The position of the Corporation has definitely been improved.

In the inland areas, efforts are being made to increase seed production by attempting to improve the conditions of the seed production farms I may proudly mention here that we are owning one of the country's biggest fish farm at Narayanpur in Gulbarga district.

As regards dredging of Old Mangalore Port, I wish to point out that tenders were called for dredging the sand bars etc. The matter is already under consideration of the Government.

The hon'ble Member Sri D.V. Waingaonkar expressed a fear that the traditional Rampani Industry will be affected by the introduction of mechanised boats. The State Government is aware of this problem and a Bill is being prepared to restrict the mechanised fishermen and to conduct their fishing activities beyond 5 Kms from the coastal areas. The area upto 5 Kms will be reserved for Rampani and other traditional methods of fishing. In addition to it, the operation of Purse seines during the night time will be prohibited. Hence, the traditional rampanies are not likely to be affected by the introduction of the purse seine boats.

The hon'ble Member further expressed his concern over the pollution of sea water. In this connection, I would like to say that caustic soda factory at Binaga has installed an affluent treatment plant and the treated affluent is discharged into Binaga bay through a pipeline. Similar attempts would be made to check water pollution in Tungabhadra near Harihar and also in certain other inland areas.

It was suggested that small groups of fishermen should be given some facilities to repay loans in easy instalments. In response to this, I would like to say that the North Kanara District Fish Marketing Federation has undertaken marketing of purse-seine catches since November 1980. It is a beginning and it will be extended to other centres to ensure effective marketing and recoveries of bank loans

As regards the Hon.Member Sri H. T. Chowdaiahs suggestion regarding non-availability of fish marketing facilities at Mandya, the Department of Fisheries has a scheme to assist local bodies like Panchayats and Municipalities by way of loan and subsidy for construction of fish markets. 50% of the amount is treated as loan and 50% as subsidy subject to maximum amount of Rs. 50,000/-. Our Senior Assistant Director of Fisheries, Mandya will be instructed to contact the Municipality at Mandya and process the application for construction of fish market. We solicit the assistane of the hon.Member in the matter.

With regard to the other suggestion regarding formulation of a project for development of inland fisheries, I am to say that a project has already been prepared and is under active consideration of the Government.

It has been brought to my notice that a S. C. Fishermen Society at Arga in Uttar Kannada was sanctioned a share capital of Rs.50,000/-, It is proposed to allot one purse-seine boat to the above society at an estimated coast of Rs. 6 lakhs with 70% subsidy and 30% loan under Special Component Scheme.

A number of querries were raised by the hon.Member Sri C. M. Arumugham. The hon.Member wanted to know as to why the performance budget in respect of Fisheries Department has not been presented. Since the Fisheries Department was not selected for preparation of performance budget by the Finance Department, it was not prepared. During the course of his speech, he stated that a sum of Rs. 6.25 laksh has been spent unauthorisedly by the Director of Fisheries for dredging operations at Old Mangalore Port. It is not a fact. Actually the bills are yet to be paid. The Old Man lor Port was taken over by the Government on 1-1 1980.

Therefore, the Director of Fisheries is not concerned or responsible for anything that has been done prior to taking over the Port by the Government.

Though there were losses in the Karnataka Fisheries Development Corporation in the initial stages, as pointed out by the hon. Member Sri C. M. Arumugham, the losses have now been minimised to about Rs. 4 lakhs and I am sure, it will start earning profit from next year. The total investment of the Corporation so far is Rs. 169 lakhs and not Rs. 879 lakhs as mentioned by the hon. Member.

During the course of the debate, it was alleged that the present Director is a mere Graduate who has no knowledge of Fisheries Department. Sir, the present Director of Fisheries is an Electrical Engineer with specialization in Refrigeration Engineering. He was directly recruited to Class-II post in the erstwhile Madras State. He was promoted as Director of Fisheries as per Inter-State Seniority List and Cadre and Recruitment Rules. He belongs to a fishermen community and as such has first hand knowledge about the problems of fishermen.

It was alleged that purse-seiners of the Corporation are running under loss. I am to say that they are running on profit. There is no scope for pilferage of fish in high seas as the crew are paid incentive on the catches.

The progress of frozen fish for internal marketing is gradually improving. 600 tonnes of fish is frozen during 1980-81 compared to 480 tonnes during 1979-80. The sale of frozen fish has increased from Rs. 26 lakhs during 1979-80 to Rs. 38 lakhs during 1980-81. The losses of the Corporation have been brought down to about Rs. 5 lakhs and it will start earning profits from the current year.

The suggestion regarding exemption of fisheries from marketing cess is under consideration.

The suggestion of the hon Member Sri B. E. Ramaiah to connect Hubli with Karwar by rail link to enable Bellary ores for shipment through Karwar Port is taken note of.

ಶ್ರೀ ಎಂ. ಮಲ್ಲಿಕಾರ್ಜುನಪ್ಪ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಹೇಳುವಾಗ ಒಂದು ವಿಷಯ ಹೇಳಿದರು. ಆದೇನೆಂದರೆ ಯಾರ್ಯಾರು ಈ ಇಲಾಖೆಯ ಬಗ್ಗೆ ಮಾತನಾಡಿದ್ದಾರೆ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡಿದ್ದೇನೆಂದು ಹೇಳಿದರು. ಸಾಮಾನ್ಯವಾಗಿ ಶೇಕಡ ೯೦ ರಷ್ಟು ಜನ ಇದರ ಬಗ್ಗೆ ಮಾತನಾಡಿಲ್ಲಾ. ಮಾತನಾಡದೇ ಇರತಕ್ಕಂಥಾವರು ಏನು ಇದ್ದಾರೋ ಅಂಥಾ ಜನರು ಅವರು ಹೇಳಬೇಕಾದ ವಿಷಯಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ಹೇಗೆ ತರಬೇಕು ಅನ್ನುವುದನ್ನು ತಿಳಿಸುತೀರಾ ?

ಶ್ರೀ ಸಿ.ಎ. ಚಂದ್ರೇಗೌಡ.—ಮಾನ್ಯ ಮಂತ್ರಿಗಳು ಮೀನುಗಾರಿಕೆಗೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ಹೇಳಿದರು. ಈ ಬಗ್ಗೆ ನಾನು ಕೇಳುವುದಾದರೂ ಇಷ್ಟೆ. ಸಮುದ್ರದ ತೀರದಲ್ಲಿರ

ತಕ್ಕಂಥಾ ಜನರಿಗೆ ಫಿಷ್ ದೊರೆಯುತ್ತದೆ, ಹಾಗೆಯೇ ದೊಡ್ಡ ದೊಡ್ಡ ಕೆರೆಗಳಲ್ಲಿರತಕ್ಕಂಥಾ ಪ್ರದೇಶಗಳ ಜನರಿಗೆ ಹಾಗೂ ಟ್ಯಾಂಕಗಳ ಹತ್ತಿರ ಇರತಕ್ಕಂಥಾ ಜನರಿಗೆ ಈ ಫಿಷ್ ದೊರೆಯುತ್ತದೆ. ಇವೆರಡೂ ಇಲ್ಲದೇ ಇರತಕ್ಕಂಥಾ ಕಡೆಗಳಲ್ಲಿ ಇರುವ ಜನರಿಗೆ, ಫಿಷ್ ದೊರೆಯದೇ ಇರತಕ್ಕಂಥಾ ಪ್ರದೇಶಗಳಲ್ಲಿ ಅವರಿಗೆ ಏನು ಏರ್ಪಾಡು ಮಾಡಿದ್ದೀರಿ ?

ಶ್ರೀ ಷೇರ್‌ಖಾನ್.—ಮಾನ್ಯ ಮಂತ್ರಿಗಳು ಈ ಮೀನುಗಾರಿಕೆ ಇಲಾಖೆಯ ಲಾಭದ ಬಗ್ಗೆ ಹೇಳಿದರು. ಇದರಲ್ಲಿ ಹೆಚ್ಚಿನ ಲಾಭ ಬಂದಿದೆ ಎಂದು ಹೇಳಿದರು. ಇದರ ಬಗ್ಗೆ ಒಂದು ಡೆವಲಪ್‌ಮೆಂಟ್ ಕಾರ್ಪೋರೇಷನ್ ಮಾಡಿದ ಉದ್ದೇಶ ಏನು ? ಇದರಲ್ಲಿ ಏನು ಲಾಭ ಬರುತ್ತದೆ ಅದಕ್ಕೆ ತಕ್ಕಂತೆ ಈ ಮೀನುಗಾರಿಕೆಯವರಿಗೆ ತಕ್ಕ ಹೆಚ್ಚಿನ ಸೌಲಭ್ಯವನ್ನು ಒದಗಿಸಿಕೊಡಬೇಕು ಅನ್ನುವ ಕಾರಣಕ್ಕಾಗಿ ಅಲ್ಲವೇ ? ತಾವು ಎರಡು ವರ್ಷದಿಂದಲೂ ಇದಕ್ಕೆ ಬೇಕಾದಷ್ಟು ಹಣ ಖರ್ಚು ಮಾಡಿದ್ದೀರಿ. ನೀವೇನು ಇದಕ್ಕೆ ಖರ್ಚು ಮಾಡಿದ್ದೀರಾ ಅದಕ್ಕೆ ತಕ್ಕಂತೆ ರೀಕವರಿನೂ ಸಹ ಮಾಡುತ್ತಾ ಇದ್ದೀರಾ. ಹಾಗಾದರೆ ಖಾಸಗೀಯವರು ಮತ್ತು ಸರ್ಕಾರದವರೂ ಮಾಡತಕ್ಕಂಥಾ ಕೆಲಸಕ್ಕೂ ಏನು ವ್ಯತ್ಯಾಸ ಇದೆ ಅನ್ನುವುದನ್ನು ಹೇಳುತ್ತೀರಾ ? ಇದರಲ್ಲಿ ಹೆಚ್ಚು ಲಾಭ ಬಂದಿದೆ ಅಂತ ಹೇಳಿದ್ದೀರಿ. ಅದಕ್ಕೆ ಬದಲಾಗಿ ಇನ್ನೂ ಸ್ವಲ್ಪ ಲಾಭ ಕಡಿಮೆಯಾದರೂ ಪರವಾಯಿಲ್ಲಾ ಅವರಿಗೆ ಕಡಿಮೆ ಪ್ರೈಸ್‌ನಲ್ಲಿ ಸಿಗುವಂತೆ ಮಾಡಿದರೆ ಆ ಜನರಿಗೆ ಅನುಕೂಲವಾಗುವುದಿಲ್ಲವೇ. ತಾವು ನಾನು ಹೇಳಿದುದನ್ನು ಒಂದು ಉದಾಹರಣೆಯಾಗಿ ತೆಗೆದುಕೊಳ್ಳಬಹುದಲ್ಲಾ.

SRI D B. PAWAR.—Sir, during the last 4 years, we have spent an amount of Rs. four crores on the Inland as well as Coastal fisheries. No discrimination whatsoever has been shown. We have spent equal amount on both Inland as well as Coastal fisheries.

MR. SPEAKER.—The question is.

> "That the sums not exceeding the amounts mentioned in the list of demands inclusive of the sum granted 'on account' be granted to the Government to defray the charges which will come in course of payment during the financial year for the period ending on the 31st day of March 1982 inrespect of Demand Nos. 34, 47, 33, 43, 44, 45, 46, and 63."

The motion was adopted and the Demands were granted

(As ordered by the Speaker, the Demands voted are reproduced below.)

DEMAND NO. 34

"That a sum not exceeding Rs. 61,15,15,000 on Revenue Account and Rs. 147,30,50,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 respect of "Irrigation in Navigation, Drainage and Flood Control Projects".

DEMAND No. 47

"That a sum not exceeding Rs. 1,09,00,000 on Revenue Account and Rs. 89,48,99,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 inrespect of "Power Projects".

DEMAND No. 33

"That a sum not exceeding Rs. 14,04,60,000 on Revenue Account and Rs. 13,87,00,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of Minor Irrigation".

DEMAND No. 43

"That a sum not exceeding Rs. 43,95,80,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Public Works (Excluding Contruction)".

DEMAND No. 44

"That a sum not exceeding Rs. 5,25,11,,000 on Revenue Account and Rs. 12,20,85,000 on Capital Account inclusive of the sum granted ' 'on account' be granted to the Government to defray the charges which will come in course of payment during the financial year ending 31st day of March 1982 in respect of "Buildings"

DEMAND No. 45

"That a sum not exceeding Rs. 34,76,00,000 on Revenue Account and Rs. 11,83,50,000 on Capital Account inclusive of the sum granted ' on account' be granted to the Government to defray the charges which will come in course of payment during the financial year ending 31st day of March 1982 in respect of "Roads and Bridges."

DEMAND No. 46

"That a sum not exceeding Rs. 79,00 000 on Revenue Amount and Rs. 1,36,95,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Ports and Transport Seruices".

DEMAND NO. 63

"That a sum not exceeding Rs. 2,83,82,000 on Revenue Account and Rs. 1,60,40,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Fisheries".

MR. SPEAKER.—The House now stands adjourned to meet again tomorrow at 12-00 Noon.

The House adjourned at Forty minutes past Seven of the Clock to meet again at Twelve of the Clock on Wednesday the 22nd July 1981.